

prajavani.net prajavani | ಮಂಗಳವಾರ, ನವೆಂಬರ್ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 311 | ಪುಟ 14 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 83,535 | ನಿಫ್ಟಿ 25,574 | $/₹ 88.73 | ಚಿನ್ನ (Std. 10g) ₹1,26,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,59,600 (ಬೆಂಗಳೂರು)

ಕೆಂಪುಕೋಟೆ ಬಳಿ ರಕ್ತದೋಕುಳಿ: 9 ಸಾವು

- **ಎಲ್ಲಿ?** ಕೆಂಪುಕೋಟೆ ಬಳಿ
- **ಯಾವಾಗ?** ಸಂಜೆ 6.52ರ ವೇಳೆಗೆ
- **ಹೇಗೆ?** ನಿಧಾನವಾಗಿ ಚಲಿಸುತ್ತಿದ್ದ ಕಾರಿನಲ್ಲಿ

ದೆಹಲಿ: ಚಲಿಸುತ್ತಿದ್ದ ಕಾರಿನಲ್ಲಿ ಸ್ಫೋಟ ಸಂಭವಿಸಿ 24 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

- ಸ್ಫೋಟದ ಸ್ಥಳವು ಕೆಂಪು ಕೋಟೆ ಮೆಟ್ರೊ ನಿಲ್ದಾಣದ ಗೇಟ್ 1ರ ಸಮೀಪದಲ್ಲಿದೆ. ಇದು ದೆಹಲಿ ಗೇಟ್‌ನಿಂದ ಕಾಶ್ಮೀರಿ ಗೇಟ್‌ಗೆ ಸಂಪರ್ಕಿಸುವ ರಸ್ತೆಯಲ್ಲಿದೆ. ಈ ಪ್ರದೇಶವು ಚಾಂದಿನಿ ಚೌಕ್‌ಗೆ ಹೋಗುವ ರಸ್ತೆಯ ಎದುರು ಮತ್ತು ಜಾಮಾ ಮಸೀದಿಯಿಂದ ಸುಮಾರು 1.5 ಕಿಲೋಮೀಟರ್ ದೂರದಲ್ಲಿದೆ.
- ಸ್ಫೋಟ ಸಂಭವಿಸಿದ ಕಾರಿನೊಳಗೆ ಸುಮಾರು 2-3 ಜನರು ಕುಳಿತಿದ್ದರು ಎಂದು ದೆಹಲಿ ಪೊಲೀಸ್ ಕಮಿಷನರ್ ಸತೀಶ್ ಗೋಲ್ಚಾ ಹೇಳಿದರು.

ನವದೆಹಲಿ: ಸದಾ ಜನದಟ್ಟಣೆಯಿಂದ ಕೂಡಿರುವ ಐತಿಹಾಸಿಕ ಕೆಂಪುಕೋಟೆಯ ಬಳಿ ಚಲಿಸುತ್ತಿದ್ದ ಹುಂಡೈ ಐ–20 ಕಾರಿನಲ್ಲಿ ಸೋಮವಾರ ಸಂಜೆ ಭಾರಿ ಸ್ಫೋಟ ಸಂಭವಿಸಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. 24ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಈ ದುರ್ಘಟನೆ ಬೆನ್ನಲ್ಲೇ ರಾಷ್ಟ್ರ ರಾಜಧಾನಿಯಲ್ಲಿ 'ಹೈ ಅಲರ್ಟ್' ಘೋಷಿಸಲಾಗಿದೆ.

ಜನರು ತಮ್ಮ ಕಚೇರಿಗಳಿಂದ ಮತ್ತು ಚಾಂದಿನಿ ಚೌಕ್ ಮಾರುಕಟ್ಟೆಯಿಂದ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ದುರ್ಘಟನೆ ಸಂಭವಿಸಿದೆ. ಸಾವು ನೋವುಗಳು ಹೆಚ್ಚಾಗುವ ಅಪಾಯ ಇದೆ. ಘಟನೆಯಿಂದ ಗಾಯಗೊಂಡವರನ್ನು ಸಮೀಪದ ಎಲ್‌ಎನ್‌ಜೆಪಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಘಟನಾ ಸ್ಥಳ ಹಾಗೂ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು. ಘಟನೆ ಬಗ್ಗೆ ಶಾ ಅವರಿಂದ ಪ್ರಧಾನಿ ನರೇಂದ್ರ ಮೋದಿ ಮಾಹಿತಿ ಪಡೆದು ಸೂಕ್ತ ನಿರ್ದೇಶನಗಳನ್ನು ನೀಡಿದರು. 'ಈ ಕೃತ್ಯದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು' ಎಂದು ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಒತ್ತಾಯಿಸಿವೆ.

ನಿಷೇಧಿತ ಜೈಷ್‌–ಎ–ಮೊಹಮ್ಮದ್ (ಜೆಇಎಂ) ಮತ್ತು ಅನ್ಸಾರ್ ಗಜ್ವತ್–ಉಲ್–ಹಿಂದ್ ಸಂಘಟನೆಗಳೊಂದಿಗೆ ನಂಟು ಹೊಂದಿದ್ದ ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ಉಗ್ರ ಜಾಲವನ್ನು ಪೊಲೀಸರು ಭೇದಿಸಿದ ಕೆಲವೇ ಗಂಟೆಗಳಲ್ಲಿ ಈ ಸ್ಫೋಟ ಸಂಭವಿಸಿದೆ.

ಕೆಂಪುಕೋಟೆ ಸಮೀಪ ಸೋಮವಾರ ಕಾರು ಸ್ಫೋಟಗೊಂಡ ನಂತರ ಬೆಂಕಿಯು ವ್ಯಾಪಿಸಿತ್ತು —ಪಿಟಿಐ ಚಿತ್ರ

ಪ್ರತ್ಯಕ್ಷದರ್ಶಿಗಳು ಹೇಳುವ ಪ್ರಕಾರ, ಸ್ಫೋಟವು ಎಷ್ಟು ಪ್ರಬಲವಾಗಿತ್ತೆಂದರೆ ಅದರ ಕಂಪನವು ಸುತ್ತಲಿನ ಕಟ್ಟಡಗಳನ್ನು ಅಲುಗಾಡಿಸುವಷ್ಟಿತ್ತು.

ಘಟನೆಯ ಬೆನ್ನಲ್ಲೇ ದೇಶದಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ಸ್ಥಳಕ್ಕೆ ಅಗ್ನಿಶಾಮಕ ದಳದ 10 ವಾಹನಗಳು ಧಾವಿಸಿದ್ದು, ಬೆಂಕಿಯನ್ನು ಅರ್ಧ ಗಂಟೆಯೊಳಗೆ ಶಮನಗೊಳಿಸಲಾಗಿದೆ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಯೊಬ್ಬರ ಪ್ರಕಾರ, 6 ಕಾರುಗಳು, ಎರಡು ಇ-ರಿಕ್ಷಾಗಳು ಮತ್ತು ಒಂದು ಆಟೊ ರಿಕ್ಷಾ ಬೆಂಕಿಗೆ ಆಹುತಿಯಾಗಿವೆ. ಸ್ಫೋಟದ ತೀವ್ರತೆ ಎಷ್ಟಿತ್ತೆಂದರೆ, ಕೆಲವು ಮೀಟರ್ ದೂರದಲ್ಲಿ ನಿಲ್ಲಿಸಿದ್ದ ವಾಹನಗಳಿಗೂ ಹಾನಿಯಾಗಿವೆ. ಕೆಲ ಕಿಲೋ ಮೀಟರ್ ದೂರದ ಐಟಿಒವರೆಗೆ ಸ್ಫೋಟದ ಶಬ್ದ ಕೇಳಿಸಿದೆ ಎನ್ನಲಾಗಿದೆ.

▶9

ಅವಘಡದಲ್ಲಿ ಉಗ್ರರ ಕೈವಾಡವಿದೆಯೇ ಎನ್ನುವುದು ಸೇರಿದಂತೆ ಎಲ್ಲ ಆಯಾಮಗಳಿಂದಲೂ ಸಮಗ್ರವಾದ ತನಿಖೆಯನ್ನು ನಡೆಸಲಾಗುತ್ತಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಜನನಿಬಿಡ ಪ್ರದೇಶದಲ್ಲಿ ನಡೆದ ಈ ಅವಘಡ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಘಟನೆಗೆ ಕಾರಣರಾದವರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಎಂಟು ಶಂಕಿತ ಉಗ್ರರ ಬಂಧನ

2,900 ಕೆ.ಜಿ ಸ್ಫೋಟಕ, ಅಪಾರ ಶಸ್ತ್ರಾಸ್ತ್ರ, ದಾಖಲೆ ವಶಕ್ಕೆ

ಶ್ರೀನಗರ (ಪಿಟಿಐ): ನಿಷೇಧಿತ ಜೈಷ್‌–ಎ–ಮೊಹಮ್ಮದ್ (ಜೆಇಎಂ) ಮತ್ತು ಅನ್ಸಾರ್ ಗಜ್ವತ್‌–ಉಲ್‌–ಹಿಂದ್ ಸಂಘಟನೆಗಳೊಂದಿಗೆ ನಂಟು ಹೊಂದಿದ್ದ ಅಂತರ ರಾಜ್ಯ ಮತ್ತು ಅಂತರ ರಾಷ್ಟ್ರೀಯ ಉಗ್ರ ಜಾಲವನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಭೇದಿಸಿ ಎಂಟು ಮಂದಿಯನ್ನು ಬಂಧಿಸಿದ್ದಾರೆ.

'ಬಂಧಿತರಲ್ಲಿ ಮೂವರು ವೈದ್ಯರು ಇದ್ದಾರೆ. ಕಾರ್ಯಾಚರಣೆ ವೇಳೆ ಅಪಾರ ಶಸ್ತ್ರಾಸ್ತ್ರ, ಮದ್ದುಗುಂಡುಗಳು ಮತ್ತು ಕಚ್ಚಾಬಾಂಬ್ ತಯಾರಿಕೆಗೆ ಬಳಸುವ 2,900 ಕೆ.ಜಿ ವಸ್ತುಗಳು ಹಾಗೂ ಎಲೆಕ್ಟ್ರಾನಿಕ್ ಸಾಧನಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಅಧಿಕಾರಿಗಳು ಸೋಮವಾರ ತಿಳಿಸಿದರು.

ಹರಿಯಾಣ, ಉತ್ತರ ಪ್ರದೇಶ ಮತ್ತು ಜಮ್ಮು–ಕಾಶ್ಮೀರ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಉಗ್ರರ ಜಾಲವನ್ನು ಭೇದಿಸಿದ್ದಾರೆ. ಶ್ರೀನಗರ, ಅನಂತನಾಗ್, ಗಾಂದೇರ್‌ಬಲ್, ಶೋಪಿಯಾನ್ ಜಿಲ್ಲೆಗಳಲ್ಲಿ ಮತ್ತು ಹರಿಯಾಣದ ಫರೀದಾಬಾದ್, ಉತ್ತರ ಪ್ರದೇಶದ ಸಹಾರನಪುರದಲ್ಲಿಯೂ ಶೋಧ ನಡೆಸಲಾಗಿತ್ತು ಎಂದು ಅವರು ಮಾಹಿತಿ ನೀಡಿದರು.

ಬಂಧಿತರನ್ನು ಆರಿಫ್ ನಿಸಾರ್ ದಾರ್ ಅಲಿಯಾಸ್ ಸಾಹಿಲ್, ಯಾಸಿರ್–ಉಲ್–ಅಶ್ರಫ್, ಮಸೂದ್ ಅಹ್ಮದ್ ದಾರ್ ಅಲಿಯಾಸ್ ಶಾಹೀದ್, ಮೌಲ್ವಿ ಇರ್ಫಾನ್ ಅಹ್ಮದ್, ಜಮೀರ್ ಅಹ್ಮದ್ ಅಹಂಗರ್ ಅಲಿಯಾಸ್ ಮುಲ್ಲಾಶಾ, ಡಾ.ಮುಜಮ್ಮಿಲ್ ಅಹ್ಮದ್ ಅಲಿಯಾಸ್ ಮುಸೈಬ್, ಡಾ.ಆದಿಲ್, ಡಾ.ಶಾಹೀನ್ ಎಂದು ಗುರುತಿಸಲಾಗಿದೆ ಎಂದು ತಿಳಿಸಿದರು.

▶9

ವೃತ್ತಿಪರರನ್ನು ಬಳಸಿ ಉಗ್ರ ಚಟುವಟಿಕೆ

'ಅಕ್ಟೋಬರ್ 19ರಂದು ಬುನ್‌ಪೊರಾ ನೌಗಾಮ್ ಪ್ರದೇಶದ ಹಲವು ಕಡೆಗಳಲ್ಲಿ ಜೈಷ್ ಸಂಘಟನೆಯು ಪೋಸ್ಟರ್‌ಗಳನ್ನು ಅಂಟಿಸಿತ್ತು. ಅದರಲ್ಲಿ ಪೊಲೀಸ್ ಮತ್ತು ಭದ್ರತಾ ಪಡೆಗಳಿಗೆ ಬೆದರಿಕೆಯೊಡ್ಡಲಾಗಿತ್ತು' ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ತಿಳಿಸಿದರು.

'ಇದರನ್ವಯ ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆ (ಯುಎಪಿಎ), ಭಾರತೀಯ ನ್ಯಾಯ ಸಂಹಿತೆ ಮತ್ತಿತರ ಸಂಬಂಧಿತ ಕಾಯ್ದೆಗಳ ವಿವಿಧ ಸೆಕ್ಷನ್‌ಗಳಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು' ಎಂದು ಹೇಳಿದರು.

'ಪಾಕಿಸ್ತಾನ ಮತ್ತು ಇತರ ದೇಶಗಳಲ್ಲಿದ್ದುಕೊಂಡು ಇಲ್ಲಿನ ವೈದ್ಯರು, ಇತರ ವೃತ್ತಿಪರರು ಮತ್ತು ವಿದ್ಯಾರ್ಥಿಗಳ ಜಾಲವನ್ನು ಬಳಸಿಕೊಂಡು ಉಗ್ರ ಚಟುವಟಿಕೆ ನಡೆಸುತ್ತಿರುವುದು ತನಿಖೆಯಲ್ಲಿ ಬಯಲಾಗಿತ್ತು' ಎಂದು ಅವರು ತಿಳಿಸಿದರು. ಉಗ್ರ ಚಟುವಟಿಕೆಗಳಿಗಾಗಿ ವೃತ್ತಿಪರ ಮತ್ತು ಅಕಾಡೆಮಿಕ್ ಜಾಲಗಳ ಮೂಲಕ ಸಾಮಾಜಿಕ ಕಾರ್ಯಗಳ ಸೋಗಿನಲ್ಲಿ ಹಣವನ್ನು ಸಂಗ್ರಹಿಸಲಾಗುತ್ತಿತ್ತು ಎಂದೂ ಹೇಳಿದರು.

ಉಗ್ರ ವಿರೋಧಿ ಕಾರ್ಯಾಚರಣೆ ವೇಳೆ ವಶಕ್ಕೆ ಪಡೆದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು —ಪಿಟಿಐ ಚಿತ್ರ

ವೈದ್ಯನ ನಿವಾಸದಲ್ಲಿ 360 ಕೆ.ಜಿ ಸ್ಫೋಟಕ ಪತ್ತೆ

ಬಂಧಿತ ಡಾ.ಮುಜಮ್ಮಿಲ್ ಅಹ್ಮದ್ ಹರಿಯಾಣದ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕನಾಗಿದ್ದ. ಆತನ ನಿವಾಸದಲ್ಲಿ 360 ಕೆ.ಜಿ. ಸ್ಫೋಟಕ ಮತ್ತು ಶಸ್ತ್ರಾಸ್ತ್ರ, ಮದ್ದುಗುಂಡುಗಳು, 5 ಲೀಟರ್ ರಾಸಾಯನಿಕ, 20 ಟೈಮರ್‌ಗಳು ಪತ್ತೆಯಾಗಿವೆ. ಅವುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.ಮುಜಮ್ಮಿಲ್ ಮತ್ತು ಆದಿಲ್ ಮೊಬೈಲ್‌ನಲ್ಲಿ ಪಾಕಿಸ್ತಾನದ ಹಲವರ ದೂರವಾಣಿ ಸಂಖ್ಯೆ ಇರುವುದು ತಿಳಿದುಬಂದಿದೆ.

ಬಿಹಾರ: 2ನೇ ಹಂತದ ಮತದಾನ ಇಂದು

ಪಟ್ನಾ (ಪಿಟಿಐ): ಬಿಹಾರ ವಿಧಾನ ಸಭೆಯ 122 ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ಮಂಗಳವಾರ ನಡೆಯಲಿದೆ. 1,302 ಮಂದಿ ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದು, ನಿತೀಶ್ ಕುಮಾರ್ ಸರ್ಕಾರದ ಅರ್ಧದಷ್ಟು ಸಚಿವರ ಹಣೆಬರಹ ನಿರ್ಧಾರವಾಗಲಿದೆ.

▶9

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕೈದಿಗಳಿಗೆ ವಿಶೇಷ ಸೌಲಭ್ಯ: ತನಿಖೆಗೆ ಹಿತೇಂದ್ರ ನೇತೃತ್ವದ ಉನ್ನತ ಸಮಿತಿ

ಇಬ್ಬರ ತಲೆದಂಡ, ಒಬ್ಬರ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ವಿಶೇಷ ಸೌಲಭ್ಯ, ಮೊಬೈಲ್ ಬಳಕೆಗೆ ಅವಕಾಶ ನೀಡಿದ್ದ ಪ್ರಕರಣದಲ್ಲಿ ಜೈಲಿನ ಸೂಪರಿಂಟೆಂಡೆಂಟ್ ಇಮಾಮ್‌ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತು ಮಾಡಲಾಗಿದೆ. ಕಾರಾಗೃಹದ ಮುಖ್ಯ ಅಧೀಕ್ಷಕ ಕೆ.ಸುರೇಶ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಜಾಗಕ್ಕೆ ಇದೇ ಮೊದಲ ಬಾರಿಗೆ ಐಪಿಎಸ್ ಅಧಿಕಾರಿ ಅನ್ಶು ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಹರಿದಾಡಿದ್ದವು. ಅದರ ಬೆನ್ನಲ್ಲೇ, ವಿಚಾರಣಾ ಕೈದಿಗಳು ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ನೃತ್ಯ ಮಾಡುತ್ತಿರುವ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡಿತ್ತು.

ಈ ಬೆಳವಣಿಗೆಗಳ ಬಳಿಕ ಕಾರಾಗೃಹಗಳ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಗೃಹ ಸಚಿವ ಜಿ.ಪರಮೇಶ್ವರ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಜೈಲಿನೊಳಗೆ ಕೈದಿಗಳು ಮೋಜು–ಮಸ್ತಿ ಮಾಡುತ್ತಿದ್ದಾರೆ ಅಂದರೆ ಏನರ್ಥ? ಸಿಬ್ಬಂದಿ ಏನು ಮಾಡುತ್ತಿದ್ದಾರೆ? ಕೈದಿಗಳಿಗೆ ಮೊಬೈಲ್ ಪೂರೈಸಿದ್ದವರು ಯಾರು' ಎಂದು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡಿದ್ದಾರೆ. ಯಾವುದೇ ಕಾರಾಗೃಹದಲ್ಲಿ ಈ ರೀತಿಯ ಘಟನೆಗಳಿಗೆ ಆಸ್ಪದ ಕೊಡಬಾರದು ಎಂದೂ ಸೂಚಿಸಿದರು.

ತನಿಖೆಗೆ ಸಮಿತಿ: ಪ್ರಕರಣದ ಕುರಿತು ತನಿಖೆಗೆ ಕಾನೂನು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ಅವರು ಮುಖ್ಯಸ್ಥರಾಗಿರುವ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ಐಜಿಪಿ ಸಂದೀಪ್ ಪಾಟೀಲ, ಎಸ್‌ಪಿಗಳಾದ ಅಮರನಾಥ್ ರೆಡ್ಡಿ, ಸಿ.ಬಿ. ರಿಷ್ಯಂತ್ ಅವರೂ ತಂಡದ ಸದಸ್ಯರಾಗಿದ್ದಾರೆ. ಒಂದು ತಿಂಗಳ ಒಳಗಾಗಿ ವರದಿ ಸಲ್ಲಿಸುವಂತೆ ತಂಡಕ್ಕೆ ಸೂಚಿಸಲಾಗಿದೆ.

ಈ ಸಮಿತಿಯು ವಿವಿಧ ಜಿಲ್ಲೆಗಳ ಕಾರಾಗೃಹಕ್ಕೂ ಭೇಟಿ ನೀಡಿ ಸುಧಾರಣೆಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲಿದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಗಳು ಸಮಿತಿಯ ಸಹ ಸದಸ್ಯರಾಗಿರುತ್ತಾರೆ.

'ಈಗ ಹರಿದಾಡುತ್ತಿರುವ ಕೆಲವು ವಿಡಿಯೊಗಳು 2023ರಲ್ಲಿ ಆಗಿರುವಂಥದ್ದು. ನಿನ್ನೆ, ಮೊನ್ನೆ ಆಗಿರುವ ವಿಡಿಯೊಗಳಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಸಭೆಯ ಬಳಿಕ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

▶7

ಕಮಾಂಡ್ ಸೆಂಟರ್ ಸ್ಥಾಪನೆ

- ರಾಜ್ಯದ ಎಲ್ಲ ಕಾರಾಗೃಹಗಳಲ್ಲಿನ ಚಟುವಟಿಕೆಗಳನ್ನು ಕಾರಾಗೃಹ ಪ್ರಧಾನ ಕಚೇರಿಯಿಂದಲೇ ನಿಗಾ ವಹಿಸಲು 'ಕಮಾಂಡ್ ಸೆಂಟರ್' ಸ್ಥಾಪನೆ
- ಕಾರಾಗೃಹ ಮತ್ತು ಸುಧಾರಣಾ ಇಲಾಖೆಯ ಡಿಜಿ ಅಥವಾ ಎಡಿಜಿಪಿಗೆ 'ಕಮಾಂಡ್ ಸೆಂಟರ್' ನಿಗಾ ವಹಿಸುವ ಜವಾಬ್ದಾರಿ
- ಸಿ.ಸಿ.ಟಿ.ವಿ ಕ್ಯಾಮೆರಾ ಸೇರಿದಂತೆ ಎಲ್ಲಾ ತಂತ್ರಜ್ಞಾನಗಳ ಕುರಿತು 'ಟೆಕ್ನಿಕಲ್ ಆಡಿಟ್' ನಡೆಸಲು ತೀರ್ಮಾನ. ಪ್ರಧಾನ ಕಚೇರಿಗೆ ಮಾಹಿತಿ ಬರುವ ಹಾಗೆ ಕ್ರಮ
- ಬ್ಯಾಗೇಜ್ ಸ್ಕ್ಯಾನರ್ ಸೇರಿದಂತೆ ಎಲ್ಲ ರೀತಿಯ ತಾಂತ್ರಿಕ ಉಪಕರಣಗಳನ್ನು ದ್ವಿಗುಣ ಮಾಡಲು ಕ್ರಮ
- ಒಂದೇ ಕಡೆ ಐದು ವರ್ಷ ಕಾರ್ಯನಿರ್ವಹಿಸಿದ ಕಾರಾಗೃಹ ಅಧಿಕಾರಿಗಳ ವರ್ಗಾವಣೆಗೆ ನಿರ್ಧಾರ

ವಿಡಿಯೊ ಹರಿಯಬಿಟ್ಟ ದರ್ಶನ್ ಆಪ್ತ?

ಧನ್ವೀರ್

ಜೈಲಿನಲ್ಲಿ ನಡೆದಿರುವ ಘಟನೆಗಳ ವಿಡಿಯೊ, ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿರುವ ಅನುಮಾನದ ಅಡಿ, ಚಿತ್ರದುರ್ಗ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರ ಆಪ್ತ, ನಟ ಧನ್ವೀರ್ ಅವರನ್ನು ಸಿಸಿಬಿ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ದೇವನಹಳ್ಳಿಯ ವಿಮಾನ ನಿಲ್ದಾಣದತ್ತ ಹೊರಟಿದ್ದ ಧನ್ವೀರ್ ಅವರನ್ನು ಭಾನುವಾರ ರಾತ್ರಿ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದ್ದಾರೆ. ದರ್ಶನ್ ತಂಡದ ಸದಸ್ಯರಿಂದಲೇ ವಿಡಿಯೊ ಹರಿಯಬಿಟ್ಟಿರುವ ಅನುಮಾನ ವ್ಯಕ್ತವಾಗಿದೆ.

'ದರ್ಶನ್ ಅವರಿಗೆ ಜೈಲಾಧಿಕಾರಿಗಳು ಹಾಸಿಗೆ, ದಿಂಬು ನೀಡಿರಲಿಲ್ಲ. ಅವರು ಹಾಸಿಗೆ, ದಿಂಬು ಪಡೆದುಕೊಳ್ಳಲು ನ್ಯಾಯಾಲಯದ ಮೆಟ್ಟಿಲೇರಿದ್ದರು. ಅಲ್ಲೂ ಹಿನ್ನಡೆ ಆಗಿತ್ತು. ಅದೇ ಕಾರಣಕ್ಕೆ ಜೈಲಿನ ಒಳಗೆ ನಡೆಯುತ್ತಿರುವ ಅಕ್ರಮಗಳ ಕುರಿತು ವಿಡಿಯೊವನ್ನು ಧನ್ವೀರ್ ಅವರು ಜೈಲಿನಿಂದ ಬಿಡುಗಡೆಯಾಗಿದ್ದ ಕೈದಿಯಿಂದ ಪಡೆದು ಬಹಿರಂಗ ಪಡಿಸಿದ್ದಾರೆ ಎಂಬ ಅನುಮಾನದ ಮೇರೆಗೆ 10 ತಾಸು ವಿಚಾರಣೆ ನಡೆಸಲಾಗಿದೆ. ಈಗ ನಡೆದ ತನಿಖೆ ವೇಳೆ ಧನ್ವೀರ್ ಮೊಬೈಲ್‌ನಲ್ಲಿ ಯಾವುದೇ ವಿಡಿಯೊಗಳು ಪತ್ತೆಯಾಗಿಲ್ಲ. ಡಿಲೀಟ್ ಮಾಡಿರುವ ಸಾಧ್ಯತೆಯಿದೆ. ಮೊಬೈಲ್ ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ವರದಿ ಬಂದ ಬಳಿಕ ಧನ್ವೀರ್ ಅವರಿಗೆ ವಿಡಿಯೊಗಳು ಸಿಕ್ಕಿದ್ದವೇ? ಇಲ್ಲವೇ ಎಂಬುದು ಗೊತ್ತಾಗಲಿದೆ' ಎಂದು ಮೂಲಗಳು ಹೇಳಿವೆ.

ಬಿಬಿಸಿಯಿಂದ ಕ್ಷಮೆಯಾಚನೆ

ಗಲಭೆಗೆ ಕುಮ್ಮಕ್ಕು ನೀಡಿದಂತೆ ಟ್ರಂಪ್ ಹೇಳಿಕೆ ಬಿಂಬಿಸಿದ ಆರೋಪ

ಲಂಡನ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾಷಣವನ್ನು ಎಡಿಟ್ ಮಾಡಿ, 2021ರ ಕ್ಯಾಪಿಟಲ್ ಗಲಭೆಗೆ ಕುಮ್ಮಕ್ಕು ನೀಡಿದಂತೆ ಬಿಂಬಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಬಿಸಿ ವಿರುದ್ಧ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಅದರ ಬೆನ್ನಲ್ಲೇ, ಸಂಸ್ಥೆಯು ಕ್ಷಮೆ ಯಾಚಿಸಿದ್ದು, ಪ್ರಧಾನ ನಿರ್ದೇಶಕ ಟಿಮ್ ಡೇವಿ ಮತ್ತು ಸಿಇಒ ಡೆಬ್ರೊ ಟರ್ನಿಸ್ ಅವರು ತಮ್ಮ ಹುದ್ದೆಗಳಿಗೆ ಭಾನುವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಟಿಮ್ ಡೇವಿ

ಡೆಬ್ರೊ ಟರ್ನಿಸ್

ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಪ್ರಸಾರ ಮಾಡಿರುವ ಸಾಕ್ಷ್ಯಚಿತ್ರದಲ್ಲಿ ಟ್ರಂಪ್ ಅವರ ಭಾಷಣವನ್ನು ತಪ್ಪಾಗಿ ನಿರೂಪಿಸಲಾಗಿದೆ. ಗಲಭೆಗೆ ಅವರು ಪ್ರಚೋದನೆ ನೀಡಿದಂತೆ ಬಿಂಬಿಸಲಾಗಿದೆ. ಆದರೆ ಟ್ರಂಪ್, 'ಶಾಂತಿಯುತವಾಗಿ ಪ್ರತಿಭಟನೆ ನಡೆಸಿ' ಎಂದು ಪ್ರತಿಭಟನಕಾರರಿಗೆ ಕರೆ ನೀಡಿದ್ದನ್ನು ತೆಗೆದುಹಾಕಲಾಗಿದೆ ಎಂಬ ಆರೋಪ ಕೇಳಿಬಂದಿದೆ. ವಿವಾದ ತೀವ್ರಗೊಂಡ ನಂತರ ಬಿಬಿಸಿಗೆ 500ಕ್ಕೂ ಹೆಚ್ಚು ದೂರುಗಳು ಬಂದಿವೆ.

'ಬಿಬಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದಾಗ್ಯೂ ಕೆಲವು ತಪ್ಪುಗಳಾಗಿವೆ. ಪ್ರಧಾನ ನಿರ್ದೇಶಕನಾಗಿ ನಾನೇ ಅದರ ಹೊಣೆ ಹೊರಬೇಕಾಗುತ್ತದೆ. ಇದು ಸಂಪೂರ್ಣ ನನ್ನದೇ ನಿರ್ಧಾರ' ಎಂದು ಟಿಮ್ ಹೇಳಿದ್ದಾರೆ.

'ಪ್ರಧಾನ ನಿರ್ದೇಶಕ ಸ್ಥಾನಕ್ಕೆ ಹೊಸಬರು ಆಯ್ಕೆಯಾಗುವವರೆಗೆ ಆ ಸ್ಥಾನದಲ್ಲಿ ಮುಂದುವರಿಯುವೆ' ಎಂದು ಅವರು ತಿಳಿಸಿದ್ದಾರೆ.

▶13

SUBBAIAH INSTITUTE OF MEDICAL SCIENCES, SHIVAMOGGA

(Affiliated to RGUHS, Bengaluru & Recognized by respective Councils)

ADMISSIONS OPEN - 2025-26

Subbaiah College of Physiotherapy (BPT)
- 100 Seats Available

Subbaiah Institute of Allied Health Sciences
Applications are invited for the following B.Sc. Courses:
- Anaesthesia & Operation Theatre Technology
- Emergency & Trauma Care Technology
- Cardiac Care Technology
- Medical Imaging Technology
- Medical Laboratory Technology
- Optometry
- Perfusion Technology
- Renal Dialysis Technology
- Respiratory Care Technology

Subbaiah College of Nursing
- B.Sc. Nursing
- P.B.B.Sc. Nursing
- M.Sc. Nursing

Subhadra College of Nursing
- B.Sc. Nursing
- trangforsing live

Why Choose Us
- Experienced Faculty & Modern Infrastructure
- Clinical and Hospital-Based Practical Training
- Separate Hostels for Boys and Girls
- Apply Now - Limited Seats Available!

Build Your Career in Healthcare Excellence with Tadikela Subbaiah Trust Institutions!

Subbaiah Institute of Medical Sciences NH-13, Purle, Shivamogga-577222

Contact : +91 99007 69203 | +91 97319 87246 | +91 97429 39575

ತಿರುಮಲದ ಲಡ್ಡು ಪ್ರಸಾದ ತಯಾರಿಕೆಗೆ ಕಲಬೆರಕೆ ತುಪ್ಪ ಪೂರೈಕೆ ಪ್ರಕರಣ

ಹಾಲು ಬಳಸದೆಯೇ ತುಪ್ಪ ತಯಾರಿಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಮಲದ ಪವಿತ್ರ ಲಡ್ಡು ಪ್ರಸಾದ ತಯಾರಿಸಲು ಬಳಸಲಾಗಿದ್ದ ಕಲಬೆರಕೆ ತುಪ್ಪ ಪೂರೈಕೆ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡವು (ಎಸ್‌ಐಟಿ), 2019–2024ರ ನಡುವೆ ಪೂರೈಕೆದಾರರು ಹಾಲು ಬಳಸದೆಯೇ ತುಪ್ಪ ತಯಾರಿಸಿರುವ ಸಂಗತಿಯನ್ನು ಪತ್ತೆ ಮಾಡಿದೆ.

ಮೂಲಗಳ ಪ್ರಕಾರ, ಫೆಬ್ರುವರಿಯಲ್ಲಿ ಸಿಬಿಐ ಬಂಧಿಸಿದ್ದ ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೆಟ್ ಲಿಮಿಟೆಡ್‌ನ ನಿರ್ದೇಶಕರಾದ ಪೋಮಿಲ್ ಜೈನ್ ಮತ್ತು ವಿಪಿನ್ ಜೈನ್ ಅವರು ಉತ್ತರಾಖಂಡದ ರೂರ್ಕಿ ಬಳಿಯ ಭಗವಾನ್‌ಪುರದಲ್ಲಿರುವ ತಮ್ಮ ಘಟಕದಲ್ಲಿ ಕಲಬೆರಕೆ ತುಪ್ಪ ತಯಾರಿಸಿದ್ದರು ಎನ್ನುವುದು ತಿಳಿದುಬಂದಿದೆ.

ಆರೋಪಿಗಳು ಹಸುವಿನ ಶುದ್ಧ ತುಪ್ಪದ ಬದಲಿಗೆ ಕೋಲ್ಕತ್ತದ ಬ್ಯೂಜ್ ಬಡ್ಜ್ ಕಂಪನಿಯಿಂದ ಪಡೆದ ಪಾಮ್ ಆಯಿಲ್, ಪಾಮ್ ಕರ್ನಲ್ ಎಣ್ಣೆ ಮತ್ತು ಪಾಮೊಲಿನ್‌ನಂತಹ ಕಲಬೆರಕೆ ವಸ್ತುಗಳನ್ನು ಬಳಸಿದ್ದಾರೆ. ಈ ವಸ್ತುಗಳನ್ನು ಅಲ್ಪ ಪ್ರಮಾಣದ ಶುದ್ಧ ತುಪ್ಪದೊಂದಿಗೆ ಸೇರಿಸಿ ಬೀಟಾ–ಕೆರೋಟಿನ್, ಅಸಿಟಿಕ್ ಆ್ಯಸಿಡ್ ಎಸ್ಟರ್ ಮತ್ತು ಸಿಂಥೆಟಿಕ್ ತುಪ್ಪದ ಸುವಾಸನೆಯಂತಹ ರಾಸಾಯನಿಕಗಳೊಂದಿಗೆ ಮಿಶ್ರಣ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ಗೊತ್ತಾಗಿದೆ.

▶12

ಮುಖ್ಯಾಂಶಗಳು

- ಎಸ್‌ಐಟಿಯ ರಿಮ್ಯಾಂಡ್ ವರದಿಯಲ್ಲಿ ಬಹಿರಂಗ
- ಆಂಧ್ರದ ಸ್ಥಳೀಯ ನ್ಯಾಯಾಲಯಕ್ಕೆ ವರದಿ ಸಲ್ಲಿಕೆ
- 2019ರಿಂದ 2024ರವರೆಗೆ 60.37 ಲಕ್ಷ ಕೆ.ಜಿ ತುಪ್ಪ ಪೂರೈಕೆ

ಕಲಬೆರಕೆ ತುಪ್ಪ: ಪರೀಕ್ಷಾ ವರದಿಯಲ್ಲಿ ದೃಢ

ಸಸ್ಯಜನ್ಯ ಎಣ್ಣೆಯೊಂದಿಗೆ ಕಲಬೆರಕೆ ಮಾಡಿ ತುಪ್ಪ ತಯಾರಿಸಿರುವುದನ್ನು ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) 2022ರ ಆಗಸ್ಟ್‌ನಲ್ಲಿ ನಡೆಸಿದ್ದ ಪರೀಕ್ಷಾ ವರದಿಗಳು ದೃಢಪಡಿಸಿವೆ ಎಂದು ಸಿಬಿಐ ನೇತೃತ್ವದ ಎಸ್‌ಐಟಿ ಹೇಳಿದೆ.

ಆಗಿನ ಟಿಟಿಡಿ ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ಅವರಿಗೆ ತಿಳಿಸಿದ್ದರೂ ಪೂರೈಕೆದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಅದೇ ಕಂಪನಿಗಳು 2024ರವರೆಗೆ ಟಿಟಿಡಿಗೆ ತುಪ್ಪ ಪೂರೈಸುವುದನ್ನು ಮುಂದುವರಿಸಿದ್ದವು. ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೆಟ್ ಲಿಮಿಟೆಡ್ 2022ರ ಅಕ್ಟೋಬರ್‌ವರೆಗೆ ಪೂರೈಸಿತ್ತು ಎಂದು ಸಿಬಿಐ ತನ್ನ ರಿಮ್ಯಾಂಡ್ ವರದಿಯಲ್ಲಿ ಉಲ್ಲೇಖಿಸಿದೆ.

ಸುಬ್ಬಾರೆಡ್ಡಿ ಅವರ ಆಪ್ತ ಸಹಾಯಕ ಕಡೂರು ಚಿನ್ನಪ್ಪಣ್ಣ ಅವರು 2019 ಮತ್ತು 2023ರ ನಡುವೆ ತುಪ್ಪ ಪೂರೈಕೆದಾರರಿಂದ ಹಣ ಪಡೆದಿದ್ದಾರೆ ಎಂದು ಹೇಳಿದೆ.

ಆಗಿನ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ಸಂಬಂಧಿ ಸುಬ್ಬಾರೆಡ್ಡಿ 2019ರಿಂದ 2023ರ ವರೆಗೆ ಟಿಟಿಡಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಜಿಬಿಎ: ಜೆಡಿಎಸ್ ಉಸ್ತುವಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಚುನಾವಣೆಯ ಮೇಲೆ ಕಣ್ಣಿಟ್ಟು, ಪಕ್ಷದ ಚಟುವಟಿಕೆಗೆ ಚುರುಕು ನೀಡುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಉಸ್ತುವಾರಿ ಸಮಿತಿಯ ಅಧ್ಯಕ್ಷರನ್ನಾಗಿ ಅರಕಲಗೂಡು ಶಾಸಕ ಎ. ಮಂಜು ಅವರನ್ನು ಜೆಡಿಎಸ್ ನೇಮಿಸಿದೆ.

ಬೆಂಗಳೂರು ಕೇಂದ್ರ, ಪಶ್ಚಿಮ, ದಕ್ಷಿಣ, ಪೂರ್ವ ಮತ್ತು ಉತ್ತರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪಕ್ಷ ಸಂಘಟನೆಯನ್ನು ಬಲಪಡಿಸಲು ಈ ಸಮಿತಿ ಕೆಲಸ ಮಾಡಲಿದೆ.

ಶಾಸಕರಾದ ಎಂ.ಟಿ. ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಟಿ.ಎನ್. ಜವರಾಯಿಗೌಡ, ಸಿ.ಎನ್. ಮಂಜೇಗೌಡ, ಯುವ ಜನತಾದಳ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸಮನ್ವಯ ಸಮಿತಿಯ ನೂತನ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಮಾಜಿ ಶಾಸಕರಾದ ಸುರೇಶ್ ಗೌಡ, ಎ. ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಎಚ್.ಎಂ. ರಮೇಶ್ ಗೌಡ, ಕೆ.ಎ. ತಿಪ್ಪೇಸ್ವಾಮಿ, ಎಲ್.ಎನ್. ನಾರಾಯಣಸ್ವಾಮಿ, ಪಕ್ಷದ ಮುಖಂಡರಾದ ಜಗದೀಶ್ ನಾಗರಾಜಯ್ಯ, ಆರ್. ಪ್ರಕಾಶ್, ಜೆಡಿಎಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ ಈ ಸಮಿತಿಯಲ್ಲಿದ್ದಾರೆ.

ನಾಳೆಯಿಂದ ಸ್ಪರ್ಶ್ ಜನಸಂಪರ್ಕ

ಬೆಂಗಳೂರು: ಬೆಂಗಳೂರಿನ ರಕ್ಷಣಾ ಲೆಕ್ಕಪತ್ರಗಳ ಪ್ರಧಾನ ನಿಯಂತ್ರಕರು ನವೆಂಬರ್ 12 ಮತ್ತು 13ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಬೆಂಗಳೂರಿನ ಪಿಸಿಡಿಎ ಕಚೇರಿಯ ಬಹುಪಯೋಗಿ ಸಭಾಂಗಣದಲ್ಲಿ ಸ್ಪರ್ಶ್ ಜನಸಂಪರ್ಕ (ಔಟ್ ರೀಚ್) ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

Email: care@adigasyatra.com
Website: www.adigasyatra.com
+91 9449478944

01 **ಆಸ್ಟ್ರೇಲಿಯ - 13 ದಿನಗಳು**
ಸಿಡ್ನಿ : ಬ್ಲೂ ಮೌಂಟೇನ್, ವೂ ಲಂಗಾಂಗ್ **ಮೆಲ್ಬೋರ್ನ್** : ಗ್ರೇಟ್ ಓಷನ್ ರೋಡ್, ಪೆಂಗ್ವಿನ್ ಪರೇಡ್ **ಕೇಂರ್ನು** : ಕುರಾಂಡಾ, ಗ್ರೇಟ್ ಬ್ಯಾರಿಯರ್ ರೀಫ್ **ಗೋಲ್ಡ್ ಕೋಸ್ಟ್** : ಸೀ ವರ್ಲ್ಡ್, ಕ್ರಿಸ್ಟಲ್ ಕ್ಯಾಸಲ್, ಶಂಬಾಲಾ ಗಾರ್ಡನ್ ಬ್ರಿಸ್ಬೇನ್
ದಿನಾಂಕಗಳು: 2026: JAN 11, 25. FEB 8, 15, 22. MAR 8, 15, 22. APR 5, 19.
7022259008

02 **ದುಬೈ - 6 ದಿನಗಳು**
ಧೋ ಕ್ರೂಸ್, ದುಬೈ ಸಿಟಿ ಟೂರ್, ಅಬುದಾಬಿ ಸಿಟಿ ಟೂರ್, ಬುರ್ಜ್ ಕಲಿಫಾ, ಡೆಸರ್ಟ್ ಸಫಾರಿ, ದುಬೈ ಫ್ರೇಮ್, ಗ್ಲೋಬಲ್ ವಿಲೇಜ್.
ದಿನಾಂಕಗಳು: 2025: DEC 11, 18. 2026: JAN 8, 15, 29. FEB 5, 12, 26.
7975001525

03 **ಸಿಂಗಾಪುರ್ - ಮಲೇಷಿಯಾ - ಥೈಲ್ಯಾಂಡ್ - 4 / 5 / 7 / 8 / 11 / 15 ದಿನಗಳು**
ಸಿಂಗಾಪುರ್: ಯೂನಿವರ್ಸಲ್ ಸ್ಟುಡಿಯೋ, ಸೆಂಟೋಸಾ ಐಲ್ಯಾಂಡ್, ವಿಂಗ್ಸ್ ಆಫ್ ಟೈಮ್, ಕೇಬಲ್ ಕಾರ್, ಸಿಂಗಾಪುರ್ ಸಿಟಿ ಟೂರ್, ಸೀ ಅಕ್ವೇರಿಯಂ, ಗಾರ್ಡನ್ಸ್ ಬೈ ದ ಬೇ. **ಮಲೇಷಿಯಾ** : ಕೌಲಾಲಂಪುರ್ ಸಿಟಿ ಟೂರ್, ಪುತ್ರಜಯ, ಜೆಂಟಿಂಗ್ ಹೈ ಲ್ಯಾಂಡ್ **ಥೈಲ್ಯಾಂಡ್** : ಪಟ್ಟಾಯ, ಕೋರಲ್ ಐಲ್ಯಾಂಡ್, ಅಲ್ಕಝರ್ ಶೋ, ನೋಂಗ್ ನೂಚ್ ವಿಲೇಜ್, ಬ್ಯಾಂಕಾಕ್ ಸಿಟಿ ಟೂರ್, ಸಫಾರಿ ವರ್ಲ್ಡ್, ಮರೈನ್ ಪಾರ್ಕ್.
ದಿನಾಂಕಗಳು: 2025: DEC 5.
2026: JAN 9, 16, 23. FEB 6, 13, 20. MAR 7, 14, 21.
7483366378

04 **ಕಾಂಬೋಡಿಯಾ - ವಿಯೆಟ್ನಾಮ್ - 4 / 6 / 7 / 10 / 12 ದಿನಗಳು**
ಕಾಂಬೋಡಿಯಾ: ನೊಮ್ ಫೆನ್, ಸಿಯಾಮ್ ರೀಪ್, ಅಂಕೋರ್ ವಾಟ್, ಟೋನ್ಲೆ ಸಾಪ್, ಥೌಸಂಡ್ ಲಿಂಗ ರಿವರ್, **ವಿಯೆಟ್ನಾಮ್**: ಹಾನೋಯ್, ನಿನ್ ಬಿನ್, ಹೊಲಾಂಗ್ ಬೇ, ದ ನಾಂಗ್, ಹೊಯ್ ಆನ್, ಬಾ ನಾ ಹಿಲ್ಸ್, ಮೆಕಾಂಗ್ ಡೆಲ್ಟಾ, ಹೊಚಿಮಿನ್ ಸಿಟಿ, ಕು ಚಿ ಟನಲ್ಸ್.
ದಿನಾಂಕಗಳು: 2025: DEC 4, 11.
2026: JAN 9, 16, 30. FEB 6, 13, 27. MAR 5, 12, 26.
7022259007

05 **ಬಾಲಿ - ದ ಲ್ಯಾಂಡ್ ಆಫ್ ಗಾಡ್ಸ್ - 5 / 7 / 9 ದಿನಗಳು**
ಡೆನ್ ಪಸರ್, ನುಸಾ ಪೆನಿಡಾ ಐಲ್ಯಾಂಡ್, ಕಿಂತಾಮಣಿ, ಉಬುದ್, ಗರುಡ ವಿಷ್ಣು ಕಲ್ಚರಲ್ ಪಾರ್ಕ್, ತನಾಹ್ ಲಾಟ್, ಬೆರಾಟನ್ ಲೇಕ್, ಉಲಾನ್ ದಾನು, ತಮನ್ ಆಯುನ್, ತಂಜುಂಗ್ ಬೆನೋವಾ ಬೀಚ್, ಉಲು ವಾಟು, ಬೈಸಾಕಿ, ತೀರ್ಥ ಎಂಪುಲ್, ತೀರ್ಥ ಗಂಗಾ, ಕಿಂಗ್ ಪ್ಯಾಲೇಸ್, ಬ್ಯಾಟ್ ಕೇವ್ಸ್ ಟೆಂಪಲ್.
ದಿನಾಂಕಗಳು: 2025: NOV 24. DEC 1, 15. 2026: JAN 5, 19. FEB 2, 16.
9364104373

06 **ನ್ಯಾಚುರಲಿ ನೇಪಾಳ - 5 / 9 ದಿನಗಳು**
ಲುಂಬಿನಿ, ಪೋಕ್ರಾ, ಫೀವಾ ಲೇಕ್, ಮನೋಕಾಮನ, ಕಟ್ಮಂಡು, ಭಕ್ತಪುರ, ದೋಲೇ ಶ್ವರ ಮಹಾದೇವ, ರಾಯಲ್ ಚಿತ್ವಾನ್ ನ್ಯಾಷನಲ್ ಪಾರ್ಕ್, ಜನಕಪುರ ಇತ್ಯಾದಿ.
ದಿನಾಂಕಗಳು: 2025: NOV 27. DEC 4, 11, 18. 2026: JAN 15, 29. FEB 12, 26.
9364088424

07 **ಶ್ರೀಲಂಕಾ ರಾಮಾಯಣ ಟೂರ್ - 5 / 7 / 8 ದಿನಗಳು**
ರಾಮಾಯಣ ದೇಗುಲಗಳು, ಮನಾವರಿ, ಮುನೇಶ್ವರಮ್, ಟ್ರಿನ್ಕೋಮಲಿ, ಸಿಗಿರಿಯಾ ರಾಕ್ (ಫೋಟೋ stop) ಕ್ಯಾಂಡಿ, ಟೂತ್ ರೆಲಿಕ್, ರಾಂಬೊಡಾ ಹನುಮಾನ್ ಮಂದಿರ, ಟೀ ಫ್ಯಾಕ್ಟರಿ, ನುವಾರಾ ಎಲಿಯ, ಅಶೋಕ ವಾಟಿಕಾ, ಸೀತಾ ಅಗ್ನಿ ಪರೀಕ್ಷಾ ಸ್ಥಳ, ಬೆಂಟೋಟಾ ಬೀಚ್, ಮಾಧು ರಿವರ್ ಸಫಾರಿ, ವಿಭೀ ಷಣ ಮಂದಿರ, ಕೊಲಂಬೊ ಸಿಟಿ ಟೂರ್
ದಿನಾಂಕಗಳು: 2025: NOV 20, 27. DEC 4, 11, 18.
2026: JAN 8, 15, 29. FEB 5, 12, 26.
9364104366

08 **ಅಂಡಮಾನ್ ಐಲ್ಯಾಂಡ್ - 5 ದಿನಗಳು**
ಹ್ಯಾವ್ ಲಾಕ್ (ಸ್ವರಾಜ್ ದ್ವೀಪ್) ಐಲ್ಯಾಂಡ್, ಪೋರ್ಟ್ ಬ್ಲೇರ್, ಸೆಲ್ಯೂಲ್ಲಾರ್ ಜೈಲ್, ರಾಸ್ (ನೇತಾಜಿ ಸುಭಾಷ್ ಚಂದ್ರ ಬೋಸ್)ಐಲ್ಯಾಂಡ್, ನಾರ್ತ್ ಬೇ ಐಲ್ಯಾಂಡ್
ದಿನಾಂಕಗಳು: 2025: NOV 19. DEC 3, 17. 2026: JAN 7, 21. FEB 4, 18.
7975001525

09 **ರಾಮೇಶ್ವರ - ಕನ್ಯಾಕುಮಾರಿ – ತಿರುವನಂತಪುರಂ - 4 ದಿನಗಳು**
ಮದುರೈ, ರಾಮೇಶ್ವರಮ್, ಕನ್ಯಾಕುಮಾರಿ, ಸುಚೀ ಂದ್ರಮ್, ನಾಗರ ಕೋಯಿಲ್, ತಿರುವನಂತ ಪುರಂ.
ದಿನಾಂಕಗಳು: 2025: NOV 19. DEC 3, 17. 2026: JAN 7, 21. FEB 4, 18.
9364104373

10 **ಅಸ್ಸಾಂ - ಮೇಘಾಲಯ - 7 ದಿನಗಳು**
ಗುವಾಹತಿ, ಕಾಮಕ್ಯ, ಕಾಝಿರಂಗ, ನಾಗಾಂವ್ ಮಹಾ ಮೃತ್ಯುಂಜಯ, ಶಿಲ್ಲಾಂಗ್, ದಾವ್ಕಿ, ಮಾವ್ಲಿ ನಾಂಗ್, ಲಿವಿಂಗ್ ರೂಟ್ ಬ್ರಿಡ್ಜ್, ಚಿರಾಪುಂಜಿ, ಮಾಸ್ಮಿ ಕೇವ್ಸ್.
ದಿನಾಂಕಗಳು: 2025: NOV 19, 26. DEC 10, 17.
2026: JAN 14, 21, 28. FEB 11, 18, 25
7022259008

11 **ಪುರಿ - ಕೊನಾರ್ಕ್ – ಭುಬನೇಶ್ವರ್ - 4 ದಿನಗಳು**
ಭುವನೇಶ್ವರ, ಖಂಡಗಿರಿ - ಉದಯಗಿರಿ, ದೌಲಿ, ಪೀಪ್ಲಿ, ಕೊನಾರ್ಕ್, ಪುರಿ, ಚಿಲಿಕಾ ಲೇಕ್, ರಘು ರಾಜ್ ಪುರ.
ದಿನಾಂಕಗಳು: 2025: NOV 26. DEC 10, 17.
2026: JAN 14, 28. FEB 11, 25.
9364104373

12 **ಮಧ್ಯ ಪ್ರದೇಶ - 4 / 9 ದಿನಗಳು**
ಇಂದೋರ್, ಓಂಕಾರೇಶ್ವರ, ಮಾಹೇಶ್ವರ, ಮಾಂಡು, ಉಜ್ಜಯಿನಿ, ಭೋಪಾಲ್, ಸಾಂಚಿ, ಖಜುರಾಹೋ, ಜಬಲ್ ಪುರ್.
ದಿನಾಂಕಗಳು: 2025: NOV 26. DEC 3, 10, 17.
2026: JAN 7, 14, 21, 28. FEB 11, 18, 25.
7022259007

13 **ಗುಜರಾತ್ ಟೆಂಪಲ್ಸ್ - 6 / 9 ದಿನಗಳು**
ಅಹಮದಾಬಾದ್, ಸೋಮನಾಥ್, ಪೋರಬಂದರು, ದ್ವಾರಕ, ನಾಗೇಶ್ವರ, ಮೊಢೇರಾ, ಸಿದ್ಧಪುರ (ಮಾತೃಗಯಾ)
ದಿನಾಂಕಗಳು: 2025: NOV 26. DEC 3, 10, 17.
2026: JAN 7, 14, 21, 28. FEB 11, 18, 25.
7022259007

14 **ರಾಯಲ್ ರಾಜಸ್ಥಾನ - 8 ದಿನಗಳು**
ಜೈಪುರ್, ಅಜ್ಮೀರ್, ಪುಷ್ಕರ್, ಉದಯ್ ಪುರ, ಜೈಸಲ್ಮೇರ್, ಡೆಸರ್ಟ್, ಜೋಧಪುರ.
ದಿನಾಂಕಗಳು: 2025: NOV 26. DEC 3, 10, 17.
2026: JAN 7, 21. FEB 4, 18.
7975001525

15 **ಕಾಶಿ - ಗಯಾ - ಅಯೋಧ್ಯಾ - 6 / 7 ದಿನಗಳು**
ವಾರಣಾಸಿ, ಪ್ರಯಾಗ್ ರಾಜ್, ಗಯಾ, ಬೋಧಗಯಾ, ಸಾರಾನಾಥ, ಅಯೋಧ್ಯಾ
ದಿನಾಂಕಗಳು: 2025: DEC 3, 17.
2026: JAN 7, 21. FEB 11, 25. MAR 4, 18.
9364104366

16 **ಗೋಲ್ಡನ್ ಟ್ರಯಾಂಗಲ್ ಟೂರ್ - 6 ದಿನಗಳು**
ದೆಹಲಿ, ಮಥುರಾ, ಬೃಂದಾವನ, ಆಗ್ರಾ, ಫತೇಪುರ್ ಸಿಕ್ರಿ, ಜೈಪುರ್
ದಿನಾಂಕಗಳು: 2025: DEC 3, 17.
2026: JAN 7, 21. FEB 4, 18. MAR 4, 18.
9364104366

ಜಿಕೆವಿಕೆ: ವನ ವಿಜ್ಞಾನ ಕೇಂದ್ರ ಆರಂಭ

ಬೆಂಗಳೂರು ಕೃಷಿ ವಿಜ್ಞಾನಗಳ ವಿ.ವಿ ಹಾಗೂ ಐಡಬ್ಲ್ಯುಎಸ್‌ಟಿಯೊಂದಿಗೆ ಒಪ್ಪಂದ

● ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- ಕೃಷಿ ವಿವಿಗಳಲ್ಲಿ ಮೊದಲ ವನ ವಿಜ್ಞಾನ ಕೇಂದ್ರ
- ಅರಣ್ಯ ಕೃಷಿ ಬಗ್ಗೆ ರೈತರು, ವಿದ್ಯಾರ್ಥಿಗಳು, ಸಂಶೋಧಕರಿಗೆ ತರಬೇತಿ
- ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆ

ಬೆಂಗಳೂರು: ಅರಣ್ಯ ಕ್ಷೇತ್ರದಲ್ಲಿ ರೈತರು, ಸಂಶೋಧಕರು ಮತ್ತು ಸ್ಥಳೀಯ ಸಮುದಾಯಗಳಿಗೆ ತರಬೇತಿ ನೀಡಲು ಹಾಗೂ ಅರಣ್ಯ ಆಧಾರಿತ ಜೀವನೋಪಾಯಗಳನ್ನು ವಿಸ್ತರಿಸಲು ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಮೊದಲ 'ವನ ವಿಜ್ಞಾನ ಕೇಂದ್ರ'ವನ್ನು ಆರಂಭಿಸಲಾಗಿದೆ.

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿಯು (ಐಸಿಎಫ್‌ಆರ್‌ಇ) 'ವನ ವಿಜ್ಞಾನ ಕೇಂದ್ರ'ದ ಎಲ್ಲ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಲಿದೆ. ಐಸಿಎಫ್‌ಆರ್‌ಇನ ಅಂಗ ಸಂಸ್ಥೆಗಳು, ಕೆಲವು ರಾಜ್ಯಗಳ ಅರಣ್ಯ ಇಲಾಖೆಗಳಲ್ಲಿ ಮಾತ್ರ ವನ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಈಗ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಮೊದಲ ಕೇಂದ್ರ ಆರಂಭವಾಗಿದೆ.

ಮೊದಲ ಹಂತದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳ ಕುರಿತು 2025ರ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿರುವ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ (ಐಡಬ್ಲ್ಯುಎಸ್‌ಟಿ) ಜೊತೆಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಒಪ್ಪಂದ ಮಾಡಿಕೊಂಡಿದೆ. ಈ ಪ್ರಕಾರ, ಕೇಂದ್ರದಲ್ಲಿ ಕೈಗೊಳ್ಳುವ ಚಟುವಟಿಕೆಗಳಿಗೆ ಪ್ರತಿವರ್ಷ ಐಡಬ್ಲ್ಯುಎಸ್‌ಟಿ ಧನಸಹಾಯ ಒದಗಿಸಬೇಕು. ಐಸಿಎಫ್‌ಆರ್‌ಇ ತನ್ನಲ್ಲಿ ಲಭ್ಯವಿರುವ ಮರಗಳ ತಳಿಗಳು, ಅರಣ್ಯ ತಂತ್ರಜ್ಞಾನಗಳನ್ನು ಒದಗಿಸಬೇಕು. ಕೇಂದ್ರದಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದ ಕೆವಿಕೆಗಳ ಮೂಲಕ ರೈತರಿಗೆ ತಲುಪಿಸಬೇಕು.

'ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು, ಸ್ಥಳೀಯ ಸಸ್ಯ ಸಂಪತ್ತನ್ನು ರಕ್ಷಣೆ ಮಾಡುವುದು. ಇದಕ್ಕೆ ಸಂಬಂಧಿಸಿದಂತೆ ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳನ್ನು ನಡೆಸುವುದು. ಕಾಡು ಸಂಪನ್ಮೂಲಗಳ ಸುಸ್ಥಿರ ಉಪಯೋಗ, ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ಅರಣ್ಯಗಳಲ್ಲಿ ಸಿಗುವ ಉತ್ಪನ್ನಗಳ ಬಳಕೆಯನ್ನು ಹೆಚ್ಚಿಸುವುದು ಈ ಕೇಂದ್ರದ ಉದ್ದೇಶವಾಗಿದೆ' ಎಂದು ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಉದ್ಯಮಗಳನ್ನು ಸ್ಥಾಪಿಸುವಂತೆ ರೈತರನ್ನು ಉತ್ತೇಜಿಸಲಾಗುತ್ತದೆ. ಅರಣ್ಯೀಕರಣ ಯೋಜನೆ ಹಾಗೂ ಪರಿಸರ ಸಮತೋಲನ ಕಾಯುವ ಯೋಜನೆಗಳನ್ನು ರೂಪಿಸಲಾಗುತ್ತದೆ. ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಸಾರ್ವಜನಿಕರಿಗೆ ಈ ಕೇಂದ್ರದಲ್ಲಿ ಪ್ರಾಯೋಗಿಕವಾಗಿ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ' ಎಂದು ವಿವರಿಸಿದರು.

'ಅರಣ್ಯ ಜಾಗೃತಿ ಶಿಬಿರಗಳು, ಮರು-ಅರಣ್ಯೀಕರಣ, ಅರಣ್ಯ ಉತ್ಪನ್ನಗಳಿಗೆ ಮೌಲ್ಯವರ್ಧನೆ, ಕಾನೂನು ಜಾಗೃತಿ, ತೋಟಗಾರಿಕೆ ಹಾಗೂ ಅರಣ್ಯ ಕೃಷಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತದೆ. ಸುಧಾರಿತ ಅರಣ್ಯ ತಳಿಯ ಮರಗಳ ಬೆಳೆ ಅಥವಾ ತಳಿಗಳ ಮಾದರಿಗಳನ್ನು ನರ್ಸರಿಗಳಲ್ಲಿ ಬೆಳೆದು ರೈತರಿಗೆ ವಿತರಿಸುವುದು. ಅರಣ್ಯ ನಿರ್ವಹಣಾ ವಿಧಾನಗಳನ್ನು ತಿಳಿಸಲಾಗುತ್ತದೆ' ಎಂದು ಕೇಂದ್ರದ ನೋಡಲ್ ಅಧಿಕಾರಿ ಎಚ್.ಬಿ. ರಘು ತಿಳಿಸಿದರು.

ಕೃಷಿ ಅರಣ್ಯ (ಮಾದರಿ ಚಿತ್ರ)

'ಪ್ರಾತ್ಯಕ್ಷಿಕೆ ಕೇಂದ್ರ ಪ್ರಾರಂಭ'

'ವನ ವಿಜ್ಞಾನ ಕೇಂದ್ರಕ್ಕೆ ಬೇಕಾಗುವ ಸಂಶೋಧನೆ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರ ಹಾಗೂ ತಾಕುಗಳನ್ನು ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾಗಿದೆ. ಮಾದರಿ ಅರಣ್ಯ ಸಸ್ಯ ಕ್ಷೇತ್ರಕ್ಕೆ ಬೇಕಾಗುವ ಮರಗಳನ್ನು ಬೆಳೆಸಲಾಗುತ್ತಿದೆ' ಎಂದು ಎಸ್.ವಿ. ಸುರೇಶ ತಿಳಿಸಿದರು.

'ಕೃಷಿ ಅರಣ್ಯಕ್ಕೆ ಸೂಕ್ತವಾದ ಉತ್ಕೃಷ್ಟ ಸಸಿಗಳ ಉತ್ಪಾದನೆ ಹೆಚ್ಚಿಸಲಾಗುತ್ತದೆ. ಅರಣ್ಯ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮಗಳು ಕುರಿತು ತರಬೇತಿಗಳನ್ನು ನೀಡಲಾಗುತ್ತದೆ' ಎಂದು ವಿವರಿಸಿದರು.

ಎಸ್.ವಿ. ಸುರೇಶ

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2025–26/24
ದಿನಾಂಕ : 04–11–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹಿರೇಹಳ್ಳಿ ಯಾರ್ಡ್‌ನಲ್ಲಿ ರಸ್ತೆ–1 ಕ್ಕಾಗಿ 250 ಮೀ ಉದ್ದದಲ್ಲಿ ಹೆಚ್ಚಿಸುವುದರೊಂದಿಗೆ ಕ್ರಾಸ್‌ಓವರ್ ಜೊತೆಗೆ 63ಎ ಮತ್ತು 63ಬಿ ಪಾಯಿಂಟ್‌ಗಳ ಸ್ಥಳಾಂತರಕ್ಕಾಗಿ ಓಹೆಚ್‌ಇ ಮಾರ್ಪಾಡು.	ರೂ. 82,96,920.37

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26–11–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್, ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಬೆಂಗಳೂರು

ಪಿಯುಬಿ/624/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2025–26/25
ದಿನಾಂಕ : 04–11–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(1) ಬೆಂಗಳೂರು – ಜೋಲಾರಪೇಟೆ ಸೆಕ್ಷನ್‌ನಲ್ಲಿ ಸೆಕ್ಷನಲ್ ವೇಗವನ್ನು ಗಂಟೆಗೆ 110 ಕಿಮೀ. ನಿಂದ ಗಂಟೆಗೆ 130 ಕಿ.ಮೀ.ಗೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮಾರ್ಪಾಡು ಮತ್ತು ಬೆಂಗಳೂರು ವಿಭಾಗದಲ್ಲಿ ಅನಗತ್ಯವಾದ ಮಾಸ್ಟ್ / ಪೋರ್ಟಲ್‌ನ್ನು ತೆಗೆದುಹಾಕುವುದು. (2) ಸಹಾಯಕ ವಿಭಾಗೀಯ ಇಂಜಿನಿಯರ್ / ಬೆಂಗಳೂರು ಉಪ-ವಿಭಾಗದಲ್ಲಿ ಹೂಡಿ ಹಾಲ್ಟ್ – ಕೃಷ್ಣರಾಜಪುರಂ ನಿಲ್ದಾಣಗಳ ನಡುವೆ ಕಿಮೀ 339/300–400 ನಲ್ಲಿ ಅತಿಕ್ರಮಿಸುವ ಸ್ಥಳದಲ್ಲಿ ರಸ್ತೆ ಕೆಳಸೇತುವೆಯ ಉದ್ದೇಶಿತ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮಾರ್ಪಾಡು	ರೂ. 1,23,73,500.54

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26–11–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್, ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಬೆಂಗಳೂರು

ಪಿಯುಬಿ/625/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/155/2025
ದಿನಾಂಕ : 04–11–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಥಣಿಸಂದ್ರ ರೈಲ್ವೆ ನಿಲ್ದಾಣದಲ್ಲಿ ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ವಹಣಾ ಡಿಪೋದ ಅಭಿವೃದ್ಧಿ ಮತ್ತು ತುಮಕೂರು ರೈಲ್ವೆ ನಿಲ್ದಾಣದ ಬೃಹತ್ ಉನ್ನತೀಕರಣಕ್ಕಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ (ಇಪಿಸಿ) ಮೂಲಕ ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸುವುದು (ಟೆಂಡರ್ ಉಲ್ಲೇಖ ಸಂ. ಪಿಎಂಎಸ್–ಟಿಕೆ–ಎಸ್‌ಟಿಎನ್–ಡಿಇವಿ–ವಂದೇಭಾರತ್)	ರೂ. 10,95,43,438/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05–01–2026 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/626/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

PUBLIC NOTICE

Dr. Vallampatti Nageswara Rao S/o Vallampatti Appala Raju and Mrs. Vallampatti Bimba Annapurna W/o Dr. Vallampatti Nageswara Rao, residing at Flat No.C-2003, Block No.C-2 in the residential apartment building known as "ARTISANE FOREST BREEZE", situated at Doraisanipalya, Bilekahalli Village, Begur Hobli, Bangalore South Taluk, Bangalore have represented themselves to be the joint and absolute owners (Owners) in possession and enjoyment of the Property described in the Schedule having acquired the same under the Registered Sale Deed dated 17.06.2022.

Our client has negotiated to purchase the schedule property from the said Owners subject to legal and marketable title and delivery of vacant possession free from all encumbrances.

Any person/s who may have any right or interest in the Schedule Property or otherwise objecting to the transaction may do so in writing to the undersigned within 10 days of this publication along with documentary proof failing which our client will proceed with the purchase of the Schedule Property whereafter no further claims will be entertained and /or the same will be deemed to have been waived or abandoned.

SCHEDULE PROPERTY

Residential Apartment bearing No.C-2003 in 3rd Floor, Block No.C-2, consisting of 3 Bedroom, Hall and Kitchen in the multi-storied residential apartment building known as 'ARTISANE FOREST BREEZE" having a super built up area of 2763 square feet bearing E.P.I.D No. 1476487699, constructed on the residentially converted property bearing Khata No.103/1036/941/764/882/3-3 (formed in Survey No.165/6) admeasuring 61,296 square feet, situated at Doraisanipalya, Bilekahalli Village, Begur Hobli, Bangalore South Taluk, Bangalore, together with 723 square feet undivided share, right, title and interest in the property bearing Khata No.103/1036/ 941/764/882/3-3 (formed in Survey No.165/6) admeasuring 61,296 square feet, situated at Doraisanipalya, Bilekahalli Village, Begur Hobli, Bangalore South Taluk, Bangalore.

V.C.RAJU
For Vishwanath & Manasa, Advocates, # 11/1, I Cross, CSI Compound, Bangalore – 560 027,
Ph. Nos. 9742477021/9845327803,
E-mail: vishwanathandmanasa@gmail.com

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಅಇಂ(ವಿ)/ಪ್ರ(ಕಾ)ವೃ–ಉ/ಕಾನಿಇಂ(ವಿ)/ಸಇಂ(ವಿ)/ಸಕಾಇಂ(ವಿ)–2/ಕ–T6 /25–26/1985ದಿನಾಂಕ: 10.11.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) **ಟೆಂಡರ್ ನಂ: KPTCL vide Tender No:-KPTCL/2025-26/TL/Work-_INDENT2941-**220ಕೆವಿ ನೆಲಮಂಗಲ ಪೀಣ್ಯ 3 ಮತ್ತು 4 ಡಬಲ್ ಸರ್ಕ್ಯೂಟ್ ಮಾರ್ಗದ, ಸ್ಥಳ ಸಂಖ್ಯೆ 1155 ಮತ್ತು 1156, ಕರಿಯೋಬನಹಳ್ಳಿ ಪಿಲ್ಲಪ್ಪ ಲೇಔಟ್‌ನಲ್ಲಿ ಬೆಂಗಳೂರು ಸದರಿ ಮಾರ್ಗದಲ್ಲಿ ಮಧ್ಯಮ ಕಂಬವನ್ನು ಒದಗಿಸಿ ಎತ್ತರದ ಅಂತರವನ್ನು ಹೆಚ್ಚಿಸುವ ಕಾಮಗಾರಿ.

(2) **ಟೆಂಡರ್ ನಂ: KPTCL vide Tender No:-KPTCL/2025-26/TL/Work-_INDENT2938-**220ಕೆವಿ ಡಬಲ್ ಸರ್ಕ್ಯೂಟ್ ನೆಲಮಂಗಲ ಪೀಣ್ಯ ಹೂಡಿ **B1** ಮತ್ತು **B2,** ಅಬ್ಬಿಗೆರೆ ಮಾರ್ಗದ ಟವರ್ ಸಂಖ್ಯೆ 26ನ್ನು ಬದಲಿಸಿ 220ಕೆವಿ **Narrow based tower** ಸ್ಥಾಪಿಸುವ ಕಾಮಗಾರಿ.

ಬಿಡ್‌ಗಳನ್ನು ಕೆಪಿಪಿಪಿ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಹೆಚ್ಚಿನ ವಿವರಗಳನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ **E Procurement KPTCL** ಗೆ ಅಥವಾ ನೇರವಾಗಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 11.11.2025 ರಂದು ಅಥವಾ ತದನಂತರ** ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ (ಕಾರ್ಯಾಚರಣೆ)ವೃತ್ತ–ಉತ್ತರ, ಕವಿಪ್ರನಿನಿ,
ಯು.ಎ.ಎಸ್ ಕ್ಯಾಂಪಸ್, ಹೆಬ್ಬಾಳ, ಬೆಂಗಳೂರು–560024.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427, ಫ್ಯಾಕ್ಸ್: 08156 – 295427
ಇಮೇಲ್ – eemidcbpura@gmail.com
ಸಂಖ್ಯೆ : ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ/1829/2025–26 ದಿನಾಂಕ : 10/11/2025

ಅಲ್ಪಾವಧಿ ಪ್ರೀ ಕ್ವಾಲಿಫೀಕೇಶನ್ ಟೆಂಡರ್ ಪ್ರಕಟಣೆ ಸಂಖ್ಯೆ: 14/2025–26/ದಿನಾಂಕ: 10/11/2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ–6 ಟೆಂಡರ್ ಡಾಕ್ಯುಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಒಂದು ಲಕೋಟೆ ಪದ್ಧತಿಯಲ್ಲಿ 4702 ಪ್ರಧಾನ ಕಾಮಗಾರಿ–ಏತ ನೀರಾವರಿ ಯೋಜನೆಯಡಿಯಲ್ಲಿ 01 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಮೊತ್ತ 23710.00 ಲಕ್ಷ ನಿಗಧಿತ ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ದಿನಾಂಕ: 10–11–2025ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು **ದಿನಾಂಕ: 14–11–2025 ರಂದು ಬೆಳಗ್ಗೆ 11.30 ಗಂಟೆಗೆ ಅಧೀಕ್ಷಕ ಇಂಜಿನಿಯರ್ ರವರ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, 3ನೇ ಮಹಡಿ ಬಿ.ಡಿ.ಎ ಕಾಂಪ್ಲೆಂಕ್ಸ್, ಜಯನಗರ, ಬೆಂಗಳೂರು** ಇಲ್ಲಿ ಆಯೋಜಿಸಲಾಗಿರುತ್ತದೆ. ಪ್ರೀ ಕ್ವಾಲಿಫೀಕೇಶನ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 24–11–2025 ಸಂಜೆ 04:30 ಗಂಟೆಯವರೆಗೆ, ಪ್ರೀ ಕ್ವಾಲಿಫಿಕೇಶನ್ ಬಿಡ್ ತೆರೆಯುವ ದಿನಾಂಕ: 26–11–2025ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಲಿಂಗತ್ವ ಅಲ್ಪಸಂಖ್ಯಾತೆ ಮೇಲೆ ಹಲ್ಲೆ: ಖಂಡನೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತೆ ಸುಕನ್ಯಾ ಅವರ ಮೇಲೆ ಹಲ್ಲೆ ನಡೆಸಿ, ತಲೆ ಬೋಳಿಸಿದ ಕೃತ್ಯ ಖಂಡನೀಯ ಎಂದು ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳವಳಿ (ಎಂಜಿಎಸ್‌ಪಿ) ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಂಜಿಎಸ್‌ಪಿ ಅಧ್ಯಕ್ಷೆ ವೈಶಾಲಿ, 'ಸುಕನ್ಯಾ ಅವರನ್ನು ದುಷ್ಕರ್ಮಿಗಳು ಅಪಹರಿಸಿ ಅಕ್ರಮವಾಗಿ ಬಂಧನದಲ್ಲಿರಿಸಿ, ಕಟ್ಟಿಗೆಯಿಂದ ಹೊಡೆದು, ಅವರ ತಲೆ ಬೋಳಿಸಿದ್ದರು. ಈ ಪ್ರಕರಣದ ತನಿಖೆ ನಡೆಸಿ, ಎಲ್ಲ ಆರೋಪಿಗಳನ್ನು ಬಂಧಿಸಿ ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಿಸಿದರು.

'ಲಿಂಗತ್ವ ಅಲ್ಪಸಂಖ್ಯಾತರಿಗೆ ಸರ್ಕಾರಿ ಉದ್ಯೋಗಗಳಲ್ಲಿ ವಿಶೇಷ ನೇಮಕಾತಿ, ಉದ್ಯಮಶೀಲತೆ ಯೋಜನೆಗಳು ಸೇರಿದಂತೆ ಕೌಶಲ ಅಭಿವೃದ್ಧಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ, ಜೀವನೋಪಾಯದ ಅವಕಾಶಗಳನ್ನು ಒದಗಿಸಬೇಕು. ಸರ್ಕಾರ ನಮ್ಮ ಸಮುದಾಯದವರಿಗೆ ಸುರಕ್ಷತೆ, ವಸತಿ ಸೌಲಭ್ಯಗಳನ್ನು ನೀಡಬೇಕು' ಎಂದು ಹೇಳಿದರು. ರಾಜೇಶ್ ಶ್ರೀನಿವಾಸ್, ಕೃತಿಕಾ, ಮೋನಿಕಾ, ವಕೀಲರಾದ ಬಿ.ಟಿ. ವೆಂಕಟೇಶ್, ಆಶಾ ಸುದ್ದಿಗೋಷ್ಠಿಯಲ್ಲಿದ್ದರು.

ಶಬರಿಮಲೆಗೆ ನ.28ರಿಂದ ಬಸ್

ಬೆಂಗಳೂರು: ಕೇರಳದ ಶಬರಿಮಲೆಗೆ ತೆರಳುವ ಭಕ್ತರ ಅನುಕೂಲಕ್ಕಾಗಿ ಬೆಂಗಳೂರು–ನೀಲಕ್ಕಲ್ (ಪಂಪಾ–ಶಬರಿಮಲೆ) ಮಾರ್ಗದಲ್ಲಿ ಕೆಎಸ್‌ಆರ್‌ಟಿಸಿ ವೋಲ್ವೊ ಬಸ್ ನ.28ರಿಂದ ಸಂಚರಿಸಲಿದೆ.

ಬೆಂಗಳೂರಿನ ಶಾಂತಿನಗರ ನಿಲ್ದಾಣದಿಂದ ಪ್ರತಿದಿನ ಮಧ್ಯಾಹ್ನ 1.50ಕ್ಕೆ ಹೊರಡಲಿದೆ. ಮರುದಿನ ಬೆಳಿಗ್ಗೆ 6.45ಕ್ಕೆ ನೀಲಕ್ಕಲ್ ತಲುಪಲಿದೆ. ಸಂಜೆ 6ಕ್ಕೆ ನೀಲಕ್ಕಲ್‌ನಿಂದ ಹೊರಡಲಿರುವ ಬಸ್ ಮರುದಿನ ಬೆಳಿಗ್ಗೆ 10ಕ್ಕೆ ಬೆಂಗಳೂರು ತಲುಪಲಿದೆ.

₹1,950 ದರ ನಿಗದಿಪಡಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU-207/3023/2025–26 ದಿನಾಂಕ: 10.11.2025

ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3)ರಡಿಯಲ್ಲಿ]

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ 2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಆಸೇ 2004, ದಿನಾಂಕ 22.06.2007ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (2)ರ ಅಡಿಯಲ್ಲಿ ಪ್ರಶ್ನಿತ ಜಮೀನಿನ ಸಾರಿಗೆ–ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69(4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕೆ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ / ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ನಿಗಧಿಪಡಿಸಲು ಕೋರಿರುವ ಹೊಸ ಭೂ ಉಪಯೋಗ
1	ಮೆ॥ ವೈಶ್ಯರಾಜು ಇನ್ಫ್ರಾ ಎಲ್.ಎಲ್.ಪಿ	ಬೆಂಗಳೂರು ಪೂರ್ವ	ಬಿದರ ಹಳ್ಳಿ	ದೊಡ್ಡಬನ ಹಳ್ಳಿ	103/3	0–36.75	ಸಾರಿಗೆ–ಸಂಪರ್ಕ	ವಸತಿ

ಸಹಿ/–ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಚಿಟಿಕೆ ಸುದ್ದಿ

ಭೂಮಿ ಪೂಜೆ ನಾಳೆ

ಬೆಂಗಳೂರು: ಗಾಂಧಿನಗರದ ಕನಕದಾಸ ವೃತ್ತದಲ್ಲಿರುವ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣದ ಭೂಮಿ ಪೂಜೆಯನ್ನು ಇದೇ 12ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ವಿ. ಸೋಮಶೇಖರ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ನೂತನ ಕಟ್ಟಡವು ಮೂರು ಅಂತಸ್ತಿನಲ್ಲಿ ನಿರ್ಮಾಣವಾಗಲಿದ್ದು, ಕೆಳ ಮಹಡಿಯಲ್ಲಿ ವಾಹನ ನಿಲುಗಡೆ, ವಾಣಿಜ್ಯ ಸಂಕೀರ್ಣ ಹಾಗೂ ಸುಮಾರು 300 ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ ನಿರ್ಮಿಸಲಾಗುತ್ತದೆ. ಇದರಲ್ಲಿ ಸಭಾಂಗಣ, ಅಡುಗೆಮನೆ, ಇನ್ನಿತರ ಸೌಲಭ್ಯಗಳು ಇರಲಿವೆ' ಎಂದು ಮಾಹಿತಿ ನೀಡಿದರು.

'ಭೂಮಿ ಪೂಜೆ ಸಮಾರಂಭದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಭಾಗವಹಿಸಲಿದ್ದಾರೆ. ಸಮುದಾಯದ ಶಾಸಕರು, ಸಂಘದ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ' ಎಂದರು.

ತಿರುಪತಿ ಲಡ್ಡುಗೆ ನಕಲಿ ತುಪ್ಪ: ಕಠಿಣ ಶಿಕ್ಷೆಗೆ ಆಗ್ರಹ

ಬೆಂಗಳೂರು: 'ತಿರುಪತಿ ಲಡ್ಡು ಪ್ರಸಾದ ತಯಾರಿಕೆಯಲ್ಲಿ ನಕಲಿ ತುಪ್ಪ ಬಳಸಿರುವುದು ಎಸ್‌ಐಟಿ ತನಿಖೆಯಲ್ಲಿ ದೃಢಪಟ್ಟಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು' ಎಂದು ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಒತ್ತಾಯಿಸಿದ್ದಾರೆ.

'ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿರುವ ಗಂಭೀರ ಪ್ರಕರಣ ಇದಾಗಿದೆ. ಲಡ್ಡು ಪ್ರಸಾದದಲ್ಲಿ ₹250 ಕೋಟಿಗೂ ಅಧಿಕ ಮೌಲ್ಯದ 68 ಲಕ್ಷ ಕೆ.ಜಿ. ನಕಲಿ ತುಪ್ಪವನ್ನು ಬಳಸಿರುವುದು ಬಯಲಾಗಿದೆ. ಆಂಧ್ರಪ್ರದೇಶದ ಹಿಂದಿನ ಮುಖ್ಯಮಂತ್ರಿ ಜಗನ್ ಮೋಹನ ರೆಡ್ಡಿ ನೇತೃತ್ವದ ಸರ್ಕಾರದ ಆಡಳಿತಾವಧಿಯಲ್ಲಿ ನಡೆದ ಕೃತ್ಯವಿದು. ಅಕ್ರಮಕ್ಕೆ ಕಾರಣರಾದವರ ವಿರುದ್ಧ ಸಿಬಿಐ ಮತ್ತು ಆಂಧ್ರಪ್ರದೇಶ ಪೊಲೀಸರ ತನಿಖೆಯ ಆಧಾರದ ಮೇಲೆ ಸೂಕ್ತ ಶಿಕ್ಷೆ ಆಗಬೇಕು' ಎಂದು ಆಗ್ರಹಿಸಿದ್ದಾರೆ.

ಟಿ.ಎ.ಶರವಣ

'ಲಡ್ಡುಗಳಲ್ಲಿ ಕೊಬ್ಬಿನಾಂಶ, ಮಾಂಸದ ಅಂಶವಿರುವ ಕಳಪೆ ಪದಾರ್ಥಗಳನ್ನು ಬಳಸಲಾಗಿದೆ ಎಂಬುದೂ ತನಿಖೆಯಲ್ಲಿ ದೃಢವಾಗಿದೆ. ಉತ್ತರಾಖಂಡ ಮೂಲದ ಬೋಲ್ ಬಾಬಾ ಎಂಬ ಸಂಸ್ಥೆಯಿಂದ ಕಳಪೆ ತುಪ್ಪ ತರಿಸಿಕೊಂಡು ಅವ್ಯವಹಾರ ನಡೆಸಲಾಗಿದೆ. ಪ್ರಸಾದದ ಗುಣಮಟ್ಟ ಕಾಪಾಡಲು ನಂದಿನಿ (ಕೆಎಂಎಫ್) ತುಪ್ಪವನ್ನೇ ಬಳಸಬೇಕು' ಎಂದು ಶರವಣ ಮನವಿ ಮಾಡಿದ್ದಾರೆ.

'ಅರಣ್ಯದಲ್ಲಿ ರೆಸಾರ್ಟ್ ತೆರವುಗೊಳಿಸಿ'



ಬೆಂಗಳೂರು: 'ಕಬಿನಿ, ಬಂಡೀಪುರ ಸೇರಿದಂತೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿ ಬಂದ್ ಮಾಡಿರುವಂತೆ ಅರಣ್ಯ ಪ್ರದೇಶದಲ್ಲಿರುವ ಅಕ್ರಮ ರೆಸಾರ್ಟ್‌ಗಳನ್ನು ತೆರವುಗೊಳಿಸಬೇಕು' ಎಂದು ಅರಣ್ಯ ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ಸಮಾಜದ ಉಪಾಧ್ಯಕ್ಷ ವಲ್ಲಿಶ್ರೀ ವಾಸುಕಿ, ಕಾರ್ಯದರ್ಶಿ ಶಿವರಾಜ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಬಿನಿ, ಬಂಡೀಪುರದ ವ್ಯಾಪ್ತಿಯಲ್ಲಿರುವ ಬಹುತೇಕ ರೆಸಾರ್ಟ್‌ಗಳು ರಾಜಕಾರಣಿಗಳು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೇರಿವೆ. ಈ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ರಾತ್ರಿ ವೇಳೆಯಲ್ಲಿ ಫೈರ್ ಕ್ಯಾಂಪ್ ಮಾಡಿ ವನ್ಯಜೀವಿಗಳಿಗೆ ತೊಂದರೆ ಕೊಡುವ ಕೆಲಸಗಳು ನಡೆಯುತ್ತಿವೆ. ಆದ್ದರಿಂದ ಈ ಭಾಗದಲ್ಲಿ ಮಾನವ ವನ್ಯಜೀವಿಗಳ ಸಂಘರ್ಷಗಳು ಹೆಚ್ಚಾಗುತ್ತಿವೆ' ಎಂದು ದೂರಿದರು.

'ಎಚ್.ಡಿ. ಕೋಟೆ ಭಾಗದಲ್ಲಿ ಇತ್ತೀಚೆಗೆ ಮಾನವನ ಮೇಲೆ ದಾಳಿ ಮಾಡಿದ ಹುಲಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ. ಅವುಗಳನ್ನು ಮತ್ತೆ ಕಾಡಿನಲ್ಲಿ ಬಿಡಲಾಗುತ್ತದೆಯೇ? ಆ ಹುಲಿಗಳ ಜೊತೆಗೆ ಏನು ಮಾಡುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸಬೇಕು' ಎಂದು ಆಗ್ರಹಿಸಿದರು.

ಕಾಂಪೌಂಡ್ ಕುಸಿದು ಕಾರ್ಮಿಕ ಸಾವು

ಆನೇಕಲ್: ನಿರ್ಮಾಣ ಹಂತದ ಕಾಂಪೌಂಡ್ ಕುಸಿದು ಕಾರ್ಮಿಕನೊಬ್ಬ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ಸೋಮವಾರ ನಡೆದಿದೆ. ಒಡಿಶಾ ರಾಜ್ಯದ ವಿಷ್ಣು ನಾಗ್ (45) ಮೃತಪಟ್ಟವರು. ಈ ಘಟನೆಯಲ್ಲಿ ಪಶ್ಚಿಮ ಬಂಗಾಳದ ಕುಜನ್ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹೆಬ್ಬಗೋಡಿಯಲ್ಲಿ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಾಣ ಮಾಡುತ್ತಿದ್ದಾಗ ಏಕಾಏಕಿ ಅದು ಕುಸಿದಿದೆ. ಇದರಿಂದಾಗಿ ವಿಷ್ಣುನಾಗ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತಗ್ಗು ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದರಿಂದ ಘಟನೆ ಸಂಭವಿಸಿದೆ.

ವಿಮಾನ ನಿಲ್ದಾಣದಲ್ಲಿ 'ಕಲಾ ಲೋಕ' ಮಳಿಗೆ

ಕೆಐಎಎಲ್‌ನಲ್ಲೂ ಸಿಗಲಿದೆ ಚನ್ನಪಟ್ಟಣ ಆಟಿಕೆ, ಇಳಕಲ್ ಸೀರೆ
ಒಂದೇ ಸೂರಿನಡಿ ನಾಡಿನ ಪಾರಂಪರಿಕ–ವಿಶಿಷ್ಟ ಉತ್ಪನ್ನಗಳು ಲಭ್ಯ

ಬ್ರ್ಯಾಂಡ್ ಬೆಂಗಳೂರು

• ವರುಣ ಹೆಗಡೆ

ಬೆಂಗಳೂರು: ಚನ್ನಪಟ್ಟಣದ ಆಟಿಕೆ, ಇಳಕಲ್ ಸೀರೆ, ಲಂಬಾಣಿ ಕಸೂತಿ ಸೇರಿ ನಾಡಿನ ಅಸ್ಮಿತೆ ಬಿಂಬಿಸುವ ಉತ್ಪನ್ನಗಳು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೂ (ಕೆಐಎಎಲ್) ದೊರೆಯಲಿವೆ. ಕೆಐಎಎಲ್‌ನಲ್ಲಿ ಈಗಾಗಲೇ 'ಕಲಾ ಲೋಕ' ಮಳಿಗೆಗಳು ತಲೆಯೆತ್ತಿದ್ದು, ದೇಶ–ವಿದೇಶದ ಪ್ರಯಾಣಿಕರನ್ನು ತನ್ನತ್ತ ಕೈಬೀಸಿ ಕರೆಯಲು ಅಣಿಗೊಂಡಿವೆ.

ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಈ ವಿಮಾನ ನಿಲ್ದಾಣಕ್ಕೆ ಪ್ರತಿ ವರ್ಷ ಕೋಟ್ಯಂತರ ಪ್ರಯಾಣಿಕರು ಭೇಟಿ ನೀಡುತ್ತಿದ್ದಾರೆ. ಇದು ದೇಶದ ಅತ್ಯಂತ ದೊಡ್ಡ ವಿಮಾನ ನಿಲ್ದಾಣಗಳಲ್ಲಿ ಒಂದಾಗಿದೆ. ಈ ವಿಮಾನ ನಿಲ್ದಾಣದ ಟರ್ಮಿನಲ್ -2 ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ವಿಶಿಷ್ಟ ಹಸಿರು ವಿನ್ಯಾಸವನ್ನು ಹೊಂದಿದ್ದು, ಸಂಸ್ಕರಿಸಿದ ಬಿದಿರು ಮತ್ತು ಇತರ ನೈಸರ್ಗಿಕ ವಸ್ತುಗಳಿಂದ ಅಲಂಕರಿಸಲ್ಪಟ್ಟಿದೆ.ಇದರ ದೇಶೀಯ ಮತ್ತು ಅಂತರ ರಾಷ್ಟ್ರೀಯ ನಿರ್ಗಮನ ವಲಯದಲ್ಲಿ ಕೈಗಾರಿಕೆ ಇಲಾಖೆಯಡಿ 'ಕಲಾ ಲೋಕ' ಮಳಿಗೆಗಳನ್ನು ಆರಂಭಿಸಲಾಗಿದೆ. ದೇಶಿಯ ನಿರ್ಗಮನ ವಲಯದಲ್ಲಿನ ಮಳಿಗೆ ಉದ್ಘಾಟನೆಗೆ ಸಜ್ಜುಗೊಂಡಿದ್ದು, ಭೌಗೋಳಿಕ ಸೂಚಕ (ಜಿಐ ಟ್ಯಾಗ್) ಪಡೆದ ನಾಡಿನ ಆಯ್ದ ಉತ್ಪನ್ನಗಳ ಜತೆಗೆ ಇಲ್ಲಿನ ವಿಶೇಷ ಹಾಗೂ ಪಾರಂಪರಿಕ ಉತ್ಪನ್ನಗಳು ದೊರೆಯಲಿವೆ.

ಬೆಂಗಳೂರು ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬಿಐಎಎಲ್) ಈ ಮಳಿಗೆಗಳ ನಿರ್ಮಾಣಕ್ಕೆ ದೇಶೀಯ ಪ್ರಯಾಣಿಕರ ನಿರ್ಗಮನ ಪ್ರದೇಶದಲ್ಲಿ 132 ಚದರ ಮೀಟರ್ ಹಾಗೂ ಅಂತರರಾಷ್ಟ್ರೀಯ ಪ್ರಯಾಣಿಕರ ನಿರ್ಗಮನ ವಲಯದಲ್ಲಿ 140 ಚದರ ಮೀಟರ್ ಸ್ಥಳಾವಕಾಶ ಒದಗಿಸಿದೆ. ಈ ಮಳಿಗೆಗಳ ಬಾಡಿಗೆ ಶುಲ್ಕದಲ್ಲಿ ಬಿಐಎಎಲ್ ಶೇ 50ರಷ್ಟು ರಿಯಾಯಿತಿ ಒದಗಿಸಲಿದೆ.

ಉದ್ಘಾಟನೆಗೆ ಸಜ್ಜುಗೊಂಡಿರುವ ಮಳಿಗೆಯ ಆಕರ್ಷಕ ಹೊರನೋಟವು ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಅನಾವರಣ ಮಾಡುತ್ತಿದೆ. ಒಳಾಂಗಣದಲ್ಲಿ ಕೂಡ ಬೆಳಕಿನ ವಿನ್ಯಾಸದ ನಡುವೆ ಉತ್ಪನ್ನಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಮೈಸೂರು ಸ್ಯಾಂಡಲ್ ಸೋಪು, ಮೈಸೂರು ಸಿಲ್ಕ್ ಸೀರೆ ಸೇರಿ ವಿವಿಧ ಉತ್ಪನ್ನಗಳ ವಿಶೇಷತೆ ಹಾಗೂ ಸಂಕ್ಷಿಪ್ತ ಇತಿಹಾಸವೂ ಲಭ್ಯ.

ಸರ್ಕಾರಿ ಸಂಸ್ಥೆಗಳ ಉತ್ಪನ್ನ: ಪ್ರತಿ ಉತ್ಪನ್ನಕ್ಕೂ ಪ್ರತ್ಯೇಕ ಸ್ಥಳಾವಕಾಶ ಒದಗಿಸಿ, ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಲಾಗಿದೆ. ಈಗಾಗಲೇ ರಾಜ್ಯದ 45 ಉತ್ಪನ್ನಗಳು ಜಿಐ ಟ್ಯಾಗ್ ಹೊಂದಿದ್ದು, ಅವುಗಳಲ್ಲಿ ಆಯ್ದ ಉತ್ಪನ್ನಗಳು ಇಲ್ಲಿ ಕಾಣಸಿಗುತ್ತವೆ. ನಾಡಿನ ವಿಶೇಷ ಹಾಗೂ ಪಾರಂಪರಿಕ ಉತ್ಪನ್ನಗಳ ಜತೆಗೆ ಸರ್ಕಾರಿ ಸಂಸ್ಥೆಗಳು ಸಿದ್ಧಪಡಿಸುತ್ತಿರುವ ಉತ್ಪನ್ನಗಳೂ ಇಲ್ಲಿ ದೊರೆಯಲಿವೆ. ಕಾಫಿ ಮಂಡಳಿ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಂತಹ ಸಂಸ್ಥೆಗಳ ಉತ್ಪನ್ನಗಳನ್ನೂ ಇಲ್ಲಿ ಇರಿಸಲಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇಲ್ಲಿ ಮಳಿಗೆಗಳ ನಿರ್ಮಾಣದಿಂದ ಮೈಸೂರು ಸ್ಯಾಂಡಲ್ ಸೋಪಿನಂತಹ ಉತ್ಪನ್ನಗಳು ಜಗತ್ತಿನ ಎಲ್ಲೆಡೆ ತನ್ನ ಕಂಪನ್ನು ಪಸರಿಸುವ ಸಾಧ್ಯತೆಯಿದೆ. 2024–25ರಲ್ಲಿ ಈ ವಿಮಾನ ನಿಲ್ದಾಣವನ್ನು 4.18 ಕೋಟಿ ಪ್ರಯಾಣಿಕರು ಬಳಕೆ ಮಾಡಿದ್ದರು. ದಿನಕ್ಕೆ ಸರಾಸರಿ 1.15 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.

ಟರ್ಮಿನಲ್ 1 ವಾರ್ಷಿಕ 3 ಕೋಟಿ ಪ್ರಯಾಣಿಕರನ್ನು ನಿರ್ವಹಣೆ ಮಾಡುವ ಸಾಮರ್ಥ್ಯ ಹೊಂದಿದೆ. 2023ರಲ್ಲಿ ಕಾರ್ಯಾರಂಭಗೊಂಡ ಟರ್ಮಿನಲ್ 2ರ ಮೊದಲನೇ ಹಂತವು 12.55 ಲಕ್ಷ ಚದರ ಮೀಟರ್ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡಿದ್ದು, ವಾರ್ಷಿಕ 1.6 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ.

ಕಲಾ ಲೋಕ ಮಳಿಗೆಯ ಹೊರಾಂಗಣ ನೋಟ



ಬಿದರಿ ಕಲೆಯ ಲೋಹದ ಕರಕುಶಲ ವಸ್ತು



ಚನ್ನಪಟ್ಟಣದ ಬೊಂಬೆ

ಅಂಕಿ ಅಂಶಗಳು

70 ಸಾವಿರ — ಪ್ರತಿನಿತ್ಯ ಕೆಐಎಎಲ್ ಟರ್ಮಿನಲ್ 1 ಬಳಸುವ ಸರಾಸರಿ ಪ್ರಯಾಣಿಕರು

45 ಸಾವಿರ — ಪ್ರತಿನಿತ್ಯ ಕೆಐಎಎಲ್ ಟರ್ಮಿನಲ್ 2 ಬಳಸುವ ಸರಾಸರಿ ಪ್ರಯಾಣಿಕರು

ಮಳಿಗೆಯಲ್ಲಿ ಏನೆಲ್ಲ ಇರಲಿದೆ?

ಮೈಸೂರು ಸಿಲ್ಕ್ ಸೀರೆ, ಚನ್ನಪಟ್ಟಣದ ಆಟಿಕೆ ಮತ್ತು ಬೊಂಬೆಗಳು, ಮೈಸೂರು ಸಾಂಪ್ರದಾಯಿಕ ಚಿತ್ರಕಲೆ, ಬಿದರಿ ಕಲೆ ಹೊಂದಿರುವ ಉತ್ಪನ್ನಗಳು, ಮೈಸೂರು ರೋಸ್ ವುಡ್ ಇನ್ಲೆ ಕಲಾಕೃತಿಗಳು, ಶ್ರೀಗಂಧದ ಕೆತ್ತನೆಗಳು, ಶ್ರೀಗಂಧದ ಸೋಪು, ಶ್ರೀಗಂಧದ ಎಣ್ಣೆ, ಅಗರಬತ್ತಿ, ಸಾಂಪ್ರದಾಯಿಕ ರೇಷ್ಮೆ ಸೀರೆಗಳು, ಚರ್ಮದ ಉತ್ಪನ್ನಗಳು, ಕಾಫಿ ಪುಡಿ ಹಾಗೂ ಸಹ ಉತ್ಪನ್ನಗಳ ಜತೆಗೆ ಪಾರಂಪರಿಕ ಹಾಗೂ ವಿವಿಧ ಸರ್ಕಾರಿ ಸಂಸ್ಥೆಗಳ ಉತ್ಪನ್ನಗಳು ದೊರೆಯಲಿವೆ.

ಇಂದು ಉದ್ಘಾಟನೆ

ದೇಶಿಯ ನಿರ್ಗಮನ ವಲಯದಲ್ಲಿ ನಿರ್ಮಾಣಗೊಂಡಿರುವ ಕಲಾಲೋಕ ಮಳಿಗೆಯ ಉದ್ಘಾಟನಾ ಸಮಾರಂಭವನ್ನು ನ.11ರಂದು ಮಧ್ಯಾಹ್ನ 12.30ಕ್ಕೆ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಮಳಿಗೆಯನ್ನು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿರುತ್ತಾರೆ. ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅಧ್ಯಕ್ಷತೆ ವಹಿಸುತ್ತಾರೆ.

ಕಾಫಿ ಸವಿಯಲು ಅವಕಾಶ

ಈ ಮಳಿಗೆಗಳಲ್ಲಿ ಕರ್ನಾಟಕದ ಕಾಫಿ ಸವಿಯಲು ಅವಕಾಶ ಇರಲಿದೆ. ವಿವಿಧ ಸ್ವಾದಗಳ ಕಾಫಿಯನ್ನು ಸ್ಥಳದಲ್ಲಿಯೇ ಸಿದ್ಧಪಡಿಸಿ ಕೊಡಲಾಗುತ್ತದೆ. ಪ್ರತ್ಯೇಕ ಆಸನ ವ್ಯವಸ್ಥೆಯನ್ನೂ ಮಾಡಲಾಗಿದೆ. ವಿವಿಧ ಬಗೆಯ ಕಾಫಿ ಪುಡಿಯನ್ನು ಕೂಡ ಮಾರಾಟಕ್ಕೆ ಇರಿಸಲಾಗಿದೆ.

ವಿಮಾನ ನಿಲ್ದಾಣದ ಗ್ರಾಹಕರನ್ನು ಗಮನದಲ್ಲಿ ಇರಿಸಿಕೊಂಡು ಈ ಮಳಿಗೆಗಳನ್ನು ನಿರ್ಮಿಸಲಾಗಿದೆ. ರಾಜ್ಯದ ಉತ್ಪನ್ನಗಳ ಬ್ರ್ಯಾಂಡಿಗ್ ಮಾಡಲು ಸಹ ಈ ಮಳಿಗೆಗಳು ಸಹಕಾರಿಯಾಗಲಿವೆ

ಎಂ.ಬಿ. ಪಾಟೀಲ, ಕೈಗಾರಿಕೆ ಸಚಿವ

'ಸಾಂವಿಧಾನಿಕ ಆಡಳಿತವೇ ಪ್ರಜಾಪ್ರಭುತ್ವದ ಮೂಲಾಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂವಿಧಾನಿಕ ಆಡಳಿತವು ಭಾರತದ ಪ್ರಜಾಪ್ರಭುತ್ವ ಚೌಕಟ್ಟಿನ ಮೂಲಾಧಾರ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಹೇಳಿದರು.

ಸಿಎಂಆರ್ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಭಾರತೀಯ ದೃಷ್ಟಿಕೋನದಲ್ಲಿ ಸಾಂವಿಧಾನಿಕ ಆಡಳಿತ ಮತ್ತು ಸಾರ್ವಜನಿಕ ನೀತಿ' ಬಗ್ಗೆ ಕೆ.ಸಿ. ರಾಮಮೂರ್ತಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತದಲ್ಲಿ ಆಡಳಿತವು ರಾಜಪ್ರಭುತ್ವ ಮತ್ತು ರಾಜಕೀಯ ಅಧಿಕಾರದಿಂದ ನಾಗರಿಕರ ಹಕ್ಕುಗಳನ್ನು ರಕ್ಷಿಸುವ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸುವ ಆಧುನಿಕ ಸಾಂವಿಧಾನಿಕ ವ್ಯವಸ್ಥೆಯಾಗಿ ವಿಕಸನಗೊಂಡಿದೆ ಎಂದು ವಿವರಿಸಿದರು.

ಸಿಎಂಆರ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ. ರಾಮಮೂರ್ತಿ, ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಸಬಿತಾ ರಾಮಮೂರ್ತಿ, ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ. ಜಗನ್ನಾಥ ರೆಡ್ಡಿ, ಕುಲಪತಿ ಎಚ್.ಬಿ. ರಾಘವೇಂದ್ರ, ಸಹ ಕುಲಪತಿ ಪ್ರವೀಣ್ ಆರ್, ಕುಲಸಚಿವ ಮೋಹನ್ ಬಾಬು ಜಿ.ಎನ್. ಎಐಎಲ್‌ಎಸ್ ನಿರ್ದೇಶಕ ಪ್ರಾಣೇಶ್ವರನ್, ಕರ್ನಾಟಕ ಕಾನೂನು ಆಯೋಗದ ಸದಸ್ಯ ನ್ಯಾಯಮೂರ್ತಿ ಅಶೋಕ್ ನಿಜಗಣ್ಣವರ್ ಇದ್ದರು.

ಕಾನೂನು ಅಧ್ಯಯನ ಶಾಲೆಯ ಡೀನ್ ಟಿ.ಆರ್. ಸುಬ್ರಹ್ಮಣ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ರಾಜ್‌ಕುಮಾರ್ ಖತ್ರಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರನ್ನು ಗೌರವಿಸಲಾಯಿತು

ಲೈಂಗಿಕ ದೌರ್ಜನ್ಯ ಸಂತ್ರಸ್ತರಿಗೆ ಮಾದರಿ ಎಸ್‌ಒಪಿ

ಬೆಂಗಳೂರು: 'ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುವ ಅಪ್ರಾಪ್ತ ವಯಸ್ಸಿನ ಸಂತ್ರಸ್ತ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಸಂಬಂಧಪಟ್ಟ ಪ್ರಾಧಿಕಾರಗಳು, ಎಲ್ಲ ಸರ್ಕಾರಿ ಸಂಸ್ಥೆಗಳು ಹಾಗೂ ಅಧಿಕಾರಿಗಳ ಮೇಲೆ ಜವಾಬ್ದಾರಿ ಹೊರಿಸುವಂತಹ ಮಾದರಿ ಪ್ರಮಾಣಿತ ಕಾರ್ಯ ವಿಧಾನ (ಎಸ್‌ಒಪಿ) ಜಾರಿಗೊಳಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಅತ್ಯಾಚಾರದಿಂದಾಗಿ ಗರ್ಭ ಧರಿಸಿದ್ದ ಬಾಲಕಿಯ ತಾಯಿ, 'ಮಗಳ ಗರ್ಭಪಾತಕ್ಕೆ ಅನುಮತಿ ನೀಡಲು ವೈದ್ಯರಿಗೆ ನಿರ್ದೇಶಿಸಬೇಕು' ಎಂದು ಕೋರಿದ್ದ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಾರ್ಗಸೂಚಿಗಳನ್ನು ರೂಪಿಸಲು ಆದೇಶಿಸಿದೆ.

ನ.14ರಿಂದ ಬಸವೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಥಣಿಯ ಮುರುಘೇಂದ್ರ ಶಿವಯೋಗಿಗಳ ಜಯಂತ್ಯುತ್ಸವವನ್ನು ನವೆಂಬರ್ 14ರಿಂದ 16ರವರೆಗೆ ವಿಜಯನಗರದ ಹಂಪಿನಗರ ಕ್ರೀಡಾಂಗಣದ ಚಂದ್ರಶೇಖರ ಅಜಾದ್ ವೇದಿಕೆಯಲ್ಲಿ ಆಯೋಜಿಸಲಾಗಿದೆ ಎಂದು ಗಚ್ಚಿನಮಠ ಶಿವಬಸವ ಸ್ವಾಮೀಜಿ ತಿಳಿಸಿದರು.

'ಅಥಣಿ ಸ್ವಾಮೀಜಿ ಬೇರೆಯಲ್ಲ, ಬಸವಣ್ಣ ಬೇರೆಯಲ್ಲ. ಬಸವಣ್ಣನ ವಚನಗಳನ್ನು ಪ್ರಚಾರ ಮಾಡಿದ ಅಥಣಿ ಶ್ರೀ ಅವರ ಚಿಂತನೆಗಳನ್ನು ನಗರದ ಜನರಿಗೆ ಪರಿಚಯಿಸಬೇಕೆಂಬ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದು ಯಾವುದೇ ಜಾತಿ ಧರ್ಮಕ್ಕೆ ಸೀಮಿತವಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಸೋಮವಾರ ಹೇಳಿದರು.

ಬಸವೋತ್ಸವ ಕಾರ್ಯಕ್ರಮದಲ್ಲಿ ಎಲ್ಲಾ ಸಮುದಾಯಗಳ ಸ್ವಾಮೀಜಿಗಳು, ರಾಜಕೀಯ ನಾಯಕರು ಭಾಗವಹಿಸುವರು. ಬಸವಣ್ಣ ಮತ್ತು ಅಥಣಿ ಸ್ವಾಮೀಜಿ ಅವರ ಕುರಿತು ಚರ್ಚೆ, ಗೋಷ್ಠಿ ನಡೆಯಲಿದೆ. ಇತರೆ ಯಾವುದೇ ವಿಷಯ ಚರ್ಚೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರತಿನಿತ್ಯ ಸಂಪನ್ಮೂಲ ವ್ಯಕ್ತಿಗಳು ಯುವಕರಿಗೆ ಸ್ಫೂರ್ತಿದಾಯಕ ಹಿತನುಡಿ ಹೇಳುವರು. ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಗೋಷ್ಠಿಯಲ್ಲಿ ಮಾದಾರ ಚೆನ್ನಯ್ಯ ಗುರು ಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ, ಹೊಸದುರ್ಗ ಕುಂಚಿಟಿಗ ಮಠದ ಶಾಂತವೀರ ಸ್ವಾಮೀಜಿ, ಬ್ಯಾಡಗಿ ವಿರಕ್ತಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ಹೊಳಲ್ಕೆರೆ ಒಂಟಿಕಂಬದ ಮಠದ ತಿಪ್ಪರುದ್ರ ಸ್ವಾಮೀಜಿ, ಅನ್ನಪೂರ್ಣೇಶ್ವರಿ ಮಠದ ಬಸವಲಿಂಗ ಸ್ವಾಮೀಜಿ, ಡಿಎಕ್ಸ್ ಮ್ಯಾಕ್ಸ್ ಸಂಸ್ಥೆಯ ಮುಖ್ಯಸ್ಥ ದಯಾನಂದ್, ರಾಷ್ಟ್ರೀಯ ಬಸವ ತತ್ವ ಪರಿಷತ್ ಅಧ್ಯಕ್ಷ ಅರುಣ್ ಕುಮಾರ್ ಇದ್ದರು.

ಅಥಣಿಯ ಮುರುಘೇಂದ್ರ ಶಿವಯೋಗಿಗಳ ಜಯಂತ್ಯುತ್ಸವ ಕುರಿತ ಆಹ್ವಾನ ಪತ್ರಿಕೆಯನ್ನು ಗಚ್ಚಿನಮಠದ ಶಿವಬಸವ ಸ್ವಾಮೀಜಿ ಬಿಡುಗಡೆ ಮಾಡಿದರು

ನಗರದಲ್ಲಿ ಇಂದು

ಅಮ್ಮ-90, ಪಾರ್ವತಮ್ಮ ಶಿವಲಿಂಗಯ್ಯ ಪಂಡಿತ್ ಅವರ 90ನೇ ಜನ್ಮದಿನ, ಗೀತ ಗಾಯನ, ಪುಸ್ತಕ ಬಿಡುಗಡೆ, ಅಮ್ಮನಿಗೆ ನಮನ: ಉದ್ಘಾಟನೆ: ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಶಿವರುದ್ರ ಸ್ವಾಮೀಜಿ, ಉಪಸ್ಥಿತಿ: ಸಿದ್ಧಯ್ಯ ಗುರುಗಳು, ನಂಜುಂಡ ಸ್ವಾಮಿ, 'ಅಮ್ಮ' ಪುಸ್ತಕ ಬಿಡುಗಡೆ: ಎಂ. ಕೃಷ್ಣಪ್ಪ, ಕಲಾವಿದರಿಗೆ ಅಭಿನಂದನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಸಿ. ಸೋಮಶೇಖರ್, ಎಚ್.ಎಲ್. ಪುಷ್ಪ, ವಸುಧೇಂದ್ರ, ರಾಘವೇಂದ್ರ ಗಣಪತಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9ರಿಂದ

ಆರ್‌ಎಸ್‌ಎಸ್ ವಿರುದ್ಧ ಡಿಎಸ್‌ಎಸ್ ಪ್ರತಿರೋಧ ಸಮಾವೇಶ: ಭಾಗವಹಿಸುವವರು: ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ವಿ. ನಾಗರಾಜ್, ಇಂದೂಧರ ಹೊನ್ನಾಪುರ, ಎನ್. ವೆಂಕಟೇಶ್, ಎನ್. ಮುನಿಸ್ವಾಮಿ, ಆಯೋಜನೆ: ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಜಂಟಿ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ರಾಷ್ಟ್ರೀಯ ಶಿಕ್ಷಣ ದಿನದ ಉದ್ಘಾಟನೆ: ಜಮೀರ್ ಅಹಮದ್ ಖಾನ್, ಉಪಸ್ಥಿತಿ: ಮಧು ಬಂಗಾರಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ನಸೀರ್ ಅಹಮದ್, ಪುರುಷೋತ್ತಮ ಬಿಳಿಮಲೆ, ಆಯೋಜನೆ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸ್ಥಳ: ದೇವರಾಜ ಅರಸು ಭವನ, ವಸಂತನಗರ, ಬೆಳಿಗ್ಗೆ 11

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ತ್ಯಾಗಯ್ಯ' ಚಲನಚಿತ್ರ ಪ್ರದರ್ಶನ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4

37 ದಿನಗಳ ಸಾಹಿತ್ಯ–ಸಂಸ್ಕೃತಿ ಉತ್ಸವ: ಸಂಗೀತ ಕಛೇರಿ: ಅದಿತಿ ಸಿಂಹ, 'ಮಾರೀಚ ಮಾಯೆ' ಏಕವ್ಯಕ್ತಿ ತಾಳಮದ್ದಲೆ: ದಿವಾಕರ ಹೆಗಡೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವ ಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್ ಆವರಣ, ಕೆಂಪೇಗೌಡನಗರ, ಸಂಜೆ 6

ವೀರವನಿತೆ ಒನಕೆ ಓಬವ್ವ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಬಸವರಮಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ತಂಗಡಗಿ, ಅತಿಥಿ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಉದ್ಘಾಟನೆ...

ಟೀಮ್ ಟ್ರಾವೆಲ್ ಮಾರ್ಟ್ ಸಂಸ್ಥೆಯು ಎಚ್‌ಎಸ್‌ಆರ್ ಲೇಔಟ್‌ನಲ್ಲಿ ನೂತನವಾಗಿ ಪ್ರಾರಂಭಿಸಿರುವ ಶಾಖೆಯನ್ನು ಚಲನಚಿತ್ರ ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ಮಿಲನಾ ನಾಗರಾಜ್ ಅವರು ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕರಾದ ಮೋಹನ್ ಸುಂದರ್, ಕಿರಣ್ ಮೆದ ಶೆಟ್ಟಿ ಉಪಸ್ಥಿತರಿದ್ದರು

12 ದಿನಗಳ 'ಸಂತವಾಣಿ' ಉತ್ಸವ ಉದ್ಘಾಟನೆ: ಚಿತ್ರ ನಿರ್ದೇಶಕ ಪ್ರಶ್ನೆ

ಜಾತಿವಾರು ಸಮೀಕ್ಷೆ ಯಾಕೆ: ನಾಗಾಭರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಲ ಕುಲವೆಂದು ಹೊಡೆದಾಡದಿರಿ ಎಂದು ಕನಕದಾಸರು ಹೇಳಿದ್ದರೂ, ಮತ್ತಾಕೆ ಜಾತಿವಾರು ಸಮೀಕ್ಷೆ ಮಾಡಬೇಕು. ನಾವು ನುಡಿದಂತೆ ನಡೆಯಲು ಏಕೆ ಸಾಧ್ಯವಾಗುತ್ತಿಲ್ಲ' ಎಂದು ಚಲನಚಿತ್ರ ನಿರ್ದೇಶಕ ಟಿ. ಎಸ್. ನಾಗಾಭರಣ ಪ್ರಶ್ನಿಸಿದರು.

ಭಾರತೀಯ ವಿದ್ಯಾಭವನದ ವತಿಯಿಂದ ಸೋಮವಾರ ಆರಂಭವಾಗಿರುವ ಚಲನಚಿತ್ರ, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ, ವಿಚಾರ-ಗೋಷ್ಠಿಗಳ 12 ದಿನಗಳ ಉತ್ಸವ 'ಸಂತವಾಣಿ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮ ಪರಂಪರೆಯಲ್ಲಿ ಶತಮಾನಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಮುಖ್ಯವಾಹಿನಿಯೊಂದು ನಿರಂತರವಾಗಿ ಹರಿಯುತ್ತಿದೆ. ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವ ವಾಹಿನಿ ಅದು. ಈ ವಾಹಿನಿ ಎಲ್ಲಿ? ಯಾಕೆ ಹಳಿತಪ್ಪಿದೆ? ಮತ್ತೆ ಹಳಿಗೆ ತರಲು ಏನು ಕೆಲಸ ಆಗಬೇಕು? ಎಂದು ಚಿಂತನೆ ಮಾಡಬೇಕು. ಸಂತವಾಣಿಗಳ ಸಮೀಕರಿಸಿದ ದೃಷ್ಟಿಕೋನದಿಂದ ಉತ್ತರ ಕಂಡುಕೊಳ್ಳಬೇಕು' ಎಂದು ಹೇಳಿದರು.

'ಕನಕದಾಸ, ಬಸವಣ್ಣ ಸೇರಿದಂತೆ ದಾರ್ಶನಿಕರನ್ನು ನಮ್ಮವರು ಎಂದು ಒಂದೊಂದು ಸಮುದಾಯಕ್ಕೆ ಸೀಮಿತಗೊಳಿಸುತ್ತಿದ್ದಾರೆ. ಬಸವಣ್ಣನವರ ದಯೆಯಿಲ್ಲದ ಧರ್ಮ ಯಾವುದಯ್ಯ ಎಂಬುದು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಎಲ್ಲ ಧರ್ಮಗಳಿಗೆ ಅನ್ವಯ ಆಗುವಂಥದ್ದು. ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ ಎಂದು ಕನಕದಾಸರು ಕೇಳಿದ್ದು ಕೂಡ ಒಂದು ಸಮುದಾಯಕ್ಕೆ ಅಲ್ಲ' ಎಂದು ತಿಳಿಸಿದರು.

ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, 'ಎಲ್ಲ ಮೌಲ್ಯಗಳು ಅಪ ಮೌಲ್ಯಗೊಳ್ಳುತ್ತಿರುವ ಕಾಲದಲ್ಲಿ ಸಾತ್ವಿಕ ಶಕ್ತಿ ನಿಷ್ಕ್ರಿಯವಾಗಿ ತಾಮಸ ಶಕ್ತಿ ಹೆಚ್ಚಾಗಿದೆ. ಕುಬ್ಜರು, ನೀಚರು, ಭ್ರಷ್ಟರೇ ವಿಜೃಂಭಿಸುತ್ತಿದ್ದಾರೆ. ಅದಕ್ಕೆ ಎದುರಾಗಿ ನಮ್ಮ ಪರಂಪರೆಯ ಶ್ರೇಷ್ಠ ವ್ಯಕ್ತಿತ್ವಗಳ ಶ್ರೇಷ್ಠ ಚಿಂತನೆಗಳನ್ನು ನಮ್ಮ ವ್ಯಕ್ತಿತ್ವದಲ್ಲಿ ಆವಾಹಿಸಿಕೊಳ್ಳಬೇಕಿದೆ' ಎಂದು ಹೇಳಿದರು.

'ವಿಭಜಕ ಚಿಂತನೆಗಳ ವಿರುದ್ಧ ಸಂತವಾಣಿ ಮೂಲಕ ಎಲ್ಲರನ್ನೂ ಒಳಗೊಳ್ಳುವ, ಸಂಯೋಜನೆಗೊಳಿಸುವ ಕೆಲಸವಾಗುತ್ತಿದೆ. ಇಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಲನಚಿತ್ರ, ಉಪನ್ಯಾಸ, ವಿಚಾರಗೋಷ್ಠಿ ಹೀಗೆ ಎಲ್ಲ ಕಲಾಪ್ರಕಾರಗಳನ್ನು ಒಳಗೊಂಡಿವೆ. ಜೊತೆಗೆ ವಚನ ಪರಂಪರೆ, ಕೀರ್ತನೆ ಪರಂಪರೆ, ನಾಥ ಪರಂಪರೆ, ಇಸ್ಲಾಂ, ಕ್ರಿಶ್ಚಿಯನ್, ಜೈನ, ಬೌದ್ಧ ಹೀಗೆ ಎಲ್ಲ ಪರಂಪರೆಗಳನ್ನೂ ಒಳಗೊಳ್ಳುತ್ತಿದೆ. ಇದು ಈ ಹೊತ್ತಿನ ಅಗತ್ಯ' ಎಂದು ವಿಶ್ಲೇಷಿಸಿದರು.

ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್, ನಿರ್ದೇಶಕ ಎಚ್.ಎನ್. ಸುರೇಶ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ದಾರ್ಶನಿಕರನ್ನು ಸಮುದಾಯಗಳಿಗೆ ಸೀಮಿತಗೊಳಿಸುತ್ತಿದ್ದಾರೆ
- ಸಂತವಾಣಿಗಳ ಸಮೀಕರಿಸಿದ ದೃಷ್ಟಿಕೋನದಿಂದ ಉತ್ತರ ಕಂಡುಕೊಳ್ಳಬೇಕು



'ಸಂತವಾಣಿ' ಕಾರ್ಯಕ್ರಮದಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ, ಕೆ.ಜಿ,. ರಾಘವನ್, ಟಿ.ಎಸ್. ನಾಗಾಭರಣ ಪುಸ್ತಕಗಳನ್ನು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಸಮೀಕ್ಷಕರಿಗೆ ಗೌರವಧನ ₹127.73 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಕಾರ್ಯ ನಿರ್ವಹಿಸಿದ ಸಮೀಕ್ಷಕರಿಗೆ ಗೌರವಧನ ನೀಡಲು ಒಟ್ಟು ₹127.73 ಕೋಟಿಯನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ.

ಒಬ್ಬರು, ಇಬ್ಬರು ಸದಸ್ಯರ ಮನೆಗಳ ಸಮೀಕ್ಷೆಗೆ ತಲಾ ₹50ರಂತೆ, ಮೂರು ಮತ್ತು ಮೂರಕ್ಕಿಂತ ಹೆಚ್ಚು ಸದಸ್ಯರ ಮನೆಗಳ ಸಮೀಕ್ಷೆಗೆ ತಲಾ ₹100ರಂತೆ ಸಮೀಕ್ಷೆ-ದಾರರಿಗೆ ಪಾವತಿಸಲಾಗುವುದು.

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ ದಿಂದ (ಇಡಿಸಿಎಸ್) ಸಮೀಕ್ಷಕರ ಹೆಸರು ಮತ್ತು ಅವರಿಗೆ ಪಾವತಿಸಬೇಕಿರುವ ಮೊತ್ತದ ಮಾಹಿತಿ ಪಡೆದು, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡಲಾಗಿದೆ ಎಂದು ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ತಿಳಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಸಮೀಕ್ಷಕರ ಗೌರವಧನವನ್ನು ಇನ್ನೂ ಬಿಡುಗಡೆ ಮಾಡಿಲ್ಲ.

'ರಾಜ್ಯದಲ್ಲಿ 1,46,48,053 ಕುಟುಂಬಗಳ ಸಮೀಕ್ಷೆ ನಡೆದಿದೆ. ಒಬ್ಬರು, ಇಬ್ಬರು ಸದಸ್ಯರ 37,41,434 ಕುಟುಂಬಗಳ ಸಮೀಕ್ಷೆ ನಡೆದಿದ್ದು, ಈ ಮನೆಗಳ ಸಮೀಕ್ಷಕರಿಗೆ ತಲಾ ₹50ರಂತೆ ₹18,70,71,700, ಮೂರು ಮತ್ತು ಅದಕ್ಕಿಂತ ಹೆಚ್ಚು ಸದಸ್ಯರ 1,09,02,735 ಕುಟುಂಬಗಳ ಸಮೀಕ್ಷಕರಿಗೆ ತಲಾ ₹100ರಂತೆ 109,02,73,500 ಪಾವತಿಸಬೇಕಾಗಿದೆ' ಎಂದೂ ತಿಳಿಸಿದ್ದಾರೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿರುವ ದೃಶ್ಯ

ರಾಜ್ಯದಲ್ಲಿ ಹೈಅಲರ್ಟ್: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ನವದೆಹಲಿಯಲ್ಲಿ ಸ್ಫೋಟ ಸಂಭವಿಸಿರುವುದರಿಂದ ರಾಜ್ಯದಾದ್ಯಂತ ಹೈಅಲರ್ಟ್ ಘೋಷಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿ ಸೋಮವಾರ ರಾತ್ರಿ ಪತ್ರಕರ್ತರೊಂದಿಗೆ ಮಾತನಾಡಿ, 'ಮೈಸೂರು, ಬೆಂಗಳೂರಿನ ಪೊಲೀಸ್ ಹಿರಿಯ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಇಡೀ ರಾಜ್ಯದಲ್ಲಿ ಭದ್ರತೆ ಬಿಗಿಗೊಳಿಸುವ ಕೆಲಸ ಮಾಡುತ್ತೇವೆ. ಜಿಲ್ಲಾ ಕೇಂದ್ರ, ವಿಮಾನನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ಜನನಿಬಿಡ ಪ್ರದೇಶಗಳಲ್ಲಿ ಹೆಚ್ಚಿನ ಭದ್ರತೆ ಕಡೆ ಭದ್ರತೆ ಬಿಗಿಗೊಳಿಸಲು ಸೂಚಿಸಿದ್ದೇನೆ. ಸ್ಫೋಟದಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿ ಕೋರುತ್ತೇನೆ' ಎಂದು ಹೇಳಿದರು.

'ದೆಹಲಿಯಲ್ಲಿ ಭದ್ರತಾ ಲೋಪ ಉಂಟಾಗಿದೆಯೋ, ಇಲ್ಲವೋ ಎಂಬುದನ್ನು ತಿಳಿದುಕೊಂಡು ನಂತರ ಪ್ರತಿಕ್ರಿಯಿಸುತ್ತೇನೆ' ಎಂದು ತಿಳಿಸಿದರು.

ಬಿಕ್ಲು ಕೊಲೆ ಪ್ರಕರಣ: ಮತ್ತೊಬ್ಬನ ಬಂಧನ

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಸಿಐಡಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಅಜಿತ್ ಬಂಧಿತ ಆರೋಪಿ. ತಲೆಮರೆಸಿಕೊಂಡಿದ್ದ ಅಜಿತ್, ಸೋಮವಾರ ಬೆಳಿಗ್ಗೆ ರಾಮಮೂರ್ತಿನಗರದಲ್ಲಿ ಇರುವ ಮಾಹಿತಿ ಸಿಕ್ಕಿತ್ತು. ಅಲ್ಲಿಗೆ ತೆರಳಿದ ತನಿಖಾ ತಂಡವು ಆರೋಪಿಯನ್ನು ಬಂಧಿಸಿದೆ ಎಂದು ಸಿಐಡಿ ಮೂಲಗಳು ಹೇಳಿವೆ.

ಭಾರತೀನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜುಲೈ 15ರಂದು ಬಿಕ್ಲು ಶಿವು ಅವರ ಕೊಲೆ ನಡೆದಿತ್ತು. ಈ ಪ್ರಕರಣದಲ್ಲಿ ಇದುವರೆಗೂ 19 ಆರೋಪಿಗಳನ್ನು ಬಂಧಿಸಲಾಗಿದೆ.

ಫೇಸ್‌ಲೆಸ್, ಸಂಪರ್ಕರಹಿತ, ಆನ್‌ಲೈನ್ ಇ–ಖಾತಾ

ನಾಗರಿಕರಿಗೆ ಆಗುತ್ತಿದ್ದ ಕಿರುಕುಳ ತಪ್ಪಿಸಲು, ಭ್ರಷ್ಟಾಚಾರ ನಿಯಂತ್ರಣಕ್ಕೆ ವ್ಯವಸ್ಥೆ: ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆಗಳ ಅಧಿಕಾರಿಗಳನ್ನು ಭೇಟಿ ಮಾಡದೆ, 'ಫೇಸ್‌ಲೆಸ್, ಸಂಪರ್ಕ ರಹಿತ, ಆನ್‌ಲೈನ್ 'ಇ-ಖಾತಾ' ಪಡೆಯುವ ವ್ಯವಸ್ಥೆಯನ್ನು ಜಿಬಿಎ ವ್ಯಾಪ್ತಿಯಲ್ಲಿ ಜಾರಿಗೊಳಿಸಲಾಗಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಅಂತಿಮ ಇ-ಖಾತಾ ಅಥವಾ ಹೊಸ ಖಾತಾವನ್ನು ಅನುಮೋದಿಸಲು ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಅಥವಾ ವಿಷಯ ನಿರ್ವಾಹಕರು ಆಸ್ತಿ ದಾಖಲೆಗಳನ್ನು ಮಾತ್ರ ನೋಡಬೇಕಾಗುತ್ತದೆ. ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯವಿರುವುದರಿಂದ ನಾಗರಿಕರು ಅವರನ್ನು ಭೇಟಿ ಮಾಡುವ ಅಗತ್ಯವಿಲ್ಲ. ನಾಗರಿಕರಿಗೆ ಆಗುತ್ತಿದ್ದ ಕಿರುಕುಳ ತಪ್ಪುತ್ತದೆ, ಭ್ರಷ್ಟಾಚಾರ ಇಲ್ಲದಂತಾಗುತ್ತದೆ' ಎಂದು ಹೇಳಿದರು.

'ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯು ನಾಗರಿಕರು ಸಲ್ಲಿಸಿದ ಅರ್ಜಿಯನ್ನು ಉಪ ವಿಭಾಗದ ಹೊರಗಿನ ಅಧಿಕಾರಿಗಳಿಗೆ ಹಂಚಿಕೆ ಮಾಡುತ್ತದೆ. ಅರ್ಜಿಗಳನ್ನು ಎಲ್ಲ ಅಧಿಕಾರಿಗಳಿಗೆ ಸಮಾನವಾಗಿ ವಿತರಿಸಲಾಗುತ್ತದೆ. ಇದರಿಂದಾಗಿ ನಗರ ಪಾಲಿಕೆಯೊಳಗೆ ಎಲ್ಲರಿಗೂ ಕೆಲಸದ ಹೊರೆ ಸಮಾನವಾಗಿ ಹಂಚಿಕೆಯಾಗುತ್ತದೆ. ಮಧ್ಯವರ್ತಿಗಳು ಇ-ಖಾತಾ ಕೊಡಿಸುವುದಾಗಿ ನಾಗರಿಕರಿಂದ ಹಣ ಸಂಗ್ರಹಿಸುತ್ತಿದ್ದರು. ಅದೂ ಈ ಹೊಸ ವ್ಯವಸ್ಥೆಯಿಂದ ನಿಂತು ಹೋಗಿದೆ' ಎಂದು ಮಾಹಿತಿ ನೀಡಿದರು.

'ಹಳೆಯ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ನಾಗರಿಕರು ತಮ್ಮ ಖಾತಾ ಪಡೆಯಲು ಮತ್ತು ವರ್ಗಾವಣೆಗೆ ಎಆರ್‌ಒ ಕಚೇರಿಗಳಿಗೆ ಭೇಟಿ ನೀಡಬೇಕಾಗಿತ್ತು. ದಾಖಲೆಗಳನ್ನು ಭೌತಿಕವಾಗಿ ಸ್ಥಳೀಯವಾಗಿ ಪರಿಶೀಲಿಸಲಾಗುತ್ತಿತ್ತು. ಮಧ್ಯವರ್ತಿಗಳು ನಾಗರಿಕರಿಂದ ಹಣವನ್ನು ಸಂಗ್ರಹಿಸಿ ಅಧಿಕಾರಿಗಳನ್ನು ಪ್ರಭಾವಿಸುತ್ತಿದ್ದರು. ಭ್ರಷ್ಟಾಚಾರವು ತುಂಬಾ ಹೆಚ್ಚಾಗಿತ್ತು. ನಾಗರಿಕರು ಸಂಪೂರ್ಣವಾಗಿ ಮಧ್ಯವರ್ತಿಗಳು ಮತ್ತು ಅಧಿಕಾರಿಗಳ ಮೇಲೆ ಅವಲಂಬಿತರಾಗಿದ್ದರು. ಈಗ ಇದ್ಯಾವುದಕ್ಕೂ ಅವಕಾಶ ಇಲ್ಲ' ಎಂದು ಹೇಳಿದರು.

'ಇ-ಖಾತಾ ವ್ಯವಸ್ಥೆಯು ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಇ-ಗವರ್ನೆನ್ಸ್ ಪ್ರಶಸ್ತಿ (ಚಿನ್ನ)– 2025 ಅನ್ನು ಗೆದ್ದಿದೆ. ಇ-ಖಾತಾ ಆನ್‌ಲೈನ್ ವ್ಯವಸ್ಥೆಯು ಕಾವೇರಿ ಮತ್ತು ಸ್ವಯಂಚಾಲಿತ ತಿದ್ದುಪಡಿಗಳೊಂದಿಗೆ ಏಕೀಕರಣ ಹೊಂದಿದೆ. ಇ-ಖಾತಾದಲ್ಲಾಗುವ ಬದಲಾವಣೆಗಳ ಪ್ರಕಾರ ಆಸ್ತಿ ತೆರಿಗೆ ದಾಖಲೆಗಳು ಮತ್ತು ಬೆಸ್ಕಾಂ ಮಾಲೀಕತ್ವದಲ್ಲಿ ಸ್ವಯಂಚಾಲಿತ ಬದಲಾವಣೆಗಳಾಗುತ್ತವೆ. ಭ್ರಷ್ಟಾಚಾರವನ್ನು ಕಡಿಮೆ ಮಾಡುತ್ತದೆ ಮತ್ತು ಏಜೆಂಟರು ಅಥವಾ ಮಧ್ಯವರ್ತಿಗಳಿಂದ ನಡೆಯುವ ಶೋಷಣೆ ತಡೆಯುತ್ತದೆ. ಅಧಿಕಾರಿ-ಮಧ್ಯವರ್ತಿಗಳ ಒಪ್ಪಂದವನ್ನೂ ಮುರಿಯುತ್ತದೆ' ಎಂದು ಮುನೀಶ್ ಮೌದ್ಗಿಲ್ ವಿವರಿಸಿದರು.

ಅಂತಿಮ ಇ-ಖಾತಾ ಅರ್ಜಿಯನ್ನು 7 ದಿನಗಳಲ್ಲಿ ಮತ್ತು ಹೊಸ ಖಾತಾ ಸಂದರ್ಭದಲ್ಲಿ 60 ದಿನದಲ್ಲಿ (ಹೊಸ ಖಾತಾ ನೀಡಲು ಕ್ಷೇತ್ರ ಭೇಟಿ ಮತ್ತು ಪರಿಶೀಲನೆ ಅಗತ್ಯ ಇರುವುದರಿಂದ) ವಿಲೇವಾರಿ ಮಾಡುವುದು ಜಿಬಿಎ ಮತ್ತು ನಗರ ಪಾಲಿಕೆಗಳ ಬದ್ಧತೆಯಾಗಿದೆ. ಖಾತಾ ಬದಲಾವಣೆಗಳು, ತಿದ್ದುಪಡಿ ಅಥವಾ ವಿಚಾರಣೆಯ ಅಗತ್ಯವಿರುವ ವಿವಾದದ ಅಂತಿಮ ಇ-ಖಾತಾ ಅರ್ಜಿಗಳನ್ನು ಒಂದು ತಿಂಗಳೊಳಗೆ ವಿಲೇವಾರಿ ಮಾಡಲಾಗುತ್ತದೆ ಎಂದು ತಿಳಿಸಿದರು.

- 25 ಲಕ್ಷಕ್ಕೂ ಹೆಚ್ಚು ಖಾತಾಗಳು https://BBMPeAasthi.karnataka.gov.in ನಲ್ಲಿ ಲಭ್ಯ
- ಅಂತಿಮ ಇ-ಖಾತಾಗೆ ಆನ್‌ಲೈನ್‌ನಲ್ಲಿ ಸ್ವತಃ ಅಥವಾ ಬೆಂಗಳೂರು ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು
- ಎಆರ್‌ಒ ಅಥವಾ ಯಾವುದೇ ಸ್ಥಳೀಯ ಕಚೇರಿಗಳಿಗೆ ಭೇಟಿ ನೀಡಬೇಕಾಗಿಲ್ಲ
- https://bbmpeaasthi.karnataka.gov.in/citizen core/ FinaleKhathaStatusbasedonePID ಮೂಲಕ ಅಂತಿಮ ಇ-ಖಾತಾ ಸ್ಥಿತಿ ತಿಳಿಯಬಹುದು
- https://bbmpeaasthi.karnataka.gov.in/citizen core/ NewEkhataStatus ಮೂಲಕ ಹೊಸ ಖಾತಾ ಸ್ಥಿತಿ ಅರಿಯಬಹುದು
- ಮೊದಲು ಬಂದ ಅರ್ಜಿ ಮೊದಲು ವಿಲೇವಾರಿ (ಎಫ್‌ಐಎಫ್‌ಒ) ಮತ್ತು ಸ್ವಯಂಚಾಲಿತ ಅನುಮೋದನೆ ವ್ಯವಸ್ಥೆ ಸಕ್ರಿಯ
- ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತರು, ನಗರ ಪಾಲಿಕೆಗಳ ಹೆಚ್ಚುವರಿ ಆಯುಕ್ತರು, ವಲಯಗಳ ಜಂಟಿ ಆಯುಕ್ತರು, ಪ್ರತಿದಿನ 64 ಎಆರ್‌ಒಗಳ ಕಚೇರಿಗಳ ಪ್ರಕ್ರಿಯೆಯನ್ನು ಪರಿಶೀಲಿಸುತ್ತಾರೆ. ವಿಳಂಬವಿಲ್ಲದೆ ವಿಲೇವಾರಿಯನ್ನು ಖಚಿತಪಡಿಸಿಕೊಳ್ಳುತ್ತಾರೆ.
- ಅಂತಿಮ ಇ-ಖಾತಾ ಅರ್ಜಿಗಳು ಸರಾಸರಿ ಮೂರು ದಿನಗಳಲ್ಲಿ ವಿಲೇವಾರಿ.
- ದೂರುಗಳಿಗೆ ಇ-ಖಾತಾ ಸಹಾಯವಾಣಿ - 9480683695

ವಿಶೇಷ ಆಯುಕ್ತರಿಂದ ಒತ್ತಡ: ನೌಕರರ ಕ್ಷೇಮಾಭಿವೃದ್ಧಿ ಸಂಘ

'ಇ–ಖಾತಾ ತಂತ್ರಾಂಶದಲ್ಲಿ ಒಂದೇ ದಿನದಂದು ಹೊಸ ಖಾತಾ ಅರ್ಜಿ ಮತ್ತು ಇ-ಖಾತಾ ಅರ್ಜಿಯನ್ನು ವಿಲೇವಾರಿ ಮಾಡಬೇಕೆಂದು ಕಂದಾಯ ವಿಭಾಗದ ಆಯುಕ್ತರು ಒತ್ತಡ ಹೇರುತ್ತಿದ್ದಾರೆ. ಇದರಿಂದ, ಕಂದಾಯ ವಿಭಾಗದ ಅಧಿಕಾರಿಗಳಿಗೆ ತಂತ್ರಾಂಶದಲ್ಲಿ ದಾಖಲೆ ಪರಿಶೀಲಿಸಲು ಸಮಯ ಸಿಗುತ್ತಿಲ್ಲ' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ದೂರಿದೆ.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್, 'ಕಂದಾಯ ವಿಭಾಗದ ವಿಶೇಷ ಆಯುಕ್ತರ ಒತ್ತಡದಿಂದ ದಾಖಲೆಗಳ ಪರಿಶೀಲನೆಯಾಗದೆ, ನ್ಯಾಯಾಲಯದಲ್ಲಿ ದಾವೆ ದಾಖಲಾದಲ್ಲಿ ಅಧಿಕಾರಿಗಳು ಅಲೆಯಬೇಕಿದೆ. ಪ್ರತಿ ಲಾಗಿನ್‌ನಲ್ಲಿ ಏಳು ದಿನ ಸಮಯ ನಿಗದಿಪಡಿಸಬೇಕು. ಮ್ಯುಟೇಷನ್ ಸಂಬಂಧಿಸಿದ ಅರ್ಜಿಗಳ ವಿಲೇಗೆ ಕೆಲ ಗೊಂದಲಗಳಿವೆ. ತಂತ್ರಾಂಶದಲ್ಲಿ ಸ್ಥಳ ಪರಿಶೀಲನೆಗೆ ಕಾಲಾವಕಾಶ ನಿಗದಿಪಡಿಸಿಲ್ಲ. ಇದರಿಂದ, ಸ್ಥಳ ಪರಿಶೀಲನೆ ಮಾಡದಿದ್ದರೆ ಆ ಸ್ಥಳದ ವಿಸ್ತೀರ್ಣ, ಮಾಲೀಕತ್ವ, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಮಾಹಿತಿ ತಿಳಿಯುವುದಿಲ್ಲ. ಅಂತಹ ಸ್ವತ್ತಿಗೆ ಮ್ಯುಟೇಷನ್ ನೀಡಿದಲ್ಲಿ ಮುಂದೆ ಯಾರಾದರೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಲ್ಲಿ ನಾವು ಜವಾಬ್ದಾರಿಯಲ್ಲ' ಎಂದು ಹೇಳಿದ್ದಾರೆ.

'ಇ-ಆಸ್ತಿ ತಂತ್ರಾಂಶದ ರೌಂಡ್ ರಾಬಿನ್ ಸಿಸ್ಟಂ ಪದ್ಧತಿ ರದ್ದುಪಡಿಸಬೇಕು. ಇಲ್ಲದಿದ್ದರೆ, ತಕರಾರು ಉಂಟಾದರೆ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳನ್ನೇ ಹೊಣೆಯಾಗಿಸಬೇಕು. ಈ ಬಗ್ಗೆ ಸುತ್ತೋಲೆ ಹೊರಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಒಂದು ಪ್ರದೇಶದ ಅರ್ಜಿಯನ್ನು ಬೇರೆ ಪ್ರದೇಶದ ಎಆರ್‌ಒ, ಆರ್‌ಒ ಕಚೇರಿಗಳಿಗೆ ವರ್ಗಾಯಿಸುವುದಕ್ಕೆ ಸಾರ್ವಜನಿಕರಿಂದ ತೀವ್ರ ಟೀಕೆ ವ್ಯಕ್ತವಾಗುತ್ತಿದೆ. ಆದ್ದರಿಂದ, ಆಯಾ ಅಧಿಕಾರಿಗಳ ಲಾಗಿನ್‌ನಲ್ಲೇ ಖಾತಾ ಅರ್ಜಿಗಳ ಇತ್ಯರ್ಥಕ್ಕೆ ಅವಕಾಶ ಮಾಡಿಕೊಡಬೇಕು' ಎಂದು ಮನವಿ ಮಾಡಿದ್ದಾರೆ.

ನಾಗರಿಕರ ಪರದಾಟ

'ಪದ್ಮನಾಭನಗರ ಎಆರ್‌ಒ ವ್ಯಾಪ್ತಿಯ ಫ್ಲ್ಯಾಟ್‌ನ ಇ–ಖಾತಾ ಅರ್ಜಿಯನ್ನು ವಿಲ್ಸನ್ ಗಾರ್ಡನ್ ಕಚೇರಿಯವರು ಪರಿಶೀಲನೆ ನಡೆಸಿ, ಈಗಾಗಲೇ ಖಾತೆ ಪಡೆದಿದ್ದೀರಿ ಎಂದು ಹೇಳಿ ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಖಾತಾ ಪಡೆದಿದ್ದರೆ ನಾವು ಏಕೆ ಅರ್ಜಿ ಹಾಕುತ್ತೇವೆ. ಎಲ್ಲವೂ ಆನ್‌ಲೈನ್ ಅನ್ನುತ್ತಾರೆ. ದಾಖಲೆಗಳನ್ನೆಲ್ಲ ನೀಡಿದರೂ ಏಕೆ ಪರಿಶೀಲನೆ ಆಗುವುದಿಲ್ಲ. ನಮ್ಮ ಫ್ಲ್ಯಾಟ್‌ಗೆ ಯಾರೂ ಭೇಟಿ ನೀಡಿ ಪರಿಶೀಲನೆ ನಡೆಸದೆ, ಅರ್ಜಿ ತಿರಸ್ಕರಿಸುವುದು ಎಷ್ಟು ಸರಿ' ಎಂದು ನಾಗರಿಕರೊಬ್ಬರು ಪ್ರಶ್ನಿಸಿದರು.

'ನಮ್ಮದೇ ಅಪಾರ್ಟ್‌ಮೆಂಟ್ ಎರಡು ಫ್ಲ್ಯಾಟ್‌ನವರಿಗೆ ಇ–ಖಾತಾ ಸಿಕ್ಕಿದೆ. ಇನ್ನೂ ಮೂವರ ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಪದ್ಮನಾಭನಗರ ಎಆರ್‌ಒ ಕಚೇರಿಯಲ್ಲಿ ಕೇಳಿದರೆ ನಾವು ಮಾಡಿಲ್ಲ, ಯಾರು ಮಾಡಿದ್ದಾರೋ ಅವರನ್ನು ಕೇಳಿ ಎನ್ನುತ್ತಾರೆ. ನಾವು ಯಾವ ಕಚೇರಿಯನ್ನು ಹುಡುಕಿಕೊಂಡು ಹೋಗೋದು? ದೂರು ನೀಡಿದರೂ ಪ್ರಯೋಜನವಾಗಿಲ್ಲ' ಎಂದು ದೂರಿದರು.

ಕಾರ್ಮಿಕ ಸೇರಿ ಇಬ್ಬರು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ಪ್ರಕರಣದಲ್ಲಿ ಕಾರ್ಮಿಕ ಸೇರಿ ಇಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗಿರಿನಗರ ಠಾಣೆ ವ್ಯಾಪ್ತಿಯ ಹೊಸಕೆರೆಹಳ್ಳಿಯಲ್ಲಿ ಕೌಟುಂಬಿಕ ಕಲಹದ ಕಾರಣಕ್ಕೆ ಗಗನ್ ರಾವ್ (31) ಎಂಬವರು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಖಾಸಗಿ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ಗಗನ್ ರಾವ್, ಮೇಘನಾ ಎಂಬವರನ್ನು 11 ತಿಂಗಳ ಹಿಂದೆ ಮದುವೆಯಾಗಿದ್ದರು. ದಂಪತಿ ಹೊಸಕೆರೆಹಳ್ಳಿಯಲ್ಲಿ ವಾಸವಾಗಿದ್ದರು. ದಂಪತಿ ನಡುವೆ ನಿತ್ಯ ಜಗಳವಾಗುತ್ತಿತ್ತು. ಇದರಿಂದ ಮನನೊಂದಿದ್ದ ಗಗನ್ ರಾವ್, ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಭಾನುವಾರವೂ ಇಬ್ಬರ ನಡುವೆ ಜಗಳವಾಗಿತ್ತು. ಇದರಿಂದ ಬೇಸರಗೊಂಡು ನೇಣು ಹಾಕಿಕೊಂಡಿದ್ದಾರೆ. ಘಟನೆ ವೇಳೆ ಮೇಘನಾ ಮನೆಯಲ್ಲೇ ಇದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಸೊಸೆ ಮೇಘನಾ, ಮದುವೆ ನಂತರವೂ ಬೇರೊಬ್ಬನನ್ನು ಪ್ರೀತಿಸುತ್ತಿದ್ದರು. ಈ ವಿಚಾರಕ್ಕೆ ಮಗ ಜಗಳವಾಡುತ್ತಿದ್ದ. ಆದ್ದರಿಂದ ಆಕೆಯು ಪ್ರಿಯಕರನ ಜತೆ ಸೇರಿಕೊಂಡು ಕಿರುಕುಳ ನೀಡುತ್ತಿದ್ದಳು. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಗಗನ್ ರಾವ್ ತಂದೆ ಲಕ್ಷ್ಮಣ್ ರಾವ್ ಪೊಲೀಸರಿಗೆ ದೂರು ನೀಡಿದ್ದಾರೆ.

ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಮೇಘನಾ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಿದ್ದಾರೆ.

ಮೇಲ್ಸೇತುವೆಯಿಂದ ಜಿಗಿದು ಆತ್ಮಹತ್ಯೆ: ಮೈಸೂರು ರಸ್ತೆಯ ನಾಯಂಡಹಳ್ಳಿ ಮೇಲ್ಸೇತುವೆಯಿಂದ ಕೂಲಿ ಕಾರ್ಮಿಕರೊಬ್ಬರು ಕೆಳಗೆ ಜಿಗಿದು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಪ್ರಸಂಜಿತ್ ದಾಸ್ (29) ಮೃತ ಕಾರ್ಮಿಕ. ಹೂಡಿ ಬಳಿ ವಾಸವಾಗಿದ್ದ ಅವರು ಗಾರೆ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸ್ನೇಹಿತ ಮಿಥುನ್ ಜತೆ ಪ್ರಸಂಜಿತ್ ದಾಸ್ ಆಟೊದಲ್ಲಿ ಹೂಡಿಗೆ ಹೋಗುತ್ತಿದ್ದರು. ಮಾರ್ಗ ಮಧ್ಯೆ ನಾಯಂಡಹಳ್ಳಿ ಮೇಲ್ಸೇತುವೆಯಲ್ಲಿ ಆಟೊ ನಿಲ್ಲಿಸುವಂತೆ ಹೇಳಿದರು. ಚಾಲಕ ಆಟೊ ನಿಲ್ಲಿಸುತ್ತಿದ್ದಂತೆ ಪ್ರಸಂಜಿತ್ ದಾಸ್, ವಾಹನದಿಂದ ಕೆಳಗಿಳಿದು ಏಕಾಏಕಿ ಮೇಲ್ಸೇತುವೆಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಮಿಥುನ್‌ನ ವಿಚಾರಣೆ ನಡೆಸಿದ್ದು, ಕೌಟುಂಬಿಕ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪಶ್ಚಿಮ ಬಂಗಾಳದಲ್ಲಿ ನೆಲಸಿರುವ ಕುಟುಂಬ ಸದಸ್ಯರ ವಿಚಾರಣೆ ಬಳಿಕ ಹೆಚ್ಚಿನ ಮಾಹಿತಿ ಸಿಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಸ್ನೇಹಿತೆ ಸಾವು: ನೊಂದು ಬಾಲಕಿ ಆತ್ಮಹತ್ಯೆ

ಬೆಂಗಳೂರು: ಸ್ನೇಹಿತೆಯ ಸಾವಿನಿಂದ ನೊಂದ ಬಾಲಕಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಕಲಾಸಿಪಾಳ್ಯದ ಕೋಟೆ 'ಡಿ' ರಸ್ತೆಯ ನಿವಾಸಿ ಸಂತೋಷ್–ಸೆಲ್ವಿ ದಂಪತಿಯ ಪುತ್ರಿ ಶರ್ಮಿಳಾ(14) ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದು, 9ನೇ ತರಗತಿ ಓದುತ್ತಿದ್ದಳು.

ತಮಿಳುನಾಡಿನ ಸಂತೋಷ್ ತರಕಾರಿ ವ್ಯಾಪಾರ ಮಾಡುತ್ತಾರೆ. ದಂಪತಿಗೆ ಮೂವರು ಮಕ್ಕಳು.

'ಶರ್ಮಿಳಾ ಹಾಗೂ ವೈಶಾಲಿ ಒಂದೇ ಶಾಲೆಯಲ್ಲಿ ಓದುತ್ತಿದ್ದರು. ವೈಶಾಲಿ ಈಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಸ್ನೇಹಿತೆ ಸಾವಿನಿಂದ ಮಾನಸಿಕವಾಗಿ ನೊಂದಿದ್ದರು' ಎಂದು ಮೂಲಗಳು ಹೇಳಿವೆ.

'ನೀನು ಜತೆಗೆ ಬಾ' ಎಂದು ಸ್ನೇಹಿತೆ ಕರೆಯುತ್ತಿದ್ದಾಳೆ. ಆಕೆಯನ್ನು ಬಿಟ್ಟಿರಲು ಆಗುತ್ತಿಲ್ಲ ಎಂದು ಶರ್ಮಿಳಾ ತಾಯಿ ಬಳಿ ಹೇಳಿಕೊಂಡಿದ್ದರು. ಮಗಳನ್ನು ತಾಯಿ ಸಮಾಧಾನಪಡಿಸಿದ್ದರು' ಎಂದು ಮೂಲಗಳು ಹೇಳಿವೆ.

'ಮನೆಯಲ್ಲಿ ಶರ್ಮಿಳಾ ಹಾಗೂ ಅಜ್ಜಿಯನ್ನು ಬಿಟ್ಟು ಉಳಿದ ಇಬ್ಬರು ಮಕ್ಕಳೊಂದಿಗೆ ದಂಪತಿ ಶನಿವಾರ ರಾತ್ರಿ ತಮಿಳುನಾಡಿನ ದೇವಸ್ಥಾನಕ್ಕೆ ಹೋಗಿದ್ದರು. ಭಾನುವಾರ ಸಂಜೆ ಅಜ್ಜಿ ಮನೆಯಿಂದ ಹೊರ ಹೋಗಿದ್ದ ವೇಳೆ, ಶರ್ಮಿಳಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ ನೋಂದಾಯಿಸಲು ಸೂಚನೆ

ರೇರಾ ವ್ಯಾಪ್ತಿಗೆ ಬಿಡಿಎ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ) ವ್ಯಾಪ್ತಿಯಿಂದ ಹೊರಗಿಡಬೇಕೆಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿದ ರೇರಾ, ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಪಿಕೆಎಲ್) ಅನ್ನು ನೋಂದಾಯಿಸಲು ಬಿಡಿಎಗೆ ನಿರ್ದೇಶನ ನೀಡಿ ಆದೇಶ ಹೊರಡಿಸಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ತನ್ನ ವಿರುದ್ಧ ರೇರಾದಲ್ಲಿ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯೆ ನೀಡಿದ ಸಂದರ್ಭದಲ್ಲಿ 'ಬಿಡಿಎ ಶಾಸನಬದ್ಧ ಸಂಸ್ಥೆಯಾಗಿದ್ದು, ರಿಯಲ್ ಎಸ್ಟೇಟ್ ಯೋಜನೆಗಳ ಪ್ರವರ್ತಕನಲ್ಲ. ಹಾಗಾಗಿ ರೇರಾ ವ್ಯಾಪ್ತಿಯಿಂದ ಹೊರಗಿಡಬೇಕು' ಎಂಬ ವಾದವನ್ನು ಮಂಡಿಸಿತ್ತು.

ಅರ್ಜಿಗೆ ಸಂಬಂಧಿಸಿದ ಆದೇಶದಲ್ಲಿ, ರೇರಾ ಕಾಯ್ದೆಯ ಕಲಂ 2ಝಡ್‌ಕೆ (iii) ಅನ್ವಯ, ಸಾರ್ವಜನಿಕರಿಗೆ ಮಾರಾಟಕ್ಕಾಗಿ ನಿವೇಶನ ಅಥವಾ ಕಟ್ಟಡಗಳನ್ನು ನಿರ್ಮಿಸುವ ಅಥವಾ ಅಭಿವೃದ್ಧಿಪಡಿಸುವ ಯಾವುದೇ ಅಭಿವೃದ್ಧಿ ಪ್ರಾಧಿಕಾರ ಅಥವಾ ಸಾರ್ವಜನಿಕ ಸಂಸ್ಥೆಯನ್ನು 'ಪ್ರವರ್ತಕ' ಎಂದು ಪರಿಗಣಿಸಬೇಕು ಎಂದು ರೇರಾ ತಿಳಿಸಿದೆ. ಆದ್ದರಿಂದ, ಬಿಡಿಎಗೆ ವಿನಾಯಿತಿ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

'1976ರ ಬಿಡಿಎ ಕಾಯ್ದೆ ಯೋಜನೆ ಮತ್ತು ಭೂ ಅಭಿವೃದ್ಧಿಯನ್ನು ನಿಯಂತ್ರಿಸಿದರೂ, ರೇರಾ, ರಿಯಲ್ ಎಸ್ಟೇಟ್ ಯೋಜನೆಗಳನ್ನು ನಿಯಂತ್ರಿಸಲು ಮತ್ತು ಮನೆ ಖರೀದಿದಾರರ ಹಿತವನ್ನು ರಕ್ಷಿಸಲು ಜಾರಿಗೆ ತಂದ (2016) ವಿಶೇಷ ಕಾಯ್ದೆಯಾಗಿದೆ. ಈ ಕಾಯ್ದೆ ಪ್ರಾಧಿಕಾರದ ಯೋಜನಾ ಅಥವಾ ನಿಯಂತ್ರಣ ಕಾರ್ಯಗಳನ್ನು ನಿಯಂತ್ರಿಸುವುದಿಲ್ಲ. ಇದು ಕೇವಲ ಅಭಿವೃದ್ಧಿ ಮತ್ತು ಹಂಚಿಕೆದಾರರಿಗೆ ಮಾರಾಟವನ್ನು ಒಳಗೊಂಡ ವ್ಯವಹಾರಗಳನ್ನು ಮಾತ್ರ ನಿಯಂತ್ರಿಸುತ್ತದೆ. ಆದ್ದರಿಂದ, ರೇರಾ ಯೋಜನಾ ಅಧಿಕಾರಗಳಲ್ಲಿ ಹಸ್ತಕ್ಷೇಪ ಮಾಡುತ್ತದೆ ಎಂಬ ವಾದವು ತಾರ್ಕಿಕವಲ್ಲ. ಹಾಗಾಗಿ ನಿವೇಶನಗಳ ಅಭಿವೃದ್ಧಿ, ಮಾರಾಟ ಮತ್ತು ಜಾಗ ಹಸ್ತಾಂತರದ ಮಟ್ಟಿಗೆ ರೇರಾ ಕಾಯ್ದೆಗೆ ಅಧಿಕಾರ ಇದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ತಾನು ಕೈಗೆತ್ತಿಕೊಂಡ ಯೋಜನೆಗಳು ವಾಣಿಜ್ಯ ಉದ್ದೇಶದ್ದಲ್ಲ. ಆದ್ದರಿಂದ ಅವುಗಳನ್ನು ರಿಯಲ್ ಎಸ್ಟೇಟ್ ಯೋಜನೆಗಳೆಂದು ಕರೆಯಲು ಆಗುವುದಿಲ್ಲ' ಎಂಬ ಬಿಡಿಎ ವಾದಕ್ಕೆ ಪ್ರತಿಕ್ರಿಯಿಸಿರುವ ರೇರಾ, 'ಲಾಭ ಅಥವಾ ನಷ್ಟ ಎಂಬ ಉದ್ದೇಶವು ಅಪ್ರಸ್ತುತ' ಎಂದು ಸ್ಪಷ್ಟಪಡಿಸಿದೆ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿರುವ ಲಾಭರಹಿತ ಸಂಸ್ಥೆಗಳೂ ತನ್ನ ವ್ಯಾಪ್ತಿಗೆ ಒಳಪಡುತ್ತವೆ ಎಂದು ಅಭಿಪ್ರಾಯಪಟ್ಟಿದೆ.

ಕೆಂಪೇಗೌಡ ಬಡಾವಣೆ ಯೋಜನೆಯನ್ನು ಬಿಡಿಎ, ರೇರಾದಲ್ಲಿ ನೋಂದಾಯಿಸಿಕೊಳ್ಳಬೇಕು. ಯೋಜನೆಗೆ ಸಂಬಂಧಿಸಿದ ಅಗತ್ಯ ವಿವರಗಳು, ಅನುಮೋದಿತ ಯೋಜನೆಗಳು, ಮಂಜೂರಾದ ಯೋಜನಾ ನಕ್ಷೆಗಳು, ಅಭಿವೃದ್ಧಿಯ ಸ್ಥಿತಿ, ಹಣಕಾಸು ವಿವರ ಹಾಗೂ ಯೋಜನೆಗೆ ಸಂಬಂಧಿಸಿದ ಇತರ ದಾಖಲೆಗಳು ಸೇರಿ ಎಲ್ಲ ಯೋಜನಾ ವಿವರಗಳನ್ನು ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಎನ್‌.ಎ. ಹ್ಯಾರಿಸ್ ನೇತೃತ್ವದಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಯಿತು

784 ಬದಲಿ ನಿವೇಶನ ಹಂಚಿಕೆ

ಬದಲಿ ನಿವೇಶನವನ್ನು ಕೋರಿರುವ ಅರ್ಜಿದಾರರಿಗೆ ಒಂದೇ ದಿನದಲ್ಲಿ ವಿವಿಧ ಅಳತೆಯ ಒಟ್ಟು 784 ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಂಚಿಕೆ ಮಾಡಿದೆ.

ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್ ಅವರು ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾಗಿದ್ದ ಅರ್ಜಿದಾರರಿಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನಗಳನ್ನು 'ರ‍್ಯಾಂಡಮೈಸೇಷನ್' ತಂತ್ರಾಂಶದ ಮೂಲಕ ಹಂಚಿಕೆ ಮಾಡಿದರು.

'ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾಗಿದ್ದು, ಸ್ವಾಧೀನ ಪಡೆದುಕೊಳ್ಳದ ಅರ್ಜಿದಾರರಿಗೆ ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ' ಎಂದು ಹ್ಯಾರಿಸ್ ಹೇಳಿದರು.

ಬಿಡಿಎ ಆಯುಕ್ತ ಪಿ. ಮಣಿವಣ್ಣನ್, ಕಾರ್ಯದರ್ಶಿ ಸಿ.ಎಲ್. ಶಿವಕುಮಾರ್, ಹೆಚ್ಚುವರಿ ಕಾರ್ಯದರ್ಶಿ ಎನ್. ಮಂಜುನಾಥ್ ಉಪಸ್ಥಿತರಿದ್ದರು.

ನಿವೇಶನ ಹಂಚಿಕೆ ವಿವರ

ಅಳತೆ	ನಿವೇಶನ ಪಡೆದವರು
20 ಅಡಿ x 30 ಅಡಿ (ಇಡಬ್ಲ್ಯೂಎಸ್)	113
20 ಅಡಿ x 30 ಅಡಿ (ಸಾಮಾನ್ಯ)	11
30 ಅಡಿ x 40 ಅಡಿ	513
40 ಅಡಿ x 60 ಅಡಿ	74
50 ಅಡಿ x 80 ಅಡಿ	44
ಸುರಭಿ ಸೇವಾ ಸಂಘ (ಕಂದಾಯ ನಿವೇಶನದಾರರು)	29

ವಿಚಾರಣೆಗೆ ಸಮಯ ಕೋರಿದ ವಕೀಲರು

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ: ನ.19ಕ್ಕೆ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಪವಿತ್ರಾಗೌಡ ಸೇರಿದಂತೆ ಎಲ್ಲ ಆರೋಪಿಗಳ ವಿರುದ್ಧ ದೋಷಾರೋಪ ನಿಗದಿಯಾದ ಬಳಿಕ 64ನೇ ಸಿಸಿಎಚ್ ನ್ಯಾಯಾಲಯದಲ್ಲಿ ಸೋಮವಾರ ಪ್ರಕರಣದ ವಿಚಾರಣೆ ನಡೆಯಿತು.

ದರ್ಶನ್, ಪವಿತ್ರಾಗೌಡ, ಅನುಕುಮಾರ್, ಎಂ.ಲಕ್ಷ್ಮಣ್, ಜಗದೀಶ್, ಪ್ರದೂಷ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕವೇ ವಿಚಾರಣೆಗೆ ಹಾಜರಾದರು. ಆರೋಪಿಗಳ ಹಾಜರಾತಿ ಪಡೆದ ಬಳಿಕ ವಿಚಾರಣೆ ನಡೆಸಲಾಯಿತು.

'ಪ್ರಕರಣದಲ್ಲಿ ಐದು ಸಾವಿರ ಪುಟಗಳಷ್ಟು ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಅದನ್ನು ಓದಿ ವಾದ ಮಂಡನೆಗೆ ಸಿದ್ಧರಾಗಲು ಕಾಲಾವಕಾಶ ಬೇಕಿದೆ' ಎಂದು ಆರೋಪಿಗಳ ಪರ ವಕೀಲರು ಮನವಿ ಮಾಡಿದರು.

ಆರೋಪಿಗಳು ಹಾಗೂ ಅವರ ಪರ ವಕೀಲರು ವಿಚಾರಣೆಯನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ. ಸುಪ್ರೀಂ ಕೋರ್ಟ್ ಆರು ತಿಂಗಳ ಒಳಗಾಗಿ ವಿಚಾರಣೆ ಪೂರ್ಣಗೊಳಿಸುವಂತೆ ಸೂಚಿಸಿತ್ತು ಎಂದು ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಅವರು ಕೋರ್ಟ್‌ಗೆ ಮೆಮೊ ಸಲ್ಲಿಸಿದ್ದಾರೆ.

ಇದಾದ ಬಳಿಕ ಕೋರ್ಟ್ ಕಳೆದ ವಾರ ಆರೋಪಿಗಳ ವಿರುದ್ಧ ದೋಷಾರೋಪ ಹೊರಿಸಿದೆ. ಸಾಕ್ಷಿಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗಲು ಸೂಚಿಸಬೇಕು. ಆದರೆ, ಆರೋಪಿಗಳ ಪರ ವಕೀಲರು ಮತ್ತೆ ವಾದ ಮಂಡನೆಗೆ, ದಾಖಲೆಗಳ ಅಧ್ಯಯನಕ್ಕೆ ಸಮಯಾವಕಾಶ ಕೇಳಿದ್ದಾರೆ. ಇದರಿಂದ ವಿಚಾರಣೆ ಮುಂದೂಡಲಾಗಿದೆ.

ಪವಿತ್ರಾ ಗೌಡ ಅರ್ಜಿ ವಜಾ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ರದ್ದು ಪ್ರಶ್ನಿಸಿ ಆರೋಪಿ ಪವಿತ್ರಾ ಗೌಡ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಸುಪ್ರೀಂ ಕೋರ್ಟ್ ಆಗಸ್ಟ್ 14ರಂದು ನೀಡಿದ್ದ ತೀರ್ಪು ಪ್ರಶ್ನಿಸಿ ಪವಿತ್ರಾ ಗೌಡ ಅರ್ಜಿ ಸಲ್ಲಿಸಿದ್ದರು. ನಟ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಕೆಲವು ಆರೋಪಿಗಳ ಜಾಮೀನನ್ನು ನ್ಯಾಯಪೀಠ ರದ್ದುಗೊಳಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಆರ್. ಮಹದೇವನ್ ಪೀಠವು, 'ನಾವು ತೀರ್ಪು ಹಾಗೂ ದಾಖಲೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ನಮ್ಮ ಅಭಿಪ್ರಾಯದಲ್ಲಿ, ಜಾಮೀನು ರದ್ದು ತೀರ್ಪಿನ ಮರುಪರಿಶೀಲನೆಗೆ ಯಾವುದೇ ಆಧಾರಗಳಿಲ್ಲ. ಹೀಗಾಗಿ, ಮರು ಪರಿಶೀಲನಾ ಅರ್ಜಿ ವಜಾಗೊಳಿಸಲಾಗಿದೆ' ಎಂದು ಹೇಳಿದೆ.

ಚಿಕ್ಕಬಾಣಾವರದಲ್ಲಿ ಪೈಪ್ ಲೈನ್ ರಸ್ತೆ ಅತಿಕ್ರಮಣವನ್ನು ಅಧಿಕಾರಿಗಳು ತೆರವುಗೊಳಿಸಿದರು

ಚಿಕ್ಕಬಾಣಾವರ: ರಸ್ತೆ ಅತಿಕ್ರಮಣ ತೆರವು

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಗಣಪತಿನಗರದ ಆಚಾರ್ಯ ಮುಖ್ಯ ರಸ್ತೆಯ ಪೈಪ್ ಲೈನ್ ರಸ್ತೆಯನ್ನು ಅತಿಕ್ರಮಿಸಿಕೊಂಡು ನಿರ್ಮಿಸಿದ್ದ ಅಕ್ರಮ ಅಂಗಡಿ ಹಾಗೂ ಇತರೆ ಮಳಿಗೆಗಳ ನಾಮಫಲಕಗಳನ್ನು ಪುರಸಭೆ ಸಿಬ್ಬಂದಿ ಸೋಮವಾರ ತೆರವು ಮಾಡಿದರು.

ಜಲಮಂಡಳಿ ಕಾರ್ಯಪಾಲಕ ಎಂಜಿನಿಯರ್ ಐಶ್ವರ್ಯ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ಒತ್ತುವರಿದಾರರು ತೆರವಿಗೆ ವಿರೋಧ ವ್ಯಕ್ತಪಡಿಸಿದರು.

ಹೆಸರಘಟ್ಟ ಕೆರೆಯಿಂದ ಬೆಂಗಳೂರಿಗೆ ಕುಡಿಯುವ ನೀರು ಸರಬರಾಜು ಮಾಡುವ ಪೈಪ್ ಲೈನ್ ರಸ್ತೆ ಇದಾಗಿದ್ದು, ಹಲವರು ಅಂಗಡಿಗಳನ್ನು ನಿರ್ಮಿಸಿಕೊಂಡು ವಹಿವಾಟು ನಡೆಸುತ್ತಿದ್ದರು. ಇದರಿಂದಾಗಿ ಸಾರ್ವಜನಿಕರಿಗೆ ಕಿರಿಕಿರಿ ಉಂಟಾಗುತ್ತಿತ್ತು ಎಂದು ಅಧಿಕಾರಿಗಳು ವಿವರಿಸಿದರು.

'ಮಳಿಗೆ ತೆರವುಗೊಳಿಸುವಂತೆ ವಾರದ ಹಿಂದೆಯೇ ಸೂಚಿಸಲಾಗಿತ್ತು. ಇದೀಗ ತೆರವುಗೊಳಿಸಿ ಪೈಪ್ ಲೈನ್ ರಸ್ತೆಗೆ ಉದ್ದಕ್ಕೂ ತಂತಿಬೇಲಿ ಅಳವಡಿಸಲಾಗುವುದು' ಎಂದು ಐಶ್ವರ್ಯ ತಿಳಿಸಿದರು.

ಪೈಪ್ ಲೈನ್ ರಸ್ತೆ ಒತ್ತುವರಿ ಕುರಿತು ಮಾನವ ಹಕ್ಕುಗಳ ಸಂರಕ್ಷಣಾ ಸಮಿತಿ ರಾಜ್ಯ ಘಟಕದ ಧ್ಯಕ್ಷ ಬಿ.ಎಂ. ಚಿಕ್ಕಣ್ಣ ಅವರು ಜಲಮಂಡಳಿಯ ಅಧ್ಯಕ್ಷರಿಗೆ ದೂರು ಸಲ್ಲಿಸಿದ್ದರು.

ಸ್ವಚ್ಛತೆ: ಬ್ಯಾಟರಾಯನಪುರಕ್ಕೆ ದ್ವಿತೀಯ, ಯಲಹಂಕಕ್ಕೆ ತೃತೀಯ ಬಹುಮಾನ

ಸರ್ವಜ್ಞ ನಗರಕ್ಕೆ ₹1 ಲಕ್ಷ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮವಾಗಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಿದ್ದಕ್ಕಾಗಿ ಜಿಬಿಎ ವತಿಯಿಂದ ನಡೆಸಿದ ತಪಾಸಣೆಯಲ್ಲಿ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರವು ಮೊದಲ ಸ್ಥಾನ ಪಡೆದಿದ್ದು, ₹1 ಲಕ್ಷ ಬಹುಮಾನ ಪಡೆದಿದೆ.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರವು ಎರಡನೇ ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರವು ಮೂರನೇ ಸ್ಥಾನ ಪಡೆದಿದ್ದು, ಕ್ರಮವಾಗಿ ₹ 50 ಸಾವಿರ ಮತ್ತು ₹ 25 ಸಾವಿರ ನಗದು ಬಹುಮಾನ ಪಡೆದವು.

ನಗರ ಪಾಲಿಕೆ ಅಧಿಕಾರಿಗಳನ್ನು ಗುರುತಿಸಿ ಉತ್ತೇಜಿಸಲು ಹಾಗೂ ಉತ್ತಮವಾಗಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವವರಿಗೆ ಬಹುಮಾನ ನೀಡುವ ಯೋಜನೆ ಇದಾಗಿತ್ತು. ಮುಖ್ಯ ಎಂಜಿನಿಯರ್‌ಗಳಾದ ರಂಗನಾಥ್ ಮತ್ತು ಯಮುನಾ ಅವರ ನೇತೃತ್ವದಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಸಂಘ-ಸಂಸ್ಥೆಗಳ ಮೂಲಕ ರಸ್ತೆಗಳ ಸ್ವಚ್ಛತೆ ಗುಣಮಟ್ಟ, ತ್ಯಾಜ್ಯ ಸಂಗ್ರಹಣೆ ಆಧಾರದಲ್ಲಿ ತಪಾಸಿಸಿ, ವಿಜೇತರನ್ನು ಆಯ್ಕೆ ಮಾಡಿದ್ದಾರೆ.

ಇದಲ್ಲದೇ ವಿಭಾಗವಾರು ಪ್ರತ್ಯೇಕ ಸಮಾಧಾನಕರ ಬಹುಮಾನ ವಿತರಣೆ ಮಾಡಲಾಯಿತು. ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಬಹುಮಾನ ವಿತರಿಸಿದರು.

'ನಗರದ ಸ್ವಚ್ಛತೆಯನ್ನು ಕಾಪಾಡಲು ಪಾಲಿಕೆಯ ಸಿಬ್ಬಂದಿ ಪ್ರತಿದಿನ ಶ್ರಮಿಸುತ್ತಿದ್ದಾರೆ. ಪ್ರತಿ ಶುಕ್ರವಾರ 'ಫೋನ್ ಇನ್' ಕಾರ್ಯಕ್ರಮದ ಮೂಲಕ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಆಲಿಸಿ ಪರಿಹರಿಸುವ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ ಅಮರೇಶ್ ಎಚ್., ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಮುಖ್ಯ ಎಂಜಿನಿಯರ್‌ಗಳಾದ ರಂಗನಾಥ್, ಯಮುನಾ, ಉಪ ಆಯುಕ್ತರಾದ ಮಂಗಳ ಗೌರಿ, ಪ್ರಕಾಶ್, ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಘನ ತ್ಯಾಜ್ಯ ವಿಭಾಗದ ಎಂಜಿನಿಯರ್, ಸಿಬ್ಬಂದಿ, ಪೌರಕಾರ್ಮಿಕರು ಹಾಜರಿದ್ದರು.

ಖಾಲಿ ನಿವೇಶನದಲ್ಲಿ ತ್ಯಾಜ್ಯ ತೆರವು: ಖಾಲಿ ನಿವೇಶನಗಳಲ್ಲಿರುವ ತ್ಯಾಜ್ಯ, ಬ್ಲ್ಯಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಿ, ಆಸ್ತಿ ಮಾಲೀಕರಿಗೆ ದಂಡ ವಿಧಿಸಲು ಅಥವಾ ಅದಕ್ಕೆ ತಗಲುವ ವೆಚ್ಚವನ್ನು ನಿವೇಶನದ ಆಸ್ತಿ ತೆರಿಗೆಯಲ್ಲಿ ಸೇರಿಸಿ ವಸೂಲಿ ಮಾಡಲು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಸೂಚಿಸಿದರು.

ಯಲಹಂಕ ವಿಮಾನನಿಲ್ದಾಣ ರಸ್ತೆ ಸುತ್ತಮುತ್ತಲಲ್ಲಿ ಸೋಮವಾರ ತಪಾಸಣೆ ಮಾಡಿದ ಅವರು ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

NOTICE

In order to make Indian Farmers globally competitive, M/s Rich Phytocare Pvt Ltd., brings you following 100% Water Soluble Mixture Fertilizers as per order dated Gazette Notification no S.O.1909(E) dated 28th July 2014, issued by Ministry of Agriculture & Farmers Welfare, Govt. of India, Karnataka.

Sl No	Products
1	NPK 18:18:18
2	NPK 20:28:15
3	NPK 12:00:44
4	NPK 11:44:11
5	NPK 08:24:24
6	NPK 05:25:34
7	NPK 15:15:30
8	NPK 15:30:15
9	NPK 10:10:40
10	NPK 00:42:42
11	NPK 00:37:37
12	NPK 00:46:50
13	NPK 00:33:65
14	NPK 18:46:00
15	Urea Phosphate 17:44:00

Important Properties:
• 100% Water Soluble Mixture Fertilizers • Enhances & Improves Agri Produce Quality & Yield.
• Suitable for Fertigation & Foliar application. • Available Packings are 25kg & 1kg.
Supply & Sales of these WSF products will be done after 30-35 days of publish of this notice.
Manufactured, Imported, Packed & Marketed by:
M/s Rich Phytocare Pvt Ltd.,
No 5, 2nd stage, 14th cross, Peenya Industrial Area Bangalore 560058
Phone – 9611021111
Mail-richbangalore01@gmail.com

PERSONAL

Change of Name

CHANGE OF NAME
I, **Radhamani M,** residing at Door No. 49 & 3/4, 2nd Floor, First Building Veeranna Badavane, Dasarahalli, Bengaluru-560 024, have changed my name to **A REBECCA** vide affidavit dated 27.10.2025 before notary G Ravichandra Reddy. Bengaluru. Henceforth I shall be called **A REBECCA** only

CHANGE OF NAME
I, **Syed Sarvath Ulla** S/o Syed Hussain, R/at No. 512, Shivakumar Swamijinagar, Doddi Palya Main Road, Agra Grama, Kengeri, Gollahalli, Chudenapura, Bengaluru-560 060, have changed my name to **SYED SARWATH ULLA** vide affidavit dated 04.11.2025 before notary Vedavathi T.D. Channapatna Taluku.

CHANGE OF NAME
I, **PRIYA JIJESH PETER,** residing at # 3C Block 1, Amulya Park, 5th Main Road, NRI Layout, Ramamurthy Nagar, Bengaluru -560 016, have changed my minor daughter's name from **Anushka K Thampi** to **ASHLYN ROZANNE PETER** vide affidavit dated 10.11.2025 before notary K.C. Chowde Gowda, Bengaluru.

CHANGE OF NAME
I, **JAGADISH K.** S/o Late P. Krishnappa, R/a Jyothipura Village, Mandur Post, Bidarahalli Hobli, Bangalore-560 049 I declare that my name all the records as **JAGADISH K.** But in my Passport wrongly mentioned as **JAGADEESHA** in Future my name should be **JAGADISH K.** only. vide affidavit dated 10-11-2025 Sworn before Notary Manjunath T. Bangalore.

KARNATAKA ANTIBIOTICS & PHARMACEUTICALS LTD.
(A Govt of India Enterprise)
Regd. & Corp. Office: Arka The Business Centre, Plot No. 37, NTTF Main Road, 2nd Phase, Peenya Industrial Area, Bengaluru.
NOTICE INVITING TENDER (NIT)
Online Tenders are invited by **KAPL to Transport Medicines from Bangalore to All State Capitals of India, District Head Quarters of Karnataka & Bangalore Local** through surface mode (Road/Rail/Courier). Reputed Transporters may submit offers for Normal & also Temperature Controlled (2 to 8°C) Vehicles separately. Details of Terms and Conditions are available in **Website:www.kaplindia.com/ www.tenderwizard.com/kapl** Due Date for submission of tenders is on **01.12.2025 upto 23:59 hrs.**

REAL ESTATE SELLING

Sites

Anchepalya

SRIKANTAPURA SITE- 40x60 North Facing, Prakhruthi Layout 'B' Khata, Price- 9500 Negotiable, Contact no: 9740651606

I, **SHIVASHANKAR** GOWDA S.P, aged 27 years, S/o. Prakash S.H, residing at No.36/1, 11th Cross 1st stage, 1st Main, Police Station Road, Indiranagar, Bengaluru- 560038. I state and declare that, as per the prevailing records my name is Shivashankar Gowda S.P. Accordingly, in all my Educational Certificates, Identity Proofs, Banking accounts and other Government records my name is denoted as Shivashankar Gowda S.P and all records also indicate the same, have changed my name from Shivashankar Gowda S.P to SAMANTH GOWDA S.P, vide affidavit dated:2/9/2025 sworn to before Chandrashekaraiah.S Advocate and Notary Bangalore.

BUSINESS

Business Offers

Finance

MSME LOANS Available for any startups companies And Existing Running companies Available for Manufacturing Units, Shops, Establishments Etc Contact- 7204995189

CHANGE OF NAME
I, **Devi Priya,** residing at # 3C Block 1, Amulya Park, 5th Main Road, NRI Layout, Ramamurthy Nagar, Bengaluru - 560 016 , have changed my name to **PRIYA JIJESH PETER** vide affidavit dated 10.11.2025 before notary K.C. Chowde Gowda, Bengaluru. Henceforth I shall be called **PRIYA JIJESH PETER** only

I, G. JYOTHILAKSHMIKAR REDDY residing at Bengaluru-64 have changed my name as G. JYOTHI LAKSHMIKAR REDDY, vide affidavit dated 10/11/2025 before Notary K.S.Bammappanavar, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಜೆಟಿಡಿಗೆ ಕೊಕ್: ಕೃಷ್ಣಾರೆಡ್ಡಿ ಅಧ್ಯಕ್ಷ

ಜೆಡಿಎಸ್ ಪ್ರಮುಖರ ಸಮಿತಿ ಪುನರ್ ರಚನೆ • ಪ್ರಚಾರ ಸಮಿತಿಗೆ ದತ್ತ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಜಿ.ಟಿ. ದೇವೇಗೌಡ

ವೈ.ಎಸ್.ವಿ. ದತ್ತ

ಎಂ. ಕೃಷ್ಣಾರೆಡ್ಡಿ

ಬೆಂಗಳೂರು: ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಶಾಸಕ ಜಿ.ಟಿ. ದೇವೇಗೌಡ ಅವರಿಗೆ ಪ್ರಮುಖರ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಕೊಕ್ ನೀಡಿರುವ ಜೆಡಿಎಸ್ ವರಿಷ್ಠರು, ಆ ಸ್ಥಾನಕ್ಕೆ ಮಾಜಿ ಉಪ ಸಭಾಧ್ಯಕ್ಷ ಎಂ. ಕೃಷ್ಣಾರೆಡ್ಡಿ ಅವರನ್ನು ನೇಮಿಸಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಪಕ್ಷದ ಮುಂಚೂಣಿ ಘಟಕಗಳಿಗೆ ಹೊಸಬರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ವಿಧಾನಸಭೆಯಲ್ಲಿ ಶಾಸಕಾಂಗ ಪಕ್ಷದ ಸ್ಥಾನ ಸಿಗದ ಕಾರಣಕ್ಕೆ ದಳಪತಿಗಳ ವಿರುದ್ಧ ಮುನಿಸಿಕೊಂಡಿದ್ದ ಜಿ.ಟಿ. ದೇವೇಗೌಡ ಪಕ್ಷದ ಚಟುವಟಿಕೆಗಳಿಂದ ದೂರವಿದ್ದರು. ಅಲ್ಲದೆ, ಪಕ್ಷದ ನಾಯಕರ ವಿರುದ್ಧವೇ ಮಾತನಾಡುತ್ತಿದ್ದರು. ಅಂತಿಮವಾಗಿ ಅವರನ್ನು ಕೈಬಿಟ್ಟು ಕೃಷ್ಣಾರೆಡ್ಡಿಗೆ ಜೆಡಿಎಸ್ ವರಿಷ್ಠರು ಸ್ಥಾನ ನೀಡಿದ್ದಾರೆ. ಶಾಸಕ ಎ. ಮಂಜು ಅವರನ್ನು ಈ ಸಮಿತಿಯ ಸಂಚಾಲಕರನ್ನಾಗಿ ನೇಮಿಸಲಾಗಿದೆ. ನೂತನ ಸಮಿತಿಯಲ್ಲಿ 20 ಸದಸ್ಯರಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಕಾರ್ಯನಿರ್ವಹಿಸಲಿದೆ ಎಂದು ಜೆಡಿಎಸ್ ತಿಳಿಸಿದೆ.

ಪ್ರಚಾರ ಸಮಿತಿಗೆ ವೈ.ಎಸ್. ವಿ. ದತ್ತ, ಶಿಸ್ತುಪಾಲನಾ ಸಮಿತಿಗೆ ಮಾಜಿ ಸಚಿವ ಡಿ. ನಾಗರಾಜಯ್ಯ ಅವರನ್ನು ನೇಮಕ ಮಾಡಲಾಗಿದೆ.

ಪ್ರಮುಖರ ಸಮಿತಿಯಲ್ಲಿ ಮಾಜಿ ಶಾಸಕ ರಾಜವೆಂಕಟಪ್ಪ ನಾಯಕ ದೊರೆ, ಸಂಸದ ಎಂ. ಮಲ್ಲೇಶ್ ಬಾಬು, ಮಾಜಿ ಸಚಿವರಾದ ಡಿ.ಸಿ. ತಮ್ಮಣ್ಣ, ಆಲ್ಕೋಡ ಹನುಮಂತಪ್ಪ, ಎಚ್.ಕೆ. ಕುಮಾರಸ್ವಾಮಿ, ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕರಾದ ಎಚ್.ಎಸ್. ಶಿವಶಂಕರ್, ಕೆ.ಎಂ. ತಿಮ್ಮರಾಯಪ್ಪ, ಎ. ಮಂಜುನಾಥ್, ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಕೆ.ಬಿ. ಪ್ರಸನ್ನ ಕುಮಾರ್, ಶಾಸಕರಾದ ಎಚ್.ಡಿ. ರೇವಣ್ಣ, ಕರೆಮ್ಮ ನಾಯಕ, ನೇಮಿರಾಜ ನಾಯಕ, ಸಮೃದ್ಧಿ ಮಂಜುನಾಥ್, ಶರಣುಗೌಡ ಕಂದಕೂರ, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ಪಕ್ಷದ ನಾಯಕ ಸಿ.ವಿ. ಚಂದ್ರಶೇಖರ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ವೈ.ಎಸ್.ವಿ. ದತ್ತ ನಾಯಕತ್ವದ ಪ್ರಚಾರ ಸಮಿತಿಯಲ್ಲಿ ಮಾಜಿ ಶಾಸಕರಾದ ಅಶ್ವಿನ್ ಕುಮಾರ್, ಸುರೇಶ್ ಗೌಡ, ಕೆ. ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಶಾಸಕರಾದ ಸಿ.ಎನ್. ಬಾಲಕೃಷ್ಣ, ಭೀಮನಗೌಡ (ರಾಜುಗೌಡ) ಪಾಟೀಲ್, ಜಿ.ಡಿ. ಹರೀಶ್ ಗೌಡ, ಸ್ವರೂಪ್ ಪ್ರಕಾಶ್, ಎಂ.ಆರ್. ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಟಿ.ಎನ್. ಜವರಾಯಿಗೌಡ, ಕೆ. ವಿವೇಕಾನಂದ, ಸಿ.ಎನ್. ಮಂಜೇಗೌಡ, ಸೂರಜ್ ರೇವಣ್ಣ, ಹಿರಿಯ ನಾಯಕ ಸುಧಾಕರ್ ಎಸ್.ಶೆಟ್ಟಿ ಸದಸ್ಯರಾಗಿದ್ದಾರೆ.

ಡಿ. ನಾಗರಾಜಯ್ಯ ನೇತೃತ್ವದ ಶಿಸ್ತುಪಾಲನಾ ಸಮಿತಿಯಲ್ಲಿ ಮಾಜಿ ಸಂಸದ ಕುಪೇಂದ್ರರೆಡ್ಡಿ, ಶಾಸಕರಾದ ಜಿ.ಕೆ. ವೆಂಕಟಾಶಿವಾರೆಡ್ಡಿ, ಎಚ್. ಟಿ. ಮಂಜುನಾಥ್, ಮಾಜಿ ಶಾಸಕರಾದ ಕೆ.ಎಸ್. ಲಿಂಗೇಶ್, ಕೆ. ಮಹದೇವ, ಆರ್. ಚೌಡರೆಡ್ಡಿ, ಸುಧಾಕರ್ ಲಾಲ್, ಎಲ್.ಎನ್. ನಿಸರ್ಗ ನಾರಾಯಣಸ್ವಾಮಿ, ಕೆ. ಶ್ರೀನಿವಾಸಮೂರ್ತಿ ಸದಸ್ಯರಾಗಿದ್ದಾರೆ.

ರಾಜಕೀಯ ವ್ಯವಹಾರಗಳ ಸಮಿತಿ: ಎಚ್.ಡಿ. ಕುಮಾರಸ್ವಾಮಿ ನೇತೃತ್ವ

ಜೆಡಿಎಸ್ ಪಕ್ಷದ ಉನ್ನತ ಮಟ್ಟದ ರಾಜಕೀಯ ವ್ಯವಹಾರಗಳ ಸಮಿತಿ ಅಧ್ಯಕ್ಷರನ್ನಾಗಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ನೇಮಿಸಿದ್ದಾರೆ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕಿ ಶಾರದಾ ಪೂರ್ಯಾ ನಾಯ್ಕ್ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ. ಸದಸ್ಯರಾಗಿ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ, ಸಾ.ರಾ. ಮಹೇಶ್, ವೆಂಕಟರಾವ್ ನಾಡಗೌಡ, ಶಾಸಕರಾದ ಎಂ.ಟಿ. ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಬೋಜೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಯುವ ಜನತಾದಳ ರಾಜ್ಯ ಘಟಕದ ನಿಖಿಲ್ ಕುಮಾರಸ್ವಾಮಿ ಅವರು ಸದಸ್ಯರಾಗಿದ್ದಾರೆ.

ಎಚ್‌ಡಿಕೆ ಸಭೆಗೆ ಗೈರು, ಸಿಎಂ ಕೆಡಿಪಿಗೆ ಹಾಜರು

ಮೈಸೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಇಲ್ಲಿ ನ.7ರಂದು ನಡೆಸಿದ ಜಿಲ್ಲಾ ಅಭಿವೃದ್ಧಿ ಮತ್ತು ಸಮನ್ವಯ ಸಮಿತಿ (ದಿಶಾ) ಸಭೆಗೆ ಗೈರು ಹಾಜರಾಗಿದ್ದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೆಡಿಪಿ ಸಭೆಯಲ್ಲಿ ಹಾಜರಾಗಿ ಗಮನಸೆಳೆದರು. ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿರುವ ಅವರು, ಕುಮಾರಸ್ವಾಮಿ ಅವರು ನಗರದಲ್ಲಿ ಭಾಗವಹಿಸಿದ್ದ ಯಾವ ಕಾರ್ಯಕ್ರಮದಲ್ಲೂ ಪಾಲ್ಗೊಂಡಿರಲಿಲ್ಲ.

ಪೋಡಿ ದುರಸ್ತಿ ಕಾರ್ಯಕ್ಕೆ ಹಿನ್ನಡೆ: ಕೃಷ್ಣ ಬೈರೇಗೌಡ

ಬೆಂಗಳೂರು: ಸಾಮಾಜಿಕ- ಶೈಕ್ಷಣಿಕ ಸಮೀಕ್ಷೆ ಮತ್ತು ಅತಿವೃಷ್ಟಿಯಿಂದಾಗಿ ಪೋಡಿ ದುರಸ್ತಿ ಕೆಲಸಕ್ಕೆ ಹಿನ್ನಡೆ ಆಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

ವಿಕಾಸಸೌಧದಲ್ಲಿ ಸೋಮವಾರ ವಿಡಿಯೊ ಸಂವಾದದ ಮೂಲಕ ತಹಶೀಲ್ದಾರ್‌ಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

'ಪೋಡಿ ದುರಸ್ತಿಗಾಗಿ 1.40 ಲಕ್ಷ ಪ್ರಕರಣಗಳು ಸರ್ವೇಗೆ ಹೋಗಿವೆ. 1.50 ಲಕ್ಷ ಪ್ರಕರಣಗಳು ಮಿಸ್ಸಿಂಗ್ ರೆಕಾರ್ಡ್ ಕಮಿಟಿಗೆ ಹೋಗಿವೆ. 20 ಸಾವಿರ ಸರ್ವೆ ನಂಬರ್‌ನಲ್ಲಿ ಮಂಜೂರುದಾರರ ಸಂಖ್ಯೆ 1 ಲಕ್ಷದಿಂದ 1.50 ಲಕ್ಷ ಇರುವ ಸಾಧ್ಯತೆ ಇದೆ' ಎಂದು ಹೇಳಿದರು.

ಆಧಾರ್ ಸೀಡಿಂಗ್ ಪ್ರಕ್ರಿಯೆ ಕಾರ್ಕಳದಲ್ಲಿ ಶೇ 78, ಬೆಂಗಳೂರು ದಕ್ಷಿಣ ಶೇ 75, ಆನೇಕಲ್ ಶೇ 68, ದೇವನಹಳ್ಳಿ ಶೇ 71, ಹೆಬ್ರಿಯಲ್ಲಿ ಶೇ 46 ರಷ್ಟಾಗಿದೆ. ರೈತರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸಲು ಆಧಾರ್ ಸೀಡಿಂಗ್ ಬಹುಮುಖ್ಯ. ಆದಷ್ಟು ಬೇಗ ಎಲ್ಲ ತಾಲ್ಲೂಕುಗಳಲ್ಲೂ ಆಧಾರ್ ಸೀಡಿಂಗ್ ಕಾರ್ಯ ಮುಗಿಸುವಂತೆ ಅವರು ಸೂಚನೆ ನೀಡಿದರು.

ಪೌತಿ ಖಾತೆ ಅಭಿಯಾನ ತಕ್ಕಮಟ್ಟಿಗೆ ನಡೆಯುತ್ತಿದೆ. 41,62,000 ಗುರಿ ಇದೆ. ಒಟ್ಟು ಗುರಿಯ ಪೈಕಿ ಶೇ 5 ರಷ್ಟು ಕೆಲಸ ಆಗಿದೆ ಎಂದು ಅವರು ಹೇಳಿದರು.

'ವಿರಾಜಪೇಟೆ, ಬೈಂದೂರು, ಪೊನ್ನಂಪೇಟೆ, ಮಡಿಕೇರಿ, ಆನೇಕಲ್, ಖಾನಾಪುರ, ಯಳಂದೂರು, ಗೋಕಾಕ ತಾಲ್ಲೂಕಿನಲ್ಲಿ ಪೌತಿ ಖಾತೆ ಅಭಿಯಾನ ಶೇ 1 ಕ್ಕಿಂತ ಕಡಿಮೆ ಆಗಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ಸುಳ್ಳು ಸುದ್ದಿ ವಿರುದ್ಧ ಕಾನೂನು ಕ್ರಮ: ಸಿ.ಟಿ.ರವಿ

ಬೆಂಗಳೂರು: 'ಬೆಂಗಳೂರಿನ ಅಭಿವೃದ್ಧಿಗೆ ಅದು ಕೇಂದ್ರಾಡಳಿತ ಪ್ರದೇಶವಾಗಬೇಕು ಎಂದು ನಾನು ಹೇಳಿಕೆ ನೀಡಿದ್ದೇನೆ ಎಂಬಂತೆ ಯಾರೋ ಕಿಡಿಗೇಡಿಗಳು ನಕಲಿ ಸುದ್ದಿಯನ್ನು ಪ್ರಜಾವಾಣಿ ವರದಿ ಎಂಬಂತೆ ಬಿಂಬಿಸಿ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ' ಎಂದು ಬಿಜೆಪಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಎಂದು ಹೇಳಿದ್ದಾರೆ. 'ಇಂತಹ ಹೇಳಿಕೆಯನ್ನು ನಾನು ಎಂದಿಗೂ ನೀಡಿಲ್ಲ. ಇದು ನಕಲಿ ಎಂದು ಪ್ರಜಾವಾಣಿಯೂ ಸ್ಪಷ್ಟ ಪಡಿಸಿದೆ. ಇದಕ್ಕಾಗಿ ಪತ್ರಿಕೆಗೆ ಧನ್ಯವಾದಗಳು. ಇಂತಹ ಸುಳ್ಳು ಸುದ್ದಿಗಳನ್ನು ನಂಬಬೇಡಿ. ಅವುಗಳನ್ನು ಹಂಚಿಕೊಳ್ಳಬೇಡಿ. ಈ ರೀತಿ ನಕಲಿ ಸುದ್ದಿ ಸೃಷ್ಟಿಸಿ ಹರಿಬಿಟ್ಟ ಕಿಡಿಗೇಡಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುತ್ತೇನೆ' ಎಂದು ಅವರು 'ಎಕ್ಸ್' ನಲ್ಲಿ ತಿಳಿಸಿದ್ದಾರೆ.

ಚಟಿಕೆ ಸುದ್ದಿ

10 ತಾಸು ಸಭೆ; ಅಧಿಕಾರಿಗಳ ಬೆವರಿಳಿಸಿದ ಸಿಎಂ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತವರಿನಲ್ಲಿ ಸೋಮವಾರ ಸತತ 10 ತಾಸುಗಳವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಅನುಷ್ಠಾನದ ಪ್ರಗತಿ ಪರಿಶೀಲಿಸಿದರು.

ಬೆಳಿಗ್ಗೆ 11.30ರಿಂದ ರಾತ್ರಿ 9.30ರವರೆಗೂ ಸಭೆ ಸಭೆ ನಡೆಸಿ, ಬಹುತೇಕ ಇಲಾಖೆಗಳ ಕಾರ್ಯಕ್ರಮಗಳ ಪ್ರಗತಿಯ ಮಾಹಿತಿ ಪಡೆದು, ಅಧಿಕಾರಿಗಳ ಬೆವರಿಳಿಸಿದರು. ಸಮರ್ಪಕವಾಗಿ ಮಾಹಿತಿ ನೀಡಿದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಬಿಸಿ ಮುಟ್ಟಿಸಿದರು. ಅಭಿವೃದ್ಧಿ ಕಾರ್ಯಕ್ಕೆ ವೇಗ ನೀಡುವಂತೆ ತಾಕೀತು ಮಾಡಿದರು.

ಸಭಾಂಗಣದಲ್ಲೇ ಮಧ್ಯಾಹ್ನದ ಊಟ ಮಾಡಿ, ಸಭೆ ಮುಂದುವರಿಸಿದರು.

ಸಿಎಂ ಸಭೆಯಲ್ಲಿ ಪ್ರತಿಧ್ವನಿಸಿದ 'ಪ್ರಜಾವಾಣಿ' ವರದಿ

ಮೈಸೂರು: 'ಪ್ರಜಾವಾಣಿ'ಯಲ್ಲಿ ಅ.26ರಂದು 'ಒಳನೋಟ'ದಲ್ಲಿ ಪ್ರಕಟವಾಗಿದ್ದ 'ಬುಡಕಟ್ಟು ಜನರಿಗೆ ಕಳಪೆ ಆಹಾರ' ವರದಿ ಇಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಪ್ರತಿಧ್ವನಿಸಿತು.

ವರದಿಯ ಪ್ರತಿ ಪ್ರದರ್ಶಿಸಿದ ಮುಖ್ಯಮಂತ್ರಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ಜೊತೆಗೆ ಅಧಿಕಾರಿಗಳು ಹಾಸ್ಟೆಲ್‌ಗೆ ದಿಢೀರ್ ಭೇಟಿ ಕೊಟ್ಟು ಪರಿಶೀಲನೆ ನಡೆಸುತ್ತಿರಬೇಕು' ಎಂದು ಸೂಚಿಸಿದರು.

'ಹಾಡಿಗಳಿಗೆ ಕುಡಿಯುವ ನೀರು, ವಿದ್ಯುತ್ ಪೂರೈಕೆ ಆಗುತ್ತಿದೆಯೇ?' ಎಂದು ಕೇಳಿದ ಅವರು, 'ಅರಣ್ಯವಾಸಿಗಳ ವಿಚಾರದಲ್ಲಿ ಅಂತಃಕರಣದಿಂದ ವರ್ತಿಸಬೇಕು' ಎಂದರು.

ಯುವನಿಧಿ: ಸ್ವಯಂ ಘೋಷಣೆ ಸಲ್ಲಿಸಿ

ಬೆಂಗಳೂರು: ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವನಿಧಿ ಯೋಜನೆಯ ಫಲಾನುಭವಿಗಳು ತಿಂಗಳ ನಿರುದ್ಯೋಗ ಭತ್ಯೆಯನ್ನು ಪಡೆಯಲು ಪ್ರತಿ ತಿಂಗಳು 1ರಿಂದ 25ರೊಳಗೆ ಸ್ವಯಂ-ಘೋಷಣೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ವೆಬ್‌ಸೈಟ್ www.sevasindhugs.karnataka.gov.in ನ ಮೂಲಕ ಸ್ವಯಂ ಘೋಷಣೆ ದಾಖಲು ಮಾಡುವುದು ಕಡ್ಡಾಯವಾಗಿದೆ ಎಂದು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕಾರ್ಮಿಕ ಇಲಾಖೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029
ದೂರವಾಣಿ ಸಂಖ್ಯೆ:080-29753354/56 ಇಮೇಲ್: karbuildworkerswelfare@gmail.com
ಸಂಖ್ಯೆ: ಕ.ಕ&ಇ.ನಿ.ಕಾ.ಕ.ಮ/ಪ್ರಕಟಣೆ/2025-26 ದಿನಾಂಕ: 10-11-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಗಳಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಕರ್ನಾಟಕ ರಾಜ್ಯದಾದ್ಯಂತ 35 ಮೊಬೈಲ್ ವೈದ್ಯಕೀಯ ಘಟಕಗಳಲ್ಲಿ ಪಾಯಿಂಟ್ ಆಫ್ ಕೇರ್ ವೈದ್ಯಕೀಯ ಸಾಧನಗಳೊಂದಿಗೆ ಸಂಪರ್ಕಿತ ಆರೋಗ್ಯ ಪರಿಸರ ವ್ಯವಸ್ಥೆಯ ಪೂರೈಕೆ ಮತ್ತು ಸ್ಥಾಪನೆಗಾಗಿ ಸೇವಾ ಪೂರೈಕೆದಾರರ ಆಯ್ಕೆಗಾಗಿ ಟೆಂಡರ್ ಅನ್ನು ಈ ಮೂಲಕ ಆಹ್ವಾನಿಸಲಾಗಿದೆ.
ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ-ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕವು ಕೆ.ಪಿ.ಪಿ. ಪೋರ್ಟಲ್‌ನಂತೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/-
DIPR/CP/3699/Zen/2025-26 ಜಂಟಿ ಕಾರ್ಯದರ್ಶಿ, ಕ.ಕ&ಇ.ನಿ.ಕಾ.ಕ.ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ-5/ಟೆಂಡರ/2025-26/4208 ದಿನಾಂಕ : 07/11/2025
ಇ-ಪ್ರೊಕ್ಯೂರಮೆಂಟ್‌ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ
1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ 1. Improvements of Hanadi Road from Allur B Village Dhari Hola to Dandagunda Main road in Chittapur Taluka Indent No.20165, 2.) Improvements of Hanadi from Konchur to Kulkunda Village in Chittapur Taluka Indent No.20196, 3. Improvements to road from Itaga village to Kanti Road (3.00 KM) in Jewargi Taluka Indent No. 19494, 4. Construction of Road and bridge from Syed Chincholi Jamga main road to Ganajalkhed cross vial Kere 0.00 km to 4.00km in Kalaburagi Taluka Indent No.18892, 2) ಲೆಕ್ಕ ಶೀರ್ಷಿಕೆ: 3054 ಲಮ್ ಸಮ್& 5054 ಮಳೆಹಾನಿ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: 20165-12883945.88, 20196-10906900.79, 19494-15120264.89, 18892-10494768.37, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: 07.11.2025 ರಿಂದ 19.11.2025 ಸಾಯಂಕಾಲ 4:00 ಗಂಟೆವರೆಗೆ, 6) ಟೆಂಡರ ಅರ್ಜಿ ಬೆಲೆ : ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. 20165-200000, 20196-200000, 19494-227000, 18892-200000, 8) ಟೆಂಡರ ಸಲ್ಲಿಸುವ ದಿನಾಂಕ 07.11.2025 ರಿಂದ 19.11.2025 ಸಾಯಂಕಾಲ 4:00 ಗಂಟೆವರೆಗೆ, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 20.11.2025 ಸಾಯಂಕಾಲ 4:00 ಗಂಟೆ ನಂತರ, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: 24.11.2025 ಬೆಳಿಗ್ಗೆ 11:00 ಗಂಟೆ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in
ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ವಾ.ಸಾ.ಸಂ.ಇ/ಕಲಬುರಗಿ/695/ಕೆ.ಎಸ್.ಎಂ.ಸಿ.&ಎ/2025-26 ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು-570017, ದೂರವಾಣಿ ಸಂಖ್ಯೆ: 9448994705
ಇ-ಮೇಲ್ ಐಡಿ: gmpurc@cescmysore.org, ವೆಬ್‌ಸೈಟ್: www.cescmysore.org
ಚಾವಿಸನಿನಿ/ಪ್ರವ್ಯ/ಉಪ್ರವ್ಯ(ಖ)/ಸ.ಪ್ರ.ವ್ಯ(ಖ-2)/2025-26/24823 ದಿನಾಂಕ: 06.11.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಅ. ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ 11 ಕಿ ವೋ ದರ್ಜೆಯ 25, 63, 100 ಕೆವಿಎ ಸಾಮರ್ಥ್ಯದ ಸ್ಟಾರ್ ರೇಟೆಡ್ ಮತ್ತು ಕನ್ವೆನ್ಷನಲ್ ಪರಿವರ್ತಕಗಳನ್ನು ಬೈ ಬ್ಯಾಕ್ ಆಧಾರದಲ್ಲಿ ಮೂಲ ಸೌಕರ್ಯ ಒದಗಿಸುವುದರೊಂದಿಗೆ ದುರಸ್ತಿಗೊಳಿಸುವುದು ಮತ್ತು ರೀಕಂಡಿಷನಿಂಗ್ ಮಾಡುವ ಸೇವೆಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರಸಂ	ತಾಲ್ಲೂಕು	ವಿಚಾರಣೆ ಸಂಖ್ಯೆ/ ದಿನಾಂಕ	ಕ್ರಸಂ	ತಾಲ್ಲೂಕು	ವಿಚಾರಣೆ ಸಂಖ್ಯೆ/ದಿನಾಂಕ
1	ಅರಕಲಗೂಡು	ಸಿ2-6376/05.11.2025	14	ಬೇಲೂರು	ಸಿ2-6389/05.11.2025
2	ಬಾಣಾವರ	ಸಿ2-6377/05.11.2025	15	ಶ್ರೀರಂಗಪಟ್ಟಣ	ಸಿ2-6390/05.11.2025
3	ಚನ್ನರಾಯಪಟ್ಟಣ	ಸಿ2-6378/05.11.2025	16	ಪಾಂಡವಪುರ	ಸಿ2-6391/05.11.2025
4	ಹನ್ನೂರು	ಸಿ2-6379/05.11.2025	17	ಗುಂಡ್ಲುಪೇಟೆ	ಸಿ2-6392/05.11.2025
5	ಹುಣಸೂರು	ಸಿ2-6380/05.11.2025	18	ಚಾಮರಾಜನಗರ	ಸಿ2-6393/05.11.2025
6	ಕೆ.ಆರ್.ಪೇಟೆ	ಸಿ2-6381/05.11.2025	19	ಕುಶಾಲನಗರ	ಸಿ2-6394/05.11.2025
7	ಮದ್ದೂರು	ಸಿ2-6382/05.11.2025	20	ಕೆ.ಆರ್. ನಗರ	ಸಿ2-6395/05.11.2025
8	ಮಳವಳ್ಳಿ	ಸಿ2-6383/05.11.2025	21	ಅರಸೀಕೆರೆ	ಸಿ2-6396/05.11.2025
9	ಮಂಡ್ಯ	ಸಿ2-6384/05.11.2025	22	ಹೊಳೇನರಸಿಪುರ	ಸಿ2-6397/05.11.2025
10	ನಾಗಮಂಗಲ	ಸಿ2-6385/05.11.2025	23	ಟಿ ನರಸೀಪುರ	ಸಿ2-6398/05.11.2025
11	ನಂಜನಗೂಡು	ಸಿ2-6386/05.11.2025	24	ಪಿರಿಯಾಪಟ್ಟಣ	ಸಿ2-6399/05.11.2025
12	ಎನ್.ಆರ್ ಮೊಹಲ್ಲಾ & ವಿ.ವಿ.ಮೊಹಲ್ಲಾ	ಸಿ2-6387/05.11.2025	25	ಕೊಳ್ಳೆಗಾಲ & ಯಳಂದೂರು	ಸಿ2-6400/05.11.2025
13	ಸಕಲೇಶಪುರ	ಸಿ2-6388/05.11.2025	26	ಹೆಚ್ ಡಿ ಕೋಟೆ	ಸಿ2-6401/05.11.2025
ಆ	ಹೊರ ಗುತ್ತಿಗೆ ಏಜೆನ್ಸಿಯವರಿಂದ ಪೂರ್ಣ ಗುತ್ತಿಗೆ ಆಧಾರದ ಮೇಲೆ ಚಾವಿಸನಿನಿ ವ್ಯಾಪ್ತಿಯಲ್ಲಿ 2 ವರ್ಷದ ಅವಧಿಗೆ 788 ಜನ ಲೈನ್ ಹೆಲ್ಪರ್‌ಗಳನ್ನುಒದಗಿಸಲು				ಸಿ2-6402/05.11.2025
ಇ	ಚಾವಿಸನಿನಿಗೆ ಅರ್ಹ ಗುತ್ತಿಗೆದಾರರಿಂದ ಡಿಪಿಟಿಸಿ ಸೆಟ್-GI ಗಳನ್ನು ಸರಬರಾಜು ಮಾಡಲು				ಸಿ2-6421/07.11.2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 13.11.2025 ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ 8046010000/ 22631200/ 68948777 ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912
ವಾಸಾಸಂಇ/ಮೈಸೂರು/1197/ಎಸ್‌ಎಸ್‌ಸಿ/2025-26 ಸಹಿ/- ಪ್ರಧಾನ ವ್ಯವಸ್ಥಾಪಕರು(ಖರೀದಿ) ಚಾವಿಸನಿನಿ, ಮೈಸೂರು

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್. ಸಿ.ವಿ. ರಾಮನ್‌ನಗರ ವಿಭಾಗ, ಬೆಂಗಳೂರು ಕೇಂದ್ರ ನಗರ ಪಾಲಿಕೆ, 8ನೇ ಅಡ್ಡರಸ್ತೆ, 12ನೇ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಸ್ಟೇಜ್, ಇಂದಿರಾನಗರ ಬೆಂಗಳೂರು-560038
ನಂ.: ಕಾಪಾಅ/ಸಿವಿಆರ್/ಟೆಂಡರ್-01/ತಿದ್ದುಪಡಿ-1/2025-26 ದಿನಾಂಕ: 10.11.2025
ತಿದ್ದುಪಡಿ
ಕಾರ್ಯಪಾಲಕ ಅಭಿಯಂತರರು (ಸಿ.ವಿ. ರಾಮನ್‌ನಗರ) ವಿಭಾಗ, ಇವರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು ಸದರಿ ಟೆಂಡರ್ ನೋಟಿಫಿಕೇಷನ್ ಸಂಖ್ಯೆ ಕಾಪಾಅ/ಸಿವಿ/ಟೆಂಡರ್/05/2025-26, ದಿನಾಂಕ: 06.11.2025 ಎಂದು ಇದ್ದು, ಇದನ್ನು ಕಾಪಾಅ/ಸಿವಿಆರ್/ಇ-ಕೆಪಿಪಿಪಿ/01/2025-26, ದಿನಾಂಕ: 06.11.2025 ಎಂದು ಓದಿಕೊಳ್ಳತಕ್ಕದ್ದು. ಇನ್ನುಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, ಸಿ.ವಿ. ರಾಮನ್‌ನಗರ ವಿಭಾಗ, ಬಿಸಿಸಿಸಿ

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
Kfdcl
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ) CIN: U02001KA1971SGC001999
ವಿಭಾಗೀಯ ವ್ಯವಸ್ಥಾಪಕರ ಕಚೇರಿ, ಬೆಂಗಳೂರು ವಿಭಾಗ, 'ವನವಿಕಾಸ' 5ನೇ ಮಹಡಿ, ಕೊಠಡಿ ಸಂಖ್ಯೆ. 515, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003
ಫೋನ್: 080-23345199 ಇ-ಮೇಲ್ : dmkfdclbd@gmail.com ವೆಬ್‌ಸೈಟ್: www.kfdcl.karnataka.gov.in
ಸಂ: ಕಅಅನಿನಿ/ವಿವ್ಯ/ಬೆಂವಿ/ಮಾರಾಟ/ಇ-ಟೆಂಡರ್/2025-26/643 ದಿ: 10.11.2025
ಇ-ಟೆಂಡರ್ ಪ್ರಕಟಣೆ
ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ, 2025-26ನೇ ಸಾಲಿನಲ್ಲಿ ಬೆಂಗಳೂರು ವಿಭಾಗ ವಿವಿಧ ನೆಡುತೋಪುಗಳಲ್ಲಿ ಲಭ್ಯವಿರುವ ಅಂದಾಜು ಸಿಪ್ಪೆ ಸಹಿತ 43025.73 ಎಂ.ಟಿ. ಹಾಗೂ ಸಿಪ್ಪೆ ರಹಿತ 33658.94 ಎಂ.ಟಿ. ಮೆದು ಮರಗಳನ್ನು ಕಡಿದು ವಿವಿಧ ಕೈಗಾರಿಕಾ ಉದ್ಯಮಗಳಿಗೆ ಸಾಗಾಣಿಕೆ ಮಾಡಲು ದ್ವಿ-ಲಕೋಟೆಯಲ್ಲಿ ಟೆಂಡರ್ ಅನ್ನು https://kppp.karnataka. gov.in ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27.11.2025ರ 17.30 ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 080-23345199 ಗೆ (ರಜಾ ದಿನಗಳನ್ನು ಹೊರತುಪಡಿಸಿ) ಈ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/- ವಿಭಾಗೀಯ ವ್ಯವಸ್ಥಾಪಕರು, ಕಅಅನಿನಿ, ಬೆಂಗಳೂರು ವಿಭಾಗ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - 560 070.
ಸಂಖ್ಯೆ: ಕಾಪಾಅ(ವಿ)/ಸಕಾಪಾಅ/ಕೆಪಿಪಿ/08/2025-26 ದಿನಾಂಕ:10.11.2025
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ))
ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬೆಂಪನಪಾ, ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಸಂ.	ಕಾಮಗಾರಿಯ ವಿವರ
1.	ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಹುಪಯೋಗಿ ಕಟ್ಟಡ, ಸಮುದಾಯ ಭವನಗಳ ಸಮಗ್ರ ಅಭಿವೃದ್ಧಿ ಕಾಮಗಾರಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜ್-ವಿಜೆಎನ್-01) (ಕ್ರಿಯಾ ಯೋಜನೆ ಸಂಖ್ಯೆ. 56, 57, 59, 63 & 64). ಟೆಂಡರಿಗಿಟ್ಟ ಮೊತ್ತ: ರೂ. 1100.00 ಲಕ್ಷಗಳು. ಇಎಂಡಿ: ರೂ. 13.10 ಲಕ್ಷಗಳು.
2.	ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಹುಪಯೋಗಿ ಕಟ್ಟಡ, ಆಟದ ಮೈದಾನಗಳ ಸಮಗ್ರ ಅಭಿವೃದ್ಧಿ ಕಾಮಗಾರಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜ್-ವಿಜೆಎನ್-02) (ಕ್ರಿಯಾ ಯೋಜನೆ ಸಂಖ್ಯೆ. 62, 65 & 53. ಟೆಂಡರಿಗಿಟ್ಟ ಮೊತ್ತ: ರೂ. 1140.00 ಲಕ್ಷಗಳು. ಇಎಂಡಿ: ರೂ. 13.58 ಲಕ್ಷಗಳು.
3.	ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಉದ್ಯಾನವನ ಇತ್ಯಾದಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಪ್ಯಾಕೇಜ್-ವಿಜೆಎನ್-03) (ಕ್ರಿಯಾ ಯೋಜನೆ ಸಂಖ್ಯೆ 49, 50 ಮತ್ತು 51). ಟೆಂಡರಿಗಿಟ್ಟ ಮೊತ್ತ: ರೂ. 1200.00 ಲಕ್ಷಗಳು. ಇಎಂಡಿ: ರೂ. 14.30 ಲಕ್ಷಗಳು.
4.	ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಹುಪಯೋಗಿ ಕಟ್ಟಡ, ಮಳೆನೀರು ಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು (ಪ್ಯಾಕೇಜ್-ವಿಜೆಎನ್-07) (ಕ್ರಿಯಾ ಯೋಜನೆ ಸಂಖ್ಯೆ 61, 60, 52, 54, 55 ಮತ್ತು 58). ಟೆಂಡರಿಗಿಟ್ಟ ಮೊತ್ತ: ರೂ. 1560.00 ಲಕ್ಷಗಳು. ಇಎಂಡಿ: ರೂ. 15.00 ಲಕ್ಷಗಳು.

1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ದಿನಾಂಕ : 13.11.2025ರ ಸಂಜೆ 5.30ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು 2) ಬಿಡ್ ಪೂರ್ವಭಾವಿ ಸಭೆ: 20.11.2025 ರಂದು 16.00 ಗಂಟೆಗೆ, ಮುಖ್ಯ ಅಭಿಯಂತರರು, ಮಲ್ಲೇಶ್ವರಂ ವಲಯ, ಪಾಲಿಕೆ ಸೌಧ ಕಟ್ಟಡ, 1ನೇ ಮಹಡಿ, 14ನೇ ಅಡ್ಡರಸ್ತೆ, ಚಂದ್ರ ಬಡಾವಣೆ, ಬೆಂಗಳೂರು-560072. ಇವರ ಕಚೇರಿಯಲ್ಲಿ. 3) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 28.11.2025 ರಂದು 17.30 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29.11.2025 ರಂದು 17.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದು
ಸಹಿ/-ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬೆಂಪನಪಾ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಜಯನಗರ ವಿಭಾಗ, ನಂ.44, 18ನೇ ಮುಖ್ಯರಸ್ತೆ, 39ನೇ ಕ್ರಾಸ್, ಜಯನಗರ 4ನೇ ಬ್ಲಾಕ್, ಬೆಂಗಳೂರು-560041.
ನಂ.: ಕಾಪಾ/ಬಿಎಸ್‌ಸಿಸಿ/ಜೆಎನ್/ಟೆಂಡರ್/01/2025-26 ದಿನಾಂಕ : 07.11.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಎರಡು ಟೆಂಡರ್ ಡಾಕ್ಯೂಮೆಂಟ್ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ) ಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ/ ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಯ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಜಯನಗರ ವಿಭಾಗದ ಶಾಕಂಬರಿನಗರ ಉಪವಿಭಾಗದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಡಾಂಬರು ಹಾಕುವ ಕಾಮಗಾರಿಗಳ ಸುಧಾರಣೆ (ಜಿ.ಒ. ಆದೇಶ ಸಂಖ್ಯೆ: ಯುಡಿಡಿ 474 ಎಂಎನ್‌ವೈ 2025 (ಎಫ್), ಬೆಂಗಳೂರು, ದಿನಾಂಕ: 03.11.2025,) ಜಿ.ಒ. [ಅನುಬಂಧ-5] ಕ್ರಮ ಸಂಖ್ಯೆ 1, 2, 3). ಕಾಮಗಾರಿ ಅಂದಾಜು ವೆಚ್ಚ: ರೂ. 1325.00 ಲಕ್ಷಗಳು, ಇಎಂಡಿ ಮೊತ್ತ : (ಆನ್‌ಲೈನ್ ಪಾವತಿ ಮೂಲಕ ರೂ. 5.00 ಲಕ್ಷ ಮತ್ತು ಬಿಜಿ ಮೂಲಕ ರೂ. 8.25 ಲಕ್ಷ).
2.	ಜಯನಗರ ವಿಭಾಗದ ಜೆ.ಪಿ. ನಗರ ಉಪವಿಭಾಗದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಡಾಂಬರು ಹಾಕುವ ಕಾಮಗಾರಿಗಳು ಮತ್ತು ಇತರ ಅಭಿವೃದ್ಧಿ ಕಾರ್ಯಗಳ ಸುಧಾರಣೆ (ಜಿ.ಒ. ಆದೇಶ ಸಂಖ್ಯೆ: ಯುಡಿಡಿ 474 ಎಂಎನ್‌ವೈ 2025 (ಎಫ್), ಬೆಂಗಳೂರು, ದಿನಾಂಕ: 03.11.2025,) ಜಿ.ಒ [ಅನುಬಂಧ-5] ಕ್ರಮ ಸಂಖ್ಯೆ 4, 5, 6). ಕಾಮಗಾರಿ ಅಂದಾಜು ವೆಚ್ಚ: ರೂ. 1175.00 ಲಕ್ಷಗಳು, ಇಎಂಡಿ ಮೊತ್ತ : (ಆನ್‌ಲೈನ್ ಪಾವತಿ ಮೂಲಕ ರೂ. 5.00 ಲಕ್ಷ ಮತ್ತು ಬಿಜಿ ಮೂಲಕ ರೂ. 6.75 ಲಕ್ಷ).

ಟೆಂಡರ್‌ನ ಕಾರ್ಯಸೂಚಿ: (1) ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮಾರ್ಗಸೂಚಿಗಳ ಪ್ರಕಾರ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 28.11.2025 ರಂದು ಸಂಜೆ 4:00 ಗಂಟೆಯೊಳಗೆ ಅಥವಾ ಮೊದಲು ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು ಸಲ್ಲಿಸಬೇಕು. (2) ಬಿಡ್ ಪೂರ್ವ ಸಭೆಯು ದಿನಾಂಕ 17.11.2025 ರಂದು ಮಧ್ಯಾಹ್ನ 15:00 ಗಂಟೆಗೆ ಮುಖ್ಯ ಎಂಜಿನಿಯರ್, ಜಯನಗರ ವಲಯ (ವಲಯ-1), ಬೆಂಗಳೂರು ದಕ್ಷಿಣ ನಗರ ನಿಗಮ, 9ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011 ಅವರ ಕಚೇರಿಯಲ್ಲಿ ನಡೆಯಲಿದೆ. (3) ತಾಂತ್ರಿಕ ಬಿಡ್‌ಗಳನ್ನು ಜಯನಗರ ವಿಭಾಗದ ಕಾರ್ಯಪಾಲಕ ಅಭಿಯಂತರವರ ಕಚೇರಿಯಲ್ಲಿ https://kppp.karnataka.gov ವೆಬ್‌ಸೈಟ್‌ನಲ್ಲಿ ದಿನಾಂಕ: 29.11.2025 ರಂದು ಅಥವಾ ನಂತರ 16:05 ಗಂಟೆಗೆ ತೆರೆಯಲಾಗುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ

ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಡಿಸಿಆರ್‌ಇ ಕಛೇರಿ
ನಂ. 1, ತಾಂತ್ರಿಕ ಶಿಕ್ಷಣ ಭವನ, ಮೊದಲನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001. ದೂರವಾಣಿ ಸಂಖ್ಯೆ : 080: 22268723, 22260827,
ಇ-ಮೇಲ್: dcrebangalore@gmail.com, digpcre@ksp.gov.in, aohqdcre@ksp.gov.in.ao
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಟೆಂಡರ್ ಸಂಖ್ಯೆ : KSP/2025-26/IND0366 ದಿನಾಂಕ: 30.10.2025
ಪೊಲೀಸ್ ಮಹಾ ನಿರ್ದೇಶಕರು, ಡಿಸಿಆರ್‌ಇ, ಬೆಂಗಳೂರು ರವರಿಂದ ರಾಜ್ಯಾದ್ಯಂತ ಡಿಸಿಆರ್‌ಇ ಘಟಕಕ್ಕೆ ಅವಶ್ಯವಿರುವ ರಾಜ್ಯ ನಕ್ಷೆ, ವಲಯ ನಕ್ಷೆ, ಜಿಲ್ಲಾ ನಕ್ಷೆ, ಮತ್ತು ತಾಲ್ಲೂಕು ನಕ್ಷೆ, ಡಿಸಿಆರ್‌ಇ ಎಂಬ್ಲಾಮ್ ಅರ್ಗನೈಷನ್ ಚಾರ್ಟ್, ದೊಡ್ಡ ಮತ್ತು ಚಿಕ್ಕ ಬಾವುಟ (ರಾಷ್ಟ್ರೀಯ ಮತ್ತು ಇಲಾಖಾ ಬಾವುಟ) Rank & Badges chart ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಇಎಂಡಿ ಮೊತ್ತ ರೂ 1,50,000 ರಂತೆ ಟೆಂಡರ್ ಸಲ್ಲಿಸಲು ದಿನಾಂಕ: 30.10.2025 ರಿಂದ 14.11.2025 ರವರೆಗೆ ಇತರೆ ಮಾಹಿತಿ ಹಾಗೂ ಹೆಚ್ಚಿನ ವಿವರಗಳಿಗಾಗಿ https://kppp/karnataka.gov.in. ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/-
ಪೊಲೀಸ್ ಅಧೀಕ್ಷಕರು (ಆಡಳಿತ),
ವಾಸಾಸಂಇ/ವಾ.ಪ್ರ/3643/ಎಸ್‌ಎಸ್‌ಸಿ/2025-26 ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು-560009
e-mail: prcdeputysecretaryadm@gmail.com ದೂರವಾಣಿ 080-22010422
ಸಂಖ್ಯೆ: RDPR/2025-26/SE2839/CALL-2 ದಿನಾಂಕ: 11.11.2025
ಟೆಂಡರ್ ಪ್ರಕಟಣೆ
ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯಕ್ಕೆ 2025-26ನೇ ಸಾಲಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆಯನ್ನು ಪಡೆಯಲು ಕೆಪಿಪಿಪಿ ತಂತ್ರಾಂಶದಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯನ್ನು ಸಲ್ಲಿಸುವ ಪ್ರಕ್ರಿಯೆಯು ದಿನಾಂಕ: 11.11.2025 ರಂದ ಪ್ರಾರಂಭವಾಗಿ ದಿನಾಂಕ 26.11.2025 ರಂದು ಮುಕ್ತಾಯಗೊಳ್ಳಲಿದೆ. ಇಚ್ಛೆಯುಳ್ಳ ಟೆಂಡರ್‌ದಾರರು https://kppp.karnataka.gov.in ಮೂಲಕ ದಿನಾಂಕ: 26.11.2025ರ ಅಪರಾಹ್ನ 5:30 ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಆಯುಕ್ತಾಲಯವನ್ನು ಸಂಪರ್ಕಿಸಬಹುದಾಗಿದೆ.
ಸಹಿ/-
ಉಪ ಕಾರ್ಯದರ್ಶಿ (ಆಡಳಿತ)
ಪಂಚಾಯತ್‌ರಾಜ್ ಆಯುಕ್ತಾಲಯ
DIPR/CP/YC/3688/2025-26 ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು

ಬೆಂಗಳೂರು ಪಶ್ಚಿಮ ನಗರ ಪಾಲಿಕೆ-ಮಲ್ಲೇಶ್ವರಂ ವಲಯ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಮಲ್ಲೇಶ್ವರಂ ವಿಭಾಗ, 2ನೇ ಅಡ್ಡರಸ್ತೆ, ಜಲದರ್ಶಿನಿ ಬಡಾವಣೆ, ಎಂಎಸ್‌ಆರ್ ನಗರ, ಮತ್ತಿಕೆರೆ, ಬೆಂಗಳೂರು-54.
ಸಂಖ್ಯೆ: ಕಾಅ/ಮಲ್ಲೇ/ಕೆಪಿಪಿ/05/2025-26 ದಿನಾಂಕ: 10-11-2025
ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್: https://kppp.karnataka.gov.in
ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಬೆಂಪನಪಾ ರವರು ಬೃಬೆಂಮಪಾ ಅಥವಾ ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಇತರೆ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1)	ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್‌ನ ಅಡ್ಡ ರಸ್ತೆಗಳು, ಒಳ ಚರಂಡಿಗಳು ಮತ್ತು ಇತರ ಸಂಬಂಧಿತ ಕಾಮಗಾರಿಗಳ ಸಮಗ್ರ ಅಭಿವೃದ್ಧಿ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿರ್ಮಾಣ ಕಾಮಗಾರಿ.	1985.00	19,85,000/-

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳನ್ನು ದಿನಾಂಕಃ 13-11-2025ರ ಸಂಜೆ 5.30 ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕಃ 28-11-2025ರ ಸಂಜೆ 5.30 ಗಂಟೆಯವರೆಗೆ. 3) ಪೂರ್ವ-ಬಿಡ್ ಸಭೆಯು ಮುಖ್ಯ ಅಭಿಯಂತರರು-ಮಲ್ಲೇಶ್ವರಂ ವಲಯ, ಬೆಂಪನಪಾ, ಪಾಲಿಕೆ ಸೌಧ ಕಟ್ಟಡ, 1ನೇ ಮಹಡಿ, 14ನೇ ಅಡ್ಡರಸ್ತೆ, ಚಂದ್ರ ಬಡಾವಣೆ, ಬೆಂಗಳೂರು-560 072 ಇಲ್ಲಿ ದಿನಾಂಕ: 20-11-2025ರ ಸಂಜೆ 4.00 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 29-11-2025ರ ಸಂಜೆ 5.30 ಗಂಟೆಗೆ. 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕವನ್ನು ತಿಳಿಸಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಮಲ್ಲೇಶ್ವರಂ ವಿಭಾಗ, ಮಲ್ಲೇಶ್ವರಂ ವಲಯ, ಬೆಂಪನಪಾ.

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332-225213.
ಸಂಖ್ಯೆ: ಕನೀನಿನಿ/ಜಿಆರ್‌ಬಿಸಿಸಿವಿ-3/ಡಿಬಿ/ಲೆ.ಶಿ.4701 ಎಂ&ಎಂಆಯ್/ಟೆಂಡರ್/2025-26/04 ದಿನಾಂಕ:-10-11-2025
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ ಚಿಛಿಣ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ನಿಯಮದನ್ವಯ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ ಕರೆಯಲಾಗಿದೆ.
ಒಟ್ಟು ಕಾಮಗಾರಿಗಳು-03. ಇಂಡೆಂಟ್ ನಂಬರುಗಳು: 3368, 3384 & 1688. ಕಾಮಗಾರಿಗಳಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು (ಜಿ.ಎಸ್.ಟಿ. ಹೊರತುಪಡಿಸಿ) ರೂ.41.46 ಲಕ್ಷದಿಂದ ರೂ.317.35 ಲಕ್ಷಗಳು ಇರುತ್ತವೆ.
ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ನಂ.3, ಗೋಕಾಕ ಕಚೇರಿಯಲ್ಲಿ ಟೆಂಡರ ಕುರಿತು ಪ್ರಿ-ಬಿಡ್ ಮೀಟಿಂಗ್ (ರೂ.100.00 ಲಕ್ಷ ಮೇಲ್ಪಟ್ಟ ಕಾಮಗಾರಿಗೆ ಮಾತ್ರ) ದಿ:17-11-2025, 11.00 ಗಂಟೆಗೆ ಜರುಗಿಸಲಾಗುವದು ಹಾಗೂ ಟೆಂಡರ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ 18-11-2025,17.00 ಗಂಟೆಯವರೆಗೆ. ಟೆಂಡರಗಳನ್ನು ದಿ: 13-11-2025 ರಿಂದ ದಿ:21-11-2025 ರಂದು 16.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಸದರಿ ಕಾಮಗಾರಿಗಳ ತಾಂತ್ರಿಕ ಬಿಡ್ನ್ನು ಈ ಕಚೇರಿಯಲ್ಲಿ ತೆರೆಯುವ ದಿನಾಂಕ:24-11-2025,11.00 ಗಂಟೆಗೆ. ಆರ್ಥಿಕ ಬಿಡ್ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.
ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು.
ಈ ಕಚೇರಿ ಇ-ಮೇಲ್ : knnlgrbccd3.gokak@gmail.com
ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ-ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
DIPR/BGM/RO-NO-1280/KSMCA/2025-26 ಕನೀನಿನಿ ಜಿಆರ್‌ಬಿಸಿಸಿ ವಿಭಾಗ ನಂ-3, ಗೋಕಾಕ.

ಮಕ್ಕಳಾಗೋಣ ಮನದಲ್ಲಿ

• ರಮ್ಯಾ ಶ್ರೀಹರಿ

ನಮ್ಮೊಳಗಿನ ಮಗುತನವನ್ನು ಉಳಿಸಿಕೊಳ್ಳದಿದ್ದರೆ ಬದುಕಿಗೆ ಅತ್ಯವಶ್ಯಕವಾದ ಬಾಂಧವ್ಯಗಳನ್ನು ಕಟ್ಟಿಕೊಳ್ಳುವುದರಲ್ಲಿ ನಾವು ವಿಫಲರಾಗುತ್ತೇವೆ.

ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದೊಳಗೂ ಒಂದು ಪೋಷಕ (inner parent), ಒಂದು ವಯಸ್ಕ (adult) ಒಂದು ಮಗು (inner child) ಅಡಕವಾಗಿರುತ್ತಾರೆ ಎನ್ನುವುದು ಮನೋವೈದ್ಯ ಎರಿಕ್ ಬರ್ನ್‌ನ ಅಭಿಪ್ರಾಯ. ಅಂದರೆ ಪ್ರೌಢಾವಸ್ಥೆಯನ್ನು ತಲುಪಿದ ಪ್ರತಿಯೊಬ್ಬ ವ್ಯಕ್ತಿಯೊಳಗೂ ಈ ಮೂರು ದನಿಗಳು, ಮೂರು ಸ್ಥಿತಿಗಳು ಅಥವಾ ಪ್ರಪಂಚವನ್ನು ಕಾಣುವ ಈ ಮೂರು ದೃಷ್ಟಿಗಳು ಕೆಲಸ ಮಾಡುತ್ತಿರುತ್ತವೆ.

ನಮ್ಮೊಳಗಿನ ಪೋಷಕ ನಮ್ಮ ನಿಜದ ಪೋಷಕರ ವ್ಯಕ್ತಿತ್ವವನ್ನೇ ಅಂತರ್ಗತಗೊಳಿಸಿಕೊಂಡಿರುವ ಒಂದು ಪಾತ್ರ. ನಮ್ಮ ನಿಜದ ಪೋಷಕರ ಮಾತು, ಹಾವ, ಭಾವ, ದನಿ ಎಲ್ಲವೂ ನಮ್ಮ ಆಂತರ್ಯದ ಪೋಷಕನಿಗೂ ಇರುತ್ತದೆ. ರಕ್ಷಣೆ ಒದಗಿಸುವುದು, ಬೆಳೆಸುವುದು, ಪೋಷಿಸುವುದು, ಮಾರ್ಗದರ್ಶನ ಮಾಡುವುದು ಹಾಗೆಯೇ ಶಿಕ್ಷಿಸುವುದು, ಆದೇಶ ಅನುಮೋದನೆ ನೀಡುವುದು, ನಿರ್ಬಂಧಗಳನ್ನು ಹೇರುವುದು – ಎಲ್ಲವೂ ನಮ್ಮ ಪೋಷಕರ ದನಿಯನ್ನು ಅಂತರ್ಗತಗೊಳಿಸಿಕೊಂಡಿರುವ ನಮ್ಮೊಳಗಿನ ಪೋಷಕನ ಕೆಲಸವಾಗಿರುತ್ತದೆ.

ನಮ್ಮೊಳಗಿನ ವಯಸ್ಕಪಾತ್ರವು ನಾವು ತರ್ಕಬದ್ಧವಾಗಿ ಆಲೋಚಿಸಲು, ಸುಸಂಬದ್ಧವಾಗಿ ಮಾತನಾಡಲು, ಸಂಯಮದಿಂದ ವರ್ತಿಸಲು ಕಾರಣವಾಗಿರುತ್ತದೆ. ಹಾಗೆಯೇ ಪ್ರತಿಯೊಬ್ಬರ ಆಂತರ್ಯದಲ್ಲೂ ಒಂದು ಮಗುವಿನ ದನಿ ಅಥವಾ ಪಾತ್ರವಿರುತ್ತದೆ. ಆ ಮಗುವಿಗೂ ಪೋಷಕನಿಗಿರುವಂತೆಯೇ ಎರಡು ಮುಖಗಳಿರುತ್ತವೆ. ಆ ಮಗುವಿನ ಒಂದು ಮುಖ ಸೃಜನಶೀಲತೆ, ಕುತೂಹಲ, ಲವಲವಿಕೆ, ಮುಗ್ಧತೆ, ಸಂಭ್ರಮ, ಸಡಗರ, ಹಾಸ್ಯ, ನಗು ಆದರೆ, ಅದರ ಇನ್ನೊಂದು ಮುಖ ಭಯ, ಸಿಟ್ಟು, ಹಟ, ವಾಸ್ತವವನ್ನು ಅರ್ಥಮಾಡಿಕೊಳ್ಳದೆ ಎಲ್ಲವೂ ತನ್ನ ಮೂಗಿನ ನೇರಕ್ಕೆ ನಡೆಯಬೇಕೆಂಬ ರಗಳೆ, ಎಲ್ಲರೂ ತನಗೆ ನೋವುಂಟುಮಾಡಲೇ ಇದ್ದಾರೆ ಎಂಬ ಭ್ರಮೆ ಹೀಗೆ.

ಬೆಳೆದು ದೊಡ್ಡವರಾದ ಎಲ್ಲರಲ್ಲೂ ಬಾಲಿಶವಾದ ವರ್ತನೆಗಳೂ ಇರುತ್ತವೆ; ಮಗುವಿನ ಸಹಜ ಸಂಭ್ರಮ ಉಲ್ಲಾಸಗಳೂ ಇರುತ್ತವೆ. ಮಗುವಿಗೆ ಸರಿಯಾದ ಸಮಯದಲ್ಲಿ ಪೋಷಕರ ಪ್ರೀತಿ, ಗಮನ ಸಿಕ್ಕಿಲ್ಲದಿರುವುದೇ ಬಾಲಿಶ ವರ್ತನೆಗಳನ್ನು ರೂಢಿಸಿಕೊಳ್ಳಲು ಕಾರಣವಾಗಿರುತ್ತದೆ. ಉದಾಹರಣೆಗೆ, ಸಣ್ಣಸಣ್ಣ ವಿಷಯಗಳಿಗೂ ಅತಿ ಕೋಪಮಾಡಿಕೊಳ್ಳುವುದು ಬಾಲಿಶ ವರ್ತನೆಯಾದರೆ, ಅದಕ್ಕೆ ಕಾರಣ ಮಗುವಿಗೆ ಮುಖ್ಯವೆನಿಸುವ ಆದರೆ ದೊಡ್ಡವರಿಗೆ ಸಣ್ಣದು ಎನಿಸುವ ವಿಷಯಗಳಿಗೆ ಪೋಷಕರ 'attention' – ಗಮನ – ಸಿಕ್ಕಿರುವುದಿಲ್ಲವಾದ್ದರಿಂದ ಆ ಸಣ್ಣಸಣ್ಣ ವಿಷಯಗಳನ್ನು ಹೇಗೆ ಮೀರಿ ಹೋಗಬೇಕೆನ್ನುವುದು ಮಗುವಿಗೆ ಗೊತ್ತಾಗದೇ ಹೋಗಿರುತ್ತದೆ. ಹೀಗಾಗಿ ಒಂದು ಕಡೆ ನಮ್ಮ ವ್ಯಕ್ತಿತ್ವದೊಳಗಿನ ಮಗು ನೈಜ ಜೀವಂತಿಕೆಯ ಪ್ರತಿರೂಪವಾದರೆ ಮತ್ತೊಂದು ಕಡೆ ಪೋಷಕರ ವರ್ತನೆಗೆ ಪ್ರತಿಸ್ಪಂದಿಯಾಗಿ ತಾನು ರೂಢಿಸಿಕೊಂಡ ನಡೆನುಡಿಗಳ ಪ್ರತಿರೂಪವಾಗಿರುತ್ತದೆ.

ನಮ್ಮೊಳಗಿನ ಮಗು ತನ್ನ ಮಗುತನವನ್ನು ಉಳಿಸಿಕೊಳ್ಳದಿದ್ದರೆ ಬದುಕಿಗೆ ಅತ್ಯವಶ್ಯಕವಾದ ಬಾಂಧವ್ಯಗಳನ್ನು ಕಟ್ಟಿಕೊಳ್ಳುವುದರಲ್ಲಿ ನಾವು ವಿಫಲರಾಗುತ್ತೇವೆ. ಕೇವಲ ಹೊಂದಾಣಿಕೆ, ಕರ್ತವ್ಯ, ಜವಾಬ್ದಾರಿ, ಕೆಲಸ, ಸಂಪಾದನೆ, ನಮ್ಮ ಐಡೆಂಟಿಟಿ ಇವುಗಳಿಂದಲೇ ಬಾಂಧವ್ಯವನ್ನು ಸೃಜಿಸಿಕೊಳ್ಳಲಾಗುವುದಿಲ್ಲ. ಅಂತಹ ಬಾಂಧವ್ಯ ಹೆಸರಿಗೆ ಇದ್ದರೂ ಬಲು ಸಪ್ಪೆಯಾಗಿರುತ್ತದೆ, ಬಲು ಬೇಗ ಬದುಕಿನ ಬೇಗೆಯಲ್ಲಿ ಬಾಡಿಹೋಗುತ್ತದೆ. ಸಂಬಂಧಗಳಲ್ಲಿ ಆತ್ಮೀಯತೆ, ಸಂಭ್ರಮ, ಉತ್ಸಾಹ, ಮೋಹಕತೆ, ತೀವ್ರವಾದ ಪ್ರೇಮ, ನಗು, ತುಂಟಾಟ, ಹಾಸ್ಯ, ಸದಾ ಜೊತೆಜೊತೆಗೆ ನಲಿಯುತ್ತಿರಬೇಕೆಂಬ ಹಂಬಲ, ಪರಸ್ಪರರ ಬಗೆಗೆ ಕುತೂಹಲ ತುಂಬಿದ ಆಕರ್ಷಣೆ, ಬಿಚ್ಚುಮನಸ್ಸಿನ ಮಾತುಕತೆ – ಹೀಗೆ ಬದುಕು ಮತ್ತು ಬಾಂಧವ್ಯವನ್ನು ಮನಸ್ಸಿನ ಸಂತೋಷಕ್ಕಾಗಿ, ನೆಮ್ಮದಿಗಾಗಿ ಕಟ್ಟಿಕೊಳ್ಳಬೇಕಾದರೆ ನಮ್ಮೊಳಗಿನ 'ಮಗು' ನಲಿಯುತ್ತಿರಬೇಕು.

ಜೀವನವನ್ನು ನಿತ್ಯೋತ್ಸವವಾಗಿಸುವ ಕಲೆ, ಸಂಗೀತ, ಸಾಹಿತ್ಯ, ನೃತ್ಯ, ವಿಜ್ಞಾನ ಎಲ್ಲದಕ್ಕೂ ಮೂಲವಾದ ಸೃಜನಶೀಲತೆ, ವಿಸ್ಮಯ, ಕುತೂಹಲ, ಎಲ್ಲವನ್ನೂ ತಿಳಿಯಬೇಕೆಂಬ ಕಾತುರದ ಮೂಲಸ್ರೋತ್ರ 'ನಮ್ಮೊಳಗಿನ ಮಗು'ತನವೇ ಆಗಿದೆ. ಜೀವನವನ್ನು ನಾಟಕವೆಂಬಂತೆ, ಆಟವೆಂಬಂತೆ, ಲೀಲೆ ಎಂಬಂತೆ ನೋಡಬೇಕೆಂದು ಕವಿಗಳೂ ಋಷಿಗಳೂ ಹೇಳುವುದನ್ನು ಮಕ್ಕಳು ಬಾಳಿ ತೋರಿಸುತ್ತಾರೆ. ಮಗು ಪ್ರಪಂಚಕ್ಕೆ ಸ್ಪಂದಿಸುವುದೇ ಆಟದ ಮೂಲಕ, 'ಬಾ ಆಡಿ ಸಂತಸಪಟ್ಟು ನಲಿಯೋಣ' ಎನ್ನುವುದೇ ಮಗು ಸದಾ ಪೋಷಕರಿಗೆ ಹೇಳದೆಯೂ ಹೇಳುವ ಮಾತು.

ನಮ್ಮೊಳಗಿನ ಮಗುವಿಗೆ ಪ್ರೀತಿ ಕಡಿಮೆ ದೊರೆತಷ್ಟೂ ಅದು ನಮ್ಮ ತರ್ಕಬದ್ಧ ಆಲೋಚನೆಯನ್ನು, ನಮ್ಮ ವಿವೇಕವನ್ನು ಕದಡಿ ರಾಡಿಯಾಗಿಸುತ್ತದೆ. ನಮ್ಮ ನಿರ್ಧಾರಗಳು ತಾರ್ಕಿಕವಾಗಿ ವಾಸ್ತವಕ್ಕೆ ಸರಿಹೊಂದುವಂತೆ ಇರುವ ಬದಲು ನಮ್ಮೊಳಗಿನ ಪ್ರೀತಿವಂಚಿತ ಮಗುವಿನ ಭಾವನಾತ್ಮಕ ಅವಶ್ಯಕತೆಗಳನ್ನು ತೀರಿಸುವ ನಿಟ್ಟಿನಲ್ಲಿ ತೆಗೆದುಕೊಂಡದ್ದಾಗಿರುತ್ತದೆ. ನಾವು ಪೋಷಕರಾಗಿ ನಮ್ಮ ಮಕ್ಕಳ ಜೊತೆ ಮಗುವಾಗಿ ಬೆರೆತು ಆನಂದಿಸುವುದಕ್ಕೂ ನಮ್ಮೊಳಗಿನ ಮಗು ಜೀವಂತಿಕೆಯಿಂದಿರಬೇಕು. ಬಾಲ್ಯದ ಕಾಲ ಕಳೆದುಹೋದರೂ ನಮ್ಮೊಳಗಿನ ಮಗು ಕಳೆದುಹೋಗಿರುವುದಿಲ್ಲ ಎನ್ನುವುದಾದರೆ ಆ ಆಂತರ್ಯದ ಮಗುವನ್ನು ಸಂತೋಷವಾಗಿಟ್ಟುಕೊಳ್ಳುವುದು ಮತ್ತು ಅದರ ಅಭಿವ್ಯಕ್ತಿಯನ್ನು ಪುರಸ್ಕರಿಸುವುದು ಕ್ಷೇಮವಲ್ಲವೇ? ಆ ಪ್ರಯತ್ನಕ್ಕೆ ನೀರೆರೆಯುವ ಕೆಲವು ಆಲೋಚನೆಗಳು ಇಲ್ಲಿವೆ:

- ಮಕ್ಕಳು ತಮ್ಮ ಭಾವನೆಗಳನ್ನು ಮುಚ್ಚಿಡುವುದಿಲ್ಲ. ಆದರೆ ಕೆಲವು ಮಾತುಗಳನ್ನು, ಭಾವಗಳನ್ನು ಮುಚ್ಚಿಡುವುದು ಪ್ರೌಢಾವಸ್ಥೆಯ ನಮಗೆ ಅನಿವಾರ್ಯ; ಅದು ಲೋಕರೂಢಿ. ಹಾಗಿದ್ದರೂ ನಮ್ಮ ಮೂಲಭಾವನೆಗಳು ಯಾವುವು, ಅವನ್ನು ಮರೆಮಾಚಲು ನಾವು ಕಂಡುಕೊಂಡಿರುವ ಮುಸುಕು ಭಾವನೆಗಳು (racket feelings) ಯಾವುವು ಎನ್ನುವ ಅರಿವಿದ್ದು, ಆದಷ್ಟೂ ಮೂಲ ಭಾವನೆಗಳಿಗೆ ನಿಷ್ಠವಾಗಿ ನಮ್ಮ ಅಭಿವ್ಯಕ್ತಿ ಇದ್ದರೆ ಬಾಂಧವ್ಯಕ್ಕೆ ಅದು ಸಹಕಾರಿ. ಉದಾಹರಣೆಗೆ ದುಃಖವನ್ನು ತೋರ್ಪಡಿಸಿದಾಗ ದುರ್ಬಲರಾಗಿ ಕಾಣುವುದರಿಂದ ದುಃಖವನ್ನು ಸಿಟ್ಟಿನಿಂದ ಮರೆಮಾಚುವ ಬದಲು ದುಃಖವನ್ನೇ ಅನುಭವಿಸಿ ಅದನ್ನೇ ವಿವೇಕದಿಂದ ಅಭಿವ್ಯಕ್ತಿಸುವುದನ್ನು ಕಲಿತರೆ ಹೇಗೆ? ಆಂತರ್ಯದಲ್ಲಿನ ಮಗುವಿಗೆ ತೆರೆದ ಮನದ ಭಾವನೆಗಳನ್ನು ಅಭಿವ್ಯಕ್ತಿಸಲು ಅನುಮತಿ ಕೊಡಬೇಕು.
- ಸದಾ ಕಲ್ಪನಾಲೋಕದಲ್ಲಿ ವಿಹರಿಸುವುದು ಮಕ್ಕಳ ಸ್ವಭಾವ. ಪ್ರತಿಯೊಂದು ವಸ್ತುವಿಗೂ ಒಂದು ಮನಸ್ಸಿದೆ, ಮಾತಿದೆ ಎನ್ನುವುದು ಮಕ್ಕಳ ನಂಬಿಕೆ. ಮಕ್ಕಳು ಮುರಿದ ಕೋಲನ್ನು ಕುದುರೆ ಮಾಡಿ ಆಟವಾಡಬಲ್ಲರು, ಮರಗಳನ್ನು ದೇವರು ಮಾಡಿ, ಅಜ್ಜನನ್ನು ಋಷಿ ಮಾಡಿ, ತನ್ನನ್ನು ಚಿಟ್ಟೆಯಾಗಿ, ಹಕ್ಕಿಯಾಗಿ, ಹುಳವಾಗಿ, ಮೀನಾಗಿ, ಹೂವಾಗಿ ಏನೆಲ್ಲಾ ಆಗಿ ಕಲ್ಪಿಸಿಕೊಂಡು ಅದಕ್ಕೆ ತಕ್ಕಂತೆ ಆಟವಾಡಬಲ್ಲರು. ನಾವೂ ನಮ್ಮೊಳಗಿನ ಕಲ್ಪನೆಗಳನ್ನು ಕಲೆಯ ಮೂಲಕ ಜೀವಂತವಾಗಿಟ್ಟುಕೊಳ್ಳುವುದು ನಮ್ಮೊಳಗಿನ ಮಗುವಿಗೆ ಖುಷಿ ತರುತ್ತದೆ.
- ಎಷ್ಟೋ ಜನರು ತಮ್ಮಲ್ಲಿನ ಮಗುವನ್ನು ಸಂತೋಷವಾಗಿಟ್ಟುಕೊಳ್ಳಲೇ ಪ್ರಕೃತಿಯ ಸಹವಾಸ ಮಾಡುತ್ತಾರೆ. ಮತ್ತೆ ಮಕ್ಕಳಂತೆ ಆನೆ, ಹುಲಿ, ಸಿಂಹ, ಕರಡಿ, ಮರಗಿಡಗಳು, ಕಾಡು, ತೊರೆ, ಜಲಪಾತಗಳ ನೋಡುತ್ತಾ ಓಡಾಡುತ್ತಾ ನಮ್ಮನ್ನು ನಾವೇ ಒಂದು ಚಿಕ್ಕ ಮಗುವನ್ನು ಮಾತನಾಡಿಸುವಂತೆ ಮಾತಾಡಿಸುತ್ತಾ ಈ ಓಡಾಟವೆಲ್ಲಾ ನಿನಗಾಗಿಯೇ ಮಗು, ಖುಷಿಯಾಯಿತೆ – ಎಂದು ಹೇಳಿಕೊಂಡಾಗ ನಿಜಕ್ಕೂ ನಿಸರ್ಗದ ಮಡಿಲು ಅಮ್ಮನ ಮಡಿಲಿನಷ್ಟೇ ಜೀವದಾಯಿನಿ ಎಂದೆನಿಸದೆ ಇರದು.
- ಬಾಂಧವ್ಯಗಳಲ್ಲಿ ತೊಡಗಿಕೊಂಡಾಗ ನಮ್ಮ ಮಗುತನವನ್ನು ಪರಸ್ಪರರು ಹೊರತಂದರೆ, 'ನಮ್ಮೊಳಗಿನ ಮಗು'ವಿನ ಮೂಲಕ ಬಾಂಧವ್ಯವನ್ನು ಬೆಸೆದುಕೊಂಡರೆ, ಆ ಬಾಂಧವ್ಯ ಆಳವಾಗಿಯೂ, ಸಹಜವಾಗಿಯೂ, ಗಟ್ಟಿಯಾಗಿಯೂ ಇರುತ್ತದೆ. ಸಂತೋಷವೇ ಮಕ್ಕಳ ಸಹಜ ಪ್ರವೃತ್ತಿ, ಯಾವುದರಿಂದ ಸಂತೋಷ? ಸಂತೋಷವಾಗಿರುವುದರಿಂದ ಏನು? ಎಂಬ ಪ್ರಶ್ನೆಗಳೇ ಅವರಿಗಿಲ್ಲ. ನಾವೂ ಹಾಗೆಯೇ ಬಾಂಧವ್ಯವು ಸಹಜ ಸಂತೋಷವನ್ನು ಇಮ್ಮಡಿಗೊಳಿಸಲು ಇರುವಂಥದ್ದು. ❖

ಮಕ್ಕಳನ್ನು ಕಾಡುವ ನ್ಯುಮೋನಿಯಾ

• ಡಾ. ಕುಶ್ವಂತ್ ಕೋಳಿಬೈಲು

ಮಕ್ಕಳಲ್ಲಿ ಶ್ವಾಸಕೋಶದ ಸೋಂಕಿನಿಂದ ಉಂಟಾಗುವ ನ್ಯುಮೋನಿಯಾ ಕಾಯಿಲೆಯು ಪ್ರತಿ ವರ್ಷ ಭಾರತದಲ್ಲಿ ಲಕ್ಷಾಂತರ ಮಕ್ಕಳ ಸಾವಿಗೆ ಕಾರಣವಾಗುತ್ತಿದೆ.

ಮುಖ್ಯವಾಗಿ ರೋಗನಿರೋಧಕ ಶಕ್ತಿ ಕಡಿಮೆಯಿರುವ ನವಜಾತ ಶಿಶುಗಳು ನ್ಯುಮೋನಿಯಾ ಕಾಯಿಲೆಗೆ ಹೆಚ್ಚು ಬಲಿಯಾಗುತ್ತಾರೆ. ನ್ಯುಮೋನಿಯಾ ಕಾಯಿಲೆಗೆ ತುತ್ತಾಗಿರುವ ಮಗುವಿನ ಆರೋಗ್ಯವು ಶೀಘ್ರವಾಗಿ ಹದಗೆಡುವುದರಿಂದ ಚಿಕಿತ್ಸೆ ನೀಡಲು ತಡವಾಗಬಾರದು. ಗ್ರಾಮೀಣ ಭಾಗದಲ್ಲಿ ಆರೋಗ್ಯ ವ್ಯವಸ್ಥೆಯು ಸುಸಜ್ಜಿತವಾಗಿಲ್ಲದಿರುವುದರಿಂದ ಮಕ್ಕಳು ಆಸ್ಪತ್ರೆಗೆ ತಡವಾಗಿ ತಲುಪುವ ಸಾಧ್ಯತೆಯಿರುತ್ತದೆ. ಭಾರತದಲ್ಲಿ ಪ್ರತಿ ವರ್ಷ ಜೀವ ಕಳೆದುಕೊಳ್ಳುವ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪೈಕಿ ಶೇ 15 ಮಕ್ಕಳು ನ್ಯುಮೋನಿಯಾ ಕಾಯಿಲೆಗೆ ಬಲಿಯಾಗುತ್ತಾರೆ.

ಜ್ವರ, ಕೆಮ್ಮು, ಉಸಿರಾಡಲು ತೊಂದರೆ ಮತ್ತು ವೇಗವಾಗಿ ಉಸಿರಾಡುವುದು ನ್ಯುಮೋನಿಯಾ ರೋಗದ ಲಕ್ಷಣಗಳಾಗಿರುತ್ತದೆ. ಮಕ್ಕಳಲ್ಲಿ ಬ್ಯಾಕ್ಟೀರಿಯಾ, ವೈರಸ್ ಮತ್ತು ಫಂಗಸ್ ಕೂಡ ಶ್ವಾಸಕೋಶದಲ್ಲಿ ಸೋಂಕನ್ನು ಹರಡಿ ನ್ಯುಮೋನಿಯಾ ಉಂಟು ಮಾಡಬಹುದು. ಶ್ವಾಸಕೋಶದೊಳಗೆ ಸೋಂಕು ಹರಡಿದಂತೆ ನ್ಯುಮೋನಿಯಾ ಉಲ್ಬಣವಾಗುತ್ತದೆ. ಸೂಕ್ತ ಸಮಯದಲ್ಲಿ ಸೂಕ್ತ ಆ್ಯಂಟಿಬಯಾಟಿಕ್ಸ್ ಸಮೇತ ಚಿಕಿತ್ಸೆಯನ್ನು ನೀಡುವುದು ಅನಿವಾರ್ಯವಾಗಿರುತ್ತದೆ. ಗ್ರಾಮಗಳ ಮಟ್ಟದಲ್ಲಿ ಕೆಲಸ ಮಾಡುವ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೂ ಕೂಡ ಜ್ವರ, ಕೆಮ್ಮು ಮತ್ತು ವೇಗವಾಗಿ ಉಸಿರಾಡುವ ಮಕ್ಕಳನ್ನು ಪತ್ತೆ ಹಚ್ಚುವ ತರಬೇತಿಯನ್ನು ನೀಡಲಾಗಿದೆ. ಈ ರೀತಿಯ ಲಕ್ಷಣಗಳು ಮಗುವಿಗೆ ಕಾಣಿಸಿಕೊಂಡರೆ ಅಂತಹ ಮಕ್ಕಳಿಗೆ ಆ್ಯಂಟಿಬಯಾಟಿಕ್ಸ್ ಔಷಧವನ್ನು ನೀಡಿ, ಬಳಿಕ ಉನ್ನತ ಆಸ್ಪತ್ರೆಗೆ ಕಳುಹಿಸಲು ಕೂಡ ಅನುಮತಿಯನ್ನು ನೀಡಲಾಗಿದೆ.

ಕೆಲವು ಕಾಯಿಲೆಗಳು ಕಲುಷಿತ ನೀರು ಮತ್ತು ಆಹಾರದ ಮೂಲಕ ಹರಡಿದರೆ, ಕೆಲವು ಕಾಯಿಲೆಗಳು ಗಾಳಿಯ ಮೂಲಕವೂ ಹರಡುತ್ತವೆ. ಗಾಳಿಯ ಮೂಲಕ ಸೂಕ್ಷ್ಮಾಣುಜೀವಿಗಳು ಶ್ವಾಸಕೋಶದೊಳಗೆ ಸೇರಿ ನ್ಯುಮೋನಿಯಾವನ್ನು ಉಂಟುಮಾಡುತ್ತದೆ. ಗಾಳಿಯ ಮೂಲಕ ಹರಡುವ ಕಾಯಿಲೆಗಳಾದ ನ್ಯುಮೋನಿಯಾ ಒಬ್ಬ ರೋಗಿಯಿಂದ ಉಳಿದವರಿಗೆ ಹೆಚ್ಚು ವೇಗವಾಗಿ ಹರಡಬಹುದು. ಕೋವಿಡ್ ಕೂಡ ವೈರಸ್ ಮೂಲಕ ಹರಡುವ ನ್ಯುಮೋನಿಯಾ ಕಾಯಿಲೆಯೇ ಹೌದು.

ನ್ಯುಮೋನಿಯಾವನ್ನು ನಿಖರವಾಗಿ ಪತ್ತೆ ಹಚ್ಚಲು ಶ್ವಾಸಕೋಶದ ಎಕ್ಸ್‌–ರೆ ಮಾಡಿಸಬೇಕಾಗುತ್ತದೆ. ಶ್ವಾಸಕೋಶದ ಯಾವ ಭಾಗದಲ್ಲಿ ಸೋಂಕು ಉಂಟಾಗಿದೆ ಮತ್ತು ಎಷ್ಟು ಪ್ರತಿಶತ ಶ್ವಾಸಕೋಶದ ಭಾಗವನ್ನು ಸೋಂಕು ಆವರಿಸಿದೆ ಎಂಬುದನ್ನು ಈ ಪರೀಕ್ಷೆ ತಿಳಿಸುತ್ತದೆ. ಎಕ್ಸ್‌–ರೆಯ ಚಿತ್ರಣದಿಂದಲೂ ವೈದ್ಯರು ನ್ಯುಮೋನಿಯಾದ ವಿಧವನ್ನು ಮತ್ತು ಅದನ್ನು ತಂದ ವೈರಸ್ ಅನ್ನು ಅಂದಾಜಿಸುತ್ತಾರೆ ಮತ್ತು ಆಗ ಸೂಕ್ತ ಚಿಕಿತ್ಸೆಯನ್ನು ಆರಂಭಿಸುತ್ತಾರೆ.

ಮಕ್ಕಳಿಗೆ ಆಕ್ಸಿಜನ್ ಅಗತ್ಯವಿಲ್ಲದಿದ್ದರೆ ಮತ್ತು ಉಸಿರಾಡಲು ಹೆಚ್ಚು ತ್ರಾಸವಾಗದಿದ್ದರೆ ನ್ಯುಮೋನಿಯಾವನ್ನು ಆ್ಯಂಟಿಬಯಾಟಿಕ್ ಗುಳಿಗೆ ಅಥವಾ ಸಿರಪ್ ಮೂಲಕ ಚಿಕಿತ್ಸೆ ನೀಡಬಹುದು. ತೀವ್ರ ಜ್ವರ, ನಿತ್ರಾಣ ಮತ್ತು ಉಸಿರಾಟದ ಸಮಸ್ಯೆಯಿದ್ದರೆ ರೋಗಿಯನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಗಿಬರಬಹುದು. ಉಸಿರಾಟ ಸಮಸ್ಯೆ ಹೆಚ್ಚಾಗಿ ಆಕ್ಸಿಜನ್ ಮತ್ತು ಉಸಿರಾಟಕ್ಕೆ ಸಹಾಯ ಮಾಡುವ ಯಂತ್ರಗಳ ಅಗತ್ಯಬಿದ್ದರೆ ತೀವ್ರ ನಿಗಾ ಘಟಕದ ಅವಶ್ಯಕತೆಯೂ ಬೀಳಬಹುದು. ನ್ಯುಮೋನಿಯಾ ಉಂಟು ಮಾಡಿದ ಸೂಕ್ಷ್ಮಾಣು ಜೀವಿಯ ಸಾಮರ್ಥ್ಯ ಮತ್ತು ದೇಹದ ರೋಗ ನಿರೋಧಕ ಶಕ್ತಿಯ ಅಧಾರದ ಮೇಲೆ ನ್ಯುಮೋನಿಯಾ ಕಾಯಿಲೆಯ ತೀವ್ರತೆಯು ನಿರ್ಧಾರವಾಗುತ್ತದೆ. ರೋಗನಿರೋಧಕ ಶಕ್ತಿ ಕಡಿಮೆಯಿರುವ ಏಡ್ಸ್ ರೋಗಿಗಳಲ್ಲಿ ಮತ್ತು ಮಧುಮೇಹದ ರೋಗಿಗಳಲ್ಲಿ ನ್ಯುಮೋನಿಯಾವು ಮಾರಕ ವಾಗಬಹುದು. ಆರೋಗ್ಯವಂತರಲ್ಲಿ ನ್ಯುಮೋನಿಯಾವನ್ನು ಉಂಟು ಮಾಡದ ಫಂಗಸ್ ಕೂಡ ಇವರಲ್ಲಿ ಮಾರಣಾಂತಿಕ ಕಾಯಿಲೆಯನ್ನು ಉಂಟುಮಾಡಬಹುದು.

ವಾಯುಮಾಲಿನ್ಯ, ಅಪೌಷ್ಟಿಕತೆಗಳು ಕೂಡ ನ್ಯೂಮೋನಿಯಾಗೆ ಕಾರಣವಾಗಬಹುದು. ಸಣ್ಣ ಕೊಠಡಿಯಲ್ಲಿ ಹೆಚ್ಚು ಜನರು ವಾಸಿಸುವುದರಿಂದಲೂ ನ್ಯುಮೋನಿಯಾ ಸೋಂಕುಗಳು ಹರಡಲು ಕಾರಣವಾಗುತ್ತದೆ. ಜನರ ಜೀವನ ಮಟ್ಟ ಹೆಚ್ಚಾದಾಗ ಸಾಂಕ್ರಾಮಿಕ ಕಾಯಿಲೆಗಳ ಪ್ರಮಾಣವೂ ಕಡಿಮೆಯಾಗಬಹುದು. ಮುಂದುವರಿದ ದೇಶಗಳಲ್ಲಿ ನ್ಯುಮೋನಿಯಾದ ಪ್ರಮಾಣ ಕಡಿಮೆಯಿದೆ. ನವಜಾತ ಶಿಶುಗಳ ಮತ್ತು ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ನ್ಯುಮೋನಿಯಾ ಕಾಯಿಲೆಗೆ ಬಲಿಯಾಗುವುದನ್ನು ತಪ್ಪಿಸಲು ಸಮಯಕ್ಕೆ ಸರಿಯಾಗಿ ಲಸಿಕೆ ಹಾಕುವುದು ಬಹಳ ಮುಖ್ಯ. ಮಕ್ಕಳಲ್ಲಿ ಲಸಿಕೆ ಹಾಕಿಸಿಕೊಳ್ಳುವ ಪ್ರಮಾಣ ಹೆಚ್ಚಾದಂತೆ ನ್ಯುಮೋನಿಯಾದಿಂದ ಸಾಯುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಉತ್ತಮ ಪೌಷ್ಟಿಕ ಆಹಾರದ ಸೇವನೆಯಿಂದ ಮಕ್ಕಳು ನ್ಯುಮೋನಿಯಾ ಕಾಯಿಲೆಗೆ ಬಲಿಯಾಗುವ ಸಾಧ್ಯತೆಗಳು ಕಡಿಮೆಯಾಗುತ್ತವೆ. ❖

> ಭಾರತದ ಹೆಚ್ಚಿನ ನಗರಗಳಲ್ಲಿ ವಾಯುಮಾಲಿನ್ಯದ ಕಾರಣದಿಂದ ಉಸಿರಾಡುವ ಗಾಳಿಯು ಕಲುಷಿತಗೊಂಡಿದೆ. ಗಾಳಿಯ ಶುದ್ಧತೆಯನ್ನು ನಾವು ವಾಯು ಗುಣಮಟ್ಟ ಸೂಚ್ಯಂಕ (Air quality Index) ಮಾನದಂಡದಿಂದ ಅಳೆಯುತ್ತೇವೆ. ದೆಹಲಿ ಮುಂತಾದ ನಗರಗಳಲ್ಲಿ ವಾಯುಮಾಲಿನ್ಯದ ಕಾರಣದಿಂದ ವಾಯು ಗುಣಮಟ್ಟ ಸೂಚ್ಯಂಕ ಹಾನಿಕಾರಕ ಮಟ್ಟ ತಲುಪಿದೆ. ಅಂತಹ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ನ್ಯುಮೋನಿಯಾ ಬಂದಾಗ ಶ್ವಾಸಕೋಶಕ್ಕೆ ಹೆಚ್ಚಿನ ಹಾನಿಯಾಗುತ್ತದೆ. ಧೂಮಪಾನ ಮಾಡುವವರ ಶ್ವಾಸಕೋಶವು ಹಾನಿಗೆ ಒಳಗಾಗಿರುತ್ತದೆ. ಹೀಗಾಗಿ ಅಂತಹ ವ್ಯಕ್ತಿಗಳಿಗೆ ನ್ಯುಮೋನಿಯಾ ಉಂಟಾದಲ್ಲಿ ಚೇತರಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗುತ್ತದೆ. ಸೌದೆ ಒಲೆಯಲ್ಲಿ ಅಡುಗೆ ಮಾಡುವ ಮಹಿಳೆಯರ ಶ್ವಾಸಕೋಶವು ಹಾನಿಗೆ ಒಳಗಾಗುವ ಸಂಭವ ಹೆಚ್ಚು. ಶ್ವಾಸಕೋಶದ ಆರೋಗ್ಯವನ್ನು ಕಾಪಾಡಿಕೊಳ್ಳಲು ದೈಹಿಕ ವ್ಯಾಯಾಮದ ಜತೆಗೆ ಉಸಿರಾಟಕ್ಕೆ ಸಂಬಂಧಿಸಿದ ವ್ಯಾಯಾಮಗಳನ್ನು ಮಾಡುವುದು ಸಹಕಾರಿ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.1

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(v) $3, 3+\sqrt{2}, 3+2\sqrt{2}, 3+3\sqrt{2}, \ldots$

Soln: $3, 3+\sqrt{2}, 3+2\sqrt{2}, 3+3\sqrt{2}, \ldots$

$$a_2-a_1=(3+\sqrt{2})-3=\sqrt{2}$$
$$a_3-a_2=(3+2\sqrt{2})-(3+\sqrt{2})=\sqrt{2}$$
$$a_4-a_3=(3+3\sqrt{2})-(3+2\sqrt{2})=\sqrt{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=\sqrt{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$(3+3\sqrt{2})+\sqrt{2}=3+4\sqrt{2}$$
$$(3+4\sqrt{2})+\sqrt{2}=3+5\sqrt{2}$$
$$(3+5\sqrt{2})+\sqrt{2}=3+6\sqrt{2}$$

(vi) 0.2, 0.22, 0.222, 0.2222, . . .

ಪರಿಹಾರ:

0.2, 0.22, 0.222, 0.2222, ...

$$a_2-a_1=(0.22)-0.2=0.02$$
$$a_3-a_2=(0.222)-(0.22)=0.002$$

ಇಲ್ಲಿ $a_2-a_1 \neq a_3-a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(vii) $0, -4, -8, -12, \ldots$

Soln: $0, -4, -8, -12, \ldots$

$$a_2-a_1=-4-0=-4$$
$$a_3-a_2=-8-(-4)=-8+4=-4$$
$$a_4-a_3=-12-(-8)=-12+8=-4$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=-4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$-12+(-4)=-16$$
$$-16+(-4)=-20$$
$$-20+(-4)=-24$$

(viii) $-\frac{1}{2}, -\frac{1}{2}, -\frac{1}{2}, -\frac{1}{2} \ldots$

ಪರಿಹಾರ:

$-\frac{1}{2}, -\frac{1}{2}, -\frac{1}{2}, -\frac{1}{2} \ldots$

$$a_2-a_1=-\frac{1}{2}-\left(-\frac{1}{2}\right)=-\frac{1}{2}+\frac{1}{2}=0$$
$$a_3-a_2=-\frac{1}{2}-\left(-\frac{1}{2}\right)=-\frac{1}{2}+\frac{1}{2}=0$$
$$a_4-a_3=-\frac{1}{2}-\left(-\frac{1}{2}\right)=-\frac{1}{2}+\frac{1}{2}=0$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=0$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$-\frac{1}{2}+0=-\frac{1}{2}$$
$$-\frac{1}{2}+0=-\frac{1}{2}$$
$$-\frac{1}{2}+0=-\frac{1}{2}$$

(ix) 1, 3, 9, 27, . . .

ಪರಿಹಾರ: $a_2-a_1=3-1=2$

$$a_3-a_2=9-3=6$$
$$a_4-a_3=27-9=18$$

ಇಲ್ಲಿ $a_2-a_1 \neq a_3-a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(x) $a, 2a, 3a, 4a, \ldots$

ಪರಿಹಾರ:

$$a_2-a_1=2a-a=a$$
$$a_3-a_2=3a-2a=a$$
$$a_4-a_3=4a-3a=a$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=a$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$4a+a=5a$$
$$5a+a=6a$$
$$6a+a=7a$$

(xi) $a, a^2, a^3, a^4, \ldots$

ಪರಿಹಾರ: $a_2-a_1=a^2-a=a(a-1)$

$$a_3-a_2=a^3-a^2=a^2(a-1)$$

ಇಲ್ಲಿ $a_2-a_1 \neq a_3-a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(xii) $\sqrt{2}, \sqrt{8}, \sqrt{18}, \sqrt{32} \ldots$

ಪರಿಹಾರ:

$\sqrt{2}, \sqrt{8}, \sqrt{18}, \sqrt{32}, \ldots$

$$a_2-a_1=\sqrt{8}-\sqrt{2}=2\sqrt{2}-\sqrt{2}=\sqrt{2}$$
$$a_3-a_2=\sqrt{18}-\sqrt{8}=3\sqrt{2}-2\sqrt{2}=\sqrt{2}$$
$$a_4-a_3=\sqrt{32}-\sqrt{18}=4\sqrt{2}-3\sqrt{2}=\sqrt{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=\sqrt{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$\sqrt{32}+\sqrt{2}=4\sqrt{2}+\sqrt{2}=5\sqrt{2}=\sqrt{50}$$
$$5(\sqrt{2})+\sqrt{2}=6\sqrt{2}=\sqrt{72}$$
$$6(\sqrt{2})+\sqrt{2}=7\sqrt{2}=\sqrt{98}$$

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Inverse trigonometric functions

28. Prove that: $\tan^{-1}x+\tan^{-1}y=\tan^{-1}\frac{x+y}{1-xy}$; $(|x|<1, |y|<1)$ [i.e., $xy<1$]

Proof: – Let $\tan^{-1}x=A$ and

$\therefore x=\tan A$ $\quad [\tan^{-1}y=B; \therefore y=\tan B]$

Given $|x|<1 \Rightarrow -1<x<1$

Given $|y|<1 \Rightarrow -1<y<1=-1<\tan B<1$

$$\Rightarrow -1<\tan A<1 \Rightarrow -\frac{\pi}{4}<A<\frac{\pi}{4} \ldots\ldots(1)$$
$$\Rightarrow -\frac{\pi}{4}<B<\frac{\pi}{4} \ldots\ldots(2)$$

From (1) and (2), adding $-\frac{\pi}{2}<A+B<\frac{\pi}{2}$

We know that

$$\tan(A+B)=\frac{\tan A+\tan B}{1-\tan A\tan B}=\frac{x+y}{1-xy}$$

and $\because A+B\in\left(-\frac{\pi}{2},\frac{\pi}{2}\right)$

$$\therefore A+B=\tan^{-1}\frac{x+y}{1-xy}$$
$$\Rightarrow \tan^{-1}x+\tan^{-1}y=\tan^{-1}\left(\frac{x+y}{1-xy}\right)$$

29. Prove that $\tan^{-1}x+\tan^{-1}y+\tan^{-1}z=\tan^{-1}\left(\frac{x+y+z-xyz}{1-xy-yz-zx}\right)$

Proof: $-(\tan^{-1}x+\tan^{-1}y)+\tan^{-1}z=$

$$\tan^{-1}\left(\frac{x+y}{1+xy}\right)+\tan^{-1}z$$
$$=\tan^{-1}\left[\frac{\frac{x+y}{1-xy}+z}{1-\left(\frac{x+y}{1-xy}\right)z}\right]$$
$$=\tan^{-1}\left[\frac{x+y+z-xyz}{1-xy-yz-zx}\right]$$

30. Prove that $\cot^{-1}x+\cot^{-1}y=\cot^{-1}\left(\frac{xy-1}{y+x}\right)$

Proof: $-\cot^{-1}x+\cot^{-1}y=\tan^{-1}\frac{1}{x}+\tan^{-1}\frac{1}{y}$

$$=\tan^{-1}\left[\frac{\frac{1}{x}+\frac{1}{y}}{1-\frac{1}{x}.\frac{1}{y}}\right]$$
$$=\tan^{-1}\left(\frac{y+x}{xy-1}\right)$$
$$=\cot^{-1}\left(\frac{xy-1}{y+x}\right)$$

31. Prove that $\tan^{-1}\frac{1-x}{1+x}-\tan^{-1}\frac{1-y}{1+y}=\sin^{-1}\frac{y-x}{\sqrt{1+x^2\,1+y^2}}$

Soln: – Consider, L.H.S.

$$(\tan^{-1}-\tan^{-1}x)-(\tan^{-1}1-\tan^{-1}y)$$
$$=\tan^{-1}y-\tan^{-1}x=\tan^{-1}\frac{y-x}{1+yx}$$
$$=\sin^{-1}\frac{y-x}{\sqrt{(1+yx)^2+(y-x)^2}}$$
$$=\sin^{-1}\frac{y-x}{\sqrt{1+y^2x^2+y^2+x^2}}$$
$$=\sin^{-1}\frac{y-x}{\sqrt{1+x^2}\sqrt{1+y^2}}=\text{R.H.S.}$$

32. Evaluate $\cos\left(2\cos^{-1}x+\sin^{-1}x\right)$ at $x=\frac{1}{5}$, where $0\le\cos^{-1}x\le\pi$ & $-\frac{\pi}{2}\le\sin^{-1}x\le\frac{\pi}{2}$.

Soln: $-\cos(2\cos^{-1}x+\sin^{-1}x)$

$$\Rightarrow \cos\{\cos^{-1}x+(\cos^{-1}x+\sin^{-1}x)\}$$
$$=\cos\left\{\cos^{-1}x+\frac{\pi}{2}\right\}$$
$$=\cos\left(\theta+\frac{\pi}{2}\right),\ \text{where } \theta=\cos^{-1}x$$
$$=-\sin\theta=-\sqrt{1-\cos^2\theta}$$
$$=-\sqrt{1-x^2}=-\sqrt{1-\left(\frac{1}{5}\right)^2}$$
$$=\frac{-\sqrt{24}}{5}=\frac{-2\sqrt{6}}{5}$$

33. Solve $\tan^{-1}2x+\tan^{-1}3x=\frac{\pi}{4}$

Soln: $-\tan^{-1}2x+\tan^{-1}3x=\frac{\pi}{4}$

$$\Rightarrow \tan^{-1}\frac{2x+3x}{1-2x.3x}=\frac{\pi}{4}$$
$$\Rightarrow \frac{5x}{1-6x^2}=\tan\frac{\pi}{4}=1$$
$$\Rightarrow 5x=1-6x^2$$
$$\Rightarrow 6x^2+5x-1=0$$
$$\Rightarrow (6x-1)(x+1)=0$$
$$\Rightarrow x=\frac{1}{6}\ (\text{or})\ x=-1$$

But $x=-1$ does not satisfy the given equation.

$\therefore x=\frac{1}{6}$

[$\therefore$ L.H.S. of the equation becomes –ve whereas R.H.S. $=\frac{\pi}{4}>0$]

(Contd....)

ರಕ್ಷಣೆ ಕೊಡಿ: ಆರ್‌ಎಫ್‌ಒಗಳ ಪ್ರತಿಭಟನೆ

ಹಿರಿಯ ಅಧಿಕಾರಿಗಳಿಂದ ರಕ್ಷಣೆ ಸಿಗುತ್ತಿಲ್ಲ, ನೈತಿಕ ಸ್ಥೈರ್ಯ ತುಂಬುತ್ತಿಲ್ಲ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವ- ವನ್ಯಜೀವಿ ಸಂಘರ್ಷ ತಡೆಯಲು ಕೆಲಸ ಮಾಡುತ್ತಿರುವ ಕೆಳ ಹಂತದ ಅಧಿಕಾರಿಗಳು, ಸಿಬ್ಬಂದಿ ಮೇಲೆ ದಾಳಿ ನಡೆಯುತ್ತಿದ್ದರೂ ಅರಣ್ಯ ಇಲಾಖೆ ಉನ್ನತ ಅಧಿಕಾರಿಗಳು ನೈತಿಕಸ್ಥೈರ್ಯ ತುಂಬುತ್ತಿಲ್ಲ ಹಾಗೂ ನಮಗೆ ರಕ್ಷಣೆ ಸಿಗುತ್ತಿಲ್ಲ' ಎಂದು ಆರೋಪಿಸಿ ರಾಜ್ಯದ ವಲಯ ಅರಣ್ಯಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಮಲ್ಲೇಶ್ವರಂನಲ್ಲಿರುವ ಅರಣ್ಯಭವನದಲ್ಲಿ ಆರ್‌ಎಫ್‌ಒಗಳ ಸಂಘದ ಅಧ್ಯಕ್ಷ ಚಂದ್ರಶೇಖರರೆಡ್ಡಿ ಹಾಗೂ ಪ್ರಧಾನ ಕಾರ್ಯದರ್ಶಿ ಕಿರಣ್ ನೇತೃತ್ವದಲ್ಲಿ ರಾತ್ರಿವರೆಗೂ ಪ್ರತಿಭಟನೆ ನಡೆಯಿತು.

ಬಂಡೀಪುರ ವ್ಯಾಪ್ತಿಯಲ್ಲಿ ಕೆಲ ದಿನಗಳಿಂದ ಹುಲಿ ದಾಳಿ, ಸೆರೆ ಪ್ರಕರಣಗಳು ನಡೆದಿವೆ. ಹುಲಿ ಸೆರೆ ಹಿಡಿಯುವ ವೇಳೆ ವಲಯ ಅರಣ್ಯಾಧಿಕಾರಿ ಹಾಗೂ ಕೆಳ ಹಂತದ ಸಿಬ್ಬಂದಿ ಸ್ಥಳದಲ್ಲಿದ್ದು ಕಾರ್ಯಾಚರಣೆ ನಡೆಸುವ ಜತೆಗೆ ಜನರನ್ನು ನಿಯಂತ್ರಿಸ ಬೇಕಾಗಿದೆ. ಈ ವೇಳೆ ಆರ್‌ಎಫ್‌ಒ ಮೇಲೆ ದಾಳಿಯಾಗಿ ಆಸ್ಪತ್ರೆಗೆ ದಾಖಲಾದರೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಸಾಂತ್ವನ ಹೇಳುತ್ತಿಲ್ಲ. ಚಿರತೆ ದಾಳಿಯಿಂದ ಗಾಯಗೊಂಡ ಸಿಬ್ಬಂದಿಯನ್ನೂ ಯಾರೂ ಭೇಟಿ ಮಾಡಿಲ್ಲ ಎಂದು ಆರೋಪಿಸಿದರು.

ಮುಖ್ಯಾಂಶಗಳು

- ಚಿರತೆ ದಾಳಿಯಿಂದ ಗಾಯಾಳುಗಳನ್ನು ಯಾರೂ ಭೇಟಿ ಮಾಡಿಲ್ಲ
- ರೈತ ಸಂಘದವರು ನಮ್ಮನ್ನು ಮನಸೋ ಇಚ್ಛೆ ಟೀಕಿಸುತ್ತಿದ್ದಾರೆ
- ಮಂಗಳವಾರವೂ ಹೋರಾಟ

ಬೆಂಗಳೂರಿನ ಅರಣ್ಯಭವನದ ಆವರಣದಲ್ಲಿ ಆರ್‌ಎಫ್‌ಒ ಸಂಘದಿಂದ ಪ್ರತಿಭಟನೆ ನಡೆಸಲಾಯಿತು

ಮನವಿ ಸ್ವೀಕರಿಸಲು ಅರಣ್ಯ ಸಚಿವರು ಬರಲಿಲ್ಲ. ಅರಣ್ಯ ಪಡೆಗಳ ಮುಖ್ಯಸ್ಥರೂ ಬರುತ್ತಿಲ್ಲ. ಸರಿಯಾದ ಜೀಪ್ ವ್ಯವಸ್ಥೆಯಿಲ್ಲ. ಗನ್‌ಗಳು ಕೂಡ ಸರಿಯಾಗಿಲ್ಲ. ರೈತ ಸಂಘದವರು ಮನಸೋ ಇಚ್ಛೆ ಟೀಕಿಸುತ್ತಲೇ ಇದ್ದಾರೆ. ಪರಿಸ್ಥಿತಿ ಹೀಗಿದ್ದರೂ ನಮ್ಮ ಕಷ್ಟಗಳನ್ನು ಇಲಾಖೆ ಮುಖ್ಯಸ್ಥರು ಕೇಳದೇ ಇದ್ದರೆ ಕೆಲಸ ಮಾಡುವುದು ಹೇಗೆ ಎಂದು ಪ್ರಶ್ನಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ) ಬಿ.ಪಿ. ರವಿ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಮನ್ವಯ) ಕುಮಾರಪುಷ್ಕರ್ ಆಗಮಿಸಿ ಬೇಡಿಕೆ ಪರಿಶೀಲಿಸುವುದಾಗಿ ಹೇಳಿದರೂ ಅದಕ್ಕೆ ಆರ್‌ಎಫ್‌ಒಗಳು ಒಪ್ಪಲಿಲ್ಲ.

'ಅರಣ್ಯ ಪಡೆಗಳ ಮುಖ್ಯಸ್ಥರು ನಮ್ಮನ್ನು ಭೇಟಿ ಮಾಡಿಲ್ಲ. ನಮ್ಮ ಹೋರಾಟ ಮಂಗಳವಾರವೂ ಮುಂದುವರಿಯಲಿದ್ದು, ಉಪ ವಲಯ ಅರಣ್ಯಾಧಿಕಾರಿಗಳು, ಅರಣ್ಯ ರಕ್ಷಕರ ಸಂಘವೂ ಬೆಂಬಲ ಸೂಚಿಸಲಿದ್ದಾರೆ' ಎಂದು ಸಂಘಟಕರು ತಿಳಿಸಿದರು.

ವೈಜ್ಞಾನಿಕ ಮಾರ್ಗದ ಪರಿಹಾರ: ಸೂಚನೆ

ಮೈಸೂರು: 'ಮಾನವ-ವನ್ಯಜೀವಿ ಸಂಘರ್ಷ ತಡೆಗೆ ವೈಜ್ಞಾನಿಕ ಮಾರ್ಗದಲ್ಲಿ ಪರಿಣಾಮಕಾರಿ ಪರಿಹಾರ ಕಂಡುಹಿಡಿಯಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾಮಟ್ಟದ ಕೆಡಿಪಿ (ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

'ಹುಲಿ, ಆನೆಗಳು ಅರಣ್ಯದಿಂದ ಹೊರ ಬರಲು ಕಾರಣವೇನು? ಇದನ್ನು ತಡೆಯಲು ಅಗತ್ಯ ಕ್ರಮವಹಿಸ- ಬೇಕು ಎಂದರು. 'ವನ್ಯಜೀವಿ- ಮಾನವ ಸಂಘರ್ಷ ತಪ್ಪಿಸಲು ಚರ್ಚೆಗೆ ಪ್ರತ್ಯೇಕ ಸಭೆ ಕರೆಯುತ್ತಿದ್ದೇವೆ' ಎಂದು ತಿಳಿಸಿದರು.

'ಕಾಡೊಳಗಿನ ಜನವಸತಿ ಸ್ಥಳಾಂತರ ಪರಿಶೀಲನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಹೆಚ್ಚಳವಾಗಿದ್ದು, ಕಾಡಿನೊಳಗಿರುವ ಜನವಸತಿಗಳನ್ನು ಸ್ಥಳಾಂತರಿಸುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಕುದುರೆಮುಖ ರಾಷ್ಟ್ರೀಯ ಉದ್ಯಾನದ ಕಾರ್ಕಳ ವ್ಯಾಪ್ತಿಯ ನಿವಾಸಿಗಳ ಪುನರ್ವಸತಿ ಮತ್ತು ಪರಿಹಾರಕ್ಕೆ ಸಂಬಂಧಿಸಿದಂತೆ 2005ರ ಸುತ್ತೋಲೆಯನ್ನು ಪುನರ್ ಪರಿಶೀಲಿಲನೆ ಕೋರಿ ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ ನೇತೃತ್ವದ ನಿಯೋಗದ ಮನವಿ ಸ್ವೀಕರಿಸಿ ಮಾತನಾಡಿದರು.

'ಅರಣ್ಯದೊಳಗಿರುವ ಜನವಸತಿಗಳ ಸ್ಥಳಾಂತರದಿಂದ ಅರಣ್ಯವಾಸಿಗಳು ಮತ್ತು ಅವರ ಮಕ್ಕಳು ಸಮಾಜದ ಮುಖ್ಯವಾಹಿನಿಗೆ ಬರುತ್ತಾರೆ. ಅಲ್ಲದೇ, ಮಾನವ-ವನ್ಯಜೀವಿ ಸಂಘರ್ಷವೂ ಕಡಿಮೆ ಆಗುತ್ತದೆ. ಸ್ಥಳಾಂತರಕ್ಕೆ ಪರಿಹಾರ ನೀಡಬೇಕಾಗುತ್ತದೆ. ಹಂತ- ಹಂತವಾಗಿ ಮಾಡಬೇಕಾಗುತ್ತದೆ. ಬಜೆಟ್‌ನಲ್ಲಿ ಇದಕ್ಕೆ ಹಣ ಮೀಸಲಿಟ್ಟರೆ ಸಾಧ್ಯವಾಗುತ್ತದೆ. ಈ ಕುರಿತು ಮುಖ್ಯ- ಮಂತ್ರಿಯವರ ಜತೆ ಚರ್ಚಿಸುತ್ತೇನೆ' ಎಂದು ಖಂಡ್ರೆ ಹೇಳಿದರು.

ಹುಲಿ ಸೆರೆ; ಮೂರು ಮರಿಗಳ ರಕ್ಷಣೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ವಲಯ ವ್ಯಾಪ್ತಿಯ ಕಲ್ಲಹಳ್ಳಿ-ಪಡಗೂರು ಬಳಿ ಹುಲಿಯನ್ನು ಸೆರೆ ಹಿಡಿಯಲಾಗಿದ್ದು, ಮೂರು ಮರಿಗಳನ್ನು ರಕ್ಷಿಸಲಾಗಿದೆ.

'ಮಾನವ -ಪ್ರಾಣಿ ಸಂಘರ್ಷಕ್ಕೆ ಕಾರಣವಾಗಿದ್ದ ಹುಲಿಯನ್ನು ಸಾಕಾನೆಗಳಾದ ಭೀಮ, ಮಹೇಂದ್ರ, ಸುಗ್ರೀವ ಹಾಗೂ ಲಕ್ಷ್ಮಣನನ್ನು ಬಳಸಿ ಸೆರೆ ಹಿಡಿಯಲಾಗಿದೆ ' ಎಂದು ಎಸಿಎಫ್ ಕೆ.ಸುರೇಶ್ ತಿಳಿಸಿದ್ದಾರೆ.

ವನ್ಯಜೀವಿಗಳ ಬೇಟೆಯನ್ನು ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಇದನ್ನು ನಿಯಂತ್ರಿಸಿದೆ. ಉತ್ತಮ ಪರಿಸರವಿರು- ವುದರಿಂದ ವನ್ಯಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹೆಚ್ಚುತ್ತಿರುವ ವನ್ಯಜೀವಿಗಳ ಸಂಖ್ಯೆಗೆ ಅನುಗುಣವಾಗಿ ಕಾಡಿನ ಪ್ರದೇಶ ಹೆಚ್ಚುತ್ತಿಲ್ಲ. ಇದರಿಂದ ಸಮಸ್ಯೆ ಹೆಚ್ಚುತ್ತಿದೆ ಎಂದು ಖಂಡ್ರೆ ವಿವರಿಸಿದರು.

ಜಾಲತಾಣದಲ್ಲಿ ಹರಿದಾಡಿದ ವಿಡಿಯೊ • ಸಾಮೂಹಿಕ ಪ್ರಾರ್ಥನೆಗೆ ಬಿಜೆಪಿ ನಾಯಕರ ಆಕ್ಷೇಪ

ವಿಮಾನ ನಿಲ್ದಾಣದಲ್ಲಿ ನಮಾಜ್ 'ವಿವಾದ'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತ- ರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರ ಮುಂಭಾಗದಲ್ಲಿ ಗುಂಪೊಂದು ಸಾಮೂಹಿಕವಾಗಿ ನಮಾಜ್ ಮಾಡಿದ ವಿಡಿಯೊ ಹಾಗೂ ಫೋಟೊ ಸಾಮಾಜಿಕ ಜಾಲತಾಣಗಳ- ಲ್ಲಿ ಹರಿದಾಡುತ್ತಿದೆ. ಇದು ರಾಜಕೀಯ ಚರ್ಚೆ ಹುಟ್ಟು ಹಾಕಿದೆ.

ವಿದೇಶಕ್ಕೆ ಹೊರಟವರನ್ನು ಬೀಳ್ಕೊಡಲು ಬಂದಿದ್ದ 15-16 ಜನರಿದ್ದ ಗುಂಪೊಂದು ಟರ್ಮಿನಲ್-2ರ ಪ್ರವೇಶ ಪ್ರದೇಶದ ನೆಲದ ಮೇಲೆ ಬಟ್ಟೆ ಹಾಸಿ ಪ್ರಾರ್ಥನೆ ಸಲ್ಲಿಸಿದೆ.

ಟರ್ಮಿನಲ್‌ನಿಂದ ವಾಹನ ನಿಲುಗಡೆ ಪ್ರದೇಶಕ್ಕೆ ತೆರಳುವ ಪ್ರದೇಶದಿಂದ ಮೊಬೈಲ್‌ನಲ್ಲಿ ಈ ದೃಶ್ಯವನ್ನು ಸೆರೆ ಹಿಡಿಯಲಾಗಿದೆ. ಇದು ನಡೆದದ್ದು ಎಂದು ಮತ್ತು ಯಾವಾಗ ಎಂಬ ನಿರ್ದಿಷ್ಟ ಮಾಹಿತಿ ಲಭ್ಯವಾಗಿಲ್ಲ.

ವಿಡಿಯೊ ಸೆರೆ ಹಿಡಿದ ವ್ಯಕ್ತಿಯ ಪಕ್ಕದಲ್ಲಿಯೇ ವಿಮಾನ ನಿಲ್ದಾಣದ ಭದ್ರತೆಯ ಹೊಣೆ ಹೊತ್ತ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಐದಾರು ಸಿಬ್ಬಂದಿ ನಿಂತಿರುವುದು ದೃಶ್ಯದಲ್ಲಿ ಕಾಣುತ್ತದೆ.

ಈ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಇದಕ್ಕೆ ಹಲವರು ಧ್ವನಿಗೂಡಿಸಿದ್ದಾರೆ.

'ಟರ್ಮಿನಲ್ ಪ್ರವೇಶ ದ್ವಾರದ ಬಳಿ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದ್ದು, ನಿರ್ಬಂಧ ಇಲ್ಲ. ಇಲ್ಲಿ ಯಾರು ಏನು ಮಾಡುತ್ತಾರೆ ಎಂದು ಗೊತ್ತಾಗುವುದಿಲ್ಲ. ಇಂತಹದ್ದೇ ಮಾಡಬೇಕು, ಮಾಡಬಾರದು ಎಂಬ ಸ್ಪಷ್ಟ ನಿರ್ದೇಶನ ಇಲ್ಲ' ಎಂದು ವಿಮಾನ ನಿಲ್ದಾಣದ ಮೂಲಗಳು ಪ್ರತಿಕ್ರಿಯಿಸಿವೆ.

ಪ್ರಾರ್ಥನೆಗೆ ಪ್ರತ್ಯೇಕ ಕೋಣೆ: ವಿವಿಧ ಧರ್ಮಗಳ ಪ್ರಯಾಣಿಕರು ಪ್ರಾರ್ಥನೆ ಸಲ್ಲಿಸಲು ಟರ್ಮಿನಲ್- 2ರಲ್ಲಿ ಬಹು ಧಾರ್ಮಿಕ ಪ್ರಾರ್ಥನಾ ಕೋಣೆ ಇದೆ. ಇದನ್ನು ಎಲ್ಲ ಧರ್ಮ, ಜಾತಿಯ ಪ್ರಯಾಣಿಕರು ಪ್ರಾರ್ಥನೆಗೆ ಬಳಸಬಹುದಾಗಿದೆ ಎನ್ನುತ್ತಾರೆ ವಿಮಾನ ನಿಲ್ದಾಣದ ಅಧಿಕಾರಿಗಳು.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರ ಮುಂಭಾಗ ಗುಂಪೊಂದು ಸಾಮೂಹಿಕ ನಮಾಜ್ ಮಾಡಿದ ದೃಶ್ಯ

ಸರ್ಕಾರದ ಮೌನ ಸಮ್ಮತಿ: ಬಿಜೆಪಿ ಟೀಕೆ

ಸಾಮೂಹಿಕ ನಮಾಜ್ ಮಾಡುವ ದೃಶ್ಯಾವಳಿ ಮತ್ತು ಚಿತ್ರಗಳನ್ನು ಬಿಜೆಪಿ ವಕ್ತಾರ ವಿಜಯ್ ಪ್ರಸಾದ್ ಸಾಮಾಜಿಕ ಮಾಧ್ಯಮ 'ಎಕ್ಸ್' ನಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೊ ಅನ್ನು ಹಲವರು ಸಾಮಾಜಿಕ ಜಾಲ- ತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಸಾಮೂಹಿಕ ಪ್ರಾರ್ಥನೆಗೆ ರಾಜ್ಯ ಸರ್ಕಾರ ಅಥವಾ ವಿಮಾನ ನಿಲ್ದಾಣ ಆಡಳಿತ ಮಂಡಳಿ ಪೂರ್ವಾನುಮತಿ ನೀಡಿತ್ತೆ ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಪ್ರಶ್ನಿಸಿದ್ದಾರೆ.

ವಿಮಾನ ನಿಲ್ದಾಣದಂತಹ ಬಿಗಿ ಭದ್ರತಾ ಪ್ರದೇಶದಲ್ಲಿ ಸಾಮೂಹಿಕ ಪ್ರಾರ್ಥನೆಗೆ ಹೇಗೆ ಅವಕಾಶ ನೀಡಲಾಗಿದೆ? ಇದು ಸರ್ಕಾರದ ಸಮ್ಮತಿ ಇಲ್ಲದೆ ಸಾಧ್ಯವಿಲ್ಲ ಎಂದಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಬಿಜೆಪಿ ಅಥವಾ ಹಿಂದೂ ಸಂಘಟನೆಗಳು ಕಾರ್ಯಕ್ರಮ ನಡೆಸಿದರೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುತ್ತದೆ. ಆದರೆ, ನಮಾಜ್ ಮಾಡಿದರೆ ಅದು ಅವರಿಗೆ ಕಾಣುವುದಿಲ್ಲ. ಇದು ದ್ವಂದ್ವ ನೀತಿ ಅಲ್ಲವೇ ಎಂದು ಪ್ರಶ್ನಿಸಿದ್ದಾರೆ.

'ಅನುಮತಿ: ಎಲ್ಲರಿಗೂ ಒಂದೇ ನಿಯಮ'

ಬೆಂಗಳೂರು: 'ಆರ್‌ಎಸ್‌ಎಸ್ ಕಾರ್ಯಕ್ರಮವಾಗಲಿಅಥವಾ ನಮಾಜ್ ಆಗಲಿ ಸಾರ್ವಜನಿಕವಾಗಿ ನಡೆಸುವುದಾದರೆ ಸರ್ಕಾರದ ಅನುಮತಿ ಅಗತ್ಯ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ಕೆಲವರು ಸಾಮೂಹಿಕ ನಮಾಜ್ ಮಾಡಿದ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

'ವಿಮಾನ ನಿಲ್ದಾಣಗಳಲ್ಲಿ ಪ್ರಾರ್ಥನೆಗೆ ಪ್ರತ್ಯೇಕ ಕೊಠಡಿಗಳಿರುತ್ತವೆ. ಆದರೆ, ಇಲ್ಲಿ ಸಾರ್ವಜನಿಕವಾಗಿ ನಮಾಜ್ ಮಾಡಿದ್ದಾರೆ ಎನ್ನಲಾಗಿದೆ. ಬಿಜೆಪಿಯವರು ಅದಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆ' ಎಂದರು.

'ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮತ್ತು ಗುಜರಾತ್ ವಿಮಾನ ನಿಲ್ದಾಣದಲ್ಲಿ ಇತ್ತೀಚೆಗೆ ಗರ್ಬಾ ನೃತ್ಯ ಮಾಡಿರುವುದು ಸರಿ ಎಂದು ಒಪ್ಪಿಕೊಳ್ಳುತ್ತಾರೆಯೇ? ನಮಾಜ್ ಸಲ್ಲದು ಎಂದಾದರೆ ಗರ್ಬಾ ನೃತ್ಯ ಕೂಡ ಸಲ್ಲದು' ಎಂದರು.

'ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಅನುಮತಿ ಪಡೆಯಬೇಕೆಂಬ ಕಾಂಗ್ರೆಸ್ ಸರ್ಕಾರದ ಆದೇಶಕ್ಕೆ ಬಿಜೆಪಿ ತಡೆ ತಂದಿರುವುದು ಯಾಕೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

'ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂಬುದು ನಮ್ಮ ಸರ್ಕಾರದ ನಿಲುವು. ಬೆಂಗಳೂರಿನಲ್ಲಿ ಪ್ರತಿಭಟನೆಗಳಿಗೆ ಸ್ವಾತಂತ್ರ್ಯ ಉದ್ಯಾನವನ್ನು ನಿಗದಿಪಡಿಸ ಲಾಗಿದೆ. ಅದಕ್ಕೆ ಅನುಮತಿ ಪಡೆಯಬೇಕು. ನಾವು ಕೂಡ ಮತ ಕಳವು ಅಭಿಯಾನ ನಡೆಸಿದಾಗ ಅನುಮತಿ ಪಡೆದೇ ಮಾಡಿದ್ದೇವೆ. ಇಡೀ ರಾಜ್ಯಕ್ಕೆ ಈ ನಿಯಮವನ್ನು ವಿಸ್ತರಿಸಿದಾಗ ಬಿಜೆಪಿ, ತನ್ನ ಅಂಗ ಸಂಸ್ಥೆಗಳ ಮೂಲಕ ಧಾರವಾಡದಲ್ಲಿ ಮಧ್ಯಂತರ ತಡೆ ತಂದಿದ್ದೇಕೆ' ಎಂದು ಅವರು ಕೇಳಿದರು.

ಸಿದ್ದರಾಮಯ್ಯ, ಪರಮೇಶ್ವರ ರಾಜೀನಾಮೆ ನೀಡಲಿ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿರುವುದನ್ನು ಖಂಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಸೋಮವಾರ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಬಿಜೆಪಿ ಯುವ ಮೋರ್ಚಾ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಉಗ್ರರಿಗೆ ಹಾಗೂ ಅತ್ಯಾಚಾರಿಗಳಿಗೆ ರಾಜಾತಿಥ್ಯ ನೀಡಲಾಗುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯ ಸಿಗುತ್ತಿದ್ದು, ಇದರ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಪರಮೇಶ್ವರ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಜೈಲು ಒಂದು ರೀತಿ ಮನರಂಜನಾ ಕ್ಲಬ್ ಆಗಿ ಪರಿವರ್ತನೆಗೊಂಡಿದೆ. ದೇಶದ್ರೋಹಿಗಳಿಗೆ ಟಿ.ವಿ., ಮೊಬೈಲ್ ಫೋನ್, ಗುಂಡು- ತುಂಡುಗಳ ವ್ಯವಸ್ಥೆ ಇದೆ. ಮಾಧ್ಯಮಗಳಲ್ಲಿ ಮಾಹಿತಿ ಬಂದ ನಂತರ ಪರಪ್ಪನ ಅಗ್ರಹಾರ ಜೈಲಿನ ಮೇಲೆ ದಾಳಿ ಮಾಡಲಾಗಿದೆ' ಎಂದು ಟೀಕಿಸಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡ- ವವಾಡುತ್ತಿದ್ದು, ಅದೇ ರೀತಿ ಜೈಲಿನ ವ್ಯವಸ್ಥೆಯೂ ಭ್ರಷ್ಟಾಚಾರದಲ್ಲೇ ಮುಳುಗಿ ಹೋಗಿದೆ. ರಾಜ್ಯ ಸರ್ಕಾರದ ಕುಮ್ಮಕ್ಕು ಇಲ್ಲದಿದ್ದರೆ ಈ ರೀತಿ ಜೈಲಿನಲ್ಲಿ ವ್ಯವಸ್ಥೆ ಆಗಲು ಸಾಧ್ಯವಿಲ್ಲ. ಇದಕ್ಕೆ ಗೃಹ ಸಚಿವ ಮತ್ತು ಮುಖ್ಯಮಂತ್ರಿ ನೇರ ಹೊಣೆಗಾರರು ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ಗುಪ್ತಚರ ವಿಭಾಗ ಎರಡು ವರ್ಷದಿಂದ ಸತ್ತು ಹೋಗಿದೆಯೇ? ಪೊಲೀಸ್ ಠಾಣೆಗಳನ್ನು ಇವರು ಕಾಂಗ್ರೆಸ್ ಕಚೇರಿ ಮಾಡಿದ್ದಾರೆ ಎಂದು ವ್ಯಂಗ್ಯವಾಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ಜೈಲಿನಲ್ಲಿರುವ ಉಗ್ರನ ಕೈಗೆ ಮೊಬೈಲ್ ಸಿಗುವುದಾದರೆ ದೇಶದ್ರೋಹದ ಚಟುವಟಿಕೆಗೆ ರಾಜಾಶ್ರಯ ನೀಡಿದಂತೆ ಅಲ್ಲವೇ?. ಮುಖ್ಯಮಂತ್ರಿ ತವರು ಜಿಲ್ಲೆ ಮೈಸೂರಿನಲ್ಲಿ ಮಾದಕವಸ್ತು ಉತ್ಪಾದನಾ ಕಾರ್ಖಾನೆ ಆರಂಭವಾಗುತ್ತದೆ. ಇದರ ಬಗ್ಗೆ ಕರ್ನಾಟಕದವರಿಗೆ ಮಾಹಿತಿಯೇ ಇಲ್ಲ ಎಂದು ದೂರಿದರು.

ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕೆ. ಗೋಪಾಲಯ್ಯ, ಉದಯ್ ಬಿ. ಗರುಡಾಚಾರ್, ಎಂ. ಕೃಷ್ಣಪ್ಪ, ಸಿ. ಮುನಿರಾಜು, ಸಿ.ಕೆ. ರಾಮಮೂರ್ತಿ, ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಧೀರಜ್ ಮುನಿರಾಜು, ರಾಜ್ಯ ಕಾರ್ಯದರ್ಶಿಗಳಾದ ಎಚ್. ಸಿ. ತಮ್ಮೇಶ್ ಗೌಡ, ಶರಣು ತಳ್ಳಿಕೇರಿ, ಮುಖಂಡ ಉಮೇಶ್ ಶೆಟ್ಟಿ, ಜಿಲ್ಲಾಧ್ಯಕ್ಷರಾದ ಎಸ್. ಹರೀಶ್, ಸಪ್ತಗಿರಿ ಗೌಡ ಭಾಗಿಯಾಗಿದ್ದರು.

ಸಿದ್ದರಾಮಯ್ಯ, ಪರಮೇಶ್ವರ ಅವರ ರಾಜೀನಾಮೆಗೆ ಆಗ್ರಹಿಸಿ ಬಿ.ವೈ. ವಿಜಯೇಂದ್ರ, ಆರ್. ಅಶೋಕ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಪ್ರಜಾವಾಣಿ ಚಿತ್ರ

'ವಿಧಾನಸೌಧದಲ್ಲೂ ಉಗ್ರರಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಕಾರಾಗೃಹದಲ್ಲಷ್ಟೇ ಅಲ್ಲ, ವಿಧಾನಸೌಧದಲ್ಲೂ ಉಗ್ರರಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿರುವ ಅತ್ಯಾಚಾರಿ ಹಾಗೂ ಉಗ್ರರಿಗೆ ವಿಶೇಷ ಸೌಲಭ್ಯ ನೀಡುತ್ತಿರುವುದಕ್ಕೆ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಪರಪ್ಪನ ಅಗ್ರಹಾರದ ಜೈಲಿನಲ್ಲಿ ಉಗ್ರರಿಗೆ ರಾಜಾತಿಥ್ಯ ಕೊಡಲಾಗುತ್ತಿದೆ ಎನ್ನುವುದು ಹೊಸ ವಿಚಾರವಲ್ಲ. ಹಿಂದೆ ಇದೇ ವಿಷಯದ ಬಗ್ಗೆ ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳು ಕಿತ್ತಾಡಿಕೊಂಡಿದ್ದರು. ಆಗ ಜೈಲು ಸಿಬ್ಬಂದಿಗೆ ಈ ಹಿಂದೆ ನ್ಯಾಯಾಲಯ ಕಠಿಣ ಎಚ್ಚರಿಕೆ ನೀಡಿತ್ತು' ಎಂದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ವಿಚಾರಣಾಧೀನ ಕೈದಿಗಳಿಗೆ, ಶಿಕ್ಷೆಗೆ ಗುರಿಯಾಗಿರುವ ಪಾತಕಿಗಳಿಗೆ ಜೈಲು ಸಿಬ್ಬಂದಿ ರಾಜಾತಿಥ್ಯ ನೀಡುತ್ತಿರುವುದು ನಾಚಿಕೆಗೇಡು. ರಾಜ್ಯದ ಜನ ಈ ಬಗ್ಗೆ ಹಾದಿ ಬೀದಿಯಲ್ಲಿ ಮಾತನಾಡುತ್ತಿದ್ದಾರೆ' ಎಂದರು.

'ಗಂಭೀರ ಅಪರಾಧ ಮಾಡಿದವರಿಗೆ ಎಲ್ಲ ರೀತಿಯ ಸೌಲಭ್ಯ ಕೊಟ್ಟಿರುವ ಬಗ್ಗೆ ಚರ್ಚೆ ನಡೆಯುತ್ತಿದೆ. ಇದು ಹೊಸದಾಗಿ ಶುರುವಾದುದಲ್ಲ. ವಿಧಾನಸೌಧದಲ್ಲಿ ಉಗ್ರರನ್ನು ಇಟ್ಟುಕೊಂಡು ಪರಪ್ಪನ ಅಗ್ರಹಾರ ಜೈಲಿನ ಉಗ್ರರ ಬಗ್ಗೆ ಏನು ಚರ್ಚೆ ಮಾಡುವುದು? ಯಾರ ಬಗ್ಗೆ ತನಿಖೆ ಮಾಡುತ್ತೀರಿ? ಇವೆಲ್ಲ ಕಾಲಹರಣ, ಸಮಯ ವ್ಯರ್ಥ ಮಾಡುವುದಕ್ಕೆ ನಡೆಯುತ್ತಿರುವ ತನಿಖೆಯಷ್ಟೇ' ಎಂದು ಟೀಕಿಸಿದರು.

'ಜೈಲು ನಿರ್ವಹಣೆಯಲ್ಲಿ ವೈಫಲ್ಯಗಳ ಬಗ್ಗೆ ಮಾಧ್ಯಮಗಳು ಹಾಗೂ ಜನರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ಪ್ರಶ್ನಿಸಬೇಕು. ಸರ್ಕಾರದ ವೈಫಲ್ಯ ಎದ್ದು ಕಾಣಿಸುತ್ತಿದೆ. ಬಿಜೆಪಿಯವರಿಗೆ ಮಾನ ಮರ್ಯಾದೆ ಇಲ್ಲ ಎಂದು ಮುಖ್ಯಮಂತ್ರಿ ಬೊಬ್ಬೆ ಹಾಕುತ್ತಾರೆ. ಆದರೆ, ಇವರಿಗೆ ಏನಿದೆ' ಎಂದು ಪ್ರಶ್ನಿಸಿದರು.

ಎನ್‌ಐಎ ತನಿಖೆ ನಡೆಸಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಜೈಲುಗಳಲ್ಲಿನ ಅಕ್ರಮ ಚಟುವಟಿಕೆಗಳ ಕುರಿತು ಎನ್‌ಐಎ ತನಿಖೆ ನಡೆಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

'ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ, ಓಲೈಕೆ ರಾಜಕಾರಣ ಪರಿಣಾಮವಾಗಿ ಕರ್ನಾಟಕದ ಜೈಲುಗಳು ಉಗ್ರರ ಸ್ಲೀಪರ್ ಸೆಲ್‌ಗಳಾಗಿ ಮಾರ್ಪಟ್ಟಿವೆ. ನಿಯಮಬಾಹಿರವಾಗಿ ಕೈದಿಗಳಿಗೆ ಸಿಗುತ್ತಿರುವ ಸವಲತ್ತುಗಳು ಅಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಬೇಕು. ರಾಜ್ಯದ ಅತಿ ಸೂಕ್ಷ್ಮ ಕಾರಾಗೃಹಗಳ ಮೇಲೆ ಕೇಂದ್ರ ಸರ್ಕಾರ ನಿಗಾ ಇಡಬೇಕು' ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಥಾವರಚಂದ್ ಗೆಹಲೋತ್, ಗೃಹ ಸಚಿವ ಜಿ.ಪರಮೇಶ್ವರ ಅವರಿಗೂ ಪತ್ರದ ಪ್ರತಿ ಕಳುಹಿಸಿದ್ದಾರೆ.

ಇಬ್ಬರ ತಲೆದಂಡ, ಒಬ್ಬರ ಎತ್ತಂಗಡಿ

ಒಂದನೇ ಪುಟದಿಂದ...

'ಎರಡು ವಿಡಿಯೊ ಮಾತ್ರ ಕಳೆದ ನಾಲ್ಕು ತಿಂಗಳ ಹಿಂದೆ ನಡೆದಿರುವುದು. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ 5 ಸಾವಿರ ಕೈದಿಗಳಿದ್ದಾರೆ. ಅಲ್ಲಿ ನಡೆದಿರುವ ಘಟನೆ ಗಮನದಲ್ಲಿಟ್ಟುಕೊಂಡು ಉನ್ನ- ತಮಟ್ಟದ ಸಮಿತಿ ರಚಿಸಲಾಗಿದೆ' ಎಂದು ತಿಳಿಸಿದರು.

ಕೈದಿ ವಿರುದ್ಧ ಎಫ್‌ಐಆರ್ ದಾಖಲು: ವಿಚಾರಣಾ ಕೈದಿಗಳು ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ನೃತ್ಯ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈದಿ ಪ್ಯಾಟ್ರಿಕ್ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ನಿಷೇಧಿತ ವಸ್ತುಗಳ ಬಳಕೆಗೆ ಸಂಬಂಧಿಸಿದಂತೆ ಮೂರು ಎನ್‌ಸಿಆರ್ ದಾಖಲಾಗಿವೆ.

'ವಿಡಿಯೊ ಹಾಗೂ ಫೋಟೊದಲ್ಲಿ ಕಾಣಿಸಿಕೊಂಡಿರುವ ಕೈದಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು' ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

ಸಿಸಿಬಿಯಿಂದ ವಿವರ ಪಡೆದ ಎನ್‌ಐಎ

ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ಜೈಲಿನಲ್ಲಿ ಮೊಬೈಲ್ ಹಿಡಿದು ಮಾತನಾಡು ತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿಯಿಂದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಮಾಹಿತಿ ಪಡೆದುಕೊಂಡಿದ್ದಾರೆ.

'ಈತ ಐಎಸ್ ಸಂಘಟನೆಯ ಸಕ್ರಿಯ ಸದಸ್ಯನಾಗಿದ್ದಾನೆ. ಕರ್ನಾಟಕ ಸೇರಿ ದಕ್ಷಿಣ ಭಾರತದಲ್ಲಿ ಯುವಕರನ್ನು ಮೂಲಭೂತವಾದಿಗಳನ್ನಾಗಿ ಮಾಡಿ ಉಗ್ರ ಸಂಘಟನೆಗೆ ಸೇರಿಸುತ್ತಿದ್ದ. ಈತನ ಕೈಗೆ ಜೈಲಿನೊಳಗೆ ಮೊಬೈಲ್ ಸಿಕ್ಕಿದ್ದು ಹೇಗೆ? ಎಂಬುದರ ಬಗ್ಗೆ ತನಿಖೆ ಆರಂಭವಾಗಿದೆ. ಉಗ್ರನಿಗೆ ಮೊಬೈಲ್ ಪೂರೈಸಿದ್ದವರನ್ನು ಎನ್‌ಐಎ ವಶಕ್ಕೆ ಪಡೆದು ವಿಚಾರಣೆ ನಡೆಸುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

> **ಯಾವುದೇ ಕಾರಾಗೃಹದಲ್ಲಿ ಕೈದಿಗಳು ಮೊಬೈಲ್ ಫೋನ್ ಬಳಕೆ ಕಂಡುಬಂದರೆ ಕಾರಾಗೃಹದ ಸೂಪರಿಂಟೆಂಡೆಂಟ್ ಅವರನ್ನೇ ಹೊಣೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು**
> **ಜಿ.ಪರಮೇಶ್ವರ,** ಗೃಹ ಸಚಿವ

ಸುಳ್ಳು ವರದಿ ಸಲ್ಲಿಸಿದ್ದ ಜೈಲು ಅಧಿಕಾರಿಗಳು?

ಸಾಮಾಜಿಕ ಜಾಲತಾಣದಲ್ಲಿ ಹರಿದಾಡು- ತ್ತಿರುವುದು ಹಳೆಯ ವಿಡಿಯೊ ಹಾಗೂ ಫೋಟೊಗಳು ಎಂದು ಜೈಲಿನ ಅಧಿಕಾರಿಗಳು ವರದಿ ಸಲ್ಲಿಸಿದ್ದರು. ಆದರೆ, ವಿಡಿಯೊ- ವೊಂದರಲ್ಲಿ ಕಾಣಿಸುತ್ತಿರುವ ಪತ್ರಿಕೆಯ ಚಿತ್ರದಲ್ಲಿ 2025ರ ನವೆಂಬರ್ 6 ಎಂಬುದು ಕಾಣಿಸುತ್ತದೆ. ತರುಣ್ ರಾಜ್ ಕಾಣಿಸಿಕೊಂಡಿರುವ ವಿಡಿಯೊದಲ್ಲಿ ನವೆಂಬರ್ ತಿಂಗಳ ಕ್ಯಾಲೆಂಡರ್ ಕಾಣಿಸುತ್ತಿದೆ.

ತಾರಕ ನಾಲೆ ಬಳಿ ಹುಲಿ ಗೋಚರ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ಗಣೇಶನಗುಡಿ ಸಮೀಪದ ತಾರಕ ನಾಲೆ ಸಮೀಪದ ಇಟ್ಟಿಗೆ ಕಾರ್ಖಾನೆ ಬಳಿ ಜಮೀನಿನಲ್ಲಿ ಸೋಮವಾರ ಹುಲಿ ಕಾಣಿಸಿದ್ದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಕಾರ್ಖಾನೆಯ ಕಾರ್ಮಿಕರೊಬ್ಬರು ಹುಲಿಯ ಚಿತ್ರವನ್ನು ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ತಕ್ಷಣ ಅಕ್ಕಪಕ್ಕದ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಹೆಜ್ಜೆ ಗುರುತಿನ ಜಾಡು ಹಿಡಿದು, ಕಬಿನಿ ಹಿನ್ನೀರಿನ ಕಡೆ ಹುಲಿ ತೆರಳಿದೆ. ಬೀಚನಹಳ್ಳಿ, ಗಣೇಶನ ಗುಡಿ, ನೇರಳೆ, ನೇರಳೆಹೊಸೂರು, ಎಲಮತ್ತೂರು ಸುತ್ತಮುತ್ತಲಿನ ಗ್ರಾಮಸ್ಥರು ಜಾಗೃತರಾಗಿರಬೇಕು ಎಂದು ತಿಳಿಸಿದ್ದಾರೆ.

'ಕರ್ತವ್ಯಕ್ಕೆ ಗೈರು: ಸಿಎಟಿಯಲ್ಲೇ ಇತ್ಯರ್ಥವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಹಾರ ವಿಧಾನಸಭೆ ಚುನಾವಣೆ ಕರ್ತವ್ಯಕ್ಕೆ ಗೈರಾಗಿದ್ದ ಕಾರಣಕ್ಕೆ ಮುಜರಾಯಿ ಇಲಾಖೆ ಆಯುಕ್ತ ಎಂ.ವಿ. ವೆಂಕಟೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿರುವ ಪ್ರಕರಣ ಕೇಂದ್ರೀಯ ಆಡಳಿತ ನ್ಯಾಯ ಮಂಡಳಿಯಲ್ಲೇ (ಸಿಎಟಿ) ಇತ್ಯರ್ಥವಾಗಲಿ' ಎಂದು ಹೈಕೋರ್ಟ್ ಹೇಳಿದೆ.

ಸೇವೆಯಿಂದ ಅಮಾನತುಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿದ ಆದೇಶಕ್ಕೆ ಮಧ್ಯಂತರ ತಡೆ ನೀಡಲು ನಿರಾಕರಿಸಿದ್ದ ಸಿಎಟಿ ಕ್ರಮವನ್ನು ಪ್ರಶ್ನಿಸಿ ಎಂ.ವಿ.ವೆಂಕಟೇಶ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಈಗಾಗಲೇ ಪ್ರಕರಣದ ವಿಚಾರಣೆ ನಡೆಸಿರುವ ಸಿಎಟಿ, ಅರ್ಜಿದಾರರ ಮನವಿ ಪರಿಗಣಿಸಲಾಗುವುದು ಎಂದು ನವೆಂಬರ್ 4ರ ಆದೇಶದಲ್ಲಿ ತಿಳಿಸಿದೆ. 'ಪ್ರಕರಣವನ್ನು ಸಿಎಟಿಯೇ ಪರಿಶೀಲಿಸಲಿ. ಅರ್ಜಿದಾರರು ತಮ್ಮ ವಾದ, ಸಮರ್ಥನೆ, ಆಕ್ಷೇಪಣೆಗಳೇನೇ ಇದ್ದರೂ ಸಿಎಟಿ ಮುಂದೆಯೇ ಮಂಡಿಸಲಿ' ಎಂದು ಹೇಳಿ ಅರ್ಜಿ ವಿಲೇವಾರಿ ಮಾಡಿತು.

ಬಿಹಾರ ಚುನಾವಣೆ ವೀಕ್ಷಕರಾಗಿ ಎಂ.ವಿ. ವೆಂಕಟೇಶ್ ಅವರನ್ನು ನಿಯೋಜಿಸಲಾಗಿತ್ತು. ಅವರು ಅನಾರೋಗ್ಯದ ಕಾರಣ ನೀಡಿ ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಚುನಾವಣೆ ಆಯೋಗದ ನಿರ್ದೇಶನದ ಸರ್ಕಾರ ಅವರನ್ನು ಅಮಾನತುಗೊಳಿಸಿತ್ತು.

ಸಿಎಟಿ ಆದೇಶ ತಡೆಗೆ ನಕಾರ

ಟೆಲಿಫೋನ್ ಕದ್ದಾಲಿಕೆ ಆರೋಪಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧದ ಇಲಾಖಾ ತನಿಖೆ ರದ್ದುಗೊಳಿಸಿರುವ ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಸಿಎಟಿ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ಪ್ರತಿವಾದಿ ಅಲೋಕ್ ಕುಮಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಅಂತಿಮ ವಿಚಾರಣೆಯನ್ನು ಡಿಸೆಂಬರ್ 4ಕ್ಕೆ ಮುಂದೂಡಿತು.

ಪ್ರಕರಣವೇನು?: ಟೆಲಿಫೋನ್ ಕದ್ದಾಲಿಕೆ ಮಾಡಿದ್ದಾರೆಂಬ ಆರೋಪ 2019ರಲ್ಲಿ ಎದುರಾಗಿತ್ತು. ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ, ಅಲೋಕ್ ಕುಮಾರ್ ವಿರುದ್ಧ ಬಿ ಅಂತಿಮ ವರದಿ ಸಲ್ಲಿಸಿತ್ತು. ಇದೇ ವೇಳೆ ರಾಜ್ಯ ಸರ್ಕಾರ, ಇಲಾಖಾ ತನಿಖೆಗೆ ಆದೇಶಿಸಿತ್ತು.ಅರ್ಜಿದಾರರಿಗೆ ಸಿಗಬೇಕಾದ ಬಡ್ತಿ ಸೇರಿದಂತೆ ಇತರೆ ಸೌಲಭ್ಯಗಳಿಗೆ ತಡೆ ನೀಡಿತ್ತು.

ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಸಿಎಟಿ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಸಿಎಟಿಯ ಮೂವರು ಸದಸ್ಯರ ಪೀಠವು ಅಲೋಕ್ ಕುಮಾರ್ ವಿರುದ್ಧದ ತನಿಖೆ ರದ್ದುಗೊಳಿಸಿ ಆದೇಶಿಸಿತ್ತು ಮತ್ತು ಅವರಿಗೆ ಸಲ್ಲಬೇಕಾದ ಎಲ್ಲ ರೀತಿಯ ಸವಲತ್ತುಗಳನ್ನು ನೀಡಬೇಕು' ಎಂದು ಆದೇಶಿಸಿತ್ತು.

ಅನಾರೋಗ್ಯಪೀಡಿತ ಎಂಬುದನ್ನು ಖಾತರಿಪಡಿಸಲು ಕೋರ್ಟ್ ಸೂಚನೆ

ಶಾಸಕ ಸೈಲ್ ಮಧ್ಯಂತರ ಜಾಮೀನು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಲೇಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರಿಗೆ ಈ ಮೊದಲು ನೀಡಲಾಗಿದ್ದ ಮಧ್ಯಂತರ ವೈದ್ಯಕೀಯ ಜಾಮೀನಿನ ಅವಧಿಯನ್ನು ಹೈಕೋರ್ಟ್ ಇದೇ 13ರವರೆಗೆ ವಿಸ್ತರಿಸಿದೆ.

ಜಾರಿ ನಿರ್ದೇಶನಾಲಯ ದಾಖಲಿಸಿರುವ ಅಕ್ರಮ ಹಣ ವರ್ಗಾವಣೆ ಆರೋಪದ ಪ್ರಕರಣದಲ್ಲಿ ಮಧ್ಯಂತರ ವೈದ್ಯಕೀಯ ಜಾಮೀನು ಮಂಜೂರು ಮಾಡಿದ್ದನ್ನು ರದ್ದುಪಡಿಸಿ ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಆದೇಶವನ್ನು ಪ್ರಶ್ನಿಸಿ ಸತೀಶ್ ಸೈಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆಯಲ್ಲಿ ಸೈಲ್ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ ಅವರ ವಾದವನ್ನು ಆಲಿಸಿದ ನ್ಯಾಯಪೀಠ, 'ಅರ್ಜಿದಾರರಿಗೆ ಮಂಜೂರು ಮಾಡಲಾಗಿರುವ ವೈದ್ಯಕೀಯ ಮಧ್ಯಂತರ ಜಾಮೀನನ್ನು ಇದೇ 13ವರೆಗೆ ವಿಸ್ತರಿಸಲಾಗಿದೆ. ಏತನ್ಮಧ್ಯೆ, ಸೈಲ್ ಅವರ ಆರೋಗ್ಯ ಪರಿಸ್ಥಿತಿಗೆ ಸಂಬಂಧಿಸಿದ ದಾಖಲೆಯನ್ನು ಪರಿಶೀಲಿಸಿ ಅದನ್ನು ಖಾತರಿಪಡಿಸಲು ಯಾವ ವೈದ್ಯರನ್ನು ನೇಮಿಸಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಸಲಹೆ ನೀಡಬೇಕು' ಎಂದು ಆದೇಶಿಸಿತು.

'ಸತೀಶ್ ಸೈಲ್ ಅನಾರೋಗ್ಯ ಪೀಡಿತರಾಗಿದ್ದಾರೆ ಎಂಬ ಬಗೆಗಿನ ವೈದ್ಯಕೀಯ ದಾಖಲೆಯನ್ನು ಖಾತರಿಪಡಿಸಬೇಕು' ಎಂದು ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ಅವರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಿತು. ಸೈಲ್ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಹಾಜರಿದ್ದರು.



20 ಗುಂಟೆ ಒತ್ತುವರಿ: ಒಂದು ವರ್ಷ ಜೈಲು ಶಿಕ್ಷೆ

ಬೆಳಗಾವಿ ಜಿಲ್ಲೆ ಕಾಗವಾಡ ತಾಲ್ಲೂಕಿನ ಕಸಬಾ ವ್ಯಾಪ್ತಿಯ ಐನಾಪೂರ ಗ್ರಾಮದ ಸರ್ಕಾರಿ ಜಮೀನಿನಲ್ಲಿ 20 ಗುಂಟೆ ಒತ್ತುವರಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಇದೇ ಗ್ರಾಮದ ಅಡಿವೆಪ್ಪ ಬಿನ್ ಭೂತಾಳಿ ಅಡಿಸೇರಿ ಎಂಬುವರಿಗೆ 'ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ' 1 ವರ್ಷ ಸಾದಾ ಜೈಲು ಶಿಕ್ಷೆ ಹಾಗೂ ₹5 ಸಾವಿರ ದಂಡ ವಿಧಿಸಿದೆ.

ಐನಾಪೂರ ಗ್ರಾಮದ ಸರ್ವೆ ನಂಬರ್ 69/ಎ ನಲ್ಲಿರುವ 119.26 ಎಕರೆ ಸರ್ಕಾರಿ ಜಮೀನಿನಲ್ಲಿ 20 ಗುಂಟೆ ಜಮೀನನ್ನು ಅಡಿವೆಪ್ಪ (59) ಒತ್ತುವರಿ ಮಾಡಿದ್ದಾರೆ' ಎಂದು ಆರೋಪಿಸಿ ಕಾಗವಾಡ ತಹಶೀಲ್ದಾರ್ ಆರೋಪಿಸಿ ದೂರು ನೀಡಿದ್ದರು.

ಈ ದೂರಿನ ವಿಚಾರಣೆ ನಡೆಸಿದ 'ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ'ದ 2ನೇ ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯರಾದ ಪಾಟೀಲ ನಾಗಲಿಂಗನಗೌಡ ಮತ್ತು ಕೆ.ಎಚ್.ಅಶ್ವತ್ಥ ನಾರಾಯಣ ಗೌಡ ಈ ಕುರಿತಂತೆ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.

'ಆರೋಪಿತರು ದಂಡ ಪಾವತಿಸಲು ವಿಫಲವಾದಲ್ಲಿ 3 ತಿಂಗಳ ಸಾದಾ ಜೈಲು ಶಿಕ್ಷೆಯನ್ನು ಹೆಚ್ಚುವರಿಯಾಗಿ ಅನುಭವಿಸಬೇಕು. ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಮುಫತ್ತು ಗಾಯರಾಣ ಜಮೀನಲ್ಲಿ (ಸರ್ಕಾರಿ ಜಮೀನು) ಆರೋಪಿಗೆ ಮಂಜೂರಾಗಿರುವ 30x40 ಅಡಿ ಹೊರತುಪಡಿಸಿ ಉಳಿದ ಸರ್ಕಾರಿ ಜಮೀನನ್ನು ಕೂಡಲೇ ತೆರವುಗೊಳಿಸಬೇಕು. ಈ ಕುರಿತಂತೆ 60 ದಿನಗಳ ಒಳಗಾಗಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು' ಎಂದು ಕಾಗವಾಡ ತಹಶೀಲ್ದಾರ್‌ಗೆ ನಿರ್ದೇಶಿಸಲಾಗಿದೆ.

ಚಿಟಿಕೆ ಸುದ್ದಿ

ದರೋಜಿ ಬಳಿ ನೈಟ್‌ಜಾರ್ ಪಕ್ಷಿ ಗೋಚರ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ದರೋಜಿ ಕರಡಿಧಾಮ ಪ್ರದೇಶದಲ್ಲಿ ಕುರುಡುಗಪ್ಪಟ (ಸವನ್ನಾ ನೈಟ್‌ಜಾರ್) ಎಂಬ ಅಪರೂಪದ ನಿಶಾಚರ ಪಕ್ಷಿ ಗೋಚರಿಸಿದೆ.

ಪಕ್ಷಿ ವೀಕ್ಷಣೆ ಪ್ರವಾಸಿ ಸಂಘಟನೆ 'ನೇಚರ್ ಇಂಡಿಯಾ ಮುಂಬೈ' ನ ಆದೇಶ್ ಶಿವಕರ್ ಅವರ ತಂಡದ ಸದಸ್ಯೆ ಅಂಜಲಿ ಕೇಲ್ಕರ್ ಅವರ ಕ್ಯಾಮೆರಾ ಕಣ್ಣಿಗೆ ಈ ಪಕ್ಷಿ ಸೆರೆಯಾಗಿದೆ.

ದೊಡ್ಡ ಕಣ್ಣು, ವಿಶಿಷ್ಟ ಧ್ವನಿಯ ಈ ಪಕ್ಷಿಯು ನೆಲದಲ್ಲಿ ಗೂಡು ಕಟ್ಟಿ, ಮರದಲ್ಲಿ ವಿಶ್ರಮಿಸುತ್ತದೆ. 'ನೈಟ್‌ಜಾರ್' ಇರುವಿಕೆ ಇಲ್ಲಿಗೆ ಸಮೀಪದ ಗುಂಡಾ ಮೀಸಲು ಅರಣ್ಯ ಪ್ರದೇಶದಲ್ಲಿದೆ ಎಂಬ ಮಾಹಿತಿ ಇತ್ತು. ಆದರೆ, ಸುಲಭವಾಗಿ ಕಾಣಸಿಗುತ್ತಿರಲಿಲ್ಲ.

'ನತ್ತಿಂಗ ಎಂದೂ ಕರೆಯಿಸಿಕೊಳ್ಳುವ ಇಂಡಿಯನ್ ನೈಟ್‌ಜಾರ್ ಪಕ್ಷಿ ಸಾಮಾನ್ಯವಾಗಿ ಕಾಣಸಿಗುತ್ತದೆ. ಅದೇ ಕುಟುಂಬದ ಸವನ್ನಾ ನೈಟ್‌ಜಾರ್‌ನ ಆವಾಸಸ್ಥಾನ ಉತ್ತರ ಪಾಕಿಸ್ತಾನದಿಂದ ಇಂಡೋನೇಷ್ಯಾದವರೆಗಿನ ವ್ಯಾಪ್ತಿ ಹೊಂದಿದೆ' ಎಂದು ಪಕ್ಷಿತಜ್ಞ ಪಂಪಯ್ಯಾ ಮಳಿಮಠ 'ಪ್ರಜಾವಾಣಿ'ಗೆ ತಿಳಿಸಿದರು.

ಗ್ರಾ.ಪಂ ಅಧ್ಯಕ್ಷೆ ಸದಸ್ಯತ್ವ ರದ್ದು

ಮಸ್ಕಿ (ರಾಯಚೂರು): ತಾಲ್ಲೂಕಿನ ತಲೇಖಾನ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಉಮ್ಮವ್ವ ಅವರ ಸದಸ್ಯತ್ವ ರದ್ದುಗೊಳಿಸಿ, 6 ವರ್ಷ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶ ಹೊರಡಿಸಿದೆ.

2023–24 ಮತ್ತು 2024–25ನೇ ಸಾಲಿನಲ್ಲಿ ನರೇಗಾ ಯೋಜನೆಗಳ ಕಾಮಗಾರಿಗಳನ್ನು ಪರಿಶೀಲಿಸದೇ ಹಣ ಪಾವತಿಸಲಾಗಿದೆ. 15ನೇ ಹಣಕಾಸು ಯೋಜನೆ ಕಾಮಗಾರಿಗಳಲ್ಲಿಯೂ ನಿಯಮ ಉಲ್ಲಂಘಿಸಿದ್ದು, ನಿಯಮದಂತೆ ಸದಸ್ಯತ್ವ ರದ್ದುಗೊಳಿಸಲಾಗಿದೆ ಎಂದು ತಿಳಿಸಿದೆ.

ಕಾಡಾನೆ ದಾಳಿ; ಕಾರ್ಮಿಕ ಸಾವು

ಮಡಿಕೇರಿ: ಕೊಡಗು ಜಿಲ್ಲೆಯ ಪಾಲಿಬೆಟ್ಟ ಸಮೀಪದ ಎಮ್ಮೆಗುಂಡಿ ಕಾಫಿತೋಟದಲ್ಲಿ ಸೋಮವಾರ ಕಾಡಾನೆ ದಾಳಿಯಿಂದ ಕಾರ್ಮಿಕ ಹನುಮಂತ (57) ಮೃತಪಟ್ಟರು.

ಕಾಡಾನೆ ಟ್ರಾಕರ್ ಆಗಿಯೂ ಅವರು ಕಾರ್ಯನಿರ್ವಹಿಸುತ್ತಿದ್ದರು. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿದ್ದರು.

12 ಜನರಿಗೆ ಕಡಿದ ಹುಚ್ಚು ನಾಯಿ

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಕಣಜಿ ಗ್ರಾಮದಲ್ಲಿ ಸೋಮವಾರ ಮಗು ಸೇರಿದಂತೆ 12 ಜನರಿಗೆ ಹುಚ್ಚು ನಾಯಿ ಕಡಿದಿದೆ.

6 ಜನ ಸರ್ಕಾರಿ ಆಸ್ಪತ್ರೆಯಲ್ಲಿ, ಉಳಿದವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಸಿಟ್ಟಿಗೆದ್ದ ಗ್ರಾಮಸ್ಥರು ನಾಯಿಯನ್ನು ಅಟ್ಟಾಡಿಸಿ ಹೊಡೆಯಲೂ ಯತ್ನಿಸಿದರು.

ಕಾಡಾನೆ ಸಾವು ವರದಿಗೆ ಸೂಚನೆ

ರಾಮನಗರ: ಕನಕಪುರ ತಾಲ್ಲೂಕಿನ ಸಾತನೂರು ಅರಣ್ಯ ವಲಯದ ಹಾರೋಬೆಲೆ ಜಲಾಶಯದ ಹಿನ್ನೀರಿನಲ್ಲಿ ಎರಡು ಕಾಡಾನೆ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ವರದಿ ನೀಡುವಂತೆ ಅರಣ್ಯ ಇಲಾಖೆ ಮೇಲಧಿಕಾರಿಗಳು ಕೆಳ ಹಂತದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬನ್ನೇರುಘಟ್ಟ ಅರಣ್ಯಕ್ಕೆ ಕೂನೂರು ಹಿನ್ನೀರು ಮಾರ್ಗವಾಗಿಯೇ ಆನೆಗಳನ್ನು ಮರಳಿ ಕಾಡಿಗೆ ಓಡಿಸಲಾಗುತ್ತಿತ್ತು. ಅದರಂತೆ ಏಳು ಆನೆಗಳನ್ನು ಕಾಡಿಗೆ ಓಡಿಸುವ ಕಾರ್ಯಾಚರಣೆಯಲ್ಲಿ ಎರಡು ಆನೆಗಳು ಮಾತ್ರ ನೀರಿನಲ್ಲಿ ಮುಳುಗಿ ಜೀವ ಕಳೆದುಕೊಳ್ಳಲು ಕಾರಣವಾದ ಅಂಶಗಳೇನು ಎಂಬುದು ಸೇರಿದಂತೆ ಆನೆ ಕಾರ್ಯಾಚರಣೆ ಬಗ್ಗೆ ಸಮಗ್ರ ವರದಿ ಕೇಳಿದ್ದಾರೆ.

ಕಳೆ ತೆರವಿಗೆ ಪತ್ರ: ಆನೆಗಳು ಸಾಗುವ ಮಾರ್ಗದಲ್ಲಿ ಬೆಳೆದಿರುವ ಕಳೆಗಳನ್ನು ತೆರವುಗೊಳಿಸಿದರೆ ಮತ್ತೆ ಇಂತಹ ಅವಘಡ ಸಂಭವಿಸುವುದಿಲ್ಲ ಎಂಬುದು ಇಲಾಖೆಯ ಚಿಂತನೆಯಾಗಿದೆ. ಕಳೆ ತೆರವು ಕುರಿತು ಕಾವೇರಿ ನೀರಾವರಿ ನಿಗಮಕ್ಕೆ ಪತ್ರ ಬರೆಯಲಾಗುವುದು' ಎಂದು ಎಸಿಎಫ್ ರಾಮಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ತ್ರಿವಳಿ ತಜ್ಞರ ನಿಯೋಜನೆಗೆ ಕೌನ್ಸೆಲಿಂಗ್

147 ತಾಲ್ಲೂಕು ಆಸ್ಪತ್ರೆಗಳು, 42 ಸಿಎಚ್‌ಸಿಗಳಲ್ಲಿ 24x7 ಸೇವೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ, ನವಜಾತ ಶಿಶುಗಳ ಸಾವಿನ ಪ್ರಮಾಣ ತಗ್ಗಿಸಲು ತಾಲ್ಲೂಕು ಮಟ್ಟದ 147 ಆಸ್ಪತ್ರೆಗಳು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 42 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಪ್ರಸೂತಿ, ಅರಿವಳಿಕೆ ಮತ್ತು ಮಕ್ಕಳ ತಜ್ಞರನ್ನು ತರ್ಕಬದ್ಧಗೊಳಿಸಿ, ಮರು ನಿಯೋಜಿಸಲು ಕೌನ್ಸೆಲಿಂಗ್ ನಡೆಯಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, 'ಕೌನ್ಸೆಲಿಂಗ್ ಮೂಲಕ ಮರುನಿಯೋಜಿಸುವ ಕುರಿತು ಆದೇಶವನ್ನು ಹೊರಡಿಸಲಾಗಿದೆ. ಈ ವಿಚಾರವಾಗಿ ವೈದ್ಯರ ಜತೆ ಮಾತುಕತೆ ನಡೆಸಿದ್ದು, ಬಹುತೇಕ ವೈದ್ಯರು ಒಪ್ಪಿಗೆ ಸೂಚಿಸಿದ್ದಾರೆ' ಎಂದು ಹೇಳಿದರು.

ಈ ಕ್ರಮದಿಂದಾಗಿ, ತಾಲ್ಲೂಕು-ಮಟ್ಟದ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದಿನದ 24 ಗಂಟೆ ತಜ್ಞರ ಸೇವೆ ಸಿಗಲಿದೆ. ಗರ್ಭಿಣಿಯರು ಮತ್ತು ನವಜಾತ ಶಿಶುಗಳ ಸಾವನ್ನು ತಪ್ಪಿಸಬಹುದು ಎಂದರು.

ಪ್ರಸೂತಿ, ಅರಿವಳಿಕೆ ಮತ್ತು ಮಕ್ಕಳ ತಜ್ಞರು (ತ್ರಿವಳಿ ತಜ್ಞರು) ತಾಲ್ಲೂಕು ಆಸ್ಪತ್ರೆಗಳಲ್ಲಿ 24 ಗಂಟೆಯೂ ಪಾಳಿಗಳಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ. ಇದ್ದಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ತಜ್ಞರ ಸಂಖ್ಯೆ ಹೆಚ್ಚಿಸುವುದರ ಜತೆಗೆ, ಯಾವುದೇ ಆಸ್ಪತ್ರೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ತಜ್ಞರಿದ್ದರೆ, ತಜ್ಞರ ಸಂಖ್ಯೆ ಕೊರತೆ ಇರುವ ಕಡೆಗೆ ನಿಯೋಜಿಸಲಾಗುವುದು. ತಜ್ಞ ವೈದ್ಯರು ಇಲ್ಲದ ಕಾರಣಕ್ಕೆ ಯಾವ ತಾಯಿಯೂ ಮೃತಪಡಬಾರದು ಎಂಬುದು ಸರ್ಕಾರದ ಆದ್ಯತೆ ಎಂದು ಅವರು ತಿಳಿಸಿದರು.

ಕಡಿಮೆ ಕಾರ್ಯಕ್ಷಮತೆ ಹೊಂದಿರುವ 200 ಸಮುದಾಯ ಆರೋಗ್ಯ ಕೇಂದ್ರಗಳ ತಜ್ಞರನ್ನು ಹೆಚ್ಚಿನ ಕೆಲಸದ ಆಸ್ಪತ್ರೆಗಳಿಗೆ ಮರು ನಿಯೋಜಿಸಲಾಗುವುದು. ಆರೋಗ್ಯ ವಿಸ್ತರಣಾ ಕೇಂದ್ರ ಮತ್ತು ಎನ್‌ಎಚ್‌ಎಂ ಕಾರ್ಯಕ್ರಮಗಳಾದ ಎನ್‌ಸಿಡಿ ಮತ್ತು ಎನ್‌ಟಿಇಪಿ ಯಲ್ಲಿರುವ ಹುದ್ದೆಗಳಿಂದ 404 ವೈದ್ಯಕೀಯ ಅಧಿಕಾರಿಗಳನ್ನು ಮರುನಿಯೋಜಿಸಲಾಗುವುದು. ಸಮಗ್ರ ತುರ್ತು ಪ್ರಸೂತಿ ಮತ್ತು ನವಜಾತ ಶಿಶು ಆರೈಕೆ ಕೇಂದ್ರಗಳನ್ನು ಬಲಪಡಿಸಲು ಕಳಪೆ ಕಾರ್ಯಕ್ಷಮತೆ ಹೊಂದಿರುವ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಶುಶ್ರೂಷಕರನ್ನು ಸ್ಥಳಾಂತರಿಸಲಾಗುವುದು ಎಂದು ಅವರು ವಿವರಿಸಿದರು.

'ನಮ್ಮ ಪ್ರಯತ್ನಕ್ಕೆ ಹೆಚ್ಚಿನ ಬಲ ತುಂಬಲು ಹೆಚ್ಚುವರಿಯಾಗಿ 104 ರೇಡಿಯಾಲಜಿಸ್ಟ್‌ಗಳು ಮತ್ತು 23 ವೈದ್ಯರ ಹುದ್ದೆಗಳನ್ನು ಸೃಜಿಸಲಾಗಿದೆ. 15 ಜಿಲ್ಲಾ ಆಸ್ಪತ್ರೆಗಳಿಗೆ 125 ಸೂಪರ್ ಸ್ಪೆಷಲಿಸ್ಟ್‌ಗಳನ್ನು ನಿಯೋಜಿಸಲು ತೀರ್ಮಾನಿಸಲಾಗಿದೆ. ಇವರಲ್ಲಿ ಹೃದ್ರೋಗ ತಜ್ಞರು, ನರ ವಿಜ್ಞಾನಿಗಳು, ಮೂತ್ರಪಿಂಡ ತಜ್ಞರು, ಕ್ಯಾನ್ಸರ್ ತಜ್ಞರು, ಗ್ಯಾಸ್ಟ್ರೊ ಎಂಟರಾಲಜಿಸ್ಟ್‌ಗಳು, ಶ್ವಾಸಕೋಶ ತಜ್ಞರು, ವೃದ್ಧಾಪ್ಯ ತಜ್ಞರು ಮತ್ತು ಕ್ರಿಟಿಕಲ್ ಕೇರ್ ತಜ್ಞರೂ ಇರಲಿದ್ದಾರೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಕಾರ್ಯಕ್ಷಮತೆ ಸುಧಾರಿಸುವ ಅಂದರೆ ತಿಂಗಳಿಗೆ 30 ಕ್ಕಿಂತ ಹೆಚ್ಚು ಹೆರಿಗೆ ಮಾಡಿಸುವ ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುತ್ತದೆ ಮತ್ತು ಹೆಚ್ಚಿನ ತಜ್ಞರನ್ನು ನಿಯೋಜಿಸಲಾಗುತ್ತದೆ. ಕಾರ್ಯ ನಿರ್ವಹಣೆಯನ್ನು ಮೂರು ತಿಂಗಳಿಗೊಮ್ಮೆ ಪರಿಶೀಲನೆಗೊಳಪಡಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- ಕೆಲ ತಾಲ್ಲೂಕು ಆಸ್ಪತ್ರೆಗಳಲ್ಲಿ ಹೆರಿಗೆ ಸಂಖ್ಯೆ 30ಗಳಿಗೆ 3ಕ್ಕಿಂತ ಕಡಿಮೆ
- ಕಡಿಮೆ ಕಾರ್ಯಕ್ಷಮತೆಯ ಸಿಎಚ್‌ಸಿಗಳಿಗೆ 2 ಎಂಬಿಬಿಎಸ್ ವೈದ್ಯರ ನಿಯೋಜನೆ
- 102 ವೈದ್ಯ ಹುದ್ದೆಗಳು ಖಾಲಿ ಇದ್ದು, ಹೆಚ್ಚು ವೇತನ ನೀಡಿದರೂ ಬರುತ್ತಿಲ್ಲ

ತಗ್ಗಿದ ತಾಯಂದಿರ ಮರಣ ಪ್ರಮಾಣ



(ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 24 ರಷ್ಟು ಮರಣ ಪ್ರಮಾಣ ತಗ್ಗಿದೆ)

> ತಿಂಗಳಿಗೆ ₹2 ಲಕ್ಷದಿಂದ ₹3 ಲಕ್ಷ ತೆಗೆದುಕೊಳ್ಳುವ ವೈದ್ಯರು ತಿಂಗಳಿಗೆ 3–4 ಹೆರಿಗೆ ಮಾಡಿಸಿದರೆ ಹೆಚ್ಚು. ಇದರಿಂದ ಏನು ಪ್ರಯೋಜನ?
>
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಸುದ್ದಿ 2 ನಿಮಿಷ

2ನೇ ಬೆಳೆಗೂ ನೀರಿಗೆ ಆಗ್ರಹ 12ರಿಂದ 4 ಜಿಲ್ಲೆ ರೈತರ ಪಾದಯಾತ್ರೆ

ಬಳ್ಳಾರಿ: ತುಂಗಭದ್ರಾ ಕೊಳ್ಳದ ಜಿಲ್ಲೆಗಳಲ್ಲಿ ಎರಡನೇ (ಬೇಸಿಗೆ) ಬೆಳೆಗೆ ನೀರು ಒದಗಿಸಲು ಆಗ್ರಹಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯು ಸಿರುಗುಪ್ಪದಿಂದ ಹೊಸಪೇಟೆವರೆಗೆ ನವೆಂಬರ್ 12 ರಿಂದ 17ರವರೆಗೆ ಪಾದಯಾತ್ರೆ ಹಮ್ಮಿಕೊಂಡಿದೆ.

'ಸಿರುಗುಪ್ಪ ತಾಲ್ಲೂಕಿನ ಕರೂರಿನಿಂದ ಪಾದಯಾತ್ರೆ ಆರಂಭವಾಗಿ ಕುರುಗೋಡು, ಕಂಪ್ಲಿ ಮೂಲಕ ಸಾಗಿ ನ.17ಕ್ಕೆ ತುಂಗಭದ್ರಾ ಜಲಾಶಯದ ಎದುರು ಸಮಾವೇಶಗೊಳ್ಳಲಿದೆ. ಬಳಿಕ ಅನಿರ್ದಿಷ್ಟ ಧರಣಿ ನಡೆಯಲಿದೆ' ಎಂದು ರೈತಸಂಘದ ಅಧ್ಯಕ್ಷ ಕರೂರು ಆರ್. ಮಾಧವ ರೆಡ್ಡಿ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಈಗಿರುವ ಬೆಳೆಗೆ ಡಿಸೆಂಬರ್‌ವರೆಗೆ ನೀರು ಪೂರೈಸಬೇಕು. ಬಳಿಕ ಎರಡನೇ ಬೆಳೆಗೆ ನೀರು ಒದಗಿಸಬೇಕು. ಜಲಾಶಯದ ಎಲ್ಲ ಗೇಟ್‌ಗಳನ್ನು ಮುಂದಿನ ಜೂನ್ ವೇಳೆಗೆ ಅಳವಡಿಸಬೇಕು. ಬಳ್ಳಾರಿ, ವಿಜಯನಗರ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ರೈತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವರು' ಎಂದು ತಿಳಿಸಿದರು.

14ಕ್ಕೆ ಐಸಿಸಿ ಸಭೆ: ಜಲಾಶಯದ ನೀರಾವರಿ ಸಲಹಾ ಸಮಿತಿಯ ಸಭೆ ನ. 14ರಂದು ನಡೆಯಲಿದೆ. ಸಮಿತಿಯ ಅಧ್ಯಕ್ಷ, ಸಚಿವ ಶಿವರಾಜ ತಂಗಡಗಿ, ಜಲ ಸಂಪನ್ಮೂಲ ಸಚಿವ ಡಿ.ಕೆ ಶಿವಕುಮಾರ್ ಭಾಗವಹಿಸುವರು.

ಹೆಸರು, ಉದ್ದು ಖರೀದಿಗೆ ಆಗ್ರಹಿಸಿ ಟ್ರ್ಯಾಕ್ಟರ್ ರ‍್ಯಾಲಿ, ಕಚೇರಿಗೆ ಮುತ್ತಿಗೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಹೆಸರುಕಾಳು, ಉದ್ದು ಖರೀದಿಸಲು ಖರೀದಿ ಕೇಂದ್ರದ ಸಿಬ್ಬಂದಿ ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿ, ಪಟ್ಟಣದಲ್ಲಿ ಸೋಮವಾರ ರೈತರು ಟ್ರ್ಯಾಕ್ಟರ್‌ಗಳ ಸಹಿತ ಬೃಹತ್ ರ‍್ಯಾಲಿ ನಡೆಸಿದರು. ಪ್ರತಿಭಟನಕಾರರು ಉಪ ವಿಭಾಗಾಧಿಕಾರಿ ಕಚೇರಿಗೂ ಮುತ್ತಿಗೆ ಹಾಕಿದರು.

ಡೊಳ್ಳು, ತಮಟೆ ಬಾರಿಸುತ್ತ, ಹಸಿರು ಟವಲ್ ಬೀಸುತ್ತ ಹಲವರು ಪಾದಯಾತ್ರೆ ಮಾಡಿದರು. ತಾಲ್ಲೂಕಿನ ದೊಡವಾಡ, ಗುಡಕಟ್ಟಿ, ನನಗುಂಡಿಕೊಪ್ಪ, ಯಡಳ್ಳಿ, ಕರೀಕಟ್ಟಿ, ಸಂಗ್ರೇಶಕೊಪ್ಪ ಸೇರಿ ವಿವಿಧ ಊರಿನ ಜನರೂ ಪಾಲ್ಗೊಂಡರು.

'ಈ ಬಾರಿ ಅತಿವೃಷ್ಟಿಯಾಗಿದೆ. ಹೆಸರುಕಾಳು, ಉದ್ದು ಸೇರಿ ಎಲ್ಲ ಧಾನ್ಯಗಳನ್ನು ರಾಶಿ ಮಾಡುವಾಗ ತೇವಾಂಶ ಹೆಚ್ಚಾಗಿದೆ. ಅದನ್ನೇ ನೆಪ ಮಾಡಿ, ಖರೀದಿ ಕೇಂದ್ರದ ಸಿಬ್ಬಂದಿ ಕಾಳು ಖರೀದಿಸುತ್ತಿಲ್ಲ. ರೈತರನ್ನು ಉದ್ದೇಶಪೂರ್ವಕವಾಗಿ ಸಂಕಷ್ಟಕ್ಕೆ ತಳ್ಳಲಾಗಿದೆ' ಎಂದು ಹೋರಾಟಗಾರರು ಆಕ್ರೋಶ ಹೊರಹಾಕಿದರು.

ಬಿಡಿಸಿಸಿ: ಜಾರಕಿಹೊಳಿ ಕುಟುಂಬದ ಹಿಡಿತ

'ಲಿಂಗಾಯತ' ದಾಳ ಬೀಸಿದ ಸಹೋದರರು, ಪ್ರಾಥಮಿಕ ಸದಸ್ಯತ್ವ ಇಲ್ಲದಿದ್ದರೂ ಬ್ಯಾಂಕ್ ಮೇಲೆ ಹಿಡಿತ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಜಿಲ್ಲೆಯ ರಾಜಕಾರಣದ ಮೇಲೆ ನೇರ ಪ್ರಭಾವ ಬೀರುವ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ (ಬಿಡಿಸಿಸಿ) ಬ್ಯಾಂಕ್ ಮೇಲೆ ಹಿಡಿತ ಸಾಧಿಸುವಲ್ಲಿ ಜಾರಕಿಹೊಳಿ ಸಹೋದರರು ಸಫಲವಾದರು. ಕುಟುಂಬದ 30 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಹಕಾರ ಕ್ಷೇತ್ರಕ್ಕೆ ನುಗ್ಗಿದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಶಾಸಕರಾದ ಬಾಲಚಂದ್ರ ಜಾರಕಿಹೊಳಿ, ರಮೇಶ ಜಾರಕಿಹೊಳಿ, ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಮತ್ತು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಇವರಲ್ಲಿ ಯಾರೊಬ್ಬರೂ ಡಿಸಿಸಿ ಬ್ಯಾಂಕ್‌ನ ಪ್ರಾಥಮಿಕ ಸದಸ್ಯರೂ ಆಗಿಲ್ಲ. ಆದರೆ, ಇಡೀ ಬ್ಯಾಂಕಿನ ಚಟುವಟಿಕೆಗಳನ್ನು 'ನಿಯಂತ್ರಿಸಿದರು'. ಕುಟುಂಬದ ಹೊಸ ತಲೆಮಾರು, ರಮೇಶ ಅವರ ಪುತ್ರ ಅಮರನಾಥ ಮತ್ತು ಸತೀಶ ಪುತ್ರ ರಾಹುಲ್ ಅವರನ್ನು ನಿರ್ದೇಶಕ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿಸಿದರು.

ಈ ಚುನಾವಣೆ 'ಜೆ' ಕಂಪನಿ (ಜಾರಕಿಹೊಳಿ ಮತ್ತು ಜೊಲ್ಲೆ) ಹಾಗೂ 'ಕೆ' ಕಂಪನಿ (ಕತ್ತಿ) ಮಧ್ಯೆ ನೇರ ಪೈಪೋಟಿಗೆ ಸಾಕ್ಷಿಯಾಯಿತು. 16 ನಿರ್ದೇಶಕ ಸ್ಥಾನಗಳ ಪೈಕಿ 11 ಸ್ಥಾನಗಳನ್ನು ಈ ಬಣ ಗೆದ್ದಿತು. ಕತ್ತಿ ಬಣದಲ್ಲಿ ರಮೇಶ ಕತ್ತಿ, ಮಲ್ಲಣ್ಣ ಯಾದವಾಡ, ಶಾಸಕರಾದ ಲಕ್ಷ್ಮಣ ಸವದಿ, ಭರಮಗೌಡ ಕಾಗೆ, ಗಣೇಶ ಹುಕ್ಕೇರಿ ಗೆದ್ದರು. ಸೋಮವಾರ ನಡೆದ ಚುನಾವಣೆ ಕಾಲಕ್ಕೆ ಭರಮಗೌಡ ಹಾಗೂ ಗಣೇಶ ಕೂಡ 'ಜೆ' ಕಂಪನಿ ಸೇರುವ ಮೂಲಕ ಕತ್ತಿ ಬಣವನ್ನು ಮತ್ತಷ್ಟು ಬಡ ಮಾಡಿದರು.

ಜಾತಿ ದಾಳ: ಚುನಾವಣೆ ಘೋಷಣೆಗೂ ಮೊದಲೇ 'ಲಿಂಗಾಯತರನ್ನೇ ಅಧ್ಯಕ್ಷ, ಉಪಾಧ್ಯಕ್ಷ ಮಾಡುತ್ತೇವೆ' ಎಂದು ಜಾರಕಿಹೊಳಿ ಸಹೋದರರು ಪ್ರಚಾರ ಮಾಡಿದರು. ಈ ಜಾತಿ ದಾಳ ಎಸೆದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು (ಟಿಎಪಿಸಿಎಂಎಸ್) ತೆಕ್ಕೆಗೆ ತೆಗೆದುಕೊಂಡರು. 16 ಸ್ಥಾನಗಳ ಪೈಕಿ 9 ಸ್ಥಾನಗಳಿಗೆ ಅವಿರೋಧ ಆಯ್ಕೆ ಮಾಡುವುದಕ್ಕೂ ಜಾತಿ ಪ್ರಭಾವ ಬೀರಿತು.

ಖುದ್ದು ಸತೀಶ ಜಾರಕಿಹೊಳಿ ಎರಡು ತಿಂಗಳಿಂದ ಜಿಲ್ಲೆಯಲ್ಲೇ ಬೀಡು ಬಿಟ್ಟಿದ್ದರು. ಹಳ್ಳಿ–ಹಳ್ಳಿಗಳನ್ನು ಸುತ್ತಿ ಮತಬಲ ಹೆಚ್ಚಿಸಿಕೊಂಡರು. ಇದು ಗೆಲುವಿನ ದಡ ಸೇರಿಸಿತು.

ಮತಗಳ ಬೇರು: ಸುಮಾರು ₹8,500 ಕೋಟಿ ದುಡಿಯುವ ಬಂಡವಾಳ ಹೊಂದಿದ ಈ ಬ್ಯಾಂಕ್, ₹5,200 ಕೋಟಿಗೂ ಅಧಿಕ ಸಾಲ ನೀಡಿದೆ. 5 ಲಕ್ಷಕ್ಕೂ ಹೆಚ್ಚು ಕೃಷಿ ಕುಟುಂಬಗಳು ಪ್ರತ್ಯಕ್ಷ– ಪರೋಕ್ಷವಾಗಿ ಇದರ ನೆರವು ಪಡೆದಿವೆ. ಹೀಗಾಗಿ, ಗ್ರಾಮ ಪಂಚಾಯಿತಿಯಿಂದ ಜಿಲ್ಲಾ ಪಂಚಾಯಿತಿ ಚುನಾವಣೆಯವರೆಗೆ ಎಲ್ಲದರ ಮೇಲೂ ಬ್ಯಾಂಕ್ ಪರಿಣಾಮ ಬೀರುತ್ತದೆ.

'ಬೇರು ಮಟ್ಟದಲ್ಲೇ ಮತಗಳನ್ನು ಗಟ್ಟಿಗೊಳಿಸಬೇಕು ಎಂಬ ಉಪಾಯದಿಂದ ಜಾರಕಿಹೊಳಿ ಸಹೋದರರು ಸಹಕಾರ ಕ್ಷೇತ್ರಕ್ಕೂ ಕಾಲಿಟ್ಟಿದ್ದಾರೆ' ಎಂದು ಹಿರಿಯ ಸಹಕಾರಿಗಳು ವಿಶ್ಲೇಷಣೆ ಮಾಡುತ್ತಾರೆ.

ಬೆಳಗಾವಿಯಲ್ಲಿ ಸೋಮವಾರ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಅಣ್ಣಾಸಾಹೇಬ ಜೊಲ್ಲೆ, ಉಪಾಧ್ಯಕ್ಷರಾದ ಭರಮಗೌಡ ಕಾಗೆ ಅವರು ಶಾಸಕ ಬಾಲಚಂದ್ರ ಜಾರಕಿಹೊಳಿ ನೇತೃತ್ವದಲ್ಲಿ ಗೆಲುವಿನ ನಗೆ ಬೀರಿದರು– ಪ್ರಜಾವಾಣಿ ಚಿತ್ರ

ಆಗ ದುಷ್ಮನ್– ಈಗ ದೋಸ್ತಿ

2024ರ ಲೋಕಸಭೆ ಚುನಾವಣೆಯಲ್ಲಿ ಚಿಕ್ಕೋಡಿ ಕ್ಷೇತ್ರದಲ್ಲಿ ಅಣ್ಣಾಸಾಹೇಬ ಜೊಲ್ಲೆ ಅವರು ಪ್ರಿಯಾಂಕಾ ಜಾರಕಿಹೊಳಿ ಎದುರು ಸೋತರು. ಆಗ ರಮೇಶ ಕತ್ತಿ ಜೊತೆ ದೋಸ್ತಿ ಮಾಡಿ, ಅಣ್ಣಾಸಾಹೇಬ ಅವರನ್ನು ಸೋಲಿಸಿದರು. ಈಗ ಬ್ಯಾಂಕ್ ಚುನಾವಣೆಯಲ್ಲಿ ಜೊಲ್ಲೆ ಅವರೊಂದಿಗೆ ಸ್ನೇಹ ಮಾಡಿ, ಕತ್ತಿ ಅವರ ಹಿಡಿತದಿಂದ ಬ್ಯಾಂಕ್ ಕಿತ್ತುಕೊಂಡರು.

ಲೋಕಸಭೆ ಚುನಾವಣೆಯಲ್ಲಿ ರಮೇಶ ಕತ್ತಿಯೇ ತಮ್ಮ ಸೋಲಿಗೆ ಕಾರಣವಾದರು ಎಂಬ ಸೇಡಿನಿಂದ ಅಣ್ಣಾಸಾಹೇಬ ಕೂಡ ವೈರಿ ಪಡೆ (ಜಾರಕಿಹೊಳಿ) ಸೇರಿಕೊಂಡರು. ಅವರ ನೆರವಿನೊಂದಿಗೆ ಕತ್ತಿ ಅವರನ್ನು ಬ್ಯಾಂಕಿನ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸಿದರು.

ಚುನಾವಣೆ ಪೂರ್ವ ಮಾತಿನಂತೆ ಜೊಲ್ಲೆ ಅವರನ್ನೇ ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದರು. 20 ವರ್ಷ ಅಧ್ಯಕ್ಷರಾಗಿದ್ದ ರಮೇಶ ಕತ್ತಿ ಈಗ ನಿರ್ದೇಶಕರಾಗಿ ಮಾತ್ರ ಮುಂದುವರಿದಿದ್ದಾರೆ.

ಜೊಲ್ಲೆ ಅಧ್ಯಕ್ಷ, ಕಾಗೆ ಉಪಾಧ್ಯಕ್ಷ

ಬೆಳಗಾವಿ: ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ (ಬಿಡಿಸಿಸಿ) ಅಧ್ಯಕ್ಷರಾಗಿ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮತ್ತು ಉಪಾಧ್ಯಕ್ಷರಾಗಿ ಶಾಸಕ ಭರಮಗೌಡ (ರಾಜು) ಕಾಗೆ ಅವರು ಅವಿರೋಧ ಆಯ್ಕೆಯಾಗಿದ್ದಾರೆ. 16 ನಿರ್ದೇಶಕರಲ್ಲಿ ಈ ಎರಡು ಸ್ಥಾನಗಳಿಗೆ ಈ ಇಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಶಾಸಕ ಬಾಲಚಂದ್ರ ಜಾರಕಿಹೊಳಿ ನೇತೃತ್ವದಲ್ಲಿ ಭಾನುವಾರ ತಡರಾತ್ರಿಯವರೆಗೆ ನಡೆದ ಸಭೆಯ ಪರಿಣಾಮ ಅವಿರೋಧ ಆಯ್ಕೆ ಸಾಧ್ಯವಾಯಿತು.

'ಅಧ್ಯಕ್ಷ, ಉಪಾಧ್ಯಕ್ಷ ಗಾದಿ ಮೇಲೆ ಲಿಂಗಾಯತ ಸಮುದಾಯದವರನ್ನೇ ಕೂರಿಸುತ್ತೇವೆ' ಎಂದು ಮಾತು ಕೊಟ್ಟಿದ್ದ ಜಾರಕಿಹೊಳಿ ಬಣ ಅದನ್ನು ಉಳಿಸಿಕೊಂಡಿತು.

ವಿರೋಧಿ ಬಣದಲ್ಲಿದ್ದ ಮಾಜಿ ಸಂಸದ ರಮೇಶ ಕತ್ತಿ, ಶಾಸಕ ಲಕ್ಷ್ಮಣ ಸವದಿ ಚುನಾವಣೆಯಿಂದ ದೂರವೇ ಉಳಿದರು. ಕತ್ತಿ– ಸವದಿ ಬಣದಲ್ಲಿ ಗುರುತಿಸಿಕೊಂಡಿದ್ದ ಶಾಸಕರೂ ಆದ ಭರಮಗೌಡ ಕಾಗೆ ಹಾಗೂ ಗಣೇಶ ಹುಕ್ಕೇರಿ ಸೋಮವಾರ ಬೆಳಿಗ್ಗೆ ಜಾರಕಿಹೊಳಿ ಬಣದೊಂದಿಗೆ ಕೈ ಜೋಡಿಸಿ ಅಚ್ಚರಿ ಮೂಡಿಸಿದರು.

ಅಣ್ಣಾಸಾಹೇಬ ಜೊಲ್ಲೆ

ಭರಮಗೌಡ ಕಾಗೆ

ಆರ್‌ಎಸ್‌ಎಸ್ ಕಪಟಿ: ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಎಸ್‌ಎಸ್‌ನಲ್ಲಿ ಕಪಟತನವಿದೆ. ದೇಶ ಕಟ್ಟಲು ಬಂದಿದ್ದೇವೆ ಎನ್ನುತ್ತಾರೆ. ದೇಶಕ್ಕಾಗಿ ಯಾವ ತ್ಯಾಗ ಮಾಡಿದ್ದಾರೆ ಹೇಳಲಿ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಿಡಿಕಾರಿದ್ದಾರೆ.

'ಇವರು ಸಮಾಜ ಒಡೆಯುವ ಕೆಲಸ ಮಾಡಿದ್ದಾರೆ. ದೇಶದ ಜನರ ಮಧ್ಯೆ ಜಗಳ ತಂದಿಡುತ್ತಿದ್ದಾರೆ' ಎಂದು ಅವರು ಸೋಮವಾರ ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಮಹಾತ್ಮ ಗಾಂಧಿಯನ್ನು ಕೊಂದವರು ಯಾರು ? ಯಾವ ಹಿನ್ನೆಲೆಯಿಂದ ಬಂದವರು ನೆನಪು ಮಾಡಿಕೊಳ್ಳಲಿ. ಆರ್‌ಎಸ್‌ಎಸ್ ನೋಂದಣಿ ಆಗಿಲ್ಲ. ಆದರೂ ಅದಕ್ಕೆ ಕೇಂದ್ರ ಕಚೇರಿ ಇದೆ. ಕಾರ್ಯಕರ್ತರು, ಪದಾಧಿಕಾರಿಗಳೂ ಇದ್ದಾರೆ. ಬಿಜೆಪಿ ನಾಯಕರೂ ಸಂಘದ ಕಾರ್ಯಕರ್ತರು ಎನ್ನುತ್ತಾರೆ. ಸಣ್ಣ–ಪುಟ್ಟ ಸಂಘ–ಸಂಸ್ಥೆಗಳೇ ನೋಂದಣಿ ಆಗುತ್ತವೆ. ಆದರೆ ನೋಂದಣಿ ಆಗುವುದಿಲ್ಲ ಎಂದರೆ ಹೇಗೆ' ಎಂದು ಪ್ರಶ್ನಿಸಿದರು.

'ಆರ್‌ಎಸ್‌ಎಸ್‌ಗೆ ಆಸ್ತಿ ಇದೆ ಎನ್ನುತ್ತಾರೆ. ಸಾರ್ವಜನಿಕರು, ಕಾರ್ಯಕರ್ತರು ದೇಣಿಗೆ ನೀಡುತ್ತಾರೆ ಎಂದು ಹೇಳುತ್ತಾರೆ. ಯಾರು ಎಷ್ಟು ಕೊಟ್ಟರು, ಏನು ಕೊಟ್ಟರು ಲೆಕ್ಕ ಬೇಕಲ್ಲ. ಶಾಲೆಗಳು, ವಿಶ್ವವಿದ್ಯಾಲಯ ಮಾಡಿದ್ದೇವೆ ಎನ್ನುತ್ತಾರೆ. ಅಷ್ಟೊಂದು ದೇಣಿಗೆ ಕೊಟ್ಟವರು ಯಾರು? ನೋಂದಣಿಯೇ ಆಗದ ಸಂಸ್ಥೆಗೆ ಇಷ್ಟೊಂದು ದೇಣಿಗೆ ಬರುತ್ತದಾ? ಬರಲಿ; ನಮಗೆ ಅಸೂಯೆ ಇಲ್ಲ. ಆದರೆ ಅದಕ್ಕೊಂದು ಲೆಕ್ಕ ಬೇಕಲ್ಲ. ಅದನ್ನು ಪ್ರಶ್ನಿಸಿದರೆ ದೇಶ ದ್ರೋಹಿಗಳು ಎನ್ನುತ್ತಾರೆ' ಎಂದು ಕಿಡಿಕಾರಿದರು.

ಮಾಲೂರು ವಿಧಾನಸಭಾ ಕ್ಷೇತ್ರ: ಇಂದು ಮರು ಮತ ಎಣಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮಾಲೂರು ವಿಧಾನಸಭಾ ಕ್ಷೇತ್ರದ ಮತಗಳ ಮರುಎಣಿಕೆ ಮಂಗಳವಾರ (ನ.11) ನಡೆಯಲಿದೆ.

ನಗರ ಹೊರವಲಯದ ತೋಟಗಾರಿಕೆ ಮಹಾವಿದ್ಯಾಲಯದ ಒಂದೇ ಕೊಠಡಿಯಲ್ಲಿ ಅಂಚೆ ಮತ ಹಾಗೂ ಎಲೆಕ್ಟ್ರಾನಿಕ್ ಮತಯಂತ್ರ (ಇವಿಎಂ) ಮತಗಳ ಎಣಿಕೆ ಬೆಳಗ್ಗೆ 8ಕ್ಕೆ ಆರಂಭವಾಗಲಿದೆ.

ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಲ್ಲ ಅಭ್ಯರ್ಥಿಗಳ ಸಮ್ಮುಖದಲ್ಲಿ ಸೋಮವಾರ ಭದ್ರತಾ ಕೊಠಡಿ (ಸ್ಟ್ರಾಂಗ್ ರೂಂ) ಬಾಗಿಲು ತೆರೆದು ಬಿಗಿ ಭದ್ರತೆಯಲ್ಲಿ ಇವಿಎಂ, ಇತರ ಸಾಮಗ್ರಿಗಳನ್ನು ಎಣಿಕೆ ಕೇಂದ್ರಕ್ಕೆ ಸಾಗಿಸಲಾಯಿತು.

ಉಪವಿಭಾಗಾಧಿಕಾರಿ ಡಾ.ಎಚ್.ಪಿ.ಎಸ್.ಮೈತ್ರಿ ಚುನಾವಣಾಧಿಕಾರಿ ಆಗಿದ್ದಾರೆ. ಉತ್ತರ ಪ್ರದೇಶದ ಐಎಎಸ್ ಅಧಿಕಾರಿ ಪ್ರಭು ನಾರಾಯಣಸಿಂಗ್ ಚುನಾವಣಾ ಆಯೋಗವು ವೀಕ್ಷಕರನ್ನಾಗಿ ಅವರನ್ನು ನೇಮಿಸಿದೆ.

ಶಾಸಕ, ಕಾಂಗ್ರೆಸ್‌ನ ಕೆ.ವೈ. ನಂಜೇಗೌಡರ ಸ್ಥಾನ ಅಬಾಧಿತವೊ, ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಕೆ.ಎಸ್. ಮಂಜುನಾಥಗೌಡರಿಗೆ ಅದೃಷ್ಟ ಒಲಿಯಲಿದೆಯೇ ಎಂಬ ಕುತೂಹಲ ರಾಜಕೀಯ ವಲಯದಲ್ಲಿ ಮೂಡಿದೆ.

2023ರ ಚುನಾವಣೆಯಲ್ಲಿ ನಂಜೇಗೌಡ 248 ಮತಗಳಿಂದ ಗೆದ್ದಿದ್ದರು. ಮತ ಎಣಿಕೆಯಲ್ಲಿ ಲೋಪವಾಗಿದೆ ಎಂದು ಮಂಜುನಾಥಗೌಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನಂಜೇಗೌಡರ ಆಯ್ಕೆ ಅಸಿಂಧುಗೊಳಿಸಿದ್ದ ಹೈಕೋರ್ಟ್ ಮರುಎಣಿಕೆಗೆ ಸೂಚಿಸಿತ್ತು. ಇದನ್ನು ನಂಜೇಗೌಡ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಕೆ.ವೈ.ನಂಜೇಗೌಡ

ಮಂಜುನಾಥ ಗೌಡ

ಹಲ್ಲೆ: ಪಿಡಿಒ, ಅಧ್ಯಕ್ಷರ ವಿರುದ್ಧ ಎಫ್‌ಐಆರ್

ಯಾದಗಿರಿ: ಗ್ರಾಮ ಪಂಚಾಯಿತಿ ಕ್ರಿಯಾ ಯೋಜನೆಯ ಮಾಹಿತಿ ಕೇಳಿದ್ದಕ್ಕೆ ವ್ಯಕ್ತಿಗೆ ಹಲ್ಲೆ ಮಾಡಿ, ಜೀವಬೆದರಿಕೆ ಹಾಕಿದ್ದ ದೂರಿನಡಿ ಜಿಲ್ಲೆಯ ಹಗರಟಗಿ ಗ್ರಾಮ ಪಂಚಾಯಿತಿ ಅಧ್ಯಕ್ಷ, ಪಿಡಿಒ ಸೇರಿ 10 ಮಂದಿ ವಿರುದ್ಧ ನಾರಾಯಣಪುರ ಠಾಣೆಯಲ್ಲಿ ದೂರು ದಾಖಲಾಗಿದೆ.

ಅಧ್ಯಕ್ಷ ರಾಯನಗೌಡ ಮಾಲಿ ಪಾಟೀಲ, ಪಿಡಿಒ ಬಸನಗೌಡ ಮುರಾಳ ಸೇರಿ 10 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ನೀಡಿದ್ದ ಅರುಣಕುಮಾರ್ ಅವರು 2024–25ನೇ ಸಾಲಿನ ಹಣಕಾಸು, ಕರವಸೂಲಿ ಹಾಗೂ ಕ್ರಿಯಾಯೋಜನೆ ಕುರಿತ ಮಾಹಿತಿಗೆ ಅರ್ಜಿ ಸಲ್ಲಿಸಿದ್ದರು. 'ಕ್ರಿಯಾಯೋಜನೆ ಕೇಳುವಷ್ಟು ಸೊಕ್ಕಾ' ಎಂದು ನಿಂದಿಸಿ, ಕೊಡಲಿ, ಕಬ್ಬಿಣದ ರಾಡ್, ಸಲಿಕೆಯಿಂದ ಹಲ್ಲೆ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ ಎಂದು ಹೇಳಿದ್ದಾರೆ.

5 ಕೋಟಿ ಗಿಡ ನೆಡುವ ಗುರಿ: ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ

ಡಿ.7ಕ್ಕೆ ವಿಜಯಪುರದಲ್ಲಿ 'ವೃಕ್ಷೋಥಾನ್2025'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ಡಿ.7ರಂದು ವೃಕ್ಷೋಥಾನ್-2025 ನಡೆಯಲಿದ್ದು, 15 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ' ಎಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಎಂ.ಬಿ. ಪಾಟೀಲ

'ವೃಕ್ಷೋಥಾನ್-2025' ಓಟದ ಭಿತ್ತಿಪತ್ರ, ಟಿ- ಶರ್ಟ್, ಪದಕ ಬಿಡುಗಡೆ ಮಾಡಿ ಸೋಮವಾರ ಮಾತನಾಡಿದ ಅವರು, 'ವೃಕ್ಷೋಥಾನ್‌ನಲ್ಲಿ ಒಟ್ಟು ₹10 ಲಕ್ಷ ಮೊತ್ತದ ಬಹುಮಾನ ನೀಡಲಾಗುವುದು. ಯಾವುದೇ ವಯೋಮಿತಿಯ ನಿರ್ಬಂಧವಿಲ್ಲದೆ 5 ಕಿ.ಮೀ, 10 ಕಿ.ಮೀ. ಮತ್ತು 21 ಕಿ.ಮೀ. ವಿಭಾಗದಲ್ಲಿ ವೃಕ್ಷೋಥಾನ್ ನಡೆಯಲಿದೆ' ಎಂದರು.

'ಸ್ವಚ್ಛ, ಸುಂದರ, ಹಸಿರು ವಿಜಯಪುರಕ್ಕಾಗಿ ಓಡಿ' ಎಂಬ ಘೋಷವಾಕ್ಯದಡಿ ಈ ಬಾರಿಯ ಕಾರ್ಯಕ್ರಮ ನಡೆಯಲಿದ್ದು, ಚಾರಿತ್ರಿಕ ತಾಣಗಳನ್ನೂ ಬೆಸೆಯಲಾಗಿದೆ. ಇದರಂತೆ ಗೋಲ್ ಗುಂಬಜ್, ಗಗನ್ ಮಹಲ್, ಸುಂದರೇಶ್ವರ ದೇವಸ್ಥಾನ, ಸೈನಿಕ್ ಸ್ಕೂಲ್, ನರಸಿಂಹಸ್ವಾಮಿ ದೇವಸ್ಥಾನ, ಸಿದ್ಧೇಶ್ವರ ದೇವಸ್ಥಾನ, ಇಬ್ರಾಹಿಂ ರೋಜಾ, ಬಾರಾ ಕಮಾನ್‌ಗಳಲ್ಲಿ ಇದು ಹಾದು ಹೋಗಲಿದೆ' ಎಂದರು.

'ವಿಜಯಪುರ ಜಿಲ್ಲೆಯಲ್ಲಿ ನಡೆಯುತ್ತಿರುವ 'ಕೋಟಿ ವೃಕ್ಷ ಅಭಿಯಾನ'ದಡಿ ಕಳೆದ ಒಂಬತ್ತು ವರ್ಷಗಳಲ್ಲಿ ಒಂದೂವರೆ ಕೋಟಿ ಸಸಿಗಳನ್ನು ನೆಡಲಾಗಿದೆ. 2030ರ ವೇಳೆಗೆ ಇನ್ನೂ 3.50 ಕೋಟಿ ಸಸಿಗಳನ್ನು ನೆಟ್ಟು, 5 ಕೋಟಿ ಸಸಿಗಳ ಗುರಿ ಸಾಧಿಸಲಾಗುವುದು' ಎಂದು ತಿಳಿಸಿದರು.

'ವೃಕ್ಷೋಥಾನ್-2025'ದಲ್ಲಿ ವಿದ್ಯಾರ್ಥಿಗಳು, ಪೊಲೀಸ್ ಇಲಾಖೆ, ಸೇನಾ ಸಿಬ್ಬಂದಿ, ವಿಜಯಪುರ ಸೈಕ್ಲಿಂಗ್ ಗ್ರೂಪ್, ಅರಣ್ಯ ಇಲಾಖೆ, 50ಕ್ಕೂ ಹೆಚ್ಚು ಸಂಘಸಂಸ್ಥೆಗಳು ಸಕ್ರಿಯವಾಗಿ ತೊಡಗಿಕೊಳ್ಳಲಿವೆ. ಆಸಕ್ತರು www.vrukhothon.co.in ಮೂಲಕ ನೋಂದಾಯಿಸಿಕೊಳ್ಳಬಹುದು' ಎಂದೂ ಸಚಿವರು ತಿಳಿಸಿದರು.

ಅಭಿಯಾನದ ಸಂಚಾಲಕರಾದ ಮುರುಗೇಶ್ ಪಟ್ಟಣ ಶೆಟ್ಟಿ, ಪದಾಧಿಕಾರಿಗಳಾದ ವೀರೇಂದ್ರ ಗುಚ್ಚಟ್ಟಿ, ಡಾ. ರಾಜು ಯಲಗೊಂಡ, ಸೋಮು ಮಠ ಗುರೂಜಿ, ನಂದೀಶ್ ಹುಂಡೇಕರ್ ಇದ್ದರು.

'ಹಸಿರು ಹೊದಿಕೆ ಶೇ 2.4ರಷ್ಟಕ್ಕೆ ವೃದ್ಧಿ'

'ವಿಜಯಪುರ ಜಿಲ್ಲೆಯಲ್ಲಿ 2016ರಲ್ಲಿ ಕೇವಲ ಶೇ 0.17ರಷ್ಟು ಮಾತ್ರ ಅರಣ್ಯವಿತ್ತು. ಆಗ ಜಿಲ್ಲಾಡಳಿತ ಹಾಗೂ ಪಕ್ಷಾತೀತವಾಗಿ ಹಲವು ಸಂಘ ಸಂಸ್ಥೆಗಳು, ಬಿ.ಎಲ್.ಡಿ.ಇ ಅಸೋಸಿಯೇಷನ್ ಮೂಲಕ ಕೋಟಿ ವೃಕ್ಷ ಅಭಿಯಾನ ರೂಪಿಸಲಾಯಿತು. ಈಗ ಜಿಲ್ಲೆಯಲ್ಲಿ ಹಸಿರು ಹೊದಿಕೆಯು ಶೇ 2.4ರಷ್ಟಕ್ಕೆ ವೃದ್ಧಿಸಿದೆ' ಎಂದು ಎಂ.ಬಿ. ಪಾಟೀಲ ತಿಳಿಸಿದರು.

'ಇಡೀ ದೇಶದಲ್ಲಿ ಶುದ್ಧ ಗಾಳಿಯ ಗುಣಮಟ್ಟದಲ್ಲಿ ವಿಜಯಪುರ ಜಿಲ್ಲೆ ತೃತೀಯ ಸ್ಥಾನದಲ್ಲಿದೆ. ಅಂತರ್ಜಲ ಮಟ್ಟ ವೃದ್ಧಿಸಿದ್ದು, ಮಣ್ಣಿನ ಸವಕಳಿ ಮತ್ತು ಮರು ಅರಣ್ಯೀಕರಣ ಸಾಧ್ಯವಾಗಿದೆ. ಬಿಸಿಲಿನ ತಾಪಮಾನ ಮೊದಲಿಗಿಂತ 0.5 ಡಿಗ್ರಿ ಸೆಲ್ಸಿಯಷ್ಟು ಕಡಿಮೆಯಾಗಿದೆ. ಮಳೆ ಪ್ರಮಾಣವು 550 ಮಿ.ಮೀ. ಇದ್ದಿದ್ದು ಈಗ 650 ಮಿ.ಮೀ.ವರೆಗೂ ಹೆಚ್ಚಳವಾಗಿದೆ' ಎಂದರು.

ಸರ್ಕಾರದಿಂದಲೇ ಆಚರಣೆ ಬಳಿಕ ದ್ವೇಷ, ಅಪಪ್ರಚಾರ ಹೆಚ್ಚಿದೆ –ಶಾಸಕ ತನ್ವೀರ್ ಸೇಠ್

ಜಯಂತಿ ಆಚರಣೆ ಆರಂಭಿಸಿ ಟಿಪ್ಪುಗೆ ಕಳಂಕ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ರಾಜ್ಯ ಸರ್ಕಾರ ಟಿಪ್ಪು ಜಯಂತಿ ಆಚರಣೆಯನ್ನು ಆರಂಭಿಸುವ ಮೂಲಕ ಅವರ ಹೆಸರಿಗೆ ಕಳಂಕ ತಂದಿದೆ' ಎಂದು ಶಾಸಕ, ಟಿಪ್ಪು ವಕ್ಫ್ ಎಸ್ಟೇಟ್ ಅಧ್ಯಕ್ಷ ತನ್ವೀರ್ ಸೇಠ್ ಇಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

'ಟಿಪ್ಪು ಜಯಂತಿ' ಅಂಗವಾಗಿ ಸೋಮವಾರ ಅವರು ಸಮೀಪದ ಗಂಜಾಂನ ಗುಂಬಸ್‌ನಲ್ಲಿ ಇರುವ ಟಿಪ್ಪು ಸಮಾಧಿಗೆ ಪುಷ್ಪಚಾದರವನ್ನು ಹೊದಿಸಿ ಮಾತನಾಡಿದರು.

'ಸರ್ಕಾರದಿಂದ ಆಚರಣೆ ಶುರು ಮಾಡಿದ ಬಳಿಕ ಆತನ ಬಗ್ಗೆ ದ್ವೇಷ, ಅಪಪ್ರಚಾರಗಳು ಹೆಚ್ಚಾಗಿವೆ' ಎಂದು ಅವರು ಅಭಿಪ್ರಾಯಪಟ್ಟರು.

'ಸುಳ್ಳನ್ನು ಹತ್ತಾರು ಬಾರಿ ಹೇಳುವ ಮೂಲಕ ಸತ್ಯ ಎಂದು ನಂಬಿಸುವ ಹುನ್ನಾರ ನಡೆಯುತ್ತಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ತನ್ವೀರ್ ದೂರಿದರು.

'ಅಂತಿಮವಾಗಿ ಸತ್ಯಕ್ಕೇ ಜಯ ಸಿಗುತ್ತದೆ. ಅಭಿಮಾನಿಗಳು ಪ್ರಪಂಚದ ಮೂಲೆ ಮೂಲೆಗಳಲ್ಲಿ ಟಿಪ್ಪು ಜಯಂತಿ ಆಚರಿಸುತ್ತಾ ಬಂದಿದ್ದಾರೆ. ಅದಕ್ಕಿಂತ ದೊಡ್ಡ ಗೌರವ ಮತ್ತೊಂದಿಲ್ಲ' ಎಂದು ಹೇಳಿದರು.

'ಟಿಪ್ಪು ಈ ದೇಶದ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ. ನಾಡಿನ ರಕ್ಷಣೆಗಾಗಿ ಬ್ರಿಟಿಷರನ್ನು ಕೆಚ್ಚೆದೆಯಿಂದ ಎದುರಿಸಿದ ವೀರ. ಕೇವಲ 200 ಹಳ್ಳಿಗಳಿದ್ದ ಮೈಸೂರು ರಾಜ್ಯವನ್ನು ಹೈದರಾಬಾದ್ ಮತ್ತು ಸೇಲಂವರೆಗೆ ವಿಸ್ತರಿಸಿದ. ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆ ಮುಂದುವರಿಸಿದ. ಒಡೆಯರ್ ದೊರೆಗಳಿಗೆ ನೀಡಿದ ವಾಗ್ದಾನವನ್ನು ಉಳಿಸಿಕೊಂಡಿರುವುದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ' ಎಂದು ತಿಳಿಸಿದರು.

> ಟಿಪ್ಪು ಜಯಂತಿ ಆಚರಿಸಿ ಎಂದು ಸರ್ಕಾರಕ್ಕೆ ಯಾರೂ ಅರ್ಜಿ ಕೊಟ್ಟಿರಲಿಲ್ಲ
>
> **ತನ್ವೀರ್ ಸೇಠ್**
> ಶಾಸಕ, ಟಿಪ್ಪು ವಕ್ಫ್ ಎಸ್ಟೇಟ್ ಅಧ್ಯಕ್ಷ

ಬಿಗಿ ಭದ್ರತೆಯಲ್ಲಿ ಜಯಂತಿ ಆಚರಣೆ

ಶ್ರೀರಂಗಪಟ್ಟಣದಲ್ಲಿ ಸೋಮವಾರ ಪೊಲೀಸ್ ಭದ್ರತೆಯಲ್ಲಿ ಪ್ರಗತಿಪರ ಸಂಘಟನೆಗಳ ವತಿಯಿಂದ ಟಿಪ್ಪು ಜಯಂತಿ ಆಚರಿಸಲಾಯಿತು. ಇಲ್ಲಿನ ವಾಟರ್ ಗೇಟ್ ಸಮೀಪ, ಟಿಪ್ಪು ಮೃತದೇಹ ದೊರೆತ ಸ್ಥಳದಲ್ಲಿರುವ ಸ್ಮಾರಕಕ್ಕೆ ಮುಖಂಡರು ಪುಷ್ಪನಮನ ಸಲ್ಲಿಸಿದರು.

ಟಿಪ್ಪು ಸುಲ್ತಾನ್ ಪರ ಘೋಷಣೆ ಕೂಗಿದರು. ನಿಷೇಧಾಜ್ಞೆ ಕಾರಣ ಹೆಚ್ಚು ಜನ ಸೇರದಂತೆ ಪೊಲೀಸರು ತಿಳಿಸಿದರು. ಸ್ಮಾರಕ, ಸಮಾಧಿ ಬಳಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಗಂಜಾಂನ ಗುಂಬಸ್‌ನಲ್ಲಿರುವ ಟಿಪ್ಪು ಸಮಾಧಿಗೆ ಶಾಸಕ ತನ್ವೀರ್ ಸೇಠ್ ಸೋಮವಾರ ಪುಷ್ಪ ಚಾದರ ಹೊದಿಸಿದರು

ಆಯೋಗದಿಂದಲೂ ಅನ್ಯಾಯ: ಡಿಕೆಶಿ

ಎಐಸಿಸಿಗೆ 1.12 ಕೋಟಿ ಸಹಿ ಸಂಗ್ರಹ ದಾಖಲೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚುನಾವಣೆಗಳಲ್ಲಿ ಮತ ಕಳ್ಳತನ ನಡೆಯುತ್ತಿರುವ ಬಗ್ಗೆ ಮೊದಲು ಪತ್ತೆ ಹಚ್ಚಿದ್ದೇ ಕರ್ನಾಟಕದಲ್ಲಿ. ಮಹಾರಾಷ್ಟ್ರ, ಹರಿಯಾಣ ಹಾಗೂ ಬಿಹಾರದಲ್ಲಿ ನಡೆಸಿರುವ ಅಕ್ರಮಗಳು ಈಗ ಬಯಲಿಗೆ ಬಂದಿವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವಕುಮಾರ್

ಮತಕಳ್ಳತನ ವಿರುದ್ಧ ರಾಜ್ಯದಲ್ಲಿ ನಡೆಸಿದ ಅಭಿಯಾನದಲ್ಲಿ ಸಂಗ್ರಹಿಸಲಾದ 1,12,41,000 ಸಹಿಗಳ ದಾಖಲೆಯನ್ನು ಎಐಸಿಸಿಗೆ ಸೋಮವಾರ ಸಲ್ಲಿಸಲಾಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗವು ಸಹಿ ಸಂಗ್ರಹ ದಾಖಲೆಗಳ ಒಂದು ಪೆಟ್ಟಿಗೆಯನ್ನು ಸಾಂಕೇತಿಕವಾಗಿ ಸಲ್ಲಿಸಿತು. ಉಳಿದ ದಾಖಲೆಗಳನ್ನು ಎಐಸಿಸಿ ಕಾರ್ಯದರ್ಶಿ ನೆಟ್ಟ ಡಿಸೋಜ ಅವರಿಗೆ ಹಸ್ತಾಂತರಿಸಿತು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಶಿವಕುಮಾರ್, 'ಖರ್ಗೆ ಮಾರ್ಗದರ್ಶನದಲ್ಲಿ ಮತದಾನದ ಹಕ್ಕು ರಕ್ಷಣೆ ಹೋರಾಟ ಮಾಡಿದ್ದೇವೆ. ಒಬ್ಬರಿಗೆ ಒಂದು ಮತ ಎಂದು ನಾವು ಹೋರಾಟ ಮಾಡುತ್ತಿದ್ದೇವೆ. ಮತ ಕಳ್ಳತನವನ್ನು ಮೊದಲು ಪತ್ತೆ ಹಚ್ಚಿದ್ದೇ ನಮ್ಮ ರಾಜ್ಯದಲ್ಲಿ. ಎಐಸಿಸಿ ಸಂಶೋಧನಾ ವಿಭಾಗ, ನಮ್ಮ ಅಭ್ಯರ್ಥಿಯಾಗಿದ್ದ ಮನ್ಸೂರ್ ಅಲಿ ಖಾನ್ ಹಾಗೂ ಕೆಪಿಸಿಸಿ ತಂಡ ಸೇರಿ ಈ ಮತ ಕಳ್ಳತನ ಪತ್ತೆ ಮಾಡಿ ಎಐಸಿಸಿಗೆ ಮಾಹಿತಿ ನೀಡಿದೆವು' ಎಂದು ವಿವರಿಸಿದರು.

'ಚುನಾವಣಾ ಆಯೋಗವು ಬಿಹಾರದ ಮತದಾರರಿಗೆ ಸರಿಯಾದ ನ್ಯಾಯ ಒದಗಿಸಿಲ್ಲ. ಬಿಜೆಪಿ ಸಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಂಡಿದೆ. ಯಾವುದು ಕಾಡದಿದ್ದರೂ ಆತ್ಮಸಾಕ್ಷಿ ಎನ್ನುವುದು ಇದ್ದೇ ಇರುತ್ತದೆ. ಅದು ಅಂತಿಮವಾಗಿ ಕೆಲಸ ಮಾಡಲಿದೆ' ಎಂದು ಹೇಳಿದರು.

ವಿಧಾನಸೌಧದಲ್ಲಿ ಭಯೋತ್ಪಾದಕರಿದ್ದಾರೆ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್ ಅವರು, 'ಕುಮಾರಸ್ವಾಮಿ ಅವರೂ ಭಯೋತ್ಪಾದಕರ ಭಾಗವಾಗಿದ್ದಾರೆಯೇ? ಅವರೂ ವಿಧಾನಸೌಧದಲ್ಲಿ ಕುಳಿತಿರಲಿಲ್ಲವೇ? ಅವರಿಗೂ, ಅವರ ಪಕ್ಷದವರಿಗೂ ಹಾಗೂ ಅವರ ಆಡಳಿತಕ್ಕೂ ಇದು ಅನ್ವಯಿಸುತ್ತದೆ' ಎಂದು ತಿರುಗೇಟು ನೀಡಿದರು.

ಮುಖ್ಯಮಂತ್ರಿ ಹುದ್ದೆ ಬದಲಾವಣೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾನು ರಾಜಕೀಯ ವಿಚಾರಗಳನ್ನು ಮಾತನಾಡುವುದಿಲ್ಲ. ನಾನು ಪ್ರಜಾಪ್ರಭುತ್ವ, ಮತದಾನದ ಹಕ್ಕು, ಸಂವಿಧಾನವನ್ನು ಉಳಿಸುವ ವಿಚಾರವಾಗಿ ಮಾತನಾಡುತ್ತೇನೆ' ಎಂದರು.

ಕೆಂಪು ಕೋಟೆಯ ಹತ್ತಿರ ಚೆಲ್ಲಿದ ರಕ್ತ



ದೆಹಲಿಯಲ್ಲಿ ಸ್ಫೋಟ ಸಂಭವಿಸಿದ ಸ್ಥಳದಲ್ಲಿ ಶ್ವಾನ ದಳದ ಅಧಿಕಾರಿಗಳು ಪರಿಶೀಲನೆ ನಡೆಸಿದರು (ಎಡ ಚಿತ್ರ) ಸ್ಫೋಟದಿಂದಾಗಿ ಹೊತ್ತಿ ಉರಿದಿರುವ ವಾಹನಗಳ ಅವಶೇಷಗಳು ಪಿಟಿಐ ಚಿತ್ರಗಳು

ರಸ್ತೆಯಲ್ಲಿ ಚದುರಿಬಿದ್ದ ದೇಹದ ಭಾಗಗಳು

ಸುಟ್ಟು ಕರಕಲಾದ ವಾಹನಗಳು, ಗಾಯಾಳುಗಳ ಆಕ್ರಂದನ
ದೆಹಲಿ ಸ್ಫೋಟ ಘಟನೆಯ ಭೀಕರತೆಯನ್ನು ಬಿಚ್ಚಿಟ್ಟ ಪ್ರತ್ಯಕ್ಷದರ್ಶಿಗಳು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಎಲ್ಲೆಂದರಲ್ಲಿ ಚದುರಿ ಬಿದ್ದ ಮೃತದೇಹದ ಭಾಗಗಳು, ಸುಟ್ಟು ಕರಕಲಾದ ವಾಹನಗಳು, ಆಗಸಕ್ಕೇರಿದ ಕೆಂಪು ಹೊಗೆ, ಬದುಕುಳಿದವರ ಭೀತಿಯ ಕಿರುಚಾಟ, ಗೊಂದಲ, ಗದ್ದಲ... ಇದು ಕೆಂಪುಕೋಟೆ ಮೆಟ್ರೊ ನಿಲ್ದಾಣದ ಬಳಿ ಸೋಮವಾರ ಸಂಜೆ ಸಂಭವಿಸಿದ ಸ್ಫೋಟವನ್ನು ಪ್ರತ್ಯಕ್ಷದರ್ಶಿಯೊಬ್ಬರು ಕಂಡ ರೀತಿ.

'ನಾನು ಅಲ್ಲಿ ನಿಂತು ಯಾರೊಂದಿಗೋ ಮಾತನಾಡುತ್ತಿದ್ದೆ. ಆಗ ವ್ಯಕ್ತಿಯ ಕೈ (ಶರ್ಟ್ ಇದ್ದಂತೆ) ನನ್ನ ಪಕ್ಕದಲ್ಲಿ ಬಂದು ಬಿದ್ದಿತು. 20 ನಿಮಿಷಗಳಲ್ಲಿ ನಂಬಲಾಗದ ಹಾಗೆ ಸನ್ನಿವೇಶ ಬದಲಾಯಿತು. ಬೃಹತ್ ಸ್ಫೋಟದ ಕೆಲವೇ ಕ್ಷಣಗಳಲ್ಲಿ ಆಗಸದಲ್ಲಿ ಕೆಂಪು ಹೊಗೆ ತುಂಬಿತ್ತು. ಎಲ್ಲರೂ ಭೀತಿಯಿಂದ ರಕ್ಷಣೆಗಾಗಿ ಓಡುತ್ತಿದ್ದರು. ಸ್ಫೋಟ ಎಷ್ಟು ತೀವ್ರವಾಗಿತ್ತೆಂದರೆ ಮನುಷ್ಯರ ದೇಹದ ಭಾಗಗಳು ಎಲ್ಲೆಂದರಲ್ಲಿ ಹಾರಿ ಬೀಳುತ್ತಿದ್ದವು' ಎಂದು ಪ್ರತ್ಯಕ್ಷದರ್ಶಿ ಮುದ್ಗಲ್ ಹೇಳಿದರು.

ಜಾಮಾ ಮಸೀದಿಯ ಸಮೀಪದ ಪಾನಿಪೂರಿ ಅಂಗಡಿ ಮಾಲೀಕ ಮನೋಜ್, 'ಸ್ಫೋಟ ಸಂಭವಿಸಿದ ಕೆಲವೇ ನಿಮಿಷಗಳಲ್ಲಿ ನಾವು ಸ್ಥಳಕ್ಕೆ ಧಾವಿಸಿದೆವು. ಜನರು ಕಿರುಚಾಡುತ್ತಿದ್ದರು. ಕೆಲವರು ಶವವಾಗಿದ್ದರು.. ಒಬ್ಬ ಆಟೊ ಚಾಲಕನಿಗೆ ತೀವ್ರ ಗಾಯವಾಗಿತ್ತು. ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತು' ಎಂದರು.

'ಸ್ಫೋಟ ಸಂಭವಿಸಿದಾಗ ನಾವು ನಿಧಾನವಾಗಿ ಚಲಿಸುತ್ತಿದ್ದೆವು. ಕಿಟಕಿ ಗಾಜು ಒಡೆದುಹೋಯಿತು ಮತ್ತು ನಾವು ಮಾರುಕಟ್ಟೆಯ ಕಡೆಗೆ ಓಡಿದೆವು. ಅಲ್ಲಿ ತುಂಬಾ ಜನದಟ್ಟಣೆಯಿತ್ತು. ಏನಾಗುತ್ತಿದೆ ಎಂದು ಯಾರಿಗೂ ತಿಳಿದಿರಲಿಲ್ಲ' ಎಂದು ವಾಹನ ಚಾಲಕ ಭೂಪಿಂದರ್ ಸಿಂಗ್ ತಿಳಿಸಿದರು.

'ನನ್ನ ಆಟೊದ ಮುಂದೆ ಸ್ವಿಫ್ಟ್ ಕಾರಿತ್ತು. ಕಾರು ಇದ್ದಕ್ಕಿದ್ದ ಹಾಗೆ ಸ್ಫೋಟಗೊಂಡಿತು' ಎಂದು ಘಟನೆಯಿಂದ ಗಾಯಗೊಂಡಿರುವ ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

'ನಾನು ಗುರುದ್ವಾರದಲ್ಲಿದ್ದೆ. ಇದ್ದಕ್ಕಿದ್ದಂತೆ ಭಾರಿ ಶಬ್ದ ಕೇಳಿತು. ಅದೇನು ಎಂದು ನಮಗೆ ತಿಳಿಯಲಿಲ್ಲ. ಆದರೆ, ಅದು ತುಂಬಾ ಜೋರಾದ ಶಬ್ದವಾಗಿತ್ತು' ಎಂದು ಮತ್ತೊಬ್ಬ ಪ್ರತ್ಯಕ್ಷದರ್ಶಿ ಹೇಳಿದರು.



ಸ್ಫೋಟದಿಂದಾಗಿ ವಾಹನವೊಂದು ಹೊತ್ತಿ ಉರಿದ ದೃಶ್ಯ

ಕಾರು ಮಾಲೀಕ ವಶಕ್ಕೆ

ಸ್ಫೋಟ ಸಂಭವಿಸಿದ ಹುಂಡೈ ಐ–20 ಕಾರಿನ ಮಾಲೀಕನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ಸೋಮವಾರ ರಾತ್ರಿ ತಿಳಿಸಿದರು.

ಕಾರಿನ ಮಾಲೀಕ ಮೊಹಮ್ಮದ್ ಸಲ್ಮಾನ್‌ನನ್ನು ಹರಿಯಾಣದ ಗುರುಗ್ರಾಮದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸಲ್ಮಾನ್ ತನ್ನ ಕಾರನ್ನು ಓಖ್ಲಾದಲ್ಲಿರುವ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ. ಸಲ್ಮಾನ್ ಹೆಸರಿನಲ್ಲಿರುವ ಕಾರು, ಹರಿಯಾಣದ ನೋಂದಣಿ ಸಂಖ್ಯೆ ಹೊಂದಿತ್ತು ಎಂದರು.

'ಪೊಲೀಸರು ಸಲ್ಮಾನ್‌ನನ್ನು ವಶಕ್ಕೆ ಪಡೆದು ಕಾರಿನ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ. ಆತ ಅದನ್ನು ಓಖ್ಲಾದ ದೇವೇಂದ್ರ ಎಂಬಾತನಿಗೆ ಮಾರಾಟ ಮಾಡಿದ್ದ. ಅದನ್ನು ಮತ್ತೆ ಅಂಬಾಲದ ವ್ಯಕ್ತಿಯೊಬ್ಬನಿಗೆ ಮಾರಾಟ ಮಾಡಲಾಗಿದ್ದು, ಆತನ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ' ಎಂದು ಹೇಳಿದರು.

ದೇಶದೆಲ್ಲೆಡೆ ಕಟ್ಟೆಚ್ಚರ

ನವದೆಹಲಿ: ಇಲ್ಲಿನ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಸಮೀಪ ಸೋಮವಾರ ಸಂಜೆ ಸಂಭವಿಸಿದ ಕಾರು ಸ್ಫೋಟದ ಬಳಿಕ ದೇಶದಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ.

ಪ್ರಮುಖ ಮಹಾನಗರಗಳು, ಪ್ರವಾಸಿ ತಾಣಗಳು, ಧಾರ್ಮಿಕ ಸ್ಥಳಗಳು, ಬಸ್ ನಿಲ್ದಾಣ, ರೈಲು ನಿಲ್ದಾಣ, ಮೆಟ್ರೊ ನಿಲ್ದಾಣ, ಶಾಪಿಂಗ್ ಮಾಲ್ ಹಾಗೂ ಜನಸಂದಣಿ ಇರುವಂತಹ ಸ್ಥಳಗಳಲ್ಲಿ ಪೊಲೀಸ್ ಭದ್ರತೆಯನ್ನು ಹೆಚ್ಚಿಸಲಾಗಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸುವಂತೆ ನಗರ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಯಾ ರಾಜ್ಯ ಸರ್ಕಾರಗಳು ಸಹ ಸೂಚಿಸಿವೆ.

ಕರ್ನಾಟಕ, ಮಹಾರಾಷ್ಟ್ರ, ರಾಜಸ್ಥಾನ, ಉತ್ತರ ಪ್ರದೇಶ, ಪಂಜಾಬ್ ಸೇರಿದಂತೆ ಎಲ್ಲೆಡೆ ಭದ್ರತೆಯನ್ನು ಹೆಚ್ಚಿಸಲಾಗಿದೆ.

ಮಾಹಿತಿ ಪಡೆದ ಮೋದಿ

ಕಾರು ಸ್ಫೋಟ ಪ್ರಕರಣದ ಪರಿಸ್ಥಿತಿಯನ್ನು ಅವಲೋಕಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾತನಾಡಿ ಮತ್ತಷ್ಟು ಮಾಹಿತಿ ಪಡೆದರು.

ಅಧಿಕಾರಿಗಳೊಂದಿಗೆ ಶಾ ಚರ್ಚೆ: ದೆಹಲಿ ಪೊಲೀಸ್ ಕಮಿಷನರ್, ಗುಪ್ತಚರ ಬ್ಯೂರೊ ನಿರ್ದೇಶಕರು ಹಾಗೂ ಕೇಂದ್ರ ಗೃಹ ಕಾರ್ಯದರ್ಶಿ ಯೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾತುಕತೆ ನಡೆಸುವ ಮೂಲಕ ಕಾರು ಸ್ಫೋಟದ ಬಗ್ಗೆ ಅವಲೋಕಿಸಿದ್ದಾರೆ.

ತ್ವರಿತ ತನಿಖೆಗೆ 'ಕೈ' ಆಗ್ರಹ

'ಕಾರು ಸ್ಫೋಟವು ದುಃಖಕರ ಸಂಗತಿ. ಪ್ರಕರಣದ ಸಮಗ್ರ ಹಾಗೂ ತ್ವರಿತಗತಿಯಲ್ಲಿ ತನಿಖೆ ನಡೆಸಬೇಕು' ಎಂದು ಕಾಂಗ್ರೆಸ್ ಪಕ್ಷ ಒತ್ತಾಯಿಸಿದೆ.

'ದೆಹಲಿ ಸರ್ಕಾರದ ಭದ್ರತಾ ವೈಫಲ್ಯವನ್ನು ಈ ಘಟನೆಯು ಎತ್ತಿ ತೋರಿಸುತ್ತದೆ. ಗೃಹ ಸಚಿವಾಲಯ ಹೇಳಿಕೊಳ್ಳುವಂತೆ ದೆಹಲಿಯು ಸುರಕ್ಷಿತ ರಾಜಧಾನಿ ಆಗಿದೆಯೇ' ಎಂದು ಪ್ರಶ್ನಿಸಿದೆ.

'ಇಂತಹ ಸಂಕಷ್ಟದ ಸಮಯದಲ್ಲಿ ಇಡೀ ದೇಶ ಒಗ್ಗಟ್ಟಾಗಿ ನಿಲ್ಲಬೇಕು' ಎಂದು ಹೇಳಿದೆ.

'ನಾವು ದುಃಖಿತ ಕುಟುಂಬಗಳೊಂದಿಗೆ ನಿಲ್ಲುತ್ತೇವೆ. ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲೆಂದು ಪ್ರಾರ್ಥಿಸುತ್ತೇವೆ' ಎಂದು ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಆಸ್ಪತ್ರೆಗೆ ಶಾ ಭೇಟಿ

ನವದೆಹಲಿಯ ಎಲ್‌ಎನ್‌ಜೆಪಿ ಆಸ್ಪತ್ರೆಗೆ ಭೇಟಿ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಘಟನೆ ನಡೆದ ಕೆಲ ಗಂಟೆಗಳ ಬಳಿಕ, ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ವೈದ್ಯರೊಂದಿಗೆ ಭೇಟಿ ನೀಡಿದ ಸಚಿವರು, ಕೆಲ ವಾರ್ಡ್‌ಗಳಿಗೆ ತೆರಳಿ ಗಾಯಾಳುಗಳೊಂದಿಗೆ ಚರ್ಚಿಸಿದರು.

ಕೆಂಪುಕೋಟೆ ಬಳಿ ರಕ್ತದೋಕುಳಿ

ಒಂದನೇ ಪುಟದಿಂದ...

ದೆಹಲಿ ಪೊಲೀಸ್, ವಿಧಿವಿಜ್ಞಾನ ತಂಡ, ರಾಷ್ಟ್ರೀಯ ತನಿಖಾ ದಳ, ಎನ್‌ಎಸ್‌ಜಿ ಸೇರಿದಂತೆ ಎಲ್ಲ ತನಿಖಾ ಸಂಸ್ಥೆಗಳು ಸ್ಥಳದಲ್ಲಿದ್ದು ತನಿಖೆಯಲ್ಲಿ ತೊಡಗಿವೆ. ಎಲ್ಲ ಆಯಾಮಗಳಿಂದ ತನಿಖೆ ನಡೆಸಲಾಗುವುದು ಎಂದು ಅಮಿತ್ ಶಾ ಹೇಳಿದ್ದಾರೆ.

ಚಾಂದಿನಿ ಚೌಕ್ ಮಾರುಕಟ್ಟೆಯನ್ನು ಮಂಗಳವಾರ ಮುಚ್ಚಲಾಗುವುದು ಎಂದು ಮಾರುಕಟ್ಟೆ ಸಂಘದ ಅಧ್ಯಕ್ಷ ಸಂಜಯ್ ಭಾರ್ಗವ್ ಹೇಳಿದ್ದಾರೆ.

ಈ ಹಿಂದಿನ ಸ್ಫೋಟಗಳು...

ಕೆಂಪು ಕೋಟೆಯ ಬಳಿ ಸೋಮವಾರ ಸಂಭವಿಸಿದ ಸ್ಫೋಟವು ಕಳೆದ ಎರಡು ದಶಕಗಳಲ್ಲಿ ದೆಹಲಿಯನ್ನು ಬೆಚ್ಚಿಬೀಳಿಸಿದ ಅನೇಕ ಸ್ಫೋಟ ಘಟನೆಗಳನ್ನು ಮತ್ತೊಮ್ಮೆ ನೆನಪಿಸಿದೆ. 1997ರ ಬಳಿಕ ರಾಷ್ಟ್ರದ ರಾಜಧಾನಿಯಲ್ಲಿ ನಡೆದ ಪ್ರಮುಖ ಸ್ಫೋಟಗಳ ವಿವರ ಇಲ್ಲಿದೆ:

1997, ಅ.10 ಶಾಂತಿವನ, ಕೌಡಿಯಾ ಪುಲ್ ಮತ್ತು ಕಿಂಗ್ಸ್‌ವೇ ಕ್ಯಾಂಪ್ ಪ್ರದೇಶಗಳಲ್ಲಿ ಸಂಭವಿಸಿದ ಮೂರು ಬಾಂಬ್ ಸ್ಫೋಟದಲ್ಲಿ ಒಬ್ಬ ಮೃತಪಟ್ಟು, 16 ಮಂದಿಗೆ ಗಾಯ

1997, ಅ.20 ಕರೋಲ್ ಬಾಗ್ ಮಾರುಕಟ್ಟೆಯಲ್ಲಿ ನಡೆದ ಅವಳಿ ಸ್ಫೋಟದಲ್ಲಿ ಒಬ್ಬ ಸಾವು; 34 ಮಂದಿಗೆ ಗಾಯ

1997, ನ.30 ಕೆಂಪು ಕೋಟೆಯ ಬಳಿ ನಡೆದ ಅವಳಿ ಸ್ಫೋಟದಲ್ಲಿ ಒಬ್ಬ ಸಾವು; 70ಕ್ಕೂ ಅಧಿಕ ಮಂದಿಗೆ ಗಾಯ

1997, ಡಿ.30 ಬಸ್‌ನಲ್ಲಿಟ್ಟಿದ್ದ ಬಾಂಬ್ ಪಂಜಾಬಿ ಬಾಗ್ ಬಳಿ ಸ್ಫೋಟಗೊಂಡು ನಾಲ್ವರು ಪ್ರಯಾಣಿಕರು ಮೃತಪಟ್ಟು, 30ಕ್ಕೂ ಅಧಿಕ ಮಂದಿಗೆ ಗಾಯ

1998, ಜುಲೈ 26 ಕಾಶ್ಮೀರಿ ಗೇಟ್ ಬಳಿ ನಿಲ್ಲಿಸಿದ್ದ ಐಎಸ್‌ಬಿಟಿ ಬಸ್‌ನಲ್ಲಿ ಸಂಭವಿಸಿದ ಸ್ಫೋಟದಲ್ಲಿ ಇಬ್ಬರ ಸಾವು

2000, ಜೂನ್ 18 ಕೆಂಪು ಕೋಟೆ ಬಳಿ ಸಂಭವಿಸಿದ ಎರಡು ಪ್ರಬಲ ಸ್ಫೋಟಕ್ಕೆ ಎಂಟು ವರ್ಷದ ಬಾಲಕಿ ಸೇರಿ ಇಬ್ಬರ ಬಲಿ

2005, ಮೇ 22 ಎರಡು ಚಿತ್ರಮಂದಿರಗಳಲ್ಲಿ ಸಂಭವಿಸಿದ ಸರಣಿ ಸ್ಫೋಟದಲ್ಲಿ ಇಬ್ಬರು ಮೃತಪಟ್ಟು, 60ಕ್ಕೂ ಅಧಿಕ ಮಂದಿಗೆ ಗಾಯ

2005, ಅ.29 ಸರೋಜಿನಿನಗರ, ಪಹಾಡ್‌ಗಂಜ್ ಮಾರುಕಟ್ಟೆ ಹಾಗೂ ಗೋವಿಂದಪುರ ಪ್ರದೇಶದ ಬಸ್‌ನಲ್ಲಿ ಸಂಭವಿಸಿದ ಮೂರು ಸ್ಫೋಟಗಳಲ್ಲಿ ಕೆಲವು ವಿದೇಶಿಯರು ಸೇರಿ 60ಕ್ಕೂ ಅಧಿಕ ಸಾವು, ದೆಹಲಿಯನ್ನು ನಡುಗಿಸಿದ ಈ ಘಟನೆಯಲ್ಲಿ 100ಕ್ಕೂ ಅಧಿಕ ಮಂದಿಗೆ ಗಾಯ

2006, ಏ.14 ಹಳೆ ದೆಹಲಿಯ ಜಾಮಾ ಮಸೀದಿ ಬಳಿ ನಡೆದ ಅವಳಿ ಸ್ಫೋಟದಲ್ಲಿ 14 ಮಂದಿಗೆ ಗಾಯ

2008, ಸೆ.13 ಕಾನಾಟ್ ಪ್ಲೇಸ್, ಕರೋಲ್ ಬಾಗ್‌ನ ಗಫಾರ್ ಮಾರುಕಟ್ಟೆ ಮತ್ತು ದಕ್ಷಿಣ ದೆಹಲಿಯ ಗ್ರೇಟರ್ ಕೈಲಾಶ್ ಮಾರುಕಟ್ಟೆಯಲ್ಲಿ 45 ನಿಮಿಷಗಳ ಅಂತರದಲ್ಲಿ ಸಂಭವಿಸಿದ ಐದು ಸ್ಫೋಟಗಳಲ್ಲಿ 25 ಮಂದಿ ಮೃತಪಟ್ಟು, 100ಕ್ಕೂ ಅಧಿಕ ಮಂದಿ ಗಾಯ

2008, ಸೆ.27 ಕುತುಬ್ ಮಿನಾರ್ ಬಳಿಯ ಮೆಹ್ರೌಲಿ ಹೂವಿನ ಮಾರುಕಟ್ಟೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೂವರ ಸಾವು; 21 ಮಂದಿಗೆ ಗಾಯ

ಬೆಂಗಳೂರಿನಲ್ಲಿ ನಡೆದಿದ್ದ ಬಾಂಬ್ ಸ್ಫೋಟಗಳು

2008 ನಾಯಂಡಹಳ್ಳಿ, ಮಡಿವಾಳ, ಆಡುಗೋಡಿ ಸೇರಿದಂತೆ 9 ಕಡೆ ಸರಣಿ ಬಾಂಬ್ ಸ್ಫೋಟ

2010 ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸ್ಫೋಟ

2013 ಮಲ್ಲೇಶ್ವರದ ಬಿಜೆಪಿ ಕಚೇರಿ ಬಳಿ ಸ್ಫೋಟ

2014 ಚರ್ಚ್ ಸ್ಟ್ರೀಟ್‌ನಲ್ಲಿ ನಡೆದಿದ್ದ ವಿಧ್ವಂಸಕ ಕೃತ್ಯ

2024 ದಿ ರಾಮೇಶ್ವರ ಕೆಫೆಯಲ್ಲಿ ಬಾಂಬ್ ಸ್ಫೋಟ

ಬೆಂಗಳೂರು ಸೇರಿ ರಾಜ್ಯದಲ್ಲಿ ಕಟ್ಟೆಚ್ಚರ

ಬೆಂಗಳೂರು: ದೆಹಲಿಯಲ್ಲಿ ಸೋಮವಾರ ರಾತ್ರಿ ಸ್ಫೋಟ ಸಂಭವಿಸಿದ್ದರಿಂದ ಬೆಂಗಳೂರು ಸೇರಿ ರಾಜ್ಯದ ವಿವಿಧ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಬೆಂಗಳೂರಿನ ಮೆಟ್ರೊ ನಿಲ್ದಾಣಗಳು, ಬಸ್ ಹಾಗೂ ರೈಲು ನಿಲ್ದಾಣಗಳು, ಭಾರತೀಯ ವಿಜ್ಞಾನ ಸಂಸ್ಥೆ, ಇಸ್ರೊ, ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆ ಹೆಚ್ಚಿಸುವಂತೆ ಸೂಚಿಸಲಾಗಿದೆ. ರಾಜ್ಯದ ಪ್ರಮುಖ ಜಲಾಶಯ, ಬಂದರುಗಳಿಗೂ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಮೈಸೂರು, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಮಂಗಳೂರಿನಲ್ಲಿ ಕಟ್ಟೆಚ್ಚರ ವಹಿಸುವಂತೆ ಆಯಾ ಜಿಲ್ಲೆಯ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಗೃಹ ಇಲಾಖೆ ಸೂಚಿಸಿದೆ.

'ನಗರದಲ್ಲಿ ನಾಕಾ ಬಂದಿ ಹೆಚ್ಚಿಸಲಾಗಿದೆ. ಟೋಲ್ ಹಾಗೂ ನಗರ ಪ್ರವೇಶಿಸುವ ಎಲ್ಲ ವಾಹನಗಳನ್ನು ತಪಾಸಣೆ ಮಾಡುವಂತೆ ಸೂಚಿಸಲಾಗಿದೆ. ನಗರ ಕಮಿಷನರೇಟ್ ವ್ಯಾಪ್ತಿಯ 11 ವಿಭಾಗಳಲ್ಲೂ ನಿಗಾ ವಹಿಸುವಂತೆ ಆಯಾ ವಿಭಾಗದ ಡಿಸಿಪಿಯವರಿಗೆ ಸೂಚಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದರು.

ಮೇಲುಸ್ತುವಾರಿಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ?

ನವದೆಹಲಿ (ಪಿಟಿಐ): ರಾಜ್ಯದ ವಕೀಲರ ಸಂಘದ ಚುನಾವಣೆಯನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸಲು ಇಡೀ ಪ್ರಕ್ರಿಯೆಯ ಮೇಲುಸ್ತುವಾರಿಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳನ್ನು ನಿಯೋಜಿಸುವ ಕುರಿತು ಸುಪ್ರೀಂ ಕೋರ್ಟ್ ಸುಳಿವು ನೀಡಿದೆ.

'ಭಾರತೀಯ ವಕೀಲರ ಸಂಘ (ಬಿಸಿಐ), ರಾಜ್ಯ ವಕೀಲರ ಸಂಘದ ಮೇಲೆ ಮೇಲೆ ವಿಶ್ವಾಸದ ಕೊರತೆಯಿದೆ. ಹೀಗಾಗಿ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸ್ವತಂತ್ರ ಚುನಾವಣಾ ಸಮಿತಿ ನೇಮಿಸಲಾಗುವುದು. ಪ್ರತಿ ರಾಜ್ಯವೂ ಮೇಲುಸ್ತುವಾರಿಯನ್ನು ನೇಮಕ ಮಾಡಬೇಕು' ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಜಾಯ್‌ಮಾಲಾ ಬಾಗ್ಚಿ ಅವರ ಪೀಠ ತಿಳಿಸಿದೆ.

'ನಿವೃತ್ತ ನ್ಯಾಯಮೂರ್ತಿಗಳನ್ನು ನೇಮಿಸಿದರೆ, ನಮ್ಮ ಯಾವುದೇ ತಕರಾರು ಇಲ್ಲ' ಎಂದು ಹಿರಿಯ ನ್ಯಾಯಮೂರ್ತಿ ಹಾಗೂ ಬಿಸಿಐನ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಅವರು ನ್ಯಾಯಾಲಯದ ಗಮನಸೆಳೆದರು.

'ರಾಜ್ಯ ವಕೀಲರ ಸಂಘ, ವಕೀಲರ ಪರಿಷತ್‌ಗಳ ಚುನಾವಣೆ ನಡೆಸುವುದು ಭೂಮಿ ಮೇಲಿನ ಅತ್ಯಂತ ಕಷ್ಟದ ಕೆಲಸವಾಗಿದೆ' ಎಂದು ನ್ಯಾಯಮೂರ್ತಿ ಕಾಂತ್ ತಿಳಿಸಿದರು. ವಿವಿಧ ರಾಜ್ಯಗಳ ಚುನಾವಣೆ ಅಧಿಸೂಚನೆಯನ್ನು ಆದಷ್ಟು ಬೇಗ ನಡೆಸುವಂತೆ ಮಿಶ್ರಾ ಅವರಿಗೆ ಹೇಳಿದರು.

ನ.13ಕ್ಕೆ ಭಾಗವತ್ ರಾಜಸ್ಥಾನ ಭೇಟಿ

ಜೈಪುರ (ಪಿಟಿಐ): ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ನವೆಂಬರ್ 13ರಿಂದ ನಾಲ್ಕು ದಿನ ರಾಜಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು ತಮ್ಮ ಸಂಸ್ಥೆಯ ಶತಮಾನೋತ್ಸವದ ಕಾರ್ಯಕ್ರಮಗಳ ಭಾಗವಾಗಿ ಕಾರ್ಯಕರ್ತರೊಂದಿಗೆ ಸಭೆ ನಡೆಸಲಿದ್ದಾರೆ.

ಭಾಗವತ್ ನವೆಂಬರ್ 12ರಂದು ಜೈಪುರ ತಲುಪಲಿದ್ದಾರೆ ಎಂದು ರಾಜಸ್ಥಾನ ಪ್ರಾಂತೀಯ ಸಂಘಚಾಲಕ ಡಾ. ರಮೇಶ್ ಅಗರ್‌ವಾಲ್ ಹೇಳಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತರ ಸಭೆಯ ಹೊರತಾಗಿ ವಿವಿಧ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣೆ: ಎರಡನೇ ಹಂತದ ಮತದಾನ ಇಂದು

1,302 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಪ್ರಜಾವಾಣಿ ವಾರ್ತೆ, ಪಿಟಿಐ

ಪಟ್ನಾ, ಬಿಹಾರ: ಇಲ್ಲಿನ ವಿಧಾನಸಭೆಯ ಎರಡನೇ ಹಾಗೂ ಕೊನೇ ಹಂತದ ಮತದಾನ ಇಂದು ನಡೆಯಲಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸರ್ಕಾರದ ಅರ್ಧಕ್ಕಿಂತಲೂ ಹೆಚ್ಚು ಸಚಿವರು ಸೇರಿದಂತೆ 1,302 ಅಭ್ಯರ್ಥಿಗಳ ಭವಿಷ್ಯ ಇಂದು ನಿರ್ಧಾರವಾಗಲಿದೆ.

122 ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು, 1.75 ಕೋಟಿ ಮಹಿಳೆಯರು ಸೇರಿದಂತೆ 3.70 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ.

ಮುಸಲ್ಮಾನರ ಬಾಹುಳ್ಯವುಳ್ಳ ಸೀಮಾಂಚಲ ಪ್ರದೇಶದ ಹೆಚ್ಚಿನ ಕ್ಷೇತ್ರಗಳಲ್ಲಿ ಇಂದು ಚುನಾವಣೆ ನಡೆಯಲಿದೆ. ಪಶ್ಚಿಮ ಹಾಗೂ ಪೂರ್ವ ಚಂಪಾರಣ, ಸೀತಾಮಡಿ, ಮಧುಬನಿ, ಸುಪಾಲ್, ಅರಾರಿಯಾ ಹಾಗೂ ಕಿಶನ್‌ಗಂಜ್ ಜಿಲ್ಲೆಗೆ ಒಳಪಡುವ ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಈ ಎಲ್ಲಾ ಜಿಲ್ಲೆಗಳು ನೇಪಾಳದೊಂದಿಗೆ ಗಡಿ ಹಂಚಿಕೊಂಡಿವೆ.

ಸುಪಾಲ್ ಕ್ಷೇತ್ರದಿಂದ ಜೆಡಿಯು ಪಕ್ಷದ ಹಿರಿಯ ಮುಖಂಡ ಬಿಜೇಂದ್ರ ಪ್ರಸಾದ್ ಯಾದವ್, ಗಯಾ ನಗರ ಕ್ಷೇತ್ರದಿಂದ ಬಿಜೆಪಿಯ ಪ್ರೇಮ್ ಕುಮಾರ್ ಸತತ 8 ಅವಧಿಗೆ ಆಯ್ಕೆಯಾಗಿದ್ದು, ಮತ್ತೆ ಕ್ಷೇತ್ರ ಉಳಿಸಿಕೊಳ್ಳುವ ಉಮೇದಿನಲ್ಲಿದ್ದಾರೆ.

ಉಳಿದಂತೆ ಬಿಜೆಪಿಯ ರೇಣುದೇವಿ (ಬೇತಿಯಾ), ನೀರಜ್ ಕುಮಾರ್ ಸಿಂಗ್ (ಛತ್‌ಪುರ), ಜೆಡಿಯುನ ಲೇಸಿ ಸಿಂಗ್ (ಧಮ್‌ದಾಹಾ), ಶೀಲಾ ಮಂಡಲ್ (ಫೂಲ್‌ಪರಾಸ್), ಜಮಾ ಖಾನ್ (ಚೈನ್‌ಪುರ) ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಉಳಿದಂತೆ ಬಿಜೆಪಿಯ ಪ್ರಮುಖ ನಾಯಕ ಹಾಗೂ ಮಾಜಿ ಉಪಮುಖ್ಯಮಂತ್ರಿ ತಾರಾಕಿಶೋರ್ ಪ್ರಸಾದ್ ಅವರು ಕಟಿಹಾರ್ ವಿಧಾನಸಭಾ ಕ್ಷೇತ್ರದಿಂದ 5ನೇ ಅವಧಿಗೆ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ.

ಈ ಜಿಲ್ಲೆಗೆ ವ್ಯಾಪ್ತಿಗೆ ಒಳಪಡುವ ಬಲರಾಂಪುರ ಹಾಗೂ ಕಡ್ವಾ ವಿಧಾನಸಭಾ ಕ್ಷೇತ್ರದಿಂದ ಸತತ ಮೂರು ಬಾರಿ ಜಯಗಳಿಸಿರುವ ಸಿಪಿಎಂ ಶಾಸಕಾಂಗ ಪಕ್ಷದ ನಾಯಕ ಮೆಹಬೂಬ್ ಆಲಂ, ಕಾಂಗ್ರೆಸ್ ಶಾಸಕಾಂಗ ನಾಯಕ ಅಹಮ್ಮದ್ ಖಾನ್ ಕಣದಲ್ಲಿರುವ ಪ್ರಮುಖ ಹುರಿಯಾಳುಗಳಾಗಿದ್ದಾರೆ.

ಎನ್‌ಡಿಎ ಮಿತ್ರಕೂಟ ಹಿಂದೂಸ್ತಾನ್ ಅವಾಮ್ ಮೋರ್ಚಾ ಹಾಗೂ ರಾಷ್ಟ್ರೀಯ ಲೋಕಮೋರ್ಚಾ ಪಕ್ಷದಿಂದ ಕಣಕ್ಕಿಳಿದಿರುವ ತಲಾ ಆರು ಕ್ಷೇತ್ರಗಳಿಗೂ ಇಂದೇ ಮತದಾನ ನಡೆಯಲಿದೆ.

ಬಿಹಾರ ವಿಧಾನಸಭೆಯ ಮೊದಲ ಹಂತದ ಮತದಾನವು ನವೆಂಬರ್ 6ರಂದು ನಡೆದಿತ್ತು. ನವೆಂಬರ್ 14ರಂದು ಫಲಿತಾಂಶ ಪ್ರಕಟಗೊಳ್ಳಲಿದೆ.

ವಿರೋಧ ಪಕ್ಷಗಳಾದ 'ಇಂಡಿಯಾ' ಒಕ್ಕೂಟದಲ್ಲಿ ಆರ್‌ಜೆಡಿ, ಕಾಂಗ್ರೆಸ್ ಹಾಗೂ ಎಡಪಕ್ಷಗಳಿದ್ದು, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಎನ್‌ಡಿಎ ಮಿತ್ರಕೂಟವು ನಿತೀಶ್ ಕುಮಾರ್ ನೇತೃತ್ವದಲ್ಲಿಯೇ ಚುನಾವಣೆ ಎದುರಿಸಿದೆ.

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನ. 6ರಂದು ಮತ ಚಲಾಯಿಸಿದ ಲಿಂಗವಾರು ಮತದಾರರ ಅಂಕಿ ಅಂಶಗಳನ್ನು ಆಯೋಗವು ಇದುವರೆಗೂ ಬಹಿರಂಗಪಡಿಸಿಲ್ಲ
ತೇಜಸ್ವಿ ಯಾದವ್, ಆರ್‌ಜೆಡಿ ಮುಖಂಡ

ಬಿಹಾರದಲ್ಲಿ ಮಹಾಘಟಬಂಧನ ಸರ್ಕಾರವು ರಚಿಸಲಿದ್ದು, 5 ವರ್ಷಗಳಲ್ಲಿ ಗ್ಯಾರಂಟಿಯನ್ನು ಜಾರಿಗೊಳಿಸಲಾಗುವುದು
ಜೈರಾಮ್ ರಮೇಶ್, ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ)

ಚುನಾವಣಾ ಕಣ ಚಿತ್ರಣ

2,616 ಒಟ್ಟು ಅಭ್ಯರ್ಥಿಗಳು | **2,600** ವಿಶ್ಲೇಷಣೆಗೆ ಒಳಪಟ್ಟವರು



ವಿದ್ಯಾರ್ಹತೆ

5ರಿಂದ ದ್ವಿತೀಯ ಪಿಯುಸಿ	1,047
ಪದವಿ, ಉನ್ನತ ಶಿಕ್ಷಣ	1,278
ಡಿಪ್ಲೊಮಾ ಪದವೀಧರರು	34
ಕೇವಲ ಸಾಕ್ಷರರು	222
ಅನಕ್ಷರಸ್ಥರು	17
ಮಾಹಿತಿ ಬಹಿರಂಗಪಡಿಸದವರು	2

122	2ನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳು
45,339	ಒಟ್ಟು ಮತಗಟ್ಟೆಗಳು
40,073	ಗ್ರಾಮೀಣ ಮತಗಟ್ಟೆಗಳು
4 ಲಕ್ಷ	ಭದ್ರತೆಗೆ ನಿಯೋಜಿಸಲಾದ ಒಟ್ಟು ಸಿಬ್ಬಂದಿ
50 ಸಾವಿರ	ಕೇಂದ್ರ ಸಶಸ್ತ್ರ ಪಡೆ ಪೊಲೀಸರು
60 ಸಾವಿರ	ಬಿಹಾರ ರಾಜ್ಯ ಪೊಲೀಸರು
2 ಸಾವಿರ	ಮೀಸಲು ಪಡೆ ಪೊಲೀಸರು
30 ಸಾವಿರ	ಬಿಹಾರ ಸಶಸ್ತ್ರ ಪಡೆ ಪೊಲೀಸರು
20 ಸಾವಿರ	ಗೃಹ ರಕ್ಷಕದಳ
19 ಸಾವಿರ	ತರಬೇತಿಯಲ್ಲಿರುವ ಪೊಲೀಸರು
1.5 ಲಕ್ಷ	ಗ್ರಾಮೀಣ ಪೊಲೀಸರು

ಗಯಾ ಜಿಲ್ಲೆಯಲ್ಲಿ ಮತಪೆಟ್ಟಿಗೆಯನ್ನು ಚುನಾವಣಾ ಸಿಬ್ಬಂದಿ ಪರಿಶೀಲಿಸಿದರು ಪಿಟಿಐ ಚಿತ್ರ

'ಮಹಾಘಟಬಂಧನ ಸರ್ಕಾರ ಖಚಿತ'

ನವದೆಹಲಿ (ಪಿಟಿಐ): 'ಬಿಹಾರದಲ್ಲಿದ್ದ 20 ವರ್ಷಗಳ ಅಸಹಾಯಕ ಸರ್ಕಾರವನ್ನು ಮಹಾಘಟಬಂಧನವು ಕೊನೆಗೊಳಿಸಲಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

'ರಾಜ್ಯದಲ್ಲಿ ವಲಸೆ ಕೊನೆಯಾಗಲಿದೆ. ಯುವಕರ ಜೀವನದಲ್ಲಿ ಕವಿದಿದ್ದ ಕತ್ತಲು ಸರಿಯಲಿದೆ. ಮಂಗಳವಾರದಿಂದಲೇ ಪ್ರತಿ ಮನೆಯೂ ಬೆಳಗಲಿದೆ. ಅನ್ಯಾಯವನ್ನು ನಾವು ಕೊನೆಗೊಳಿಸಿದ್ದು, ಬಿಹಾರವನ್ನು ಸಾಮಾಜಿಕ ನ್ಯಾಯದ ನೆಲವನ್ನಾಗಿ ಪರಿವರ್ತಿಸಲಿದ್ದೇವೆ' ಎಂದು ಖರ್ಗೆ ಅವರು 'ಎಕ್ಸ್'ನಲ್ಲಿ ಹಿಂದಿಯಲ್ಲಿ ಪೋಸ್ಟ್ ಮಾಡಿದ್ದಾರೆ.

ಐತಿಹಾಸಿಕ ಗೆಲುವು– ಬಿಜೆಪಿ ವಿಶ್ವಾಸ

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮಿತ್ರಕೂಟವು ಐತಿಹಾಸಿಕ ಗೆಲುವು ಪಡೆಯಲಿದೆ' ಎಂದು ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನಿರೀಕ್ಷಿತ ಫಲಿತಾಂಶ ಬರದಿದ್ದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಪ್ರಜಾಪ್ರಭುತ್ವದ ಎಲ್ಲಾ ಅಂಗಗಳ ವಿರುದ್ಧ ದಾಳಿ ಮಾಡುವುದನ್ನೇ ಅಭ್ಯಾಸ ಮಾಡಿಕೊಂಡಿವೆ ಎಂದು ದೂರಿದರು.

'ಉತ್ತರ ಪ್ರದೇಶ: ಶಿಕ್ಷಣ ಸಂಸ್ಥೆಗಳಲ್ಲಿ ವಂದೇ ಮಾತರಂ ಕಡ್ಡಾಯ'

ಗೋರಖಪುರ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಎಲ್ಲ ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ವಂದೇ ಮಾತರಂ ಹಾಡುವುದು ಕಡ್ಡಾಯ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೋಮವಾರ ತಿಳಿಸಿದ್ದಾರೆ.

ಗೋರಖಪುರದಲ್ಲಿ ನಡೆದ ಏಕತಾ ಮೆರವಣಿಗೆಯಲ್ಲಿ ಮಾತನಾಡಿದ ಆದಿತ್ಯನಾಥ ಅವರು, 'ವಂದೇ ಮಾತರಂ ಹಾಡುವ ಮೂಲಕ ಭಾರತ ಮಾತೆ ಮತ್ತು ತಾಯ್ನಾಡಿನ ಬಗ್ಗೆ ಭಕ್ತಿ ಮತ್ತು ಹೆಮ್ಮೆಯ ಭಾವ ಮೂಡುತ್ತದೆ' ಎಂದರು.

'ರಾಷ್ಟ್ರ ಗೀತೆ ವಂದೇ ಮಾತರಂ' ವಿರೋಧಿಸುತ್ತಿರುವವರು ಭಾರತದ ಏಕತೆ ಮತ್ತು ಸಮಗ್ರತೆಯನ್ನು ಅವಮಾನಿಸುತ್ತಿದ್ದಾರೆ.

ದೇಶದಲ್ಲಿ ಮತ್ತೊಬ್ಬ ಜಿನ್ನಾ ಹುಟ್ಟಿಕೊಳ್ಳದಂತೆ ನೋಡಿಕೊಳ್ಳಬೇಕು. ದೇಶವನ್ನು ವಿಭಜಿಸುವಂತಹ ಉದ್ದೇಶ ಬೇರುಬಿಡುವ ಮೊದಲು ಬುಡಸಮೇತ ಕಿತ್ತೊಗೆಯಬೇಕು
ಯೋಗಿ ಆದಿತ್ಯನಾಥ್
ಉತ್ತರ ಪ್ರದೇಶ ಮುಖ್ಯಮಂತ್ರಿ

ಭಾರತದಲ್ಲಿರುವ ಪ್ರತಿಯೊಬ್ಬರೂ ದೇಶಕ್ಕೆ ನಿಷ್ಠರಾಗಿರಬೇಕು ಮತ್ತು ವಂದೇ ಮಾತರಂ ಬಗ್ಗೆ ಗೌರವ ಹೊಂದಿರಬೇಕು' ಎಂದು ಹೇಳಿದರು.

8 ಶಂಕಿತ ಉಗ್ರರ ಬಂಧನ

ಒಂದನೇ ಪುಟದಿಂದ...

ಜನರನ್ನು ಗುರುತಿಸಿ ಭಯೋತ್ಪಾದಕ ಸಂಘಟನೆಗಳಿಗೆ ನೇಮಕ ಮಾಡಿಕೊಳ್ಳುವುದೂ ಸೇರಿದಂತೆ ಹಲವು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪ ಬಂಧಿತರ ಮೇಲಿವೆ ಎಂದರು.

ಪೋಸ್ಟರ್‌ಗಳಿಂದ ಜಾಲದ ಸುಳಿವು: ಅಕ್ಟೋಬರ್ 19ರಂದು ಪೋಸ್ಟರ್‌ಗಳು ಪತ್ತೆಯಾದ ಬಳಿಕ ಅದರ ಜಾಡು ಹಿಡಿದು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಪೋಸ್ಟರ್ ಹಿಂದೆ ವೈದ್ಯ ಮುಜಮ್ಮಿಲ್ ಇರುವುದು ಪತ್ತೆಯಾಗಿತ್ತು. ಜಮ್ಮು ಮತ್ತು ಕಾಶ್ಮೀರ ಪೊಲೀಸರು ಇದರ ಜಾಡು ಹಿಡಿದು ಹರಿಯಾಣಕ್ಕೆ ತೆರಳಿ ಮುಜಮ್ಮಿಲ್ ವಿಚಾರಣೆ ನಡೆಸಿದ್ದರು.

ಈ ಸಂದರ್ಭದಲ್ಲಿ ನಿವಾಸದಲ್ಲಿ ಕೆಲ ರಾಸಾಯನಿಕ ವಸ್ತುಗಳಿರುವುದಾಗಿ ಆತ ಬಾಯ್ಬಿಟ್ಟಿದ್ದ. ಮನೆಯಲ್ಲಿ ಪರಿಶೀಲಿಸಿದಾಗ ಅದು ಶಸ್ತ್ರಾಸ್ತ್ರ, ಸ್ಫೋಟಕ, ಬಾಂಬ್‌ಗಳ ಸಂಗ್ರಹಾಗಾರವಾಗಿತ್ತು. ಮತ್ತೆ ಮುಜಮ್ಮಿಲ್‌ನನ್ನು ವಿಚಾರಣೆಗೆ ಒಳಪಡಿಸಿದಾಗ ಮತ್ತೊಬ್ಬ ವೈದ್ಯ ಆದಿಲ್ ಹೆಸರು ಬಹಿರಂಗವಾಗಿತ್ತು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು ಆದಿಲ್‌ನನ್ನೂ ಬಂಧಿಸಿದರು. ಆತನಿಂದ ಪಡೆದ ಮಾಹಿತಿ ಆಧಾರದಲ್ಲಿ ಕಾರ್ಯಾಚರಣೆ ನಡೆಸಿ ಉಳಿದವರನ್ನು ಬಂಧಿಸಿದರು.

ಉಗ್ರ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದ ಭದ್ರತಾ ಸಿಬ್ಬಂದಿ ಪಿಟಿಐ ಚಿತ್ರ

ಖ್ಯಾತ ಸಾಹಿತಿ ಅಂದೆ ಶ್ರೀ ನಿಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ರಾಜ್ಯ ಗೀತೆ 'ಜಯ ಜಯ ಹೇ ತೆಲಂಗಾಣ' ರಚನೆಕಾರರಾದ ಖ್ಯಾತ ಕವಿ, ಸಾಹಿತಿ ಅಂದೆ ಶ್ರೀ (64) ಅವರು ಸೋಮವಾರ ನಿಧನರಾಗಿದ್ದಾರೆ.



ಇಲ್ಲಿನ ತಮ್ಮ ನಿವಾಸದಲ್ಲಿ ಸೋಮವಾರ ಬೆಳಿಗ್ಗೆ ಅಂದೆ ಶ್ರೀ ಅಸ್ವಸ್ಥರಾದ ಸ್ಥಿತಿಯಲ್ಲಿರುವುದನ್ನು ಕುಟುಂಬಸ್ಥರು ಗಮನಿಸಿ, ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದಾಗಿ ವೈದ್ಯರು ತಿಳಿಸಿದ್ದಾರೆ.

ಸಿದ್ದಿಪೇಟ್ ಜಿಲ್ಲೆಯ ರೇಬರ್ಥಿ ಗ್ರಾಮದಲ್ಲಿ 1961ರಲ್ಲಿ ಜನಿಸಿದ ಅಂದೆ ಎಲ್ಲಣ್ಣ ಅವರು ತಮ್ಮ ಕವನ, ಸಾಹಿತ್ಯಗಳಿಂದ ಪ್ರಸಿದ್ಧಿಗಳಿಸಿ ಅಂದೆಶ್ರೀ ಎಂದು ಗುರುತಿಸಿಕೊಂಡರು. ತೆಲಂಗಾಣ ಪ್ರತ್ಯೇಕ ರಾಜ್ಯದ ಚಳವಳಿಯಲ್ಲಿ ಅಂದೆ ಶ್ರೀ ಅವರ 'ಜಯ ಜಯ ಹೇ ತೆಲಂಗಾಣ' ರಾಜ್ಯ ಗೀತೆಯಾಗಿ ಮಾರ್ಪಟ್ಟಿತು.

'ಎರ್ರ ಸಮುದ್ರಂ' ಎಂಬ ಸಿನಿಮಾಗಾಗಿ ಅಂದೆ ಶ್ರೀ ಅವರು ಬರೆದ 'ಮಾಯಮ್ಮೈ ಪೋತುನ್ನಾಡಮ್ಮ ಮನಿಷನ್ನವಾಡು' ಎಂಬ ಗೀತೆಯನ್ನು ಆಂಧ್ರಪ್ರದೇಶ ವಿಶ್ವವಿದ್ಯಾಲಯದ ಪಠ್ಯಪುಸ್ತಕ ಸಮಿತಿಯು 2009ರಲ್ಲಿ ಪದವಿ ಶಿಕ್ಷಣದ ಎರಡನೇ ವರ್ಷದ ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸಿತ್ತು.

'ಗಂಗಾ' ಸಿನಿಮಾಗಾಗಿ ಅವರು ಬರೆದ ಹಾಡಿಗೆ 2006ನೇ ಸಾಲಿನ ನಂದಿ ಪ್ರಶಸ್ತಿ ಸಂದಿತ್ತು. ಇದಲ್ಲದೇ, ತೆಲಂಗಾಣದ ಸಾಂಸ್ಕೃತಿಕ ಪರಂಪರೆ ಹಾಗೂ ಸಾಹಿತ್ಯಕ್ಕೆ ಅಂದೆ ಶ್ರೀ ಅವರು ನೀಡಿದ ಕೊಡುಗೆಗಾಗಿ ಕಾಕತೀಯ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿ, ಪುರಸ್ಕರಿಸಿತ್ತು.

2025ರ ಜೂನ್‌ನಲ್ಲಿ ರಾಜ್ಯ ಸ್ಥಾಪನಾ ದಿನಾಚರಣೆಯಂದು ರಾಜ್ಯ ಸರ್ಕಾರವು ಅಂದೆ ಶ್ರೀ ಅವರಿಗೆ ₹1 ಕೋಟಿ ನಗದು ಬಹುಮಾನವನ್ನೂ ನೀಡಿತ್ತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ವಿವೇಕವಂತರಾದ ತಂದೆ–ತಾಯಿಯರು ಮಕ್ಕಳು ತಪ್ಪು ಮಾಡುವುದಕ್ಕೆ ಅವಕಾಶ ಕೊಡುತ್ತಾರೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

‘ಪೋಕ್ಸೊ’ ದುರ್ಬಳಕೆಯ ಸಾಧ್ಯತೆ ಕೋರ್ಟ್ ಕಳವಳಕ್ಕೆ ಸ್ಪಂದಿಸಬೇಕಿದೆ

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ದುರ್ಬಳಕೆ ಬಗ್ಗೆ ಕಳವಳ ವ್ಯಕ್ತಪಡಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಬಹಳ ಮಹತ್ವದ ವಿಚಾರವೊಂದನ್ನು ಪ್ರಸ್ತಾಪಿಸಿದೆ. ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ ನೀಡುವುದನ್ನು ಕಡ್ಡಾಯ ಮಾಡಬೇಕು ಹಾಗೂ ಅತ್ಯಾಚಾರ ತಡೆಯುವ ಉದ್ದೇಶದ ಕಾನೂನುಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕು ಎಂಬ ಕೋರಿಕೆ ಇರುವ ಅರ್ಜಿಯ ವಿಚಾರಣೆಯನ್ನು ನಡೆಸುವಾಗ ಕೋರ್ಟ್ ಈ ಕಳವಳ ವ್ಯಕ್ತಪಡಿಸಿದೆ. ಹದಿಹರೆಯದವರು ಸಮ್ಮತಿಯ ಆಧಾರದಲ್ಲಿ ಸಂಬಂಧ ಹೊಂದಿದ ಸಂದರ್ಭಗಳಲ್ಲಿಯೂ ಪೋಕ್ಸೊ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಕೋರ್ಟ್ ಹೇಳಿದೆ. ಈ ಬಗ್ಗೆ ಕೋರ್ಟ್ ಹಿಂದೆಯೂ ಕೆಲವು ಮಾತುಗಳನ್ನು ಹೇಳಿದ ನಿದರ್ಶನಗಳಿವೆ. ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಹದಿಹರೆಯದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದಾಗ, ಅದಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಿದೆ. 16 ವರ್ಷಕ್ಕಿಂತ ಮೇಲ್ಪಟ್ಟವರು ಹಾಗೂ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಸಮ್ಮತಿಯ ಆಧಾರದಲ್ಲಿ ಲೈಂಗಿಕಕ್ರಿಯೆ ನಡೆಸಿದರೆ, ಅದನ್ನು ಕೂಡ ಕ್ರಿಮಿನಲ್ ಅಪರಾಧವಾಗಿ ಈ ಕಾಯ್ದೆಯ ಅಡಿಯಲ್ಲಿ ಕಾಣುವುದನ್ನು ಪ್ರಶ್ನಿಸಿರುವ ಅರ್ಜಿಯೊಂದರ ವಿಚಾರಣೆಯನ್ನು ಕೋರ್ಟ್‌ನ ಇನ್ನೊಂದು ಪೀಠವು ನಡೆಸುತ್ತಿದೆ. ಈ ವಿಚಾರವಾಗಿ ದೇಶದ ಹಲವೆಡೆ ಚರ್ಚೆಗಳೂ ಆಗಿವೆ. ಇಂತಹ ಪ್ರಕರಣಗಳು ನ್ಯಾಯಮೂರ್ತಿಗಳಿಗೆ ಬಹಳ ‘ಕಠಿಣವಾದ ಪ್ರಶ್ನೆಗಳನ್ನು ಒಡ್ಡುತ್ತವೆ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗಿದ್ದ ಡಿ.ವೈ. ಚಂದ್ರಚೂಡ್ ಹೇಳಿದ್ದರು. ಈ ವಿಚಾರವನ್ನು, ಹದಿಹರೆಯದವರ ಆರೋಗ್ಯದ ವಿಚಾರದಲ್ಲಿ ನಡೆದಿರುವ ಸಂಶೋಧನೆಗಳನ್ನು ಆಧರಿಸಿ ಶಾಸಕಾಂಗವು ಪರಿಶೀಲಿಸಬೇಕು ಎಂದೂ ಅವರು ಸಲಹೆ ನೀಡಿದ್ದರು.

ಮಕ್ಕಳನ್ನು ಲೈಂಗಿಕ ದೌರ್ಜನ್ಯಗಳಿಂದ ರಕ್ಷಿಸುವ ಪ್ರಬಲ ಅಸ್ತ್ರವಾಗಿ ‘ಪೋಕ್ಸೊ’ ಕಾಯ್ದೆ ಉಳಿದುಕೊಳ್ಳಬೇಕು. ಅದರ ದುರ್ಬಳಕೆಯನ್ನು ತಡೆಯಲು ಮಾರ್ಗೋಪಾಯಗಳ ಹುಡುಕಾಟ ನಡೆಯಬೇಕು.

ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುವುದನ್ನು ತಡೆಯಲು ವಿಶೇಷ ಕಾಯ್ದೆಯೊಂದರ ಅಗತ್ಯ ಇದೆ ಎಂಬ ಉದ್ದೇಶದಿಂದ ಪೋಕ್ಸೊ ಕಾಯ್ದೆಯನ್ನು ರೂಪಿಸಲಾಗಿದೆ. ಈ ಕಾಯ್ದೆಯ ಉದ್ದೇಶವು ಒಂದು ಹಂತದವರೆಗೆ ಈಡೇರಿದೆ ಕೂಡ. ಕಾಯ್ದೆಯ ಕಾರಣದಿಂದಾಗಿ ಹಲವು ಅಪರಾಧಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ಆದರೆ ರಕ್ಷಣೆಗೆ ಅಗತ್ಯವಾದ ಕ್ರಮ ಎಂದು ಕಾಣಲಾದ ಈ ಕಾಯ್ದೆಯು ಅನುಷ್ಠಾನದ ಹಂತದಲ್ಲಿ ಹಲವು ಸಮಸ್ಯೆಗಳನ್ನೂ ಸೃಷ್ಟಿಸಿದೆ. ಸಹಜವಾದ ಸಂಬಂಧಗಳಿಗೆ ಶಿಕ್ಷೆ ವಿಧಿಸಲು ಈ ಕಾಯ್ದೆಯನ್ನು ಒಂದು ಅಸ್ತ್ರವನ್ನಾಗಿ ಬಳಕೆ ಮಾಡಿಕೊಂಡ ನಿದರ್ಶನಗಳಿವೆ. ಈ ಕಾಯ್ದೆಯ ಪ್ರಕಾರ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು ಯಾವುದೇ ಸಂದರ್ಭದಲ್ಲಿಯೂ ಲೈಂಗಿಕ ಸಂಪರ್ಕಕ್ಕೆ ಸಮ್ಮತಿ ನೀಡುವಂತಿಲ್ಲ. ಅಂದರೆ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣಿನ ಜೊತೆ ಲೈಂಗಿಕ ಸಂಬಂಧ ಬೆಳೆಸುವುದು ಅಪರಾಧವಾಗುತ್ತದೆ. ಆದರೆ, ಕಳೆದ ಕೆಲವು ವರ್ಷಗಳಲ್ಲಿ ಸಾಮಾಜಿಕ ಕಟ್ಟುಪಾಡುಗಳು, ಯುವಜನರ ನಡುವಿನ ಸಂಬಂಧಗಳ ಸ್ವರೂಪ ಬಹಳಷ್ಟು ಬದಲಾಗಿದೆ. ಹದಿಹರೆಯದವರು ಪರಸ್ಪರರನ್ನು ಪ್ರೀತಿಸುತ್ತಾರೆ, ತಮ್ಮ ಸಂಬಂಧದ ಆಳ ಎಷ್ಟೆಂಬುದನ್ನು ಅನ್ವೇಷಿಸಲು ಮುಂದಾಗುತ್ತಾರೆ. ಆದರೆ, ಸಹಮತದ ಸಂಬಂಧವು ಕೆಲವು ಸಂದರ್ಭಗಳಲ್ಲಿ ಯುವಕನನ್ನು ಮಾತ್ರ ಕಾನೂನಿನ ಸುಳಿಗೆ ಸಿಲುಕಿಸಿ, ಜೈಲಿಗೆ ತಳ್ಳುತ್ತದೆ.

ಹದಿಹರೆಯದವರ ಕೆಲವು ಕೃತ್ಯಗಳು ಕಾನೂನಿನ ದೃಷ್ಟಿಯಿಂದ ಅತ್ಯಾಚಾರ ಎಂದು ಪರಿಗಣಿತವಾಗುತ್ತವೆ; ಹುಡುಗನ ಜೀವಿತಾವಧಿಯ ಒಂದಿಷ್ಟು ವರ್ಷಗಳು ಹಾಳಾಗುತ್ತವೆ. ಉತ್ತಮ ವಕೀಲರ ನೆರವು ಪಡೆಯಲು ಆಗದೆ, ಕಾನೂನಿನ ಅಡಿಯಲ್ಲಿ ಸರಿಯಾದ ರಕ್ಷಣೆ ಪಡೆಯಲು ಆಗದೆ ದುರ್ಬಲ ವರ್ಗಗಳಿಗೆ ಸೇರಿದವರು ಹೆಚ್ಚಿನ ಕಷ್ಟ ಅನುಭವಿಸಬೇಕಾಗುತ್ತದೆ. ಹುಡುಗಿಯ ಕುಟುಂಬದವರು ಕೆಲವು ಸಂದರ್ಭಗಳಲ್ಲಿ ಇಡೀ ಪ್ರಕರಣವನ್ನು ‘ಮರ್ಯಾದೆಯ ಪ್ರಶ್ನೆಯನ್ನಾಗಿ ಪರಿಗಣಿಸಿ’, ಹಗೆ ತೀರಿಸಿಕೊಳ್ಳಲು ಮುಂದಾಗುತ್ತಾರೆ. ಹುಡುಗನ ಮೇಲೆ ಅತ್ಯಾಚಾರದ ಆರೋಪ ಹೊರಿಸುತ್ತಾರೆ. ಅತ್ಯಾಚಾರಕ್ಕೆ ನೇರವಾಗಿ ಸಂಬಂಧವೇ ಇಲ್ಲದ ಕೆಲವು ಸಂಗತಿಗಳು, ಅಂದರೆ ಜಮೀನು ವ್ಯಾಜ್ಯಗಳು ಅಥವಾ ಕುಟುಂಬಗಳ ನಡುವಿನ ಕಲಹಗಳು ಕೂಡ ಪೋಕ್ಸೊ ಅಡಿಯಲ್ಲಿ ಸುಳ್ಳು ಪ್ರಕರಣ ದಾಖಲಿಸಲು ಕಾರಣವಾಗಿವೆ. ಈ ಎಲ್ಲ ಕಾರಣಗಳಿಂದಾಗಿ, ಪೋಕ್ಸೊ ಕಾಯ್ದೆಯ ದುರ್ಬಳಕೆಯನ್ನು ತಡೆಯಲು ಕಾಯ್ದೆಯ ಅಂಶಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸುವ ಅಗತ್ಯ ಇದೆ. ಸಹಮತ ನೀಡಲು 16 ವರ್ಷ ವಯಸ್ಸಾಗಿದ್ದರೆ ಸಾಕು ಎಂಬ ಬದಲಾವಣೆಯನ್ನು ಕಾಯ್ದೆಯಲ್ಲಿ ತರಬೇಕು ಎಂಬ ಸಲಹೆಯೊಂದು ಇದೆ. ಆದರೆ, ಸಹಮತದ ವಯಸ್ಸನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ಒಪ್ಪಿಲ್ಲ. ಮಕ್ಕಳನ್ನು ಲೈಂಗಿಕ ದೌರ್ಜನ್ಯಗಳಿಂದ ರಕ್ಷಿಸಲು ಇರುವ ಪ್ರಬಲ ಅಸ್ತ್ರವಾಗಿ ಪೋಕ್ಸೊ ಕಾಯ್ದೆ ಉಳಿದುಕೊಳ್ಳಬೇಕು. ಆದರೆ, ಕೋರ್ಟ್ ಹೇಳಿರುವಂತೆ ಅದರ ದುರ್ಬಳಕೆಯನ್ನು ತಡೆಯಲು ಮಾರ್ಗೋಪಾಯ ಹುಡುಕಬೇಕು.

ಚಾಟಿ

ಮುಖ್ಯಮಂತ್ರಿ ವಿರೋಧಿಸಲಿ

ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು ಕ್ರೀಡಾಂಗಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರು ಇಡಲಾಗುತ್ತಿದೆ. ಸರ್ಕಾರಿ ಕಟ್ಟಡಗಳಿಗೆ ಜೀವಂತ ವ್ಯಕ್ತಿಗಳ ಹೆಸರಿಡುವುದನ್ನು ಮುಖ್ಯಮಂತ್ರಿ ವಿರೋಧಿಸಬೇಕು – ತಮ್ಮ ಹೆಸರನ್ನೂ ಕೂಡ.

ಚೇತನ್ ಅಹಿಂಸಾ, ನಟ, ‘ಎಕ್ಸ್’ನಿಂದ

ಕಿಡಿನುಡಿ

ರಾಜ್ಯದಲ್ಲಿ ಕ್ರಿಮಿನಲ್‌ಗಳು, ಭಯೋತ್ಪಾದಕರಿಗೆ ರಾಜಾಶ್ರಯ ದೊರಕುತ್ತಿದೆ. ರೆಸಾರ್ಟ್‌ಗೆ ಹೋಗಬೇಕಾದ ಅವಶ್ಯಕತೆ ಇಲ್ಲ. ಜೈಲಿನಲ್ಲಿಯೇ ಗಾಂಜಾ, ಮದ್ಯ ಸಿಗುತ್ತದೆ. ಮೊಬೈಲ್‌ನಲ್ಲಿ ಮಾತನಾಡಲೂ ವ್ಯವಸ್ಥೆ ಇದೆ.

ಸಿ.ಟಿ. ರವಿ, ಬಿಜೆಪಿಯ ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 11-11-2000

• **ಹಾ.ಮಾ. ನಾಯಕ ಇನ್ನಿಲ್ಲ**

ಮೈಸೂರು, ನ. 10– ಹೆಸರಾಂತ ಸಾಹಿತಿ, ಅಂಕಣಕಾರ, ಡಾ. ಹಾ.ಮಾ. ನಾಯಕ ಅವರು ಇಂದು ರಾತ್ರಿ 10 ಗಂಟೆಗೆ ಇಲ್ಲಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 69 ವರ್ಷ ವಯಸ್ಸಾಗಿತ್ತು. ಅಂಕಣ ಸಾಹಿತ್ಯಕ್ಕೆ ನೀಡಿದ ಕೊಡುಗೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೊಟ್ಟ ಮೊದಲ ಬಾರಿಗೆ ಗಳಿಸಿದ ಕೀರ್ತಿ ಅವರದು. ರಾಜ್ಯೋತ್ಸವ, ಪಂಪ ಪ್ರಶಸ್ತಿ ಸಹ ಅವರಿಗೆ ಸಂದಿವೆ.

• **ನೀರಾವರಿ: ಸಂತ್ರಸ್ತರಿಗೆ ಶೇ. 5 ಹುದ್ದೆ ಮೀಸಲು**

ಬೆಂಗಳೂರು, ನ. 10– ಕೃಷ್ಣಾ ಮೇಲ್ದಂಡೆ ಯೋಜನೆಯೂ ಸೇರಿದಂತೆ ಎಲ್ಲ ನೀರಾವರಿ ಯೋಜನೆಗಳಲ್ಲಿ ನಿರ್ವಸಿತರಾದ ಕುಟುಂಬಗಳಿಗೆ ಸರ್ಕಾರಿ ನೌಕರಿಗಳಲ್ಲಿ ಶೇ. 5ರಷ್ಟು ಸ್ಥಾನಗಳನ್ನು ಮೀಸಲು ನೀಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವ ಎಚ್.ಕೆ. ಪಾಟೀಲ ಇಂದು ವಿಧಾನಸಭೆಗೆ ತಿಳಿಸಿದರು.

75 ವರ್ಷಗಳ ಹಿಂದೆ

ಶನಿವಾರ, 11-11-1950

• **ಟಿಬೆಟ್ ಜನತೆಯ ವಿರುದ್ಧ ಕತ್ತಿ ಎತ್ತಿದ್ದು ಅನ್ಯಾಯ**

ನವದೆಹಲಿ, ನ. 9– ಟಿಬೆಟ್‌ನಲ್ಲಿ ಚೀಣಾ ಕೈಗೊಂಡಿರುವ ಕ್ರಮವನ್ನು ಸರದಾರ್ ವಲ್ಲಭಭಾಯ್ ಪಟೇಲರು ಇಂದು ಟೀಕಿಸಿದರು. ಪರಂಪರಾನುಗತವಾಗಿ ಶಾಂತಿಪ್ರಿಯರಾದ ಟಿಬೆಟ್ ಜನತೆಯ ವಿರುದ್ಧ ಕತ್ತಿ ಎತ್ತಿದ್ದು ಅನ್ಯಾಯವೆಂದರು.

ಮುಂದುವರಿದು, ಚೀಣಾ ಭಾರತದ ಸಲಹೆಯನ್ನು ಕೇಳಿದ್ದರೆ ಬಲಪ್ರಯೋಗ ತ್ಯಜಿಸಬಹುದಾಗಿತ್ತು ಎಂದರು. ಟಿಬೆಟ್ಟಿನಲ್ಲಿ ವಿದೇಶೀಯರ ಸಂಚು ಸಾಗಿತ್ತೆಂದು, ಚೀಣಾ ತನ್ನ ಕೃತಿ ಸಮರ್ಥನೆಗೆ ನೀಡಿರುವ ವಾದ ಆಧಾರರಹಿತವೆಂದರು.

• **ಶ್ರೀನಗರದಲ್ಲಿ ಡಾ. ಪ್ರಸಾದ್**

ಶ್ರೀನಗರ, ನ. 9– ಭಾರತ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಪರಿವಾರ ಸಮೇತ ಇಂದು ಶ್ರೀನಗರಕ್ಕೆ ಆಗಮಿಸಿದರು. ಪ್ರಸಾದರು ರಾಷ್ಟ್ರಾಧ್ಯಕ್ಷರಾಗಿ ಅಧಿಕಾರ ವಹಿಸಿದ ಮೇಲೆ ಶ್ರೀನಗರಕ್ಕೆ ಭೇಟಿ ಕೊಟ್ಟುದು ಇದೇ ಮೊದಲನೆ ಸಾರಿ.

ಘಟ್ಟ ಉಳಿದಲ್ಲಿ ಉಳಿದೇವು!

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ನಾಡು–ನುಡಿಯ ಬಗೆಗಿನ ನಮ್ಮ ಕಾಳಜಿಯಲ್ಲಿ ಪರಿಸರವೂ ಸೇರಿಕೊಳ್ಳಬೇಕು. ಪಶ್ಚಿಮ ಘಟ್ಟಗಳ ಸಂರಕ್ಷಣೆ ಹಾಗೂ ಕನ್ನಡ–ಕರ್ನಾಟಕದ ಸಂಗೋಪನೆ ಬೇರೆಯಲ್ಲ. ಪಶ್ಚಿಮ ಘಟ್ಟಗಳನ್ನು ಸಂರಕ್ಷಿಸುವುದು ಈ ನಾಡಿನ ನಾಳೆಗಳ ನೆಮ್ಮದಿಯಿಂದ ಅಗತ್ಯವಾದುದು.

ಮಲೆನಾಡಿನಲ್ಲಿ ಈ ಬಾರಿಯ ಮಳೆಗಾಲ ಮುಗಿಯುತ್ತಲೇ ಇಲ್ಲ. ಮಲೆನಾಡೊಂದೇ ಅಲ್ಲ, ಬಯಲು ಸೀಮೆಯಲ್ಲೂ ಅಕಾಲ ಮಳೆಯಿಂದಾಗಿ ಬೆಳೆದು ನಿಂತಿರುವ ಪೈರು ನಾಶವಾಗಿದೆ. ಅಕಾಲ ಮಳೆಯಿಂದಾಗಿ ರಾಜ್ಯದಲ್ಲಿ ಸಂಭವಿಸಿದ ನಷ್ಟವನ್ನು ಭರಿಸಿಕೊಡಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೊರೆಹೋಗಿದೆ.

ಹಿಮಾಚಲ ಪ್ರದೇಶದಲ್ಲೂ ಇದೇ ಕಥೆ. ಕಳೆದ ನಾಲ್ಕು ವರ್ಷಗಳಲ್ಲಿ, ನೈಸರ್ಗಿಕ ವಿಕೋಪ ಹಾಗೂ ಹವಾಗುಣ ಬದಲಾವಣೆಯಿಂದಾಗಿ 46 ಸಾವಿರ ಕೋಟಿ ರೂಪಾಯಿಗಳ ನಷ್ಟ ಸಂಭವಿಸಿದೆ ಎಂದು ವರದಿಯೊಂದು ಹೇಳಿದೆ. ವಿಶ್ವಸಂಸ್ಥೆಯ ಸಹಯೋಗದೊಂದಿಗೆ ಹಿಮಾಚಲ ಪ್ರದೇಶದ ಪರಿಸರ ವಿಜ್ಞಾನ ವಿಭಾಗವು ತಯಾರಿಸಿದ ವರದಿಯಲ್ಲಿನ ಅಂಕಿ–ಅಂಶಗಳು ಆತಂಕ ಹುಟ್ಟಿಸುವಂತಿವೆ.

ಅಕಾಲಿಕ ಮಳೆಯಿಂದಾಗಿ ಹಳ್ಳಿಗಳ ಜನರು ವಲಸೆ ಹೋಗುತ್ತಿದ್ದಾರೆ. ಕಳೆದ ಐದು ಮುಂಗಾರು ಋತುಗಳಲ್ಲಿ 1700 ಜನ ಪ್ರಾಣ ಕಳೆದುಕೊಂಡಿದ್ದಾರೆ. ಉಷ್ಣಾಂಶದಲ್ಲಿ ಗಣನೀಯ ಏರಿಕೆಯಾಗಿದೆ. ಮೇಘಸ್ಫೋಟ, ಹಿಮ ಸರೋವರಗಳ ಉಕ್ಕುವಿಕೆ ಮತ್ತು ಕಾಡ್ಗಿಚ್ಚಿನಿಂದಾಗಿ ಮುಂದಿನ ದಿನಗಳಲ್ಲಿ ಆರ್ಥಿಕ ಅಭಿವೃದ್ಧಿ ಕುಂಠಿತಗೊಳ್ಳಲಿದೆ. ವಾತಾವರಣದಲ್ಲಿ ಬಿಸಿ ಹೆಚ್ಚಾದಂತೆ, ಅಪಾರ ಪ್ರಮಾಣದ ಮಂಜುಗಡ್ಡೆ ಕರಗುತ್ತ, ಹೊಸ ಹೊಸ ಹಿಮನದಿ– ಸರೋವರಗಳು ಸೃಷ್ಟಿಯಾಗುತ್ತವೆ. ನೈಸರ್ಗಿಕವಾದ ಅಣೆಕಟ್ಟಿನಂತೆ ವರ್ತಿಸುವ ಹಿಮನದಿ– ಸರೋವರಗಳ ಹಿಂಭಾಗದಲ್ಲಿ ಭಾರೀ ಪ್ರಮಾಣದಲ್ಲಿ ನೀರು ಸೇರಿಕೊಂಡು ನಿರಂತರ ಒತ್ತಡ ಸೃಷ್ಟಿ ಮಾಡುತ್ತದೆ. ಈ ನೀರು ಗುಡ್ಡದ ಕೆಳಭಾಗದಲ್ಲಿ ವಾಸಿಸುವ ವಸತಿ ಪ್ರದೇಶಗಳಿಗೆ, ಅಣೆಕಟ್ಟು, ಬೆಳೆ, ರಸ್ತೆ, ಸೇತುವೆ, ವಿದ್ಯುತ್ ಕೇಂದ್ರ ಇತ್ಯಾದಿಗಳಿಗೆ ಕಂಟಕವಾಗುತ್ತದೆ. ಹಿಮಾಚಲ ಪ್ರದೇಶದ ಸಟ್ಲೆಜ್ ಪರಿಸರದಲ್ಲಿ 2019ರಲ್ಲಿ 562 ಹಿಮನದಿ–ಸರೋವರಗಳಿದ್ದವು. 2023ರ ಹೊತ್ತಿಗೆ ಆ ಸಂಖ್ಯೆ 1048ಕ್ಕೆ ಏರಿಕೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕುಲು ಮತ್ತು ಕಿನೌರ್ ಜಿಲ್ಲೆಗಳಲ್ಲೂ ಈ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ.

ಕೃಷಿ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಆಗುತ್ತಿರುವ ಆರ್ಥಿಕ ನಷ್ಟಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಹವಾಗುಣ ಬದಲಾವಣೆ ಸಂಕಷ್ಟಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು 10,000 ಕೋಟಿ ರೂಪಾಯಿಗಳ ಅಗತ್ಯವಿದೆ ಎಂದು ಹೇಳಲಾಗಿದೆ. ವರದಿಯನ್ನು ಬಿಡುಗಡೆ ಮಾಡಿರುವ ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ‘ಹವಾಗುಣ ಬದಲಾವಣೆಯು ಗಂಭೀರ ಜಾಗತಿಕ ಸಮಸ್ಯೆಯಾಗಿದೆ. ಶಾಶ್ವತ ಪರಿಹಾರ ಕಂಡುಕೊಳ್ಳದಿದ್ದಲ್ಲಿ, ವರ್ತಮಾನ ಮತ್ತು ಭವಿಷ್ಯದಲ್ಲಿ ಅದರ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಸಿದ್ದಾರೆ.

2025ರ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ 47 ಮೇಘಸ್ಫೋಟಗಳು, 98 ಹಿಮನದಿ ಪ್ರವಾಹಗಳು, 148 ಪ್ರಮುಖ ಭೂಕುಸಿತಗಳು ಸಂಭವಿಸಿವೆ ಎಂದು ಹಿಮಾಚಲ ತುರ್ತು ಕಾರ್ಯಾಚರಣೆ ಕೇಂದ್ರ ಹೇಳಿದೆ. ಜಾಗತಿಕ ತಾಪಮಾನದ ಕಾರಣಕ್ಕೆ ಇಡೀ ರಾಜ್ಯವು ಅತಿಯಾದ ಮಳೆ, ಪ್ರವಾಹ ಮತ್ತು ಭೂಕುಸಿತಗಳಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ.

ಹಿಮಾಚಲ ಪ್ರದೇಶದ ಸ್ಥಿತಿಯ ಕೆಲವು ಲಕ್ಷಣಗಳು ನಮ್ಮಲ್ಲೂ ಗೋಚರಿಸುತ್ತಿವೆ. ಹಿಮಾಲಯ ಪರ್ವತಶ್ರೇಣಿ ಸೃಷ್ಟಿಯಾಗುವುದಕ್ಕೂ ಬಹಳ ಮೊದಲೇ ಪಶ್ಚಿಮಘಟ್ಟಗಳು ಸೃಷ್ಟಿಯಾಗಿವೆ. ಹಿಮಗಡ್ಡೆಗಳು ಕರಗುವುದರಿಂದಾಗಿ ಹಿಮಾಲಯದಲ್ಲಿ ನದಿಗಳು ಹುಟ್ಟಿದರೆ, ಪಶ್ಚಿಮಘಟ್ಟಗಳ ದಟ್ಟಾರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳು ನದಿಗಳ ಉಗಮಕ್ಕೆ ಕಾರಣವಾಗಿವೆ. ಹವಾಗುಣ ಬದಲಾವಣೆಯಿಂದಾಗಿ ಎರಡೂ ಪರ್ವತ ಶ್ರೇಣಿಗಳು ಅಪಾಯವನ್ನು ಎದುರಿಸುತ್ತಿವೆ. ಗುಡ್ಡ ಕುಸಿತ ಘಟನೆಗಳು ಎರಡೂ ಪ್ರದೇಶಗಳಲ್ಲೂ ಸಾಮಾನ್ಯ ಎನ್ನುವಂತೆ ಸಂಭವಿಸುತ್ತಿವೆ.

ಕರ್ನಾಟಕದಲ್ಲೂ ಹಿಮಾಚಲ ಮಾದರಿಯ ಅಧ್ಯಯನ ನಡೆದಿದೆ. ಹವಾಗುಣ ಬದಲಾವಣೆಯಿಂದಾಗಿ ಏನೆಲ್ಲಾ ಅನಾಹುತಗಳಾಗುತ್ತವೆ ಎನ್ನುವುದರ ಬಗ್ಗೆ ಹಲವು ವರದಿಗಳು ಬೆಳಕು ಚೆಲ್ಲಿವೆ. ಪಶ್ಚಿಮಘಟ್ಟಗಳ ಸೂಕ್ಷ್ಮ ಪರಿಸರದಲ್ಲಿ ಏನನ್ನು ಮಾಡಬಾರದು ಎಂಬುದನ್ನು ನಿಖರವಾಗಿ ಹೇಳಿರುವ ವೈಜ್ಞಾನಿಕ ವರದಿಗಳಿವೆ. ಇಡೀ ಪಶ್ಚಿಮಘಟ್ಟ ಭೂಕುಸಿತದ ಅಪಾಯವನ್ನು ಎದುರಿಸುತ್ತಿದ್ದು, ಗುಡ್ಡವನ್ನು ಸೀಳುವಂತಹ, ಕೊರೆಯುವಂತಹ ಕಾಮಗಾರಿಗಳಿಗೆ ನಿಷೇಧ ಹೇರಬೇಕು ಎಂಬುದು ಎಲ್ಲಾ ವರದಿಗಳ ತಾತ್ಪರ್ಯ.

ವಿಜ್ಞಾನಿಗಳು ನೀಡಿದ ವರದಿಗಳನ್ನು ಪರಿಗಣಿಸುವ ಸ್ಥಿತಿಯಲ್ಲಿ ಸರ್ಕಾರಗಳು ಇಲ್ಲ. ಸರ್ಕಾರಗಳಿಗೆ ಅವುಗಳದ್ದೇ ಆದ ಕಾರಣಗಳಿವೆ. ಎತ್ತಿನಹೊಳೆ ನದಿ ತಿರುವು ಯೋಜನೆಯಿಂದ ಆದ ಪ್ರಮಾದಗಳಿಗೆ ಅಲ್ಲಿನ ಸ್ಥಳೀಯರು ಬೆಲೆ ತೆರಬೇಕಾಗಿದೆ. ಮಾನವ–ಆನೆ ಸಂಘರ್ಷ ತಾರಕಕ್ಕೇರಿರುವುದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಪ್ರವಾಸೋದ್ಯಮದ ಮೂಲಕ ಆರ್ಥಿಕತೆಯನ್ನು ಹೆಚ್ಚಿಸಿಕೊಳ್ಳುವ ಹುಮ್ಮಸ್ಸಿನಲ್ಲಿ ಅತಿಯಾದ ಸಫಾರಿ ಆಯೋಜಿಸಲಾಗುತ್ತದೆ. ಪ್ರವಾಸಿಗರ ಒತ್ತಡದ ಕಾರಣಕ್ಕೆ ಹುಲಿಗಳು ನಾಡಂಚಿಗೆ ಬರುವುದು, ಜನರ ಪ್ರಾಣಕ್ಕೆ ಎರವಾಗುವುದು ನಡೆಯುತ್ತಿದೆ. ಹವಾಗುಣ ಬದಲಾವಣೆ ಎನ್ನುವುದು ಮಾನವ ನಿರ್ಮಿತವಾಗಿದೆ ಎಂಬುದು ನಿರ್ವಿವಾದ. ಆದರೆ, ಅದಕ್ಕೆ ಮಾನವ ಮಾತ್ರವಲ್ಲದೆ, ಇತರ ಜೀವಿವೈವಿಧ್ಯವೂ ಬಲಿಯಾಗುತ್ತಿದೆ.

ಆರ್ಥಿಕತೆ ಅಥವಾ ಜಿಡಿಪಿಯೊಂದನ್ನೇ ಮಾನದಂಡವಾಗಿಟ್ಟುಕೊಂಡು ಪರಿಸರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಸಾಧ್ಯವಿಲ್ಲ. ಮಾನವ ಅಭಿವೃದ್ಧಿ ಸೂಚ್ಯಂಕ ಗಗನಮುಖಿ ಆಗಬೇಕು ಎಂದರೆ, ಅದಕ್ಕೆ ಈಗಿರುವ ವನ್ಯಸಂಪತ್ತನ್ನು ರಾಜಿ ಮಾಡಿಕೊಳ್ಳದೆ ರಕ್ಷಣೆ ಮಾಡುವುದೊಂದೇ ಏಕೈಕ ಮಾರ್ಗ. ರೈಲು, ರಸ್ತೆ, ಕೇಬಲ್ ಕಾರು, ಬುಲೆಟ್ ಟ್ರೈನ್ ಮುಂತಾದ ಪಾಶ್ಚಾತ್ಯ ಮಾದರಿಗಳನ್ನು ಅಳವಡಿಸಿಕೊಳ್ಳಲು ಆತುರ ತೋರುವ ನಾವು, ಪರಿಸರ ಸಂರಕ್ಷಣೆಯ ಪಾಶ್ಚಾತ್ಯ ಮಾದರಿಯನ್ನು ಅಳವಡಿಸಿಕೊಳ್ಳಲು ಸೋಲುತ್ತಿದ್ದೇವೆ.

ಪಶ್ಚಿಮಘಟ್ಟಗಳು ಭಾರತದ ದಕ್ಷಿಣ ಭಾಗದ ಜೀವನಾಡಿ. ಈ ಶ್ರೇಣಿಗಳು ಕರ್ನಾಟಕದ ಹವಾಮಾನ, ನೀರು, ಮಣ್ಣು ಮತ್ತು ಜೀವಿವೈವಿಧ್ಯವನ್ನು ಹದವಾಗಿ ಇಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪಶ್ಚಿಮಘಟ್ಟಗಳಿಲ್ಲದೇ ಬೆಂಗಳೂರು ಸೇರಿದಂತೆ ಕರ್ನಾಟಕದ ಒಳನಾಡು ಜಿಲ್ಲೆಗಳ ಒಟ್ಟಾರೆ ಜೀವನ ಸಂಕಷ್ಟಕ್ಕೆ ಸಿಲುಕುತ್ತದೆ. ಪಶ್ಚಿಮಘಟ್ಟಗಳು ಮಳೆಗಾಲದ ವಾಯುಚಲನೆಯನ್ನು ನಿಯಂತ್ರಿಸುವುದರ ಮೂಲಕ ಒಳನಾಡಿಗೆ ಮಳೆಯನ್ನು ಸುರಿಸುವ ಕೆಲಸವನ್ನು ಮಾಡುತ್ತವೆ. ಪಶ್ಚಿಮಘಟ್ಟಗಳು ದುರ್ಬಲಗೊಳ್ಳುವುದರ ಪರಿಣಾಮ ಕೃಷಿ, ಕುಡಿಯುವ ನೀರಿನ ಪೂರೈಕೆ ಮತ್ತು ನದಿಗಳ ಮೇಲಾಗುತ್ತದೆ. ಕಾವೇರಿ, ತುಂಗಭದ್ರಾ, ಶರಾವತಿ ಮುಂತಾದ ನದಿಗಳ ಮೂಲ ಪಶ್ಚಿಮಘಟ್ಟಗಳೇ ಆಗಿವೆ. ಈ ನೀರನ್ನೇ ನಂಬಿಕೊಂಡ ಬೆಂಗಳೂರಿನಂತಹ ನಗರಗಳು ನೀರಿನ ಅಲಭ್ಯತೆಗೆ ಸಿಲುಕುತ್ತವೆ. ತಾಪಮಾನ ಏರಿಕೆ, ಹವಾಗುಣ ಅಸ್ಥಿರತೆ ಮತ್ತು ಅಂತರ್ಜಲ ಮಟ್ಟವನ್ನು ನಿಯಂತ್ರಿಸುವ ಪಶ್ಚಿಮಘಟ್ಟಗಳು ನಾಶವಾದಲ್ಲಿ, ಆಹಾರ ಭದ್ರತೆಗೆ ಧಕ್ಕೆಯಾಗುತ್ತದೆ. ಘಟ್ಟಗಳ ಪರಿಸರ ಸೇವೆಗಳಾದ ನೀರಿನ ಭದ್ರತೆ, ಮಣ್ಣಿನ ಸಂರಕ್ಷಣೆ, ಇಂಗಾಲಾಮ್ಲ ಹೀರುವಿಕೆ, ತಾಪಮಾನ ನಿಯಂತ್ರಣ ಇತ್ಯಾದಿಗಳಿಗೆ ತತ್ವಾರವಾಗುತ್ತದೆ.

ಪಶ್ಚಿಮಘಟ್ಟಗಳನ್ನು ಕಳೆದುಕೊಂಡು ಬೆಂಗಳೂರು ಮತ್ತಿತರ ಆರ್ಥಿಕ ಕೇಂದ್ರಿತ ಮಹಾನಗರಗಳು ಮತ್ತು ಕೆಲವು ಮಟ್ಟಿಗೆ ಒಳನಾಡು ಜಿಲ್ಲೆಗಳು ತಾಂತ್ರಿಕವಾಗಿ ಬದುಕಬಲ್ಲವು. ಆದರೆ, ಅಂತಹ ಬದುಕು ಬಹಳ ಕಷ್ಟಕರ, ದುಬಾರಿ, ಗುಣಮಟ್ಟದಲ್ಲಿ ತೀರಾ ಕಳಪೆಯಾಗಿರಲಿದೆ.

ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಬರುವ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಮಣಿಪುರ ರಾಜ್ಯಗಳಲ್ಲಿ, ಆಂತರಿಕ ಪ್ರವೇಶ ಪರವಾನಗಿ (ಇನ್ನರ್ ಲೈನ್ ಪರ್ಮಿಟ್– ಐಎಲ್‌ಪಿ) ಎನ್ನುವ ಒಂದು ಕಾನೂನಿದೆ. 1873ರಲ್ಲಿ ಬ್ರಿಟಿಷ್ ಆಡಳಿತ ‘ಬೆಂಗಾಲ್ ಈಸ್ಟರ್ನ್ ಫ್ರಾಂಟಿಯರ್ ಆ್ಯಕ್ಟ್’ ಜಾರಿಗೆ ತಂದಿತು. ಅದರ ಉದ್ದೇಶ, ಸ್ಥಳೀಯ ಸಂಸ್ಕೃತಿ, ಪರಿಸರ, ಬುಡಕಟ್ಟು ಜನಾಂಗದ ಮೇಲೆ ಹೊರಗಿನ ದಾಳಿಯನ್ನು ನಿಯಂತ್ರಿಸುವುದಾಗಿತ್ತು. ಅದರ ಮತ್ತೊಂದು ಆವೃತ್ತಿಯೇ ‘ಐಎಲ್‌ಪಿ’. ನಾವು ಆ ನಾಲ್ಕು ರಾಜ್ಯಗಳಿಗೆ ಹೋಗಬೇಕು ಎಂದರೆ, ಐಎಲ್‌ಪಿ ಕಡ್ಡಾಯವಾಗಿ ಪಡೆಯಬೇಕು. ಅಲ್ಲಿ ಶಾಶ್ವತವಾಗಿ ನೆಲೆಯೂರುವಂತಿಲ್ಲ. ನಿಗದಿತ ಸಮಯದಲ್ಲಿ ಮರಳಿ ಬರಬೇಕು. ಪಶ್ಚಿಮಘಟ್ಟಗಳನ್ನು ಉಳಿಸಲು ಕೂಡ ಇಂಥ ಕಾನೂನು ಅಗತ್ಯವಾಗಿದೆ. ಮಲೆನಾಡಿನ ಮೇಲೆ ಹೊರರಾಜ್ಯದ ಒತ್ತಡ ಹೆಚ್ಚುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದಲ್ಲಿ, ಇನ್ನು ಕೆಲವೇ ವರ್ಷಗಳಲ್ಲಿ ಸ್ಥಳೀಯರು ಹೊರರಾಜ್ಯದ ದಬ್ಬಾಳಿಕೆಗೆ ಸಿಲುಕಲಿದ್ದಾರೆ. ಅದನ್ನು ತಡೆಯಬೇಕು ಎಂದರೆ, ಐಎಲ್‌ಪಿ ಮಾದರಿ ನಮಗೂ ಅಗತ್ಯವಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಯಾದರೆ, ಬಿಹಾರದಿಂದ ಸುಮಾರು 10 ಸಾವಿರ ಕೂಲಿ ಕಾರ್ಮಿಕರು ಬಂದು ಎಂದೆಂದಿಗೂ ಇಲ್ಲೇ ನೆಲೆಸುತ್ತಾರೆ. ಅವರು ಬಂದು, 18,000 ಟನ್ ಕೈಗಾರಿಕಾ ಸ್ಫೋಟಕಗಳನ್ನು ಬಳಸಿ 21 ಕಿ.ಮೀ. ಸುರಂಗ ಕೊರೆಯಲಿದ್ದಾರೆ. ಅದರಿಂದ ಹೊರಬರುವ 12 ದಶಲಕ್ಷ ಟನ್ ವಿಷಕಾರಿ ತ್ಯಾಜ್ಯ ಶರಾವತಿ ನದಿ ಸೇರಲಿದೆ.

ಪಶ್ಚಿಮಘಟ್ಟಗಳನ್ನು ನಾಶ ಮಾಡುವ ಯೋಜನೆಗಳನ್ನು ಸರ್ಕಾರ ನಿಲ್ಲಿಸಬೇಕು. ಕರ್ನಾಟಕದ ಸಮಷ್ಟಿ ಹಿತವನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಈ ಭಾಗದ ರೈತರು, ರೈತ ಕಾರ್ಮಿಕರು ಹಾಗೂ ಮಹಿಳೆಯರನ್ನೊಳಗೊಂಡ ಸಮುದಾಯ ಸುಸ್ಥಿರ ಬದುಕು ಕಟ್ಟಿಕೊಳ್ಳುವುದಕ್ಕೆ ಪೂರಕವಾಗಿ ನೀತಿ–ನಿಯಮ ರೂಪಿಸಬೇಕು. ಕನ್ನಡ ನೆಲ, ಭಾಷೆ, ಸೊಗಡು, ಅಸ್ಮಿತೆ ಉಳಿಯಬೇಕು ಎಂದರೆ ಪಶ್ಚಿಮಘಟ್ಟ ಉಳಿಸುವ ಕೆಲಸವಾಗಬೇಕು.



ವಾಚಕರ ವಾಣಿ

ಯುವಜನ ಯೋಗಕ್ಷೇಮವೇ ದೇಶಪ್ರೇಮ

ಚಿತ್ತಾಪೂರದಲ್ಲಿ ಆರ್‌ಎಸ್‌ಎಸ್ ತನ್ನ ಪಥಸಂಚಲನಕ್ಕೆ ಸಜ್ಜಾಗಿದೆ. ಭೀಮ್ ಆರ್ಮಿ ಸಂಘಟನೆಯೂ ಪಥ ಸಂಚಲನ ನಡೆಸಲು ಅನುಮತಿ ಕೋರಿದೆ. ಭಾರತದ ಯುವಜನತೆಗೆ ಪ್ರಸ್ತುತ ಅವಶ್ಯವಿರುವುದು ಪಥಸಂಚಲನದ ಪ್ರದರ್ಶನವಲ್ಲ; ದುಡಿಯುವ ಕೈಗಳಿಗೆ ಕೆಲಸ ಮತ್ತು ಉದ್ಯೋಗಕ್ಕೆ ಬೇಕಿರುವ ಕೌಶಲಗಳು. ಯುವಜನರೇ ಈ ದೇಶ, ಅವರ ಶ್ರೇಯೋಭಿವೃದ್ಧಿಯೇ ದೇಶಪ್ರೇಮ ಎಂಬುದನ್ನು ದೇಶಪ್ರೇಮದ ಹೆಸರಲ್ಲಿ ಯುವಕರನ್ನು ಪ್ರಚೋದಿಸುವ ಸಂಘಟನೆಗಳು ಅರಿಯಲಿ.

ನಾಗಾರ್ಜುನ ಹೊಸಮನಿ, ಕಲಬುರಗಿ

ರೈತ ಹೋರಾಟ ಎನ್ನುವ ‘ಸತ್ಯ ಸಂಗ್ರಾಮ’

ರೈತ ತನ್ನ ಬೆವರಿನಿಂದ ದೇಶಕ್ಕೆ ಅನ್ನ ನೀಡುತ್ತಾನೆ. ಆದರೆ, ಇಂದಿನ ಪರಿಸ್ಥಿತಿಯಲ್ಲಿ ಅವನೇ ಅತಿ ಹೆಚ್ಚು ಸಂಕಷ್ಟ ಅನುಭವಿಸುತ್ತಿದ್ದಾನೆ. ಸರ್ಕಾರದ ನೀತಿಗಳು, ಮಧ್ಯವರ್ತಿಗಳ ದೌರ್ಜನ್ಯ, ಮಾರುಕಟ್ಟೆಯ ಅಸ್ಥಿರತೆ, ಎಲ್ಲವೂ ರೈತನ ಬದುಕನ್ನು ಹಾಳುಮಾಡಿವೆ. ಕೃಷಿಭೂಮಿಯನ್ನು ರಕ್ಷಿಸಬೇಕಾದ ವ್ಯವಸ್ಥೆಯೇ ರೈತನ ವಿರುದ್ಧ ನಿಂತಿದೆ. ಬೆಳೆಗಾರನಿಗೆ ಸಮರ್ಪಕ ಬೆಲೆ ದೊರಕಿಸಿಕೊಡದ ವ್ಯವಸ್ಥೆ, ‘ಬೇಲಿ ಹೊಲವನ್ನು ಮೇಯುವ’ ಮಾತಿಗೆ ತಕ್ಕಂತಿದೆ. ಇತ್ತೀಚೆಗೆ ನಡೆದ ಕಬ್ಬು ಬೆಳೆಗಾರರ ಹೋರಾಟವು ಈ ಅನ್ಯಾಯದ ವಿರುದ್ಧದ ಎಚ್ಚರಿಕೆಯ ಗಂಟೆ. ಅದು ಒಂದು ಬೇಡಿಕೆಯ ಹೋರಾಟ ಮಾತ್ರವಲ್ಲ; ಬದುಕು, ಗೌರವ ಮತ್ತು ಅಸ್ತಿತ್ವಕ್ಕಾಗಿ ನಡೆದ, ನಡೆಯುತ್ತಿರುವ ಸತ್ಯಸಂಗ್ರಾಮ. ಸಮಾಜವು ರೈತನ ಕಷ್ಟವನ್ನು ಅರಿತು, ನ್ಯಾಯದ ಧ್ವನಿಗೆ ಬೆಂಬಲ ನೀಡಬೇಕಾಗಿದೆ. ಅದೇ ನಿಜವಾದ ಪ್ರಗತಿಯ ದಾರಿ.

ವಾಸುಕಿ ನಾಗರಾಜ್

ಸಾಂಸ್ಕೃತಿಕ ಸಂಘಟನೆ ಎಂಬ ಸುಳ್ಳು

ಭಾರತ ಹಿಂದೂರಾಷ್ಟ್ರ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ (ಪ್ರ.ಜಾ., ನ. 9). ಭಾರತವು ಧರ್ಮನಿರಪೇಕ್ಷ ಸಂವಿಧಾನ ಹೊಂದಿ ಏಳೂವರೆ ದಶಕಗಳು ಕಳೆದರೂ, ಭಾಗವತರು ಸೇರಿದಂತೆ ಬಿಜೆಪಿಯ ಹಲವು ನಾಯಕರು ಇಂಥ ಸುಳ್ಳುಗಳನ್ನು ಪುನರುಚ್ಚರಿಸುತ್ತಲೇ ಇದ್ದಾರೆ. ಅಭಿವೃದ್ಧಿ ಮಂತ್ರವನ್ನು ಜಪಿಸಿ ಅಧಿಕಾರಕ್ಕೆ ಬಂದ ಪ್ರಧಾನಿ ಮೋದಿಯವರು ಕೊಟ್ಟ ಭರವಸೆಗಳು ದಶಕ ಕಳೆದರೂ ಗಗನ ಕುಸುಮವಾಗಿರುವಾಗ, ಇಂತಹ ಹೇಳಿಕೆಗಳು ಜನರು ಪ್ರಶ್ನಿಸದಂತೆ ದಿಕ್ಕು ತಪ್ಪಿಸುವ ತಂತ್ರವೇ?

ಮೋದಿಯವರು ಸೇರಿದಂತೆ ಬಿಜೆಪಿಯ ಸಂಸದರು, ಶಾಸಕರು ಆರ್‌ಎಸ್‌ಎಸ್‌ನಿಂದಲೇ ಬಂದವರಲ್ಲವೇ? ಚುನಾವಣೆ ಸಮಯದಲ್ಲಿ ಆರ್‌ಎಸ್‌ಎಸ್ ಸದಸ್ಯರು ಬಿಜೆಪಿಯ ಪರವಾಗಿ ಮತಯಾಚಿಸುತ್ತಾರೆ. ಹಾಗಾಗಿ, ಆರ್‌ಎಸ್‌ಎಸ್ ರಾಜಕೀಯ ಸಂಘಟನೆಯೇ ಅಲ್ಲವೇ? ಭಾರತವನ್ನು ಹಿಂದೂರಾಷ್ಟ್ರ ಎಂದು ಕರೆಯುವುದು ರಾಜಕೀಯ ಹೇಳಿಕೆ ಅಲ್ಲವೇ? ಮೋಹನ್ ಭಾಗವತರು ಈ ಪ್ರಶ್ನೆಗಳಿಗೆ ಉತ್ತರಿಸಬೇಕು; ಸಂವಿಧಾನವನ್ನು ಗೌರವಿಸುವುದನ್ನು ಕಲಿಯಬೇಕು.

ಚಂದ್ರಪ್ರಭ ಕಠಾರಿ, ಬೆಂಗಳೂರು

ಸುರಂಗ ಮಾರ್ಗದಂತೆ ಭೂಗರ್ಭನಗರ!

ಬೆಂಗಳೂರು ಮಿತಿ ಮೀರಿ ಬೆಳೆಯುತ್ತಿದೆ. ಅದರ ಧಾರಣಾ ಸಾಮರ್ಥ್ಯ ಕೊನೆಗೊಂಡಿದೆ. ಪ್ರಸ್ತುತ ಬೆಂಗಳೂರಿನಲ್ಲಿ ವಾಹನಗಳ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಸುರಂಗ ರಸ್ತೆ ನಿರ್ಮಿಸಲು ಸರ್ಕಾರ ಮುಂದಾಗಿದೆ. ಈ ರಾಜಕಾರಣಿಗಳು, ಮುಂದೆ ಬೆಂಗಳೂರಿನ ನೆಲದಡಿಯಲ್ಲಿ ಮತ್ತೊಂದು ‘ಭೂಗರ್ಭ ಬೆಂಗಳೂರು’ ನಗರ ನಿರ್ಮಿಸಬಹುದೇನೋ!

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆ ಬಳಸಲಿ

ಬ್ಯಾಂಕ್ ಸಿಬ್ಬಂದಿ ಸ್ಥಳೀಯ ಭಾಷೆಯಲ್ಲಿ ವ್ಯವಹರಿಸಲಿ ಎನ್ನುವ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸಲಹೆ ಸ್ವಾಗತಾರ್ಹ. ನಮ್ಮ ರಾಜ್ಯದ ಹಲವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪರಭಾಷಿಕ ಉದ್ಯೋಗಿಗಳಿದ್ದಾರೆ. ಅವರೊಂದಿಗೆ ಹಿಂದಿ ತಿಳಿಯದವರು ವ್ಯವಹರಿಸುವುದು ಕಷ್ಟ. ಬೇರೆ ರಾಜ್ಯದ ಬ್ಯಾಂಕ್ ನೌಕರರು ಪ್ರಾದೇಶಿಕ ಭಾಷೆಯನ್ನು ಕಲಿತು ಮಾತನಾಡಿದರೆ, ಜನಸಾಮಾನ್ಯರು ಸಲೀಸಾಗಿ ವ್ಯವಹರಿಸಲು ಅನುಕೂಲ ಆಗುತ್ತದೆ.

ಜಯವೀರ ಎ.ಕೆ., ಖೇಮಲಾಪುರ

ಲೋಕಾಯುಕ್ತ ಬಲಗೊಳ್ಳಲು ತಿದ್ದುಪಡಿ

ಲೋಕಾಯುಕ್ತ ಕಾಯ್ದೆಯ ತಿದ್ದುಪಡಿ ಅಗತ್ಯ ಎಂದು ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಹೇಳಿರುವುದರಲ್ಲಿ (ಪ್ರ.ವಾ., ನ. 10) ಅರ್ಥವಿದೆ. ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಸಮಗ್ರ ತಿದ್ದುಪಡಿ ಅವಶ್ಯಕತೆ ಖಂಡಿತವಾಗಿಯೂ ಇದೆ. ಲೋಕಾಯುಕ್ತ ಸಂಸ್ಥೆ ಕಾಗದದ ಹುಲಿ ಆಗಬಾರದು. ಲೋಕಾಯುಕ್ತ ಅಧಿಕಾರಿಗಳು ಅವ್ಯವಹಾರಗಳನ್ನು ಬಯಲಿಗೆಳೆಯುವುದು ಪ್ರದರ್ಶನದಂತಿದೆಯೇ ಹೊರತು, ಸುಧಾರಣೆಯ ಕ್ರಮದಂತಿಲ್ಲ. ಪ್ರತಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಈಗಾಗಲೇ ಲೋಕಾಯುಕ್ತರ ಪ್ರಶ್ನೆಗಳಿಗೆ ಉತ್ತರಿಸಲು ಮಾನಸಿಕವಾಗಿ ಸಿದ್ಧಗೊಂಡಿದ್ದಾರೆ. ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವೇ ಇಲ್ಲ ಎಂದು ಜನಸಾಮಾನ್ಯರಿಗೆ ಅನ್ನಿಸುತ್ತಿದೆ. ಈ ಮನೋಭಾವ ಬದಲಾಗಿ, ಲೋಕಾಯುಕ್ತ ಬಲಗೊಳ್ಳಲು ಕಾಯ್ದೆಯ ತಿದ್ದುಪಡಿಯೊಂದೇ ದಾರಿ.

ತಿಮ್ಮೇಶ ಮುಸ್ಟೂರು, ಜಗಳೂರು

ಜಾರಿ ಬಿದ್ದ ಜಟ್ಟಿ ಮಾತುಗಳಲ್ಲಿ ಜೀವಂತ

ಜಟ್ಟಿ ಜಾರಿ ಬಿದ್ದರೆ ಅದೂ ಒಂದು ಪಟ್ಟು ಎಂದದ್ದು ಹಳೇ ಗಾದೆ. ಆದರೆ ಈಗ, ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ನಿತ್ಯ ನುಡಿ ಜಾರಿ ಬಿದ್ದೂ ಬಿದ್ದೂ, ಗೊಂದಲಕರ ತರಹೇವಾರಿ ಹೇಳಿಕೆ ಕೊಡುವ ಮೂಲಕ ಮಾಧ್ಯಮಗಳಲ್ಲಿ ದಿನ ದಿನ ಜೀವ ಪಡೆವ ಉಪಾಯ ತೋರಿದ್ದಾರೆ. ಅವರಿಗೆ ವಿಶ್ರಾಂತಿ ಅಗತ್ಯವಿದ್ದರೂ ನಿವೃತ್ತಿ ವಿಷಯದಲ್ಲಿ ಪ್ರಧಾನಿ ಅವರೊಂದಿಗೆ ಪೈಪೋಟಿ ನಡೆಸುತ್ತಿರುವಂತಿದೆ.

ಟಿ. ಗೋವಿಂದರಾಜು, ಬೆಂಗಳೂರು

ಚುರುಮುರಿ



ನಾಯಿ ಪಾಡು

• ಲಿಂಗರಾಜು ಡಿ.ಎಸ್.

ಅಖಿಲ ಭಾರತ ಬೀದಿನಾಯಿ ಸಮ್ಮೇಳನದಲ್ಲಿ ಊರೊಟ್ಟಿನ ನಾಯಿಗಳೆಲ್ಲಾ ಭಾಗಿಯಾಗಿದ್ದೋ. ನಾಯಿಸಂಘದ ಅಧ್ಯಕ್ಷರು ಜೋರಾಗಿ ಶುನಕನಾದ ಮಾಡಿ ತಮ್ಮ ಮಾತು ಸುರು ಮಾಡಿದರು.

‘ನನ್ನ ಪ್ರೀತಿಯ ನಾಯ–ಕರುಗಳೇ. ಜನ ಬೀದಿನಾಯಿ ಕಂಡೇಟಿಗೆ ಕಚ್ತವೆ ಅಂತ ಎದ್ದುಬಿದ್ದು ಓಡೋಯ್ತಾವ್ರೆ. ಹಿಂದೆ ನಾವು ರಾತ್ರೆಲ್ಲಾ ಎಚ್ಚರಾಗಿ ಊರು ಕಾಯ್ತಿದ್ದೋ. ಯಂಗುಸ್ರು ಕುರೋ ಕುರೋ ಅಂತ ಕರೆದೇಟಿಗೆ ಓಡೋಗಿ ಎಲ್ಲಾ ಸುದ್ದ ಮಾಡಿ ಬತ್ತಿದ್ದೋ. ನಮ್ಮ ನಿಯತ್ತಿಗೀಗ ಬೆಲೆಯೇ ಇಲ್ಲ. ಕಂತ್ರಿನಾಯಿ ಅಂತ ಕಲ್ಲು ಹೊಡೀತಾರೆ’ ಅಂತ ವಿಷಯ ಮಂಡನೆ ಮಾಡಿದರು.

‘ನೀವಂದದ್ದು ದಿಟ. ಮನೆಗಳಲ್ಲಿರೋ ಜಾತಿನಾಯಿಗಳಿಗೆ ಕಂಬ ಕಂಡೇಟಿಗೆ ಕಾಲೆತ್ತಿ ವಂದ ಮಾಡಬಕು ಅನ್ನೋ ಕಾಮನ್‌ಸೆನ್ಸ್ ಇಲ್ಲ ಕನ್ರಿ’ ಎಂದು ಮುದಿನಾಯಿ ನೊಂದುಕೊಂಡು ಹೇಳಿತು.

‘ನಮ್ಗೆ ಉಣ್ಣಕ್ಕೆ ಅನ್ನಿಲ್ಲ, ಕಿಸಿಯಕೆ ಕ್ಯಾಮೆ ಇಲ್ಲ. ಪಾರಿನ್ ನಾಯಿಗಳಿಗೆ ಪೆಡಿಗ್ರಿ ಹಾಕ್ತಾವ್ರೆ ಅನ್ನೋ ಸಿಟ್ಟಿಗೆ ಜನವ ಕಂಡಾಬಟ್ಟೆ ಕಚ್ತಿರವು ನಮ್ಮ ನೇಟಿವ್ ಜೆನ್–ಜೀ ರೆಬೆಲ್ ಯುವನಾಯಿಗಳು’ ಅಂತು ಎಜುಕೇಟೆಡ್ ನಾಯಿ.

‘ನಮ್ಮನ್ನ ಏರಿಯಾದ ಸೆಕ್ಯೂರಿಟಿಯಾಗಿ ಅಪಾಯಿಂಟ್ ಮಾಡಿ ಸಂಬಳ ಕೊಡಬಕು. ನಮ್ಮನ್ನೂ ಪರಪ್ಪನ ಅಗ್ರಾರದೇಲಿ ಇಟ್ಟು ಕೊಲೆಗಡುಕರಿಗೆ, ಉಗ್ರರಿಗೆ ಕೊಟ್ಟಂಗೆ ಮೊಬೈಲು, ಫ್ರೀ ಇಂಟರ್ನೆಟ್ಟು, ವಾರಕ್ಕೆ ಮೂರು ದಿನ ಬಿರಿಯಾನಿ ಸೇರಿದಂತೆ ಎಲ್ಲ ಸೌಲತ್ತು ಕೊಡಬಕು’ ಅಂತು ಸುದ್ದಿಜೀವಿನಾಯಿ.

‘ಆಯ್ತು. ಶುನಕಭಾಗ್ಯ, ಶುನಕಶಕ್ತಿ, ಶುನಕಲಕ್ಷ್ಮಿ, ಶುನಕಜ್ಯೋತಿ, ಶುನಕನಿಧಿ ಗ್ಯಾರಂಟಿ ಯೋಜನೆಗಳನ್ನ ನಮಗೂ ಜಾರಿಗೆ ತರಬೇಕು. ನಮಗೂ ನಾಯಿನಿಗಮ ಮಾಡಬಕು ಅನ್ನೋದು ಸಂಘದ ತೀರ್ಮಾನ’ ಅಂದ ಅಧ್ಯಕ್ಷರು ನಿರ್ಣಯಗಳನ್ನ ಪ್ರಕಟಿಸಿದರು.

‘ನಾವೆಲ್ಲಾ ಡಿಸೆಂಬರ್ ಎಂಟಕ್ಕೆ ಸುವರ್ಣ ವಿಧಾನಸೌಧದ ಮುಂದೆ ದೊಡ್ಡ ಸಂಖ್ಯೆಯಲ್ಲಿ ಸೇರಿ ನಮ್ಮ ಬೇಡಿಕೆಗಳಿಗಾಗಿ ನಾಯಿಯುತವಾಗಿ ಹೋರಾಟ ಮಾಡಮು’ ಅಂದಾಗ ಎಲ್ಲಾ ನಾಯಿಗಳೂ ಒಟ್ಟಾಗಿ ಖುಷಿಯಿಂದ ಊಳಿಟ್ಟವು.

ಸಂಗತ

ಆಸ್ಪತ್ರೆಭಾಗ್ಯ: ಉತ್ತರ ಕನ್ನಡದ ಕಣ್ಣಿಗೆ ಸುಣ್ಣ

ಉತ್ತರ ಕನ್ನಡ ಜಿಲ್ಲೆಯ ಪ್ರಾಕೃತಿಕ ಸಂಪತ್ತು ಅಸಾಧಾರಣ. ಅಲ್ಲಿ ಇಲ್ಲದಿರುವುದು ಒಂದೇ– ಜನಸಾಮಾನ್ಯರಿಗೆ ಆರೋಗ್ಯಭಾಗ್ಯದ ಖಾತರಿ ನೀಡುವ ಸುಸಜ್ಜಿತ ಆಸ್ಪತ್ರೆ!

• ನಾಗರಾಜ್ ಬಿ.ಎನ್.

‘ಉತ್ತರ ಕನ್ನಡ ಜಿಲ್ಲೆಗೆ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಕು’ – ಈ ಕೂಗು ಅರಣ್ಯರೋದನವೆ? ಅಥವಾ ನೇಪಾಳದ ಜೆನ್–ಜಿ ಪೀಳಿಗೆಯಂತೆ ಉತ್ತರ ಕನ್ನಡದ ಯುವಜನರು ದಂಗೆ ಏಳಬೇಕೆ?

ನಮ್ಮ ಸಂವಿಧಾನದಲ್ಲಿ ಆರೋಗ್ಯದ ಹಕ್ಕು ಸ್ಪಷ್ಟವಾಗಿ ಉಲ್ಲೇಖಗೊಂಡಿಲ್ಲ. ಆದರೆ, ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು 21ನೇ ವಿಧಿಯ ಅಡಿಯಲ್ಲಿ ಉಲ್ಲೇಖಿಸಲಾಗಿದೆ. ಆರೋಗ್ಯಕರ ಜೀವನ, ವೈದ್ಯಕೀಯ ನೆರವು, ಸೂಕ್ತ ಸಮಯದಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವ ಹಕ್ಕನ್ನು ಈ ವಿಧಿ ಪ್ರತಿಪಾದಿಸುತ್ತದೆ. ಆದರೆ, ಆಳುವ ವರ್ಗದ ಸ್ವಾರ್ಥ ಹಾಗೂ ಕೆಲವು ಉದ್ಯಮಿಗಳ ಲಾಬಿಯಿಂದ, ಸಂವಿಧಾನ ನೀಡಿರುವ ಮೂಲಭೂತ ಹಕ್ಕು ಉತ್ತರ ಕನ್ನಡ ಜಿಲ್ಲೆಯ ಜನರಿಗೆ ಮರೀಚಿಕೆಯಾಗಿದೆ.

ಸುಸಜ್ಜಿತ ಆಸ್ಪತ್ರೆಗಾಗಿ ಉತ್ತರ ಕನ್ನಡ ಜಿಲ್ಲೆಯ ಜನರು ದಶಕಗಳಿಂದ ಬೇಡಿಕೆ ಸಲ್ಲಿಸುತ್ತಲೇ ಇದ್ದಾರೆ. ಪಕ್ಷಭೇದ ಮರೆತು ಜನಪ್ರತಿನಿಧಿಗಳು ಭರವಸೆ ನೀಡಿದ್ದಾರೆ, ಅಧಿವೇಶನದಲ್ಲೂ ಚರ್ಚಿಸಿದ್ದಾರೆ. ಚುನಾವಣೆ ಸಮೀಪಿಸುವಾಗ ಜಾಗದ ಪರಿಶೀಲನೆ ನಡೆದು, ಸರ್ಕಾರಕ್ಕೆ ವರದಿಯೂ ಸಲ್ಲಿಕೆಯಾಗುತ್ತದೆ. ಅಲ್ಲಿಂದ ಮುಂದಕ್ಕೆ ಪ್ರಕ್ರಿಯೆ ಮುಂದುವರಿಯುವುದೇ ಇಲ್ಲ.

ಗಂಭೀರ ಕಾಯಿಲೆ ಅಥವಾ ಅಪಘಾತಕ್ಕೆ ಒಳಗಾದವರನ್ನು ಚಿಕಿತ್ಸೆಗಾಗಿ ಜಿಲ್ಲಾ ಕೇಂದ್ರ ಕಾರವಾರದಿಂದ 285 ಕಿ.ಮೀ. ದೂರವಿರುವ ಮಂಗಳೂರಿಗೆ ಅಥವಾ 165 ಕಿ.ಮೀ. ದೂರವಿರುವ ಹುಬ್ಬಳ್ಳಿಗೆ ಕರೆತರಬೇಕು. ಇಲ್ಲವೇ, ಗಡಿ ರಾಜ್ಯವಾದ ಗೋವಾದ ಪಣಜಿಗೆ 97 ಕಿ.ಮೀ. ಕ್ರಮಿಸಬೇಕು. ಮಾರ್ಗಮಧ್ಯದಲ್ಲಿ ಉಸಿರು ಚೆಲ್ಲಿದ ಜೀವಗಳ ಕುಟುಂಬಗಳ ಸಂಕಟಕ್ಕೆ ಜನ ಪ್ರತಿನಿಧಿಗಳು ಕುರುಡಾಗಿದ್ದಾರೆ.

ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ ಪ್ರದೇಶ ಹೊಂದಿರುವ ರಾಜ್ಯದ ಏಕೈಕ ಜಿಲ್ಲೆ ಉತ್ತರ ಕನ್ನಡ. ಶರಾವತಿ, ಅಘನಾಶಿನಿ, ಕಾಳಿ ನದಿಗಳು ಜಿಲ್ಲೆಯನ್ನು ಸಂಪದ್ಭರಿತಗೊಳಿಸಿವೆ. 193 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಪ್ರವಾಸೋದ್ಯಮದ ಬೆಳವಣಿಗೆಯ ಜೊತೆಗೆ ಮತ್ಸ್ಯೋದ್ಯಮಕ್ಕೂ ಅವಕಾಶ ಕಲ್ಪಿಸಿದೆ. ಕೈಗಾ, ಸೀಬರ್ಡ್ ನೌಕಾನೆಲೆಯಂಥ ಬೃಹತ್ ಯೋಜನೆಗಳು ಅನುಷ್ಠಾನಗೊಂಡು, ದೇಶದ ಅಭಿವೃದ್ಧಿಗೆ ಹಾಗೂ ರಕ್ಷಣೆಗೆ ದೊಡ್ಡ ಪಾಲು ನೀಡುತ್ತಿವೆ. ಇದೀಗ ಹೊನ್ನಾವರ ಮತ್ತು ಬೇಲೆಕೇರಿಯಲ್ಲಿ ಬಂದರು ನಿರ್ಮಾಣ ಅನುಷ್ಠಾನದ ಹಂತದಲ್ಲಿದೆ; ಉದ್ದೇಶಿತ ಶರಾವತಿ ಪಂಪ್ಡ್ ಸ್ಟೋರೇಜ್ ಹಾಗೂ ಅಘನಾಶಿನಿ ನದಿ ತಿರುವು ಯೋಜನೆಗಳು ಗುಮ್ಮನಾಗಿ ಕಾಡುತ್ತಿವೆ. ಹೀಗೆ, ಸಾವಿರಾರು ಕೋಟಿ ರೂಪಾಯಿ ವೆಚ್ಚದ ಯೋಜನೆಗಳಿಗೆ ಉತ್ತರ ಕನ್ನಡ ಬೇಕು. ಆದರೆ, ನೂರು ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಬಹುದಾದ ಸುಸಜ್ಜಿತ ಆಸ್ಪತ್ರೆ ನಿರ್ಮಿಸುವ ಬಗ್ಗೆ ಮಾತ್ರ ಎಲ್ಲರದೂ ದಿವ್ಯ ನಿರ್ಲಕ್ಷ್ಯ.

ಉತ್ತರ ಕನ್ನಡದಲ್ಲಿ ನಾಡು ಮತ್ತು ದೇಶದ ಹೆಮ್ಮೆಗೆ ಕಾರಣವಾದ ಅನೇಕ ಸಂಗತಿಗಳಿವೆ. ಇಲ್ಲದಿರುವುದು ಒಂದೇ– ಸ್ಥಳೀಯರಿಗೆ ತುರ್ತು ಚಿಕಿತ್ಸೆಯ ಖಾತರಿ ಒದಗಿಸುವ ಸುಸಜ್ಜಿತ ಆಸ್ಪತ್ರೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದ ಕಾರಣದಿಂದಾಗಿ ಉಂಟಾಗುತ್ತಿರುವ ಸಾವುಗಳು, ಸ್ಥಳೀಯ ಪ್ರತಿನಿಧಿಗಳಲ್ಲಿ ಲಜ್ಜೆ ಹುಟ್ಟಿಸುತ್ತಿಲ್ಲ, ಪಾಪಪ್ರಜ್ಞೆಗೆ ಕಾರಣವಾಗಿಲ್ಲ.

2022ರಲ್ಲಿ ಭಟ್ಕಳದ ಶಿರೂರು ಟೋಲ್ ಪ್ಲಾಜಾ ಬಳಿ ಚಾಲಕನ ನಿಯಂತ್ರಣ ತಪ್ಪಿ ಆ್ಯಂಬುಲೆನ್ಸ್‌ನಲ್ಲಿದ್ದ ರೋಗಿ ಸೇರಿ ನಾಲ್ವರು ಮೃತಪಟ್ಟಿದ್ದರು. ಕೆಲವು ತಿಂಗಳ ಹಿಂದೆ ಕೊಡ್ಕಣಿ ನಿವಾಸಿಯೊಬ್ಬರು ನಸುಕಿನ 5 ಗಂಟೆ ಸುಮಾರಿಗೆ ಹೃದಯಾಘಾತಕ್ಕೊಳಗಾಗಿ ಕುಮಟಾ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ತಜ್ಞ ವೈದ್ಯರು ಇಲ್ಲದ ಕಾರಣ, ಸೂಕ್ತ ಚಿಕಿತ್ಸೆ ದೊರೆಯದೆ ಮೃತಪಟ್ಟರು. ವಾರದ ಹಿಂದಷ್ಟೇ ಅಪಘಾತದಿಂದ ಗಂಭೀರವಾಗಿ ಗಾಯಗೊಂಡಿದ್ದ ಅಂಕೋಲಾದ ಕೂಲಿ ಕಾರ್ಮಿಕ ಚಂದ್ರಹಾಸ ಆಗೇರ ಅವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ಶಿಫಾರಸು ಮಾಡಲಾಗಿತ್ತು. ಅಲ್ಲಿಯ ಖಾಸಗಿ ಆಸ್ಪತ್ರೆಗಳು ಆಯುಷ್ಮಾನ್ ಕಾರ್ಡ್ ನಿರಾಕರಿಸಿದ ಹಿನ್ನೆಲೆಯಲ್ಲಿ, ಅವರು ಆ್ಯಂಬುಲೆನ್ಸ್‌ನಲ್ಲಿಯೇ ಪ್ರಾಣಬಿಟ್ಟರು. ಬರೋಬ್ಬರಿ 12 ತಾಸು ಆ್ಯಂಬುಲೆನ್ಸ್‌ನಲ್ಲಿ ಅಲೆದಾಡಿರುವುದಾಗಿ ಅವರ ಕುಟುಂಬದವರು ಹೇಳುತ್ತಾರೆ.

ಜಿಲ್ಲೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಪ್ರತಿನಿತ್ಯ ವಾಹನ ಅಪಘಾತಗಳು ಸಂಭವಿಸುತ್ತಿವೆ. ಗಂಭೀರವಾಗಿ ಗಾಯಗೊಂಡವರು ಚಿಕಿತ್ಸೆಗಾಗಿ ಹೊರ ಜಿಲ್ಲೆಗಳನ್ನೇ ಅವಲಂಬಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸುಸಜ್ಜಿತ ಆಸ್ಪತ್ರೆಯ ಬೇಡಿಕೆಯ ದನಿ ಆಗಾಗ ಮಾರ್ದನಿಸಿ, ಆಳುವ ವರ್ಗಕ್ಕೆ ತಲಪುತ್ತದೆ. ಹತ್ತಿಕ್ಕುವ ಪ್ರಯತ್ನಗಳು ಸಹ ಅಷ್ಟೇ ವ್ಯವಸ್ಥಿತವಾಗಿ ನಡೆಯುತ್ತವೆ.

ಪ್ರಾಕೃತಿಕ ಸಂಪತ್ತು ಮತ್ತು ಸುಶಿಕ್ಷಿತರ ದೊಡ್ಡ ಪಡೆ ಉತ್ತರ ಕನ್ನಡ ಜಿಲ್ಲೆಯ ಬಹುದೊಡ್ಡ ಆಸ್ತಿ. ಈ ಮಣ್ಣಿನ ಪ್ರತಿಭಾವಂತರು ದೇಶ–ವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ರಾಜಕಾರಣ ಸೇರಿ ಆಡಳಿತ ವ್ಯವಸ್ಥೆಯಲ್ಲೂ ನಿರ್ಣಾಯಕರಾಗಿದ್ದಾರೆ. ಧರ್ಮ, ಜಾತಿ, ಸ್ವಾರ್ಥ, ರಾಜಕೀಯವನ್ನೆಲ್ಲ ಬಿಟ್ಟು, ಮಾನವೀಯತೆಗೆ ಇವರ ಮನಸ್ಸು ಮಿಡಿದರೆ, ಜಿಲ್ಲೆಯ ನಾಗರಿಕರ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣದ ಬಹುದಿನಗಳ ಕನಸು ನನಸಾಗುವುದು ಕಷ್ಟವೇನಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೇಯರ್ ಮಮ್ದಾನಿ

ಅಮೆರಿಕದಲ್ಲಿ ‘ಬಹುತ್ವ’ದ ಧ್ವನಿ

ಪ್ರಜಾವಾಣಿ ವಾರ್ತೆ

‘ಇಂದು ನಾವು ಹಳೆಯದರಿಂದ ಹೊಸದಕ್ಕೆ ಕಾಲಿಡುತ್ತಿದ್ದೇವೆ...’

1947, ಆ.15ರ ಮಧ್ಯರಾತ್ರಿ, ಭಾರತವು ಬ್ರಿಟಿಷ್ ಆಳ್ವಿಕೆಯಿಂದ ಮುಕ್ತಗೊಂಡ ದಿನ, ಜವಾಹರಲಾಲ್ ನೆಹರೂ ಅವರು ಹೇಳಿದ್ದ ಮಾತುಗಳಿವು. ಆ ದಿನದ ನೆಹರೂ ಅವರ ಭಾಷಣ ಜಗದ್ವಿಖ್ಯಾತವಾಗಿತ್ತು. ಅಮೆರಿಕದ ನ್ಯೂಯಾರ್ಕ್‌ನಲ್ಲೂ ಅದು ಪ್ರತಿಧ್ವನಿಸಿತ್ತು.

ಚರಿತ್ರೆ ಈಗ ತಿರುವು ಪಡೆದಿದೆ. ನ್ಯೂಯಾರ್ಕ್ ನಗರದ ಹೊಸ ಮೇಯರ್ ಆಗಿ ಆಯ್ಕೆಯಾಗಿರುವ ಜೋಹ್ರಾನ್ ಮಮ್ದಾನಿ, ನೆಹರೂ ಅವರ 1947ರ ಪ್ರಸಿದ್ಧ ಸಾಲುಗಳನ್ನು ಉಲ್ಲೇಖಿಸಿ ಆಡಿರುವ ಮಾತುಗಳು ಭಾರತದಲ್ಲಿ ಪ್ರತಿಧ್ವನಿಸುತ್ತಿವೆ.

34 ವರ್ಷ ವಯಸ್ಸಿಗೇ ಅಮೆರಿಕದ ಅತ್ಯಂತ ದೊಡ್ಡ ನಗರವಾದ ನ್ಯೂಯಾರ್ಕ್‌ನ ಮೇಯರ್ ಆಗಿ ಆಯ್ಕೆಯಾಗುವ ಮೂಲಕ ಮಮ್ದಾನಿ ಅಚ್ಚರಿ ಮೂಡಿಸಿದ್ದಾರೆ. ಜೋಹ್ರಾನ್, ನ್ಯೂಯಾರ್ಕ್‌ನ ಮೊದಲ ಮುಸ್ಲಿಂ ಮೇಯರ್ ಆಗಿದ್ದಾರೆ. ಅವರ ಬೇರುಗಳು ಭಾರತದಲ್ಲಿವೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ರಿಪಬ್ಲಿಕನ್ ಪಕ್ಷದ ಎಲ್ಲ ರೀತಿಯ ಬೆದರಿಕೆ, ಎಚ್ಚರಿಕೆಗಳನ್ನು ಬದಿಗಿಟ್ಟು ನ್ಯೂಯಾರ್ಕ್ ಮತದಾರರು ಮಮ್ದಾನಿ ಅವರನ್ನು ಮೇಯರ್ ಸ್ಥಾನಕ್ಕೆ ಆರಿಸಿದ್ದಾರೆ. ಈ ಮೂಲಕ ಅಮೆರಿಕ ಮತ್ತು ಜಾಗತಿಕ ರಾಜಕಾರಣದಲ್ಲಿ ಪ್ರಬಲವಾಗಿರುವ ಬಲಪಂಥೀಯ ಅಲೆಯ ನಡುವೆಯೇ ಎಡಪಂಥದ (ಡೆಮಾಕ್ರಟಿಕ್ ಸೋಷಿಯಲಿಸ್ಟ್) ಅಸ್ತಿತ್ವದ ಸೂಚನೆ ನೀಡಿದ್ದಾರೆ. ಮಮ್ದಾನಿಗೆ ಭಾರತದಲ್ಲಿಯೂ ಬೇರುಗಳಿರುವುದರಿಂದ ಅವರ ಚುನಾವಣಾ ಯಶಸ್ಸಿನ ಬಗ್ಗೆ, ಅವರ ನಿಲುವುಗಳ ಬಗ್ಗೆ ಭಾರತದಲ್ಲಿಯೂ ಚರ್ಚೆ, ಮೆಚ್ಚುಗೆ, ಟೀಕೆಗಳು ವ್ಯಕ್ತವಾಗುತ್ತಿವೆ.

‘ಸಲಾಂ ಬಾಂಬೆ’ ಖ್ಯಾತಿಯ ಸಿನಿಮಾ ನಿರ್ದೇಶಕಿ ಮೀರಾ ನಾಯರ್ ಮತ್ತು ಭಾರತ (ಗುಜರಾತ್) ಸಂಜಾತ ಮಹಮೂದ್ ಮಮ್ದಾನಿ ಅವರ ಮಗ ಈ ಜೋಹ್ರಾನ್ ಮಮ್ದಾನಿ. ಉಗಾಂಡದಲ್ಲಿ ನೆಲಸಿ, ಅಲ್ಲಿನ ಶೈಕ್ಷಣಿಕ ಮತ್ತು ರಾಜಕೀಯ ಆಂದೋಲನಗಳಲ್ಲಿ ಸಕ್ರಿಯರಾಗಿದ್ದ ಮಹಮೂದ್ ಮಮ್ದಾನಿ ಮತ್ತು ಸಾಮಾಜಿಕ ಕಾರ್ಯಕರ್ತೆಯೂ ಆಗಿರುವ ಮೀರಾ ನಾಯರ್ ಅವರಿಂದ ಎಡಪಂಥೀಯ ರಾಜಕಾರಣದ ತಾತ್ವಿಕತೆಯನ್ನು ದಕ್ಕಿಸಿಕೊಂಡವರು ಜೋಹ್ರಾನ್. ನ್ಯೂಯಾರ್ಕ್‌ನ ವಲಸೆ, ಬಡತನ ಸೇರಿದಂತೆ ಅಮೆರಿಕದ ಹಾಗೂ ಜಗತ್ತಿನ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳ ಬಗ್ಗೆ ಸದಾ ಜಾಗೃತವಾಗಿದ್ದು, ಪ್ರತಿಕ್ರಿಯಿಸುತ್ತಿದ್ದರು.

ಮೋದಿ ವಿರೋಧಿ: ಜೋಹ್ರಾನ್, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ತಾತ್ವಿಕತೆಯ ಕಟು ಟೀಕಾಕಾರರು. ಗುಜರಾತ್‌ನ ಗಲಭೆಗಳ ಸಂಬಂಧ ಮೋದಿ ಅವರನ್ನು ‘ಯುದ್ಧ ಅಪರಾಧಿ’ ಎಂದು ಟೀಕಿಸಿದ್ದರು. ಮೋದಿ ಅವರು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದಾಗ, ಅದನ್ನು ವಿರೋಧಿಸಿ ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿ ಪ್ರತಿಭಟನೆಯನ್ನು ಆಯೋಜಿಸಿದ್ದರು. ‘ಹಿಂದೂ ಆಗಿದ್ದ ನನ್ನ ತಾತ ಉರ್ದು ಕಾವ್ಯ ಓದುತ್ತಿದ್ದರು ಮತ್ತು ಮುಸ್ಲಿಂ ಆಗಿದ್ದ ಅಜ್ಜಿ ಗುಜರಾತಿನಲ್ಲಿ ಭಜನೆಗಳನ್ನು ಹಾಡುತ್ತಿದ್ದರು. ಅಂಥ ಬಹುತ್ವದ ಭಾರತದಲ್ಲಿ ಬಿಜೆಪಿಯು ರಾಜಕೀಯ ಧ್ರುವೀಕರಣಕ್ಕಾಗಿ ಸಮುದಾಯಗಳ ನಡುವೆ ಹಿಂಸೆಯನ್ನು ಬಿತ್ತುತ್ತಿದೆ’ ಎಂದು ವ್ಯಾಖ್ಯಾನಿಸಿದ್ದರು. ಹಿಂದೂ ರಾಷ್ಟ್ರೀಯವಾದವು ಅಮೆರಿಕದ ಸಾಮಾಜಿಕ ರಾಜಕೀಯ ರಂಗಗಳಿಗೂ ವ್ಯಾಪಿಸುತ್ತಿದೆ ಎಂದು ಅವರು ಇತ್ತೀಚೆಗೆ ದೀಪಾವಳಿಯ ಸಂದರ್ಭದಲ್ಲಿ ಹೇಳಿದ್ದರು.

ಮಮ್ದಾನಿ ಅವರ ಬಿಜೆಪಿ ಟೀಕೆಯು ಅಮೆರಿಕದ ಒಳಗೆ ಮತ್ತು ಹೊರಗೆ ಹಿಂದೂಗಳನ್ನು ಕೆರಳಿಸಿತ್ತು. ದಕ್ಷಿಣ ಅಮೆರಿಕದ ಹಿಂದೂ ಒಕ್ಕೂಟವು (ಸಿಒಎಚ್‌ಎನ್‌ಎ) ಅವರ ಉಮೇದುವಾರಿಕೆಯನ್ನು ವಿರೋಧಿಸಿತ್ತು. ಅಮೆರಿಕದ ಸುಮಾರು 20ಕ್ಕೂ ಹೆಚ್ಚು ಹಿಂದೂಪರ ಸಂಘಟನೆಗಳು ಮಮ್ದಾನಿ ವಿರುದ್ಧ ಹಲವು ರೀತಿಯ ಪ್ರತಿಭಟನೆ ದಾಖಲಿಸಿದ್ದವು. ‘ಮಮ್ದಾನಿ ತಿರಸ್ಕರಿಸಿ, ನ್ಯೂಯಾರ್ಕ್ ರಕ್ಷಿಸಿ’ ಎಂಬ ಆಂದೋಲನ ನಡೆಸಿದ್ದವು.

ಇಸ್ರೇಲ್‌ನಿಂದ ಜನಾಂಗೀಯ ಹತ್ಯೆ: ಮಮ್ದಾನಿ ಅವರ ಇಸ್ರೇಲ್ ಕುರಿತ ನಿಲುವುಗಳೂ ಚರ್ಚೆ ಹುಟ್ಟುಹಾಕಿವೆ. ಗಾಜಾದಲ್ಲಿ ಇಸ್ರೇಲ್ ಜನಾಂಗೀಯ ಹತ್ಯೆ ನಡೆಸುತ್ತಿದೆ ಎಂದು ಮಮ್ದಾನಿ ಹಲವು ಬಾರಿ ಟೀಕಿಸಿದ್ದಾರೆ. ಯಾವುದೇ ಧರ್ಮ ಅಥವಾ ವರ್ಣದ ಆಧಾರದಲ್ಲಿ ದೇಶವೊಂದು ತನ್ನ ಅಸ್ತಿತ್ವ ಪ್ರತಿಪಾದಿಸುವುದನ್ನು ತಾನು ಒಪ್ಪುವುದಿಲ್ಲ ಎಂದಿದ್ದರು.

ಭಾರತ, ಉಗಾಂಡ ಮತ್ತು ಅಮೆರಿಕದ ಬಹು ಜನಾಂಗೀಯತೆ ಹಾಗೂ ತಾತ್ವಿಕತೆಗಳ ಸಮ್ಮಿಶ್ರಣವಾಗಿರುವ ಜೋಹ್ರಾನ್ ಮಮ್ದಾನಿ ಅವರು ನ್ಯೂಯಾರ್ಕ್ ಮೇಯರ್ ಆಗಿ ಆಯ್ಕೆಯಾಗಿರುವುದು ಅಮೆರಿಕದ ಚರಿತ್ರೆಯಲ್ಲಿ ಒಂದು ಅನಿರೀಕ್ಷಿತವಾದ ಮತ್ತು ಕುತೂಹಲಕಾರಿಯಾದ ಘಟ್ಟವಾಗಿದೆ.

ಉಮರ್‌ಗೆ ಬೆಂಬಲ

2023ರಲ್ಲಿ ಜೋಹ್ರಾನ್ ಮಮ್ದಾನಿ ಅವರು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮುಖಂಡರಾಗಿದ್ದ ಉಮರ್ ಖಾಲಿದ್ ಅವರ ಪತ್ರವೊಂದನ್ನು ಓದಿದ್ದರು. ಶ್ವೇತಭವನಕ್ಕೆ ನರೇಂದ್ರ ಮೋದಿ ಅವರು ಭೇಟಿ ನೀಡುವ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ‘ಹೌಡಿ ಡೆಮಾಕ್ರಸಿ’ ಕಾರ್ಯಕ್ರಮದಲ್ಲಿ ಅವರು ಖಾಲಿದ್ ಅವರ ‘ಜೈಲು ಡೈರಿ’ಯನ್ನು ಓದಿದ್ದರು.

ಮುಂದಿದೆ ಸವಾಲು

ಮಮ್ದಾನಿ ನೀಡಿರುವ ಭರವಸೆಗಳನ್ನು ಈಡೇರಿಸುವುದು ಸುಲಭವೇನಲ್ಲ. ಹಲವು ಸವಾಲುಗಳು ಅವರ ಮುಂದಿವೆ:

- ಮಮ್ದಾನಿ ಅವರನ್ನು ಬೆಂಬಲಿಸಿದರೆ ಸರ್ಕಾರದ ಅನುದಾನ ಕಡಿತಗೊಳಿಸುವುದಾಗಿ ಅಧ್ಯಕ್ಷ ಟ್ರಂಪ್ ಅವರು ಚುನಾವಣೆಗೂ ಮುನ್ನವೇ ಎಚ್ಚರಿಸಿದ್ದರು. ಕಳೆದ ವರ್ಷ ಸರ್ಕಾರವು ನ್ಯೂಯಾರ್ಕ್ ನಗರಕ್ಕೆ 850 ಕೋಟಿ ಡಾಲರ್ ಅನುದಾನ ನೀಡಿತ್ತು
- ಮಮ್ದಾನಿ ಅವರು ನೀಡಿರುವ ಭರವಸೆಯಂತೆ ಶ್ರೀಮಂತರು, ಕಾರ್ಪೊರೇಟ್ ಕಂಪನಿಗಳ ಮೇಲೆ ಹೆಚ್ಚುವರಿ ತೆರಿಗೆ ಹಾಕಿ ಹಣ ಸಂಗ್ರಹಿಸಬಹುದು. ಆದರೆ, ಇದಕ್ಕೆ ಗವರ್ನರ್ ಒಪ್ಪಿಗೆ ಬೇಕು
- ಲಾಸ್ ಏಂಜಲೀಸ್ ಸೇರಿದಂತೆ ಅಮೆರಿಕದ ಪ್ರಮುಖ ನಗರಗಳಲ್ಲಿ ಅಪರಾಧ ಕೃತ್ಯಗಳನ್ನು ಹತ್ತಿಕ್ಕಲು ಟ್ರಂಪ್ ಅವರು ನ್ಯಾಷನಲ್ ಗಾರ್ಡ್ಸ್‌ಗಳನ್ನು ನಿಯೋಜಿಸಿದ್ದಾರೆ. ಆದರೆ, ನ್ಯೂಯಾರ್ಕ್‌ನಲ್ಲಿ ಇನ್ನೂ ನಿಯೋಜಿಸಿಲ್ಲ. ಟ್ರಂಪ್ ಅವರು ನ್ಯೂಯಾರ್ಕ್ ಮೇಲೆ ನಿಯಂತ್ರಣ ಸಾಧಿಸಲು ಇದನ್ನು ಮಾಡಬಹುದು
- ವಲಸೆ ವಿರೋಧಿ ನೀತಿಯನ್ನು ಜಾರಿಗೆ ತಂದಿರುವ ಟ್ರಂಪ್ ಆಡಳಿತ, ದೇಶದಾದ್ಯಂತ ಅಕ್ರಮ ವಲಸಿಗರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದು ನ್ಯೂಯಾರ್ಕ್‌ಗೂ ಅದನ್ನು ವಿಸ್ತರಿಸಬಹುದು
- ಮಮ್ದಾನಿ ಆಯ್ಕೆಯಾಗುತ್ತಲೇ ಅವರ ಬಗ್ಗೆ ಅಸಮಾಧಾನ ಹೊಂದಿರುವ ಕೆಲವು ಪೊಲೀಸರು ಹುದ್ದೆ ತೊರೆಯುತ್ತಿದ್ದಾರೆ

ನ್ಯೂಯಾರ್ಕ್‌ಗೆ ಏಕೆ ಮಹತ್ವ?

ಅಮೆರಿಕದ ಅತ್ಯಂತ ದೊಡ್ಡ ನಗರ. ವಾಣಿಜ್ಯ ರಾಜಧಾನಿಯೂ ಹೌದು. ನ್ಯೂಯಾರ್ಕ್ ರಾಜ್ಯದಲ್ಲಿರುವ ನಗರ ನ್ಯೂಯಾರ್ಕ್. 85 ಲಕ್ಷದಷ್ಟು ಜನಸಂಖ್ಯೆ ಹೊಂದಿದೆ. ಇದರ ವಾರ್ಷಿಕ ಬಜೆಟ್ 11,590 ಕೋಟಿ ಡಾಲರ್. ಅಮೆರಿಕದ ಕೈಗಾರಿಕೆಗಳ ಹೃದಯ ಈ ನಗರ, ನ್ಯೂಯಾರ್ಕ್ ಷೇರು ಪೇಟೆ/ವಾಲ್‌ಸ್ಟ್ರೀಟ್ ಇಲ್ಲೇ ಇದೆ. ಹಾಗಾಗಿ, ವಾಣಿಜ್ಯ ವಹಿವಾಟು ಇಲ್ಲಿ ಹೆಚ್ಚು. ಅಮೆರಿಕದ ಆರ್ಥಿಕತೆಗೆ ದೊಡ್ಡ ಕೊಡುಗೆಯನ್ನೇ ಇದು ನೀಡುತ್ತದೆ.

ಕೈ ಹಿಡಿದ ಭಿನ್ನ ಪ್ರಚಾರ

ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜೊಹ್ರಾನ್ ಮಮ್ದಾನಿ ಅವರು ಡೆಮಾಕ್ರಟಿಕ್ ಸೋಷಿಯಲಿಸ್ಟ್ಸ್ ಆಫ್ ಅಮೆರಿಕದ (ಡಿಎಸ್‌ಎ) ಸದಸ್ಯರೂ ಹೌದು. ಪ್ರಗತಿಪರ ಮತ್ತು ಎಡಪಂಥೀಯ ನಿಲುವನ್ನು ಹೊಂದಿರುವ ಈ ರಾಜಕೀಯ ಸಂಘಟನೆಯು ಮಮ್ದಾನಿ ಅವರ ಗೆಲುವಿನಲ್ಲಿ ಮಹತ್ವದ ಪಾತ್ರವಹಿಸಿದೆ.

ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತಿದ್ದ ಡೆಮಾಕ್ರಟಿಕ್ ಪಕ್ಷಕ್ಕೆ ಮಮ್ದಾನಿ ಅವರ ಗೆಲುವು ಹೊಸ ಚೈತನ್ಯ ನೀಡಿದೆ. ಟ್ರಂಪ್ ಅವರ ಗೆಲುವು ಮತ್ತು ಅವರ ‘ಅಮೆರಿಕ ಮೊದಲು’ ನೀತಿಯ ಅಬ್ಬರದ ನಡುವೆಯೇ ಮಮ್ದಾನಿ ಮತ್ತು ಅವರ ತಂಡ ವಿಭಿನ್ನವಾದ ಪ್ರಚಾರದ ಮೊರೆ ಹೋಗಿದ್ದು ಮತ್ತು ನ್ಯೂಯಾರ್ಕ್ ನಿವಾಸಿಗಳ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆಗೊಳಿಸುವ ಜನಸ್ನೇಹಿ ಭರವಸೆಗಳನ್ನು ಘೋಷಣೆ ಮಾಡಿದ್ದು ಅವರ ಗೆಲುವಿಗೆ ಕೊಡುಗೆ ನೀಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

- ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿದ್ದರೂ ಮಮ್ದಾನಿ ಪರವಾಗಿ ಹೆಚ್ಚು ಕೆಲಸ ಮಾಡಿದ್ದು ಡಿಎಸ್‌ಎ. ಸಮಾಜವಾದಿ ನಿಲುವನ್ನು ಹೊಂದಿರುವ ಅವರ ಜೊತೆ ದೊಡ್ಡ ಸ್ವಯಂಸೇವಕರ ಪಡೆಯೇ ಇತ್ತು. ಈ ಚುನಾವಣೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸ್ವಯಂಸೇವಕರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಮಮ್ದಾನಿ ಪರ ಪ್ರಚಾರ ನಡೆಸಿದರು. ಅವರ ಪ್ರತಿಸ್ಪರ್ಧಿಗಳು ಪ್ರಚಾರಕ್ಕಾಗಿ ಹಣ ನೀಡಿ ಜನರನ್ನು ನಿಯೋಜಿಸಿದ್ದರು. ನ್ಯೂಯಾರ್ಕ್‌ನ ಇತಿಹಾಸದಲ್ಲಿ ಮೇಯರ್ ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬರ ಪರ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸ್ವಯಂಸೇವಕರು ಭಾಗವಹಿಸಿದ್ದು ಇದೇ ಮೊದಲು
- ಮಮ್ದಾನಿ ಪ್ರತಿಸ್ಪರ್ಧಿಗಳು ಚುನಾವಣೆಗೆ ದೇಣಿಗೆ ಸಂಗ್ರಹಿಸುವುದಕ್ಕಾಗಿ ಶ್ರೀಮಂತರು, ಕಾರ್ಪೊರೇಟ್ ಕಂಪನಿಗಳನ್ನು ಎಡತಾಕಿದರೆ, ಇವರು ಬಡವರು, ಮಧ್ಯಮ ವರ್ಗದವರನ್ನು ಸಂಪರ್ಕಿಸಿದರು
- ಜನರು ನಿರೀಕ್ಷೆಗೂ ಮೀರಿ ಮಮ್ದಾನಿ ಮನವಿಗೆ ಸ್ಪಂದಿಸಿದರು. ಬೇಗ ಅವರಿಗೆ ಬೇಕಾದಷ್ಟು ದೇಣಿಗೆಯೂ ಸಂಗ್ರಹವಾಯಿತು
- ಬಡವರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವುದಕ್ಕಾಗಿ ಶ್ರೀಮಂತರು ಹಾಗೂ ಕಾರ್ಪೊರೇಟ್ ಕಂಪನಿಗಳಿಗೆ ಹೆಚ್ಚು ತೆರಿಗೆ ವಿಧಿಸಬೇಕು ಎಂಬುದು ಡಿಎಸ್‌ಎಯ ನಿಲುವು. ಮಮ್ದಾನಿ ಅವರು ತಮ್ಮ ಚುನಾವಣಾ ಅಭಿಯಾನದಲ್ಲಿ, ತಾವು ಗೆದ್ದರೆ ಶ್ರೀಮಂತರು ಮತ್ತು ಕಾರ್ಪೊರೇಟ್ ಸಂಸ್ಥೆಗಳಿಗೆ ಹೆಚ್ಚು ತೆರಿಗೆ ವಿಧಿಸುವ ಭರವಸೆಯನ್ನು ನೀಡಿದರು

ಜನಮನ ಸೆಳೆದ ಭರವಸೆಗಳು

- ವಲಸಿಗರೇ ಹೆಚ್ಚಿನ ಸಂಖ್ಯೆಯಲ್ಲಿರುವ ನ್ಯೂಯಾರ್ಕ್‌ನಲ್ಲಿ ಜೀವನ ವೆಚ್ಚ ದುಬಾರಿ. ಮನೆ ಬಾಡಿಗೆ ಸೇರಿದಂತೆ ಇತರೆ ಖರ್ಚುಗಳಿಗಾಗಿ ಜನರು ಹೆಚ್ಚು ಹಣ ತೆರಬೇಕು. ಸ್ವತಃ ವಲಸಿಗರಾಗಿರುವ ಮಮ್ದಾನಿ ಅವರು ಜನರ ಆರ್ಥಿಕ ಹೊರೆಯನ್ನು ಇಳಿಸುವ ವಾಗ್ದಾನ ನೀಡಿದರು. ಪೂರಕವಾಗಿ ಜನಸ್ನೇಹಿ ನೀತಿಗಳನ್ನು ಘೋಷಿಸಿದರು
- ನ್ಯೂಯಾರ್ಕ್‌ನ ಬಹುಪಾಲು ನಿವಾಸಿಗಳಿಗೆ ಸ್ವಂತ ಮನೆಗಳಿಲ್ಲ. ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅಂದಾಜಿನ ಪ್ರಕಾರ 20 ಲಕ್ಷ ಜನರು ಬಾಡಿಗೆ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ. ತಾವು ಅಧಿಕಾರಕ್ಕೆ ಬಂದರೆ ಮನೆ ಬಾಡಿಗೆಯನ್ನು ಹೆಚ್ಚಿಸುವುದಕ್ಕೆ ನಿಯಂತ್ರಣ ಹೇರುವುದಾಗಿ ಮತ್ತು ನ್ಯೂಯಾರ್ಕ್ ನಿವಾಸಿಗಳಿಗೆ ಕೈಗೆಟುಕುವ ದರದಲ್ಲಿ ವಸತಿ ಕಲ್ಪಿಸುವ ಘೋಷಣೆ ಮಾಡಿದರು
- ಬಾಡಿಗೆದಾರರ ಸುರಕ್ಷತೆ ಖಾತರಿ ಪಡಿಸದ ಮತ್ತು ಕನಿಷ್ಠ ಸೌಲಭ್ಯಗಳನ್ನು ನೀಡದ ಮನೆ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಘೋಷಣೆಯೂ ಅವರ ಭರವಸೆಗಳ ಪಟ್ಟಿಯಲ್ಲಿತ್ತು
- ನ್ಯೂಯಾರ್ಕ್ ನಗರದ ಭದ್ರತೆಗೆ ವಿಶೇಷ ಗಮನ ನೀಡುವುದು, ಜನರ ಜೇಬಿಗೆ ಹೊರೆಯಾಗದಂತೆ ಸ್ಥಳೀಯ ಆಡಳಿತ ಮಾಲೀಕತ್ವದ ದಿನಸಿ ಮಳಿಗೆಗಳ ಸ್ಥಾಪನೆ, ಸಾರ್ವಜನಿಕರಿಗೆ ಉಚಿತ ಸಾರಿಗೆ ವ್ಯವಸ್ಥೆ, ಕಾರ್ಪೊರೇಟ್ ಶೋಷಣೆಗೆ ಕಡಿವಾಣ ಹಾಕುವುದು... ಈ ಘೋಷಣೆಗಳು ಜನರನ್ನು ಸೆಳೆದವು
- 5 ವಾರಗಳಿಂದ ಐದು ವರ್ಷ ವಯಸ್ಸಿನ ಮಕ್ಕಳ ಉಚಿತ ಆರೈಕೆಗೆ ಯೋಜನೆ ರೂಪಿಸುವುದು, ಮಕ್ಕಳು ಜನಿಸಿದ ನಂತರ ಅವರ ಪಾಲನೆ ಪೋಷಣೆಗಾಗಿ ಪೋಷಕರಿಗೆ ಅಗತ್ಯವಿರುವ ದಿನಸಿ ಹಾಗೂ ಇನ್ನಿತರ ಸಾಮಗ್ರಿಗಳನ್ನು ಉಚಿತವಾಗಿ ನೀಡುವ ಘೋಷಣೆ, ಸರ್ಕಾರಿ ಶಾಲೆಗಳಿಗೆ ಸಾಕಷ್ಟು ಅನುದಾನ ಮತ್ತು ಸಂಪನ್ಮೂಲಗಳನ್ನು ಹಂಚಿಕೆ ಮಾಡುವುದು, ಶಿಕ್ಷಕರ ನೇಮಕಾತಿ, ಅದಕ್ಕೆ ಪೂರಕವಾಗಿ ಅವರಿಗೆ ತರಬೇತಿ ನೀಡುವುದು ಸೇರಿದಂತೆ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ನೀತಿಗಳು ಕೂಡ ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸಿವೆ

ಆಧಾರ: ಪಿಟಿಐ, ಜೋಹ್ರಾನ್‌ಫಾರ್‌ಎನ್‌ವೈಸಿ.ಕಾಮ್, ಮಾಧ್ಯಮ ವರದಿಗಳು

ರಾಷ್ಟ್ರೀಯ

ಮಹಿಳಾ ಮೀಸಲಾತಿ ಕಾಯ್ದೆ ಶೀಘ್ರ ಜಾರಿ

ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ 2023ರ ‘ನಾರಿ ಶಕ್ತಿ ವಂದನ ಕಾಯ್ದೆ’ಯನ್ನು ಜಾರಿಗೆ ತರುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ಪರಿಶೀಲನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೋರಿದೆ.

ಮಹಿಳೆಯರು ದೇಶದಲ್ಲಿ ಅತಿದೊಡ್ಡ ಅಲ್ಪಸಂಖ್ಯಾತರು ಎಂಬುದನ್ನು ಗಮನಿಸಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠವು ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿದೆ.

‘ದೇಶದ ಎಲ್ಲಾ ನಾಗರಿಕರು ರಾಜಕೀಯ ಮತ್ತು ಸಾಮಾಜಿಕವಾಗಿ ಸಮಾನತೆಗೆ ಅರ್ಹರು ಎಂದು ಸಂವಿಧಾನದ ಪೀಠಿಕೆ ಹೇಳುತ್ತದೆ. ಈ ದೇಶದಲ್ಲಿ ಅತಿದೊಡ್ಡ ಅಲ್ಪ ಸಂಖ್ಯಾತರು ಯಾರು? ಒಟ್ಟು ಜನ ಸಂಖ್ಯೆಯಲ್ಲಿ ಶೇ 48ರಷ್ಟಿರುವ ಮಹಿಳೆಯರು ಎಂಬುದರಲ್ಲಿ ಯಾವುದೇ ಅನುಮಾನ ಬೇಡ. ಇದು ಮಹಿಳೆಯರ ರಾಜಕೀಯ ಸಮಾನತೆಗೆ ಸಂಬಂಧಿಸಿದ ವಿಷಯ’ ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದರು.

ಅರ್ಜಿದಾರರಾದ ಜಯಾ ಠಾಕೂರ್ ಪರ ಹಾಜರಾದ ಹಿರಿಯ ವಕೀಲೆ ಶೋಭಾ ಗುಪ್ತಾ, ‘ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಮಹಿಳೆಯರು ತಮ್ಮ ಪ್ರಾತಿನಿಧ್ಯಕ್ಕಾಗಿ ನ್ಯಾಯಾಲಯದ ಮೊರೆಹೋಗಬೇಕಾಗಿರುವುದು ದುರದೃಷ್ಟಕರ’ ಎಂದರು.

ದತ್ತಾಂಶಗಳ ಆಧಾರದ ಮೇಲೆ ಲೋಕಸಭೆ ಮತ್ತು ರಾಜ್ಯ ಶಾಸನಸಭೆಗಳಲ್ಲಿನ ಒಟ್ಟು ಸ್ಥಾನಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ ಎಂದು ಅವರು ವಾದಿಸಿದರು.

ಕಾನೂನನ್ನು ಜಾರಿಗೊಳಿಸುವುದು ಕಾರ್ಯಾಂಗದ ವಿಶೇಷಾಧಿಕಾರವಾಗಿದ್ದು, ಈ ವಿಷಯದಲ್ಲಿ ಯಾವುದೇ ಆದೇಶ ಹೊರಡಿಸಲಾಗುವುದಿಲ್ಲ ಎಂದು ಪೀಠ ಹೇಳಿತು. ‘ಇಂತಹ ವಿಷಯಗಳಲ್ಲಿ ಮಧ್ಯಪ್ರವೇಶಿಸುವಾಗ ನ್ಯಾಯಾಲಯಗಳಿಗೆ ಇತಿಮಿತಿಗಳಿವೆ’ ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದರು.

‘ನಾರಿ ಶಕ್ತಿ ವಂದನ ಮಸೂದೆ’ಗೆ 2023ರ ಸೆಪ್ಟೆಂಬರ್ 21ರಂದು ಸಂಸತ್ತಿನ ಅಂಗೀಕಾರ ಲಭಿಸಿತ್ತು. ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಬಹುತೇಕ ಸರ್ವಾನುಮತದಿಂದ ಹಾಗೂ ರಾಜ್ಯಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿತ್ತು. 2023ರ ಸೆಪ್ಟೆಂಬರ್ 28ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮಸೂದೆಗೆ ಒಪ್ಪಿಗೆ ನೀಡಿದ್ದರು. ಈ ಕಾಯ್ದೆಯು ಲೋಕಸಭೆ ಹಾಗೂ ವಿಧಾನಸಭಾ ಕ್ಷೇತ್ರಗಳಲ್ಲಿ ಶೇಕಡ 33ರಷ್ಟನ್ನು ಮಹಿಳೆಯರಿಗೆ ಮೀಸಲಾಗಿ ಇರಿಸುತ್ತದೆ.

ಲೋಕಸಭೆಗೆ 2029ರಲ್ಲಿ ನಡೆಯಲಿರುವ ಚುನಾವಣೆಗೂ ಮುನ್ನ ಈ ಕಾಯ್ದೆ ಜಾರಿಗೆ ಬರುವ ಸಾಧ್ಯತೆ ಇಲ್ಲ. ಕಾಯ್ದೆಯು ಜಾರಿಗೆ ಬರಬೇಕು ಎಂದಾದರೆ ಕ್ಷೇತ್ರಗಳ ಪುನರ್ ವಿಂಗಡಣೆ ಆಗಬೇಕು ಎಂದು ಕಾಯ್ದೆಯಲ್ಲಿ ಹೇಳಲಾಗಿದೆ. ಪುನರ್ ವಿಂಗಡಣೆಗೆ ಕಾಯದೆಯೇ ಕಾಯ್ದೆ ಜಾರಿಗೊಳಿಸಬೇಕು ಎಂದು ಜಯಾ ಠಾಕೂರ್ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಎಐ ಅಪಾಯ ಉಲ್ಲೇಖಿಸಿದ ಸಿಜೆಐ

ಗವಾಯಿ

ನವದೆಹಲಿ (ಪಿಟಿಐ): ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರು ಕೃತಕ ಬುದ್ಧಿಮತ್ತೆಯ (ಎಐ) ಅಪಾಯವನ್ನು ಸೋಮವಾರ ಎತ್ತಿತೋರಿಸಿದ್ದಾರೆ. ತಮ್ಮ ನ್ಯಾಯಾಲಯದ ಕೋಣೆಯಲ್ಲಿ ಶೂ ಎಸೆಯಲು ಯತ್ನಿಸಿದ ಘಟನೆಯನ್ನು ತಪ್ಪಾಗಿ ಬಿಂಬಿಸಿ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ತಿರುಚಿದ ವಿಡಿಯೊ ಬಗ್ಗೆ ತಮಗೆ ತಿಳಿದಿದೆ ಎಂದು ಅವರು ತಿಳಿಸಿದ್ದಾರೆ.

ನ್ಯಾಯಾಂಗದಲ್ಲಿ ಎಐ ಬಳಕೆಯನ್ನು ನಿಯಂತ್ರಿಸಲು ಮಾರ್ಗಸೂಚಿಗಳನ್ನು ರೂಪಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಎರಡು ವಾರಗಳ ನಂತರ ವಿಚಾರಣೆಗೆ ಪಟ್ಟಿ ಮಾಡಿದ ಮುಖ್ಯ ನ್ಯಾಯಮೂರ್ತಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು, ನಂತರ ಈ ಹೇಳಿಕೆಯನ್ನು ನೀಡಿತು.

ವಿಚಾರಣೆ ಸಮಯದಲ್ಲಿ, ಅರ್ಜಿದಾರರ ಪರ ವಕೀಲರು ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಎಐಯನ್ನು ಅನಿಯಂತ್ರಿತವಾಗಿ ಅವಳಡಿಸಿಕೊಳ್ಳುವುದರ ವಿರುದ್ಧ ಎಚ್ಚರಿಸುತ್ತಾ, ‘ಈ ನ್ಯಾಯಾಲಯ ಕೂಡ ಎಐ ಬಳಸುತ್ತಿದೆ’ ಎಂದಿದ್ದಾರೆ.

ಈ ವೇಳೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ, ‘ನಮಗೆ ಅದರ ಅರಿವಿದೆ, ನಮ್ಮಿಬ್ಬರ ತಿರುಚಿದ ವಿಡಿಯೊವನ್ನು ನಾವು ನೋಡಿದ್ದೇವೆ’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ನಕಲಿ ವಿಡಿಯೊವನ್ನು ಉಲ್ಲೇಖಿಸುತ್ತಾ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಹಾರದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡ ಕನ್ಹಯ್ಯ ಕುಮಾರ್ ಅವರ ಎರಡು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ‘ಈ ಮೂರ್ಖ ಕನ್ಹಯ್ಯ ಈ ಹಿಂದೆ ದೆಹಲಿಯಲ್ಲಿ ಮತ ಚಲಾಯಿಸಿದ್ದರು. ಈಗ ಬಿಹಾರದಲ್ಲಿ ಮತ್ತೆ ಮತ ಚಲಾವಣೆ ಮಾಡಿದ್ದಾರೆ’ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಚುನಾವಣೆಗೆ ಸ್ಪರ್ಧಿಸಿದವರ ಪ್ರಮಾಣಪತ್ರದ ಮಾಹಿತಿ ಇರುವ ‘MyNeta’ ಪೋರ್ಟಲ್‌ನಲ್ಲಿ ಪರಿಶೀಲನೆ ಮಾಡಿದಾಗ ಕನ್ಹಯ್ಯ ಅವರು ಬಿಹಾರದ ಟೆಘ್ರಾ ಕ್ಷೇತ್ರದ ಮತದಾರರಾಗಿ ನೋಂದಾಯಿಸಿಕೊಂಡಿರುವುದು ಕಂಡಿತು. 2019ರ ವಿಧಾನಸಭಾ ಚುನಾವಣೆ ಮತ್ತು 2024ರ ಲೋಕಸಭಾ ಚುನಾವಣೆಯಲ್ಲಿ ಅವರು ಅಲ್ಲಿಯೇ ಮತದಾನ ಮಾಡಿದ್ದಾರೆ. ಈ ಬಗ್ಗೆ ಅವರು ಸುದ್ದಿಯನ್ನೂ ಹಂಚಿಕೊಂಡಿದ್ದರು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಚಿತ್ರವನ್ನು ಆಧರಿಸಿ ಅಂತರ್ಜಾಲದಲ್ಲಿ ಹುಡುಕಾಟ ನಡೆಸಿದಾಗ, 2024ರ ಮೇ 25ರಂದು ಅವರೇ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ಇದೇ ಚಿತ್ರ ಕಂಡಿತು. ಕನ್ಹಯ್ಯ ಕುಮಾರ್ ಅವರು 2024ರ ಲೋಕಸಭಾ ಚುನಾವಣೆಯಲ್ಲಿ ಈಶಾನ್ಯ ದೆಹಲಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆ ವೇಳೆ ಅವರು ಚುನಾವಣಾ ಪ್ರಚಾರದ ಸಲುವಾಗಿ ಕ್ಷೇತ್ರದ ವಿವಿಧ ಮತಗಟ್ಟೆಗಳಲ್ಲಿ ಸಂಚರಿಸಿದ್ದರು. ಅದು ಆ ಸಂದರ್ಭದ ಚಿತ್ರ. ಮತದಾನ ಮಾಡಿದ ಚಿತ್ರ ಅಲ್ಲ. ಸಂಬಂಧವಿಲ್ಲದ ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಸುಳ್ಳು ಸುದ್ದಿ ಹರಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನೆಮ್ಮದಿಯ ನಾಳೆಗಳಿಗಾಗಿ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಹೂಗಳ ಪರಿಮಳದ, ಹಣ್ಣಿನ ಘಮದ, ಹರಿವ ನೀರಿನ ಜುಳುಜುಳು ಸದ್ದಿನ, ಮುಗಿಲು ಮುಟ್ಟುವ ಮರಗಳ ಅರಣ್ಯದಲ್ಲಿ ಗುಬ್ಬಿಯೊಂದಿತ್ತು. ಬಹಳ ಚುರುಕಿನ ಗುಬ್ಬಿಯಾದರೂ ಕೆಲವು ವಿಚಾರಗಳಲ್ಲಿ ಅಸಡ್ಡೆ ತೋರಿಸುತ್ತಿತ್ತು. ಅದರ ಅಮ್ಮ, ‘ಮಳೆಗಾಲ ಬರುತ್ತಿದೆ, ಆಹಾರ ಒಟ್ಟು ಹಾಕಿಟ್ಟುಕೋ’ ಅಂದರೆ, ‘ಹೋಗಮ್ಮಾ ಬೇಕಾದಷ್ಟು ಸಮಯವಿದೆ’ ಅನ್ನುತ್ತಿತ್ತು. ತನ್ನ ಸುತ್ತಲೂ ಇರುವೆಗಳು, ಅಳಿಲುಗಳು, ದುಂಬಿಗಳು ಮುಂತಾದ ಎಲ್ಲ ಪ್ರಾಣಿ ಪಕ್ಷಿ ಕೀಟಗಳೆಲ್ಲ ಆಹಾರ ಸಂಗ್ರಹಿಸುತ್ತಿರುವುದನ್ನು ನೋಡಿದರೂ ಹಾಡುತ್ತ ಹಾರುತ್ತ ಸಮಯ ಕಳೆದುಬಿಡುತ್ತಿತ್ತು.

ಒಂದು ದಿನ ಇದ್ದಕ್ಕಿದ್ದಂತೆ ಆಕಾಶದಲ್ಲಿ ಮೋಡಗಳು ದಟ್ಟೈಸಿ ಮಳೆ ಶುರುವಾಯಿತು. ಅಂದರೆ ಮಳೆಗಾಲ ಶುರುವಾಗಿತ್ತು. ಗಾಳಿ ಜೋರಾಯಿತು. ಗುಬ್ಬಿ ಮರಿ ತನ್ನ ಗೂಡಿಗೆ ನಡುಗುತ್ತ ಹಾರಿ ಬಂತು. ಚಳಿಯ ಜತೆ ಹಸಿವೂ ಆಗತೊಡಗಿತು. ಹುಡುಕಿದರೆ ತಿನ್ನಲು ಗೂಡಿನೊಳಗೆ ಏನಿದೆ? ಏನೂ ಇಲ್ಲ. ಇರುವೆಗಳು ಹುತ್ತದೊಳಗೆ ಸೇರಿಕೊಂಡಿದ್ದವು. ಅಳಿಲುಗಳು ತಾವು ಬೇಸಿಗೆಯಲ್ಲಿ ಕಷ್ಟಪಟ್ಟು ಕೊರೆದ ಬಿಲದೊಳಗೆ ಬೆಚ್ಚಗಿದ್ದವು. ದುಂಬಿಗಳು ಗೂಡು ಸೇರಿಕೊಂಡು ಮಕರಂದವನ್ನು ಹೀರುತ್ತ ರಾಗವೊಂದನ್ನು ಗುನುಗುತ್ತಿದ್ದವು. ಎರಡು ದಿನಗಳಾದರೂ ಮಳೆ ಕಡಿಮೆಯಾಗಲೇ ಇಲ್ಲ. ಹಸಿವು ಚಳಿಯಿಂದ ಗುಬ್ಬಿ ನಿತ್ರಾಣವಾಗಿತ್ತು. ಮೂರನೆಯ ದಿನ ಮಳೆ ನಿಂತಮೇಲೆ ಕಷ್ಟಪಟ್ಟು ಸೋತ ರೆಕ್ಕೆಗಳೊಂದಿಗೆ ಗುಬ್ಬಿ ತನ್ನ ಸ್ನೇಹಿತ ಅಳಿಲನ್ನು ಭೇಟಿ ಮಾಡಲು ಹಾರಿತು. ಅಳಿಲು ಸ್ವಲ್ಪ ಧಾನ್ಯವನ್ನೂ, ಕಾಳುಗಳನ್ನೂ ಗುಬ್ಬಿಗೆ ಕೊಟ್ಟಿತು. ಗುಬ್ಬಿಗೆ ಮುಜುಗರವಾಯಿತು. ‘ನಾನು ಮೊದಲೇ ಕಷ್ಟಪಟ್ಟು ಕೆಲಸ ಮಾಡಬೇಕಿತ್ತು, ನಾನು ಇನ್ನೂ ಸಮಯವಿದೆ ಅಂದುಕೊಂಡೆ’ ಅಂದಿತು ತಲೆತಗ್ಗಿಸಿ. ಅಳಿಲು ನಕ್ಕು ಹೇಳಿತು, ‘ನೋಡು, ನಾವೆಲ್ಲರೂ ನಮ್ಮದೇ ಆದ ಸಮಯದಲ್ಲಿ, ನಮ್ಮದೇ ಆದ ರೀತಿಯಲ್ಲಿ ಬದುಕಿನಲ್ಲಿ ಪಾಠ ಕಲಿಯುತ್ತೇವೆ. ಈ ಕಾಡು ನಮ್ಮ ತಾಯಿ, ಇದು ನಮಗೆ ರಕ್ಷಣೆಯನ್ನೂ ಕೊಡುತ್ತದೆ, ಸೂಕ್ತ ಸಮಯದಲ್ಲಿ ಎಚ್ಚರಿಕೆಯನ್ನೂ ಕೊಡುತ್ತದೆ’.

ಮುಂದಿನ ಬೇಸಿಗೆಯಲ್ಲಿ ಗುಬ್ಬಿ ಸುಮ್ಮನೆ ಹಾರಾಡುತ್ತ ಹಾಡುತ್ತ ಸಮಯ ಕಳೆಯಲಿಲ್ಲ. ಬೀಜಗಳು, ಕಾಳುಗಳನ್ನು ಸಂಗ್ರಹಿಸಿ ಗೂಡಿನಲ್ಲಿ ಅಚ್ಚುಕಟ್ಟಾಗಿ ಇಡತೊಡಗಿತು. ಜತೆಗೆ ತನ್ನ ಗೂಡಿನ ಹತ್ತಿರದ ಇರುವೆಗಳಿಗೂ ಆಹಾರ ಸಂಗ್ರಹಿಸಲು ಸಹಾಯ ಮಾಡಿತು. ಸುತ್ತಮುತ್ತಲಿನ ಪ್ರಾಣಿಗಳು ಗುಬ್ಬಿಯಲ್ಲಾದ ಬದಲಾವಣೆಯನ್ನು ಹೊಗಳಿದವು. ಕೊನೆಗೆ, ಆಮೇಲೆ, ಮತ್ತೆ, ನಂತರ ಎನ್ನುವ ಪದಗಳನ್ನು ಗುಬ್ಬಿ ಬಳಸಲೇ ಇಲ್ಲ. ಯೋಗ್ಯ ಸಮಯದಲ್ಲಿ ಮಾಡಬೇಕಾದ ಕೆಲಸ ಮಾಡುವುದರಿಂದ ಬದುಕು ಸರಳವೂ ಸಂತೋಷದಾಯಕವೂ ಆಗುತ್ತದೆ ಎಂಬುದನ್ನು ಗುಬ್ಬಿ ಕಂಡುಕೊಂಡಿತ್ತು. ಮುಂದಿನ ಮಳೆಗಾಲದಲ್ಲಿ ಸಂಗ್ರಹಿಸಿಟ್ಟ ಆಹಾರ ತಿಂದುಕೊಂಡು ಕೂಡಿಟ್ಟ ಹತ್ತಿಯ ರಾಶಿಯಲ್ಲಿ ನೆಮ್ಮದಿಯಿಂದಿತ್ತು. ಬೆಚ್ಚಗೆ ಗೂಡಿನಲ್ಲಿ ಕುಳಿತ, ಹೊಟ್ಟೆ ತುಂಬಿದ ಗುಬ್ಬಿಯ ಬಾಯಿಂದ ಸಣ್ಣ ಧ್ವನಿಯಲ್ಲಿ ಹಾಡೊಂದು ಹೊರಟಿತ್ತು. ಆ ಹಾಡು ಬೇಸಿಗೆಯಲ್ಲಿ ಕಷ್ಟಪಟ್ಟು ಆಹಾರ ಸಂಗ್ರಹಿಸಿದ ಪರಿಣಾಮ ಎಂಬುದು ಗುಬ್ಬಿಗೆ ಗೊತ್ತಾಗಿತ್ತು.

ನಾವೂ ಅಷ್ಟೇ ಎಷ್ಟೋ ಸಲ, ಇನ್ನೂ ಸಮಯವಿದೆ ಎನ್ನುತ್ತ ಬದುಕನ್ನು ಹಗುರವಾಗಿ ತೆಗೆದುಕೊಳ್ಳುತ್ತಿರುತ್ತೇವೆ. ಮಾಡಲೇಬೇಕಾದ ಮುಖ್ಯವಾದ ಕೆಲಸಗಳನ್ನು ಕಷ್ಟವಾಗುತ್ತದೆಂದು ಮುಂದೂಡುತ್ತಲೇ ಇರುತ್ತೇವೆ. ಮತ್ತೆ ಪಶ್ಚಾತ್ತಾಪ ಪಡುತ್ತೇವೆ. ಆದರೆ ನೆಮ್ಮದಿಯ ನಾಳೆಗಳಿಗಾಗಿ ಇಂದು ಕಷ್ಟಪಡಬೇಕೆಂಬುದನ್ನು ತಡವಾಗಿಯಾದರೂ ಸರಿ, ಅರ್ಥಮಾಡಿಕೊಂಡರೆ ಬದುಕು ಸುಂದರ. ❖

ಗುಂಡಣ್ಣ

ಪದಬಂಧ 6220

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಾಣ ಬಿದ್ದಿರುವ ಸಮುದ್ರ! (3)
3.ಜಡೆಗಟ್ಟಿದ ಕೂದಲು (2)
5.ಬಹುಕಾಲ ಬದುಕುವವನು (4)
6.ಯಮನ ಹತ್ತಿರವಿರುವ ಜೋಡಿ (3)
7.ವಿರಮಿಸುತ್ತಿದ್ದಾಗ ಮೂಡಿದ ಸೂರ್ಯ (2)
9.ಗದುಗಿನ ನಾರಾಣಪ್ಪನವರ ಕಾವ್ಯನಾಮ (5)
11.ರುಚಿಯಾದುದು ಉಲ್ಟಾ ಆಗಿದೆ (2)
13.ಹೆಂಡತಿಯನ್ನು ಕಳಕೊಂಡವನು (3)
14.ಹರಿಯುವ ಗುಣವುಳ್ಳ ವಸ್ತುವಿನ ಸ್ವರೂಪ ಉಲ್ಟಾ ಆಗಿದೆ (4)
15.ರಾಜನ ಪತ್ನಿ (2)
16.ಜೋಡಣೆಯನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ

2.ಮನೆತನದ ಉದ್ಯೋಗವಿಲ್ಲಿ ಉಲ್ಟಾ ಕಾಣುತ್ತಿದೆ (5)
3.ವಿವರವಾದುದನ್ನು ಹೀಗೆ ಹೇಳಿ (4)
4.ಮೈಸೂರಿನಲ್ಲಿರುವ ಕುವೆಂಪು ಮನೆ ಹೆಸರು (5)
5.ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿಯವರ ಐತಿಹಾಸಿಕ ಕಾದಂಬರಿ (7)
8.ಸಮಾಲೋಚನೆಯ ಸಭೆ (5)
10.ಮಧುರವಾದ ಸ್ವಪ್ನ (5)
12.ಕೊಂಡಿಗಳಿಂದ ಕೂಡಿದ ಲೋಹದ ಹಗ್ಗ (4)



6219ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗುಂಗು 3.ಒನಕೆ 6.ರಿಕಾಪು 8.ರುಗ್ಣಾಲಯ 10.ಅರಣ್ಯ 11.ಬಹಳ 12.ಯಮದೂತ 15.ಕಪಟ 17.ರಸಿಕ 18.ರುಜು

ಮೇಲಿಂದ ಕೆಳಕ್ಕೆ: 2.ಗುಜರಿ 3.ಒನಪು 4.ಕೆಸರು 5.ಸಫಲ 7.ಕಾರುಣ್ಯ 9.ಯಮಳ 10.ಅಳಿಯ 11.ಬಳಪ 13.ಮಹಲು 14.ತಸ್ಕರ 15.ಕಣಕ 16.ಟಗರು

ಸುಡೊಕು 6604

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			6			5	3
2					5			
		1	2			4	8	9
		2					4	
4				9				5
	1		3		2		7	
	2			1		8		
1			8					4
	8			3	7		1	

6603 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ನವೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಸಪ್ತಮಿ ಗಂ. 23-10 ನಕ್ಷತ್ರ: ಪುಷ್ಯ ಗಂ 18-18 **ಯೋಗ:** ಶುಭ ಗಂ. 9-45 ಕರಣ: ವಿಷ್ಟಿ ಗಂ. 11-33 ತುಲಾ ಮಾಸದ 25 ನೇ ದಿನ. **ಮಳೆ ನಕ್ಷತ್ರ :** ವಿಶಾಖ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 - 04-30 **ಸೂರ್ಯೋದಯ :** 06-32 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 19 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ :** 4, 8

ಮೇಷ: ಸದಾಕಾಲ ಹಿತ ಬಯಸುವ ಕುಟುಂಬ ಸದಸ್ಯರನ್ನು ಹೊಂದಿರುವುದರಿಂದ ಮಾನಸಿಕ ಸ್ಥೈರ್ಯ ಸದೃಢವಾಗುವುದು. ನಿಮ್ಮನ್ನು ಎದುರು ಹಾಕಿಕೊಳ್ಳುವವರಿಗೆ ತಕ್ಕ ಉತ್ತರವನ್ನು ದೇವರು ನೀಡುತ್ತಾನೆ.

ವೃಷಭ: ದುಡುಕು ನಿರ್ಧಾರಗಳಿಂದ ವ್ಯವಹಾರದಲ್ಲಿ ಸೋಲಿನ ಕಹಿ ಅನುಭವಿಸಬೇಕಾಗುತ್ತದೆ. ಕುಟುಂಬದ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿವೆ. ಅದನ್ನು ಉಪಯೋಗಿಸಿಕೊಳ್ಳಿ.

ಮಿಥುನ: ಸಂಗಾತಿಯೊಂದಿಗೆ ಇದ್ದ ದೀರ್ಘಕಾಲದ ಸಮಸ್ಯೆಗಳನ್ನು ಸಮಾಧಾನದಿಂದ ಮಾತನಾಡಿ ಪರಿಹರಿಸಿಕೊಳ್ಳಿ. ಪ್ರಯಾಣದ ವೇಳೆ ಸ್ನೇಹಿತರೊಂದಿಗೆ ಭೋಗ ವಸ್ತುವಿನ ಖರೀದಿ ಅವಕಾಶ ಸಿಗಲಿದೆ.

ಕರ್ಕಾಟಕ: ದಾಂಪತ್ಯ ಜೀವನದಲ್ಲಿ ತಾಳ್ಮೆಯಿದ್ದರೆ ಸುಖ, ಶಾಂತಿ, ನೆಮ್ಮದಿ ದೊರಕುವುದು. ಯಾರದ್ದೋ ತಪ್ಪುಗಳಿಗೆ ಅಧಿಕಾರಿಗಳ ಜತೆಯಲ್ಲಿ ನೀವೂ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ.

ಸಿಂಹ: ಹೊಸ ಸ್ಥಳದಲ್ಲಿ ಹೊಂದಾಣಿಕೆ ಕಷ್ಟಕರ ಎನಿಸಬಹುದು. ವಿದ್ಯಾಭ್ಯಾಸದಲ್ಲಿನ ನಿಮ್ಮ ಸಾಧನೆಗೆ ನಿಮ್ಮ ಗುರುಗಳ ಕಡೆಯಿಂದ ಉತ್ತಮವಾಗಿ ಪ್ರೋತ್ಸಾಹ ಸಿಗುವುದು.

ಕನ್ಯಾ: ಕಾರ್ಯವೈಖರಿಯನ್ನು ಬದಲಾಯಿಸಿಕೊಂಡಲ್ಲಿ ಕೆಲಸವು ಇನ್ನಷ್ಟು ಸರಾಗವಾಗುವುದು. ಕೆಲವು ಆಲೋಚನಾರಹಿತ ಮಾತುಗಳಿಂದ ಉಳಿದವರು ಆಭಾಸಕ್ಕೆ ಒಳಗಾಗುತ್ತಾರೆ.

ತುಲಾ: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ ಸಂಘಟಿಸಲು ಸುದಿನ. ಸಾಧಿಸಲೇಬೇಕೆಂಬ ಛಲದ ಕೊರತೆಯಿಂದ ಕಾರ್ಯಗಳೆಲ್ಲವೂ ಅರ್ಧದ ಹಾದಿ ನೋಡುವುದು.

ವೃಶ್ಚಿಕ: ವಿನಾಕಾರಣ ಬೇರೆಯವರ ಮನಸ್ಸನ್ನು ನೋಯಿಸುವುದು ಸರಿಯಲ್ಲವೆಂದು ಗೊತ್ತಿದ್ದೂ ತಪ್ಪುಗಳು ನೆರವೇರಬಹುದು. ಸರ್ಕಾರಿ ಉನ್ನತ ಅಧಿಕಾರಿಗಳಿಗೆ ವರ್ಗಾವಣೆ ಇದೆ.

ಧನು: ಮನೆಯ ಸದಸ್ಯರೊಂದಿಗೆ ಉತ್ತಮ ಸಮಯವನ್ನು ಕಳೆಯುವ ಅವಕಾಶವಿದ್ದರೂ ಅನಿವಾರ್ಯ ಕಾರಣಗಳಿಂದ ತಪ್ಪಿಸಿಕೊಳ್ಳಬೇಕಾಗಬಹುದು. ವ್ಯಾವಹಾರಿಕವಾದ ಕಲ್ಪನೆಗಳು ಗರಿಗೆದರಲಿವೆ.

ಮಕರ: ಹೊಸ ವಿಷಯದ ಅಧ್ಯಯನಕ್ಕೆ ಬೇಕಾದ ಪೂರಕ ವಾತಾವರಣವನ್ನು ರೂಪಿಸಿಕೊಳ್ಳಿ. ಸೌಂದರ್ಯವರ್ಧಕಗಳ ಮಾರಾಟಗಾರರಿಗೆ ಹೆಚ್ಚಿನ ಲಾಭದ ದಿನ.

ಕುಂಭ: ಅನಾರೋಗ್ಯದ ಹೊರತಾಗಿ ಕೆಲವು ಜವಾಬ್ದಾರಿಗಳನ್ನು ನಿಭಾಯಿಸಲೇಬೇಕಾದುದು ಮಾನಸಿಕ ಸಂಕಟಕ್ಕೆ ಕಾರಣವಾಗಬಹುದು. ಕೆಲವು ಕಳಪೆ ವಸ್ತುಗಳು ದೊರೆಯಲಿವೆ.

ಮೀನ: ಸ್ವಂತ ಉದ್ಯಮದಲ್ಲಿರುವವರು ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಉತ್ಸಾಹ ತೋರಿ ಅದರಲ್ಲಿ ಸಫಲತೆಯನ್ನು ಹೊಂದುವರು. ಪೀಠೋಪಕರಣಗಳ ಖರೀದಿಗೆ ಶುಭ ದಿನ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,492
ಇಂದಿನ ಅಂತ್ಯ:	25,574
ದಿನದ ಗರಿಷ್ಠ:	25,653
▲	82

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹625
	12 ಕ್ಕೆ	₹80
ಮೈಸೂರು:	100 ಕ್ಕೆ	₹627

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹176
ಗುಡ್ ಲಾಟ್	₹163

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹390-673
ದ್ವಿತಳಿ (ಬಿ.ವಿ)	₹485-790

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹28750
ಎಸಿ	₹15540
ಆರ್‌ಪಿ	₹19000
ಆರ್‌ಸಿ	₹11080

ಕಾರ್ಮಿಕರ ಭವಿಷ್ಯ ನಿಧಿ: ನೌಕರರ ನೋಂದಣಿ ಅಭಿಯಾನ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರನ್ನು ಇಪಿಎಫ್‌ಒ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರುವ ಉದ್ದೇಶದ 'ನೌಕರರ ನೋಂದಣಿಗೆ ಅಭಿಯಾನ' ಆರಂಭವಾಗಿದೆ ಎಂದು ಪ್ರಾದೇಶಿಕ ಪಿ.ಎಫ್. ಆಯುಕ್ತ ಮಿಹಿರ್ ಕುಮಾರ್ ಹೇಳಿದ್ದಾರೆ.

ಮಿಹಿರ್ ಕುಮಾರ್

ಈ ಯೋಜನೆಯು ನವೆಂಬರ್ 1ರಿಂದ ಆರಂಭವಾಗಿದ್ದು 2026ರ ಏಪ್ರಿಲ್ 30ರವರೆಗೆ ಜಾರಿಯಲ್ಲಿ ಇರಲಿದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ನೌಕರರ ಭವಿಷ್ಯ ನಿಧಿ ಕಾಯ್ದೆಯ ವ್ಯಾಪ್ತಿಯಲ್ಲಿ ಈಗಾಗಲೇ ಇರುವ, ಕಾಯ್ದೆಯ ವ್ಯಾಪ್ತಿಗೆ ಹೊಸದಾಗಿ ಸೇರಿಕೊಳ್ಳುವ ಉದ್ಯೋಗದಾತರು ತಮ್ಮಲ್ಲಿನ ಅರ್ಹ ಉದ್ಯೋಗಿಗಳ ಹೆಸರನ್ನು ಸ್ವಇಚ್ಛೆಯಿಂದ ನೋಂದಾಯಿಸುವುದಕ್ಕೆ ಪ್ರೋತ್ಸಾಹಿಸುವ ಉದ್ದೇಶವನ್ನು ಈ ಅಭಿಯಾನ ಹೊಂದಿದೆ.

2017ರ ಜುಲೈ 1ರಿಂದ 2025ರ ಅಕ್ಟೋಬರ್ 31ರ ನಡುವೆ ನೌಕರಿಗೆ ಸೇರಿದ, ನೌಕರಿಯಲ್ಲಿ ಮುಂದುವರಿದಿರುವ, ಆದರೆ ಇಪಿಎಫ್ ಯೋಜನೆಯ ಅಡಿ ಯಾವುದೇ ಕಾರಣದಿಂದ ನೋಂದಣಿ ಮಾಡಿಸದ ನೌಕರರ ಹೆಸರನ್ನು ಉದ್ಯೋಗದಾತರು ಈ ಅಭಿಯಾನದ ಸಂದರ್ಭದಲ್ಲಿ ನೀಡಬಹುದು.

ಈ ಅಭಿಯಾನದಲ್ಲಿ ಹೆಸರು ನೋಂದಾಯಿಸಿದರೆ, 2017ರ ಜುಲೈ 1ರಿಂದ 2025ರ ಅಕ್ಟೋಬರ್ 31ರವರೆಗಿನ ಅವಧಿಗೆ ಇಪಿಎಫ್‌ಒ ನಿಧಿಗೆ ಕೊಡಬೇಕಿರುವ ನೌಕರರ ಪಾಲನ್ನು ಮನ್ನಾ ಮಾಡಲಾಗುತ್ತದೆ. ನೌಕರರ ಸಂಬಳದಲ್ಲಿ ಪಿಎಫ್ ವಂತಿಗೆ ಮೊತ್ತ ಕಡಿತ ಆಗದಿದ್ದ ಸಂದರ್ಭದಲ್ಲಿ ಮಾತ್ರ ಈ ಮನ್ನಾ ಸೌಲಭ್ಯ ಅನ್ವಯ ಆಗುತ್ತದೆ. ಆದರೆ ಉದ್ಯೋಗದಾತರು ತಮ್ಮ ಪಾಲಿನ ಮೊತ್ತವನ್ನು ಕೊಡಬೇಕಾಗುತ್ತದೆ. ಅಭಿಯಾನದ ಅಡಿಯಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳುವ ಉದ್ಯೋಗದಾತರು ದಂಡದ ರೂಪದಲ್ಲಿ ₹100 ಪಾವತಿಸಿದರೆ ಸಾಕು.

ಉತ್ಪನ್ನದ ಮೂಲ ಆಧರಿಸಿ ಶೋಧ

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಸಿದ್ಧಪಡಿಸಿರುವ ಹೊಸ ಕರಡು

ನವದೆಹಲಿ (ಪಿಟಿಐ): ಇ-ವಾಣಿಜ್ಯ ವೇದಿಕೆಗಳು ತಮ್ಮ ಮೂಲಕ ಮಾರಾಟ ಮಾಡುವ ಉತ್ಪನ್ನಗಳನ್ನು 'ಕಂಟ್ರಿ ಆಫ್ ಒರಿಜಿನ್' (ಯಾವ ದೇಶದಿಂದ ಬಂದ ಉತ್ಪನ್ನ ಎಂಬುದನ್ನು ತಿಳಿಸುವುದು) ಆಧರಿಸಿ ಹುಡುಕಲು ಗ್ರಾಹಕರಿಗೆ ಅವಕಾಶ ಕೊಡಬೇಕು ಎಂಬ ನಿಯಮವನ್ನು ಕಡ್ಡಾಯ ಮಾಡಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಇಂಥದ್ದೊಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿದೆ. ಪ್ಯಾಕ್ ಮಾಡಲಾದ ಉತ್ಪನ್ನಗಳಿಗೆ ಈ ನಿಯಮ ಅನ್ವಯವಾಗಲಿದೆ. ಡಿಜಿಟಲ್ ಮಾರುಕಟ್ಟೆಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಈ ನಿಯಮ ಜಾರಿಗೆ ತರುವ ಉದ್ದೇಶವನ್ನು ಸಚಿವಾಲಯ ಹೊಂದಿದೆ.

ಗ್ರಾಹಕರು ಆನ್‌ಲೈನ್ ಮೂಲಕ ಖರೀದಿ ಮಾಡುವಾಗ, ಉತ್ಪನ್ನವು ಯಾವ ದೇಶದಿಂದ ಬಂದಿದ್ದು ಎಂಬುದನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗಬೇಕು. ಆಗ ಅವರಿಗೆ ಖರೀದಿ ತೀರ್ಮಾನ ತೆಗೆದುಕೊಳ್ಳಲು ಹೆಚ್ಚಿನ ಸಹಾಯ ಆಗುತ್ತದೆ ಎಂಬ ಉದ್ದೇಶವು ಈ ಪ್ರಸ್ತಾವದ ಹಿಂದಿದೆ.

ಮುಖ್ಯಾಂಶಗಳು

- ಕರಡು ನಿಯಮ ಸಿದ್ಧಪಡಿಸಿರುವ ಗ್ರಾಹಕ ವ್ಯವಹಾರ ಸಚಿವಾಲಯ
- ಕರಡು ನಿಯಮಕ್ಕೆ ಸಲಹೆ ಸಲ್ಲಿಸಲು ನವೆಂಬರ್ 22ರವರೆಗೆ ಅವಕಾಶ
- ಭಾರತದಲ್ಲೇ ತಯಾರಿಸಿ ಅಭಿಯಾನಕ್ಕೆ ಪೂರಕ ಕರಡು

'ಕಾನೂನು ಮಾಪನಶಾಸ್ತ್ರ (ಪ್ಯಾಕ್ ಮಾಡಿರುವ ಸರಕುಗಳು) ತಿದ್ದುಪಡಿ ನಿಯಮಗಳು – 2025'ರ ಕರಡು, ಈಗ ಜಾರಿಯಲ್ಲಿ ಇರುವ 2011ನೇ ಇಸವಿಯ ನಿಯಮಗಳಲ್ಲಿ ಬದಲಾವಣೆ ತರುತ್ತದೆ.

'ಆಮದು ಮಾಡಿಕೊಂಡ ಉತ್ಪನ್ನಗಳನ್ನು ಮಾರಾಟ ಮಾಡುವ ಪ್ರತಿ ಇ-ವಾಣಿಜ್ಯ ವೇದಿಕೆಯೂ, ಯಾವ ದೇಶದಿಂದ ಉತ್ಪನ್ನವನ್ನು ತರಲಾಗಿದೆ ಎಂಬ ಆಧಾರದಲ್ಲಿ ಉತ್ಪನ್ನಗಳ ಶೋಧವನ್ನು ನಡೆಸಲು ಅವಕಾಶ ಮಾಡಿಕೊಡಬೇಕು' ಎಂದು ತಿದ್ದುಪಡಿಯು ಸೂಚಿಸುತ್ತದೆ.

ತಿದ್ದುಪಡಿಯ ಕರಡು ನಿಯಮಗಳನ್ನು ಸಚಿವಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಕರಡಿನ ಬಗ್ಗೆ ಸಲಹೆ ನೀಡಲು ಸಾರ್ವಜನಿಕರಿಗೆ ನವೆಂಬರ್ 22ರವರೆಗೆ ಅವಕಾಶ ಕಲ್ಪಿಸಲಾಗಿದೆ. ಈ ಕರಡು, ಭಾರತದಲ್ಲಿ ತಯಾರಾದ ಉತ್ಪನ್ನಗಳ ಹುಡುಕಾಟವನ್ನು ಸುಲಭವಾಗಿಸುವ ಮೂಲಕ 'ಭಾರತದಲ್ಲೇ ತಯಾರಿಸಿ' ಹಾಗೂ 'ವೋಕಲ್ ಫಾರ್ ಲೋಕಲ್' ಅಭಿಯಾನಕ್ಕೆ ಪೂರಕವಾಗಿ ಕೆಲಸ ಮಾಡಲಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 319 ಅಂಶ ಏರಿಕೆ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ (ಐ.ಟಿ) ಮತ್ತು ಹಣಕಾಸು ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 319 ಅಂಶ ಹೆಚ್ಚಳವಾಗಿ, 83,535ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಏರಿಕೆಯಾಗಿ, 25,574ಕ್ಕೆ ಕೊನೆಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಷೇರುಪೇಟೆಯಲ್ಲಿ ₹4,581 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹6,674 ಕೋಟಿ ಮೌಲ್ಯದ ಷೇರು ಖರೀದಿ ಮಾಡಿದ್ದಾರೆ.

'ಅಮೆರಿಕದಲ್ಲಿ ಸರ್ಕಾರದ ಮಟ್ಟದಲ್ಲಿ ಹಣಕಾಸಿನ ವಹಿವಾಟು ಸ್ಥಗಿತಗೊಂಡಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ಗಳಿಕೆ ಉತ್ತಮವಾಗಿದೆ. ಇದರಿಂದ ವಿದೇಶಿ ಹೂಡಿಕೆದಾರರು ದೇಶದ ಷೇರುಗಳ ಖರೀದಿಗೆ ಮುಂದಾಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡವು' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವೊಡಾಫೋನ್ ಐಡಿಯಾಗೆ ₹5,524 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ದೂರಸಂಪರ್ಕ ಸೇವಾ ಕಂಪನಿ ವೊಡಾಫೋನ್ ಐಡಿಯಾ ₹5,524 ಕೋಟಿ ನಿವ್ವಳ ನಷ್ಟ ದಾಖಲಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹7,175 ಕೋಟಿ ನಷ್ಟ ಆಗಿತ್ತು ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ನಷ್ಟದ ಮೊತ್ತವು ಕಡಿಮೆ ಆಗಿದೆ.

ವರಮಾನದಲ್ಲಿ ಶೇ 2.4ರಷ್ಟು ಹೆಚ್ಚಳವಾಗಿದ್ದು, ₹11,195 ಕೋಟಿ ಆಗಿದೆ. ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನ ₹10,932 ಕೋಟಿಯಷ್ಟಿತ್ತು. ಕಂಪನಿಯು ತನ್ನ ಪ್ರತಿ ಗ್ರಾಹಕನಿಂದ ತಿಂಗಳೊಂದರಲ್ಲಿ ಪಡೆಯುತ್ತಿರುವ ಸರಾಸರಿ ವರಮಾನ (ಎಆರ್‌ಪಿಯು) ₹166ರಿಂದ ₹180ಕ್ಕೆ ಏರಿಕೆಯಾಗಿದೆ. ಕಂಪನಿಯ ಒಟ್ಟು ಸಾಲ ₹2,02,951 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ನಗರ ಸಹಕಾರಿ ಬ್ಯಾಂಕ್ ಆ್ಯಪ್‌ಗೆ ಚಾಲನೆ

ನವದೆಹಲಿ (ಪಿಟಿಐ): ನಗರ ಸಹಕಾರಿ ಬ್ಯಾಂಕ್‌ಗಳಲ್ಲಿ ಡಿಜಿಟಲ್ ಪಾವತಿಯ ಬಳಕೆಯನ್ನು ಹೆಚ್ಚಿಸಲು 'ಸಹಕಾರ್ ಡಿಜಿ ಪೇ' ಮತ್ತು 'ಸಹಕಾರ್ ಡಿಜಿ ಲೋನ್' ಎಂಬ ಎರಡು ಮೊಬೈಲ್ ಆ್ಯಪ್‌ಗಳಿಗೆ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಸೋಮವಾರ ಚಾಲನೆ ನೀಡಿದ್ದಾರೆ.

SAHAKAR Digipay NUCFDC

ನಗದು ರಹಿತ ಪಾವತಿ ವಿಧಾನ ಹೆಚ್ಚುತ್ತಿದ್ದು, ಸಹಕಾರಿ ಬ್ಯಾಂಕ್‌ಗಳ ಉಳಿವಿಗೆ ಡಿಜಿಟಲ್ ಪಾವತಿ ಅಳವಡಿಕೆ ಅಗತ್ಯ. ನಗರ ಸಹಕಾರಿ ಬ್ಯಾಂಕ್‌ಗಳು (ಯುಸಿಬಿ) ಮತ್ತು ಪತ್ತಿನ ಸಹಕಾರ ಸಂಘಗಳ ವೃತ್ತಿಪರತೆ ಹೆಚ್ಚಿಸಲು ಕೇಂದ್ರ ಸರ್ಕಾರ ಶ್ರಮಿಸುತ್ತಿದೆ ಎಂದು ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ದೇಶದ ಸಹಕಾರ ವಲಯದ ಎನ್‌ಪಿಎ ಕಳೆದ ಎರಡು ವರ್ಷದ ಹಿಂದೆ ಶೇ 2.8ರಷ್ಟಿತ್ತು. ಅದು ಈಗ ಶೇ 0.6ಕ್ಕೆ ಇಳಿದಿದೆ. ಎನ್‌ಪಿಎ ಸುಧಾರಣೆ ಕಂಡಿದೆ. ಬ್ಯಾಂಕ್‌ಗಳ ಕಾರ್ಯಾಚರಣೆಯಲ್ಲಿ ಸುಧಾರಣೆ ಮತ್ತು ಆರ್ಥಿಕ ಶಿಸ್ತು ಉಂಟಾಗಿದೆ ಎಂದಿದ್ದಾರೆ.

ರಾಷ್ಟ್ರೀಯ ನಗರ ಸಹಕಾರಿ ಬ್ಯಾಂಕ್ ಹಾಗೂ ಪತ್ತಿನ ಸಂಸ್ಥೆಗಳ ಒಕ್ಕೂಟವು (ಎನ್‌ಎಫ್‌ಸಿಯುಬಿ) ಮುಂದಿನ ಐದು ವರ್ಷದೊಳಗೆ ಎರಡು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಪಟ್ಟಣದಲ್ಲಿ ಕನಿಷ್ಠ ಒಂದಾದರೂ ಹೆಚ್ಚುವರಿ ನಗರ ಸಹಕಾರಿ ಬ್ಯಾಂಕ್ ಸ್ಥಾಪಿಸುವ ಗುರಿ ಸಾಧಿಸಬೇಕು ಎಂದು ಸೂಚಿಸಿದ್ದಾರೆ.

'ಡಿಜಿ ಪೇ ಇಂದು ಅಗತ್ಯವಾಗಿದೆ. ನಗರ ಸಹಕಾರಿ ಬ್ಯಾಂಕ್‌ಗಳು ಈ ಪಾವತಿ ವಿಧಾನಕ್ಕೆ ಹೊಂದಿಕೊಳ್ಳದಿದ್ದರೆ, ಸ್ಪರ್ಧೆಯಿಂದ ಹೊರಗುಳಿಯುತ್ತವೆ. ಎರಡು ವರ್ಷದೊಳಗೆ 1,500 ಬ್ಯಾಂಕ್‌ಗಳು ಈ ಅಪ್ಲಿಕೇಷನ್ ಅನ್ನು ಅಳವಡಿಸಿಕೊಳ್ಳಬೇಕು' ಎಂದು ಹೇಳಿದ್ದಾರೆ.

ಎನ್‌ಎಫ್‌ಸಿಯುಬಿ ಗೌರವಾಧ್ಯಕ್ಷ ಮತ್ತು ಕರ್ನಾಟಕದ ಕಾನೂನು ಸಚಿವ ಎಚ್.ಕೆ.ಪಾಟೀಲ, 20 ನಗರ ಸಹಕಾರಿ ಬ್ಯಾಂಕ್‌ಗಳು ಮುಚ್ಚುವ ಹಂತಕ್ಕೆ ಬಂದಿವೆ ಎಂದು ಆತಂಕ ವ್ಯಕ್ತಪಡಿಸಿದರು. ಇವುಗಳ ಪುನರುಜ್ಜೀವನಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ಚಿನ್ನದ ದರ ₹1,300, ಬೆಳ್ಳಿ ₹2,460 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,300 ಹೆಚ್ಚಳವಾಗಿ, ₹1,25,900ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,25,300ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹2,460 ಜಿಗಿತವಾಗಿ, ₹1,55,760 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಮುಂದಿನ ತಿಂಗಳು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದ ಕಡೆ ಮುಖ ಮಾಡಿದ್ದರಿಂದ ಹಳದಿ ಲೋಹದ ದರ ಏರಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ		ಕೆಂಪುಗೋಟು	18399-36899	ತಟ್ಟಿಬೆಟ್ಟೆ	32919-41399
ಆಪಿ	56429-56892	ರಾಶಿ	36099-61299	**ಶಿರಸಿ**	
ಬೆಟ್ಟೆ	34619-35059	ಸಿಪ್ಪೆಗೋಟು	15289-23189	ಬೆಟ್ಟೆ	49989-55558
ಕೆಂಪುಗೋಟು	30609-31010	**ಶಿವಮೊಗ್ಗ**		ಬಿಳಿಗೋಟು	28199-38699
ರಾಶಿ	55939-56369	ಬೆಟ್ಟೆ	56210-66259	ಚಾಲಿ	44099-50099
ಕುಮಟಾ		ಗೊರಬಲು	19009-39511	ಕೆಂಪುಗೋಟು	26199-41699
ಚಾಲಿ	40099-48199	ಹೊಸತು	45009-58581	ರಾಶಿ	55011-59499
ಚಿಪ್ಪು	29089-34869	ರಾಶಿ	48009-60851	**ಯಲ್ಲಾಪುರ**	
ಕೋಕ	10189-31089	ಸರಕು	61159-83840	ಬಿಳಿಗೋಟು	16009-38001
ಫ್ಯಾಕ್ಟರಿ	7999-23129	**ಸಿದ್ದಾಪುರ**		ಚಾಲಿ	38869-49009
ಹಳೆಚಾಲಿ	41189-46699	ಬಿಳಿಗೋಟು	26799-36109	ಕೋಕ	18119-29612
ಸಾಗರ		ಚಾಲಿ	40599-48599	ಕೆಂಪುಗೋಟು	15899-36699
ಬಿಳಿಗೋಟು	22099-36541	ಕೋಕ	21999-35899	ರಾಶಿ	50059-59899
ಚಾಲಿ	33333-42501	ಕೆಂಪುಗೋಟು	25319-30999	ತಟ್ಟಿಬೆಟ್ಟೆ	38009-49621
ಕೋಕ	10499-34599	ರಾಶಿ	49899-57899		

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

4ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ ಎಸ್. ರಾಮಚಂದ್ರಪ್ಪ
ವ್ಯವಸ್ಥಾಪಕರು, ಆರ್.ಆರ್. ಫ್ಯಾಬ್ ಕನ್‌ಸ್ಟ್ರಕ್ಷನ್ಸ್ ಮತ್ತು ಸಂಪ್ರಸಿದ್ಧಿ ಇನ್‌ಫ್ರಾಟೆಕ್
"ನೀವು ನಮ್ಮನ್ನಗಲಿ ಇಂದಿಗೆ 4 ವರ್ಷವಾದರೂ ನಿಮ್ಮ ವಿಚಾರಧಾರೆ, ಅಗಾಧ ಪ್ರತಿಭೆ, ಜೀವನ ಮೌಲ್ಯ ಆದರ್ಶಮಯ ಬದುಕೇ ನಮಗೆ ಸ್ಫೂರ್ತಿ"
ನಿಮ್ಮ ಸವಿನೆನಪಿನೊಂದಿಗೆ–
ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗ
ಮೊಬೈಲ್: 98452 90541

ಇಂದಿನಿಂದ ಎಮ್ವೀ ಕಂಪನಿಯ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಮ್ವೀ ಫೋಟೊವೋಲ್ಟಾಯಿಕ್ ಕಂಪನಿಯು ಐಪಿಒ ಮೂಲಕ ಷೇರು ಮಾರಾಟ ಮಾಡಿ, ಬಂಡವಾಳ ಸಂಗ್ರಹಿಸಲು ಮುಂದಾಗಿದ್ದು, ಷೇರುಗಳಿಗೆ ಬಿಡ್ ಸಲ್ಲಿಸಲು ನವೆಂಬರ್ 11ರಿಂದ ಅವಕಾಶ ಇರಲಿದೆ.

ಬಿಡ್ ಸಲ್ಲಿಸಲು ನವೆಂಬರ್ 13 ಕಡೆಯ ದಿನವಾಗಿದೆ. ಸಣ್ಣ ಹೂಡಿಕೆದಾರರು ಕನಿಷ್ಠ 69 ಷೇರುಗಳಿಗೆ ಬಿಡ್ ಸಲ್ಲಿಸಬೇಕಾಗುತ್ತದೆ. ಷೇರು ಮಾರಾಟದ ಮೂಲಕ ಕಂಪನಿಯು ₹2,143 ಕೋಟಿ ಸಂಗ್ರಹಿಸುವ ಗುರಿಯನ್ನು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಕಂಪನಿಯು ಸೋಲಾರ್ ಮಾಡ್ಯೂಲ್ ಹಾಗೂ ಸೌರಕೋಶಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹28250-28250
ತಿಪಟೂರು	₹27000-28506

ಹಾಲು ಬಳಸದೆಯೇ ತುಪ್ಪ ತಯಾರಿಕೆ

ಒಂದನೇ ಪುಟದಿಂದ...

ಆರೋಪಿಗಳ ಪೈಕಿ ಒಬ್ಬರ ಬಂಧನ ಸಂಬಂಧ ಎಸ್‌ಐಟಿಯು ಆಂಧ್ರ ಪ್ರದೇಶದ ಸ್ಥಳೀಯ ನ್ಯಾಯಾಲಯಕ್ಕೆ ಸಲ್ಲಿಸಿದ ರಿಮ್ಯಾಂಡ್ ವರದಿಯಲ್ಲಿ ಈ ವಿವರಗಳು ಬಹಿರಂಗಗೊಂಡಿವೆ.

ಪೋಮಿಲ್ ಮತ್ತು ವಿಪಿನ್ ಜೈನ್ ಅವರು ಈ ಕಲಬೆರಕೆ ತುಪ್ಪವನ್ನು ತಿರುಮಲ ತಿರುಪತಿ ದೇವಸ್ಥಾನಕ್ಕೆ (ಟಿಟಿಡಿ) ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೆಟ್ ಲಿಮಿಟೆಡ್ ಮತ್ತು ಶ್ರೀಕಾಳಹಸ್ತಿ ಬಳಿಯ ಶ್ರೀ ವೈಷ್ಣವಿ ಡೇರಿ ಸ್ಪೆಷಾಲಿಟೀಸ್ ಪ್ರೈವೆಟ್ ಲಿಮಿಟೆಡ್, ಪುಣೆ ಬಳಿಯ ಮಾಲಗಂಗಾ ಮಿಲ್ಕ್ ಆ್ಯಂಡ್ ಆಗ್ರೋ ಪ್ರಾಡಕ್ಟ್ಸ್ ಪ್ರೈವೆಟ್ ಲಿಮಿಟೆಡ್ ಮತ್ತು ತಮಿಳುನಾಡಿನ ದಿಂಡಿಗಲ್‌ನಲ್ಲಿರುವ ಎಆರ್ ಡೇರಿ ಫುಡ್ಸ್ ಪ್ರೈವೆಟ್ ಲಿಮಿಟೆಡ್ ಸೇರಿದಂತೆ ಇತರ ಕಂಪನಿಗಳ ಮೂಲಕ ಪೂರೈಸಿದ್ದರು.

ತಿರುಮಲದಲ್ಲಿ ವೆಂಕಟೇಶ್ವರ ಸ್ವಾಮಿಗೆ ಅರ್ಪಿಸುವ ಪ್ರಸಾದವನ್ನು ತಯಾರಿಸಲು ಕಲಬೆರಕೆ ತುಪ್ಪವನ್ನು ಬಳಸಲಾಗಿತ್ತು. 2019-2024ರ ನಡುವೆ ಈ ಸಂಸ್ಥೆಗಳು ಸುಮಾರು ₹240 ಕೋಟಿ ಮೌಲ್ಯದ ಸುಮಾರು 60.37 ಲಕ್ಷ ಕೆ.ಜಿ ತುಪ್ಪವನ್ನು ಪೂರೈಸಿವೆ.

ತಮಿಳುನಾಡು ಮೂಲದ ಎಆರ್ ಡೇರಿ ಪ್ರೈವೆಟ್ ಲಿಮಿಟೆಡ್ ಕಂಪನಿಯು ಜೈನ್ ಅವರ ಡೇರಿಯಿಂದ ತುಪ್ಪವನ್ನು ಖರೀದಿಸಿ ಟಿಟಿಡಿಗೆ ಪ್ರತಿ ಕೆ.ಜಿ.ಗೆ ₹2.75ರಿಂದ ₹3ರ ಕಮಿಷನ್ ಪಡೆದು ಪೂರೈಸಿತ್ತು ಎಂದು ಎಸ್‌ಐಟಿ ಸಲ್ಲಿಸಿದ್ದ ಹಿಂದಿನ ರಿಮ್ಯಾಂಡ್ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ತುಪ್ಪ ಕಲಬೆರಕೆ ವರದಿಗಳ ಬಗ್ಗೆ ಟಿಟಿಡಿ ಯಾವುದೇ ಕ್ರಮ ಕೈಗೊಂಡಿಲ್ಲ.

ಮಾಂಸಾಹಾರ ಸೇವನೆ: ಇಬ್ಬರು ನೌಕರರು ವಜಾ

ತಿರುಪತಿ (ಪಿಟಿಐ): ಅಲಿಪಿರಿಯ ಬಳಿ ಮಾಂಸ ತಿಂದ ಆರೋಪದಡಿ ಇಬ್ಬರು ಹೊರಗುತ್ತಿಗೆ ನೌಕರರನ್ನು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ವಜಾಗೊಳಿಸಿದೆ.

ಘಟನೆಗೆ ಸಂಬಂಧಿಸಿ ತಿರುಮಲ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ರಾಮಸ್ವಾಮಿ ಮತ್ತು ಸರಸಮ್ಮ ಎಂಬವರನ್ನು ಕೆಲಸದಿಂದ ವಜಾಗೊಳಿಸಲಾಗಿದೆ' ಎಂದು ಟಿಟಿಡಿಯ ಅಧಿಕೃತ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, ಫೆಡರಲ್ ಬ್ಯಾಂಕ್ ನಿಂದ 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9606385001.

ಕಂಪನಿಗಳಿಗೆ ಬೇಕಾಗಿದ್ದಾರೆ 7th, PUC, Degree, ITI, ಡಿಪ್ಲೋಮೋಆದವರು ಯುವಕ ಯುವತಿಯರಿಗೆ ಸಂಬಳ 18,000 -45,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿ. ಬೆಂಗಳೂರು

ವೀಸಾ: ಅಮೆರಿಕಕ್ಕೆ ಚೀನಾ ಸಡ್ಡು

ಹಾಂಗ್‌ಕಾಂಗ್ (ಎಪಿ): ಉದ್ಯೋಗ ವಲಯದಲ್ಲಿ ಅಮೆರಿಕಕ್ಕೆ ಸಡ್ಡು ಹೊಡೆಯುವ ಉದ್ದೇಶದಿಂದ ಚೀನಾವು ಜಾರಿಗೆ ತಂದಿರುವ 'ಕೆ-ವೀಸಾ' ವಿದೇಶಗಳಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರತಿಭೆಗಳನ್ನು ಸೆಳೆಯಲು ಪ್ರಯತ್ನಿಸುತ್ತಿದೆ.

ಈ ವ್ಯವಸ್ಥೆಯನ್ನು ಚೀನಾ ಕಳೆದ ತಿಂಗಳು ಜಾರಿಗೊಳಿಸಿದ್ದು, ಈ ಮೂಲಕ ವಿದೇಶಿ ಪ್ರತಿಭೆ, ತಂತ್ರಜ್ಞಾನಗಳ ನಾಗಲೋಟದಲ್ಲಿ ಅಮೆರಿಕವನ್ನು ಹಿಂದಿಕ್ಕುವ ಯೋಜನೆ ರೂಪಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಲಸೆ ನೀತಿಗಳನ್ನು ಬಿಗಿಗೊಳಿಸಿರುವುದರಿಂದ 'ಎಚ್-1ಬಿ' ವೀಸಾಕ್ಕೆ ಸಂಬಂಧಿಸಿ ಅಸ್ಥಿರತೆ ಉಂಟಾಗಿರುವ ಸಂದರ್ಭದಲ್ಲಿ ಚೀನಾವು ಹೊಸ ವೀಸಾದ ದಾಳ ಉರುಳಿಸಿರುವುದು ಮಹತ್ವ ಪಡೆದುಕೊಂಡಿದೆ.

'ಕೆ-ವೀಸಾವು ಅಮೆರಿಕದ ಎಚ್-1ಬಿ ವೀಸಾಗೆ ಸಮಾನವಾಗಿದೆ' ಎಂದು ಭಾರತ ಮತ್ತು ಅಮೆರಿಕದಲ್ಲಿ ಕೆಲಸ ಮಾಡಿರುವ ತಜ್ಞ ಐಟಿ ಉದ್ಯೋಗಿ ವೈಷ್ಣವಿ ಶ್ರೀನಿವಾಸಗೋಪಾಲನ್ ಅವರು ಅಭಿಪ್ರಾಯಪಟ್ಟಿದ್ದಾರೆ. ಅವರು ಚೀನಾದಲ್ಲಿ ಕೆಲಸ ಮಾಡಲು ಉತ್ಸುಕರಾಗಿದ್ದಾರೆ. ವಿದೇಶಿಗರಿಗೆ ನೀಡಲಾಗುತ್ತಿರುವ ಆರ್-ವೀಸಾ ಸೇರಿದಂತೆ ಚೀನಾದಲ್ಲಿ ಪ್ರಸ್ತುತ ಇರುವ ವೀಸಾ ವ್ಯವಸ್ಥೆಗಳಿಗೆ ಜೊತೆಗೆ ಕೆ-ವೀಸಾ ಜಾರಿಗೆ ತರಲಾಗಿದೆ.

ಕಲಬೆರಕೆ ಪೆಟ್ರೋಲ್, ನೀರಿನಲ್ಲಿ ಬೆರೆತ ತೈಲ ಪತ್ತೆಗೆ ಐಐಟಿ ಸಂಶೋಧನೆ

ನವದೆಹಲಿ (ಪಿಟಿಐ): ಕಲಬೆರಕೆ ಪೆಟ್ರೋಲ್ ಅಥವಾ ಸೀಮೆಎಣ್ಣೆ ಮಿಶ್ರಣ ಮತ್ತು ನೀರಿನಲ್ಲಿ ಸೇರಿದ ತೈಲದ ಅಂಶವನ್ನು ಪತ್ತೆ ಮಾಡಬಲ್ಲ ಹೊಸ ವಸ್ತುವೊಂದನ್ನು ಗುವಾಹಟಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಟಿ) ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವಸ್ತುವು ನೀರಿನಲ್ಲಿರುವ ತೈಲದ ಅಂಶ ಹೀರಿಕೊಳ್ಳುವ ಮತ್ತು ಘನೀಕರಿಸುವ ಸಾಮರ್ಥ್ಯವನ್ನು ಹೊಂದಿದೆ. ಸಂಶೋಧನೆಯ ಅಂಶಗಳನ್ನು ಪ್ರತಿಷ್ಠಿತ 'ಕೆಮಿಕಲ್ ಎಂಜಿನಿಯರಿಂಗ್' ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಗೋಪಾಲ್ ದಾಸ್ ಅವರು ಈ ಬಗ್ಗೆ ಮಾಹಿತಿ ನೀಡಿದ್ದಾರೆ.

'ತೈಲ ಟ್ಯಾಂಕರ್‌ಗಳ ಸೋರಿಕೆ ಅಂಕಿ-ಅಂಶ–2024ರ ಪ್ರಕಾರ ಜಾಗತಿಕವಾಗಿ ಸುಮಾರು 10,000 ಟನ್‌ನಷ್ಟು ತೈಲವು ಸಮುದ್ರ ಮತ್ತು ಸಾಗರವನ್ನು ಸೇರುತ್ತಿದೆ. ಇದು ಜಾಗತಿಕವಾಗಿ ನೈಸರ್ಗಿಕ ವಿಕೋಪವಾಗಿ ಪರಿಣಮಿಸುತ್ತಿದೆ. ಸಾಗರ ಜೀವಿಗಳು, ಕರಾವಳಿ ಪ್ರದೇಶ ಮತ್ತು ಇವುಗಳನ್ನು ಅವಲಂಬಿಸಿರುವ ಜನಜೀವನದ ಮೇಲೂ ಹಾನಿ ಉಂಟು ಮಾಡುತ್ತಿದೆ' ಎಂದು ಹೇಳಿದ್ದಾರೆ.

'ಸದ್ಯ ಅನುಸರಿಸುತ್ತಿರುವ ರಾಸಾಯನಿಕ ವಿಧಾನ ಅಥವಾ ತೈಲವನ್ನು ಉರಿಸುವ ವಿಧಾನಗಳು ಎರಡನೇ ಹಂತದ ಮಾಲಿನ್ಯ ಉಂಟುಮಾಡುತ್ತವೆ. ಸಂಸ್ಥೆಯು ಅಭಿವೃದ್ಧಿಪಡಿಸಿರುವ 'ಫೇಸ್ ಸೆಲೆಕ್ಟೀವ್ ಆರ್ಗೋಜಿಲೇಟರ್ (ಪಿಎಸ್‌ಒಜಿ)' ಅಣು (ಜೆಲ್ ಮಾದರಿಯ ಸಣ್ಣ ಕಣ) ಸುರಕ್ಷಿತ ವಸ್ತುವಾಗಿದ್ದು, ನೀರಿನಲ್ಲಿ ಸೇರಿದ ತೈಲವನ್ನು ಘನೀಕರಿಸುತ್ತದೆ' ಎಂದು ತಿಳಿಸಿದ್ದಾರೆ.

ಭಾರತದಲ್ಲಿ ಪೆಟ್ರೋಲ್‌ಗೆ ಸೀಮೆಎಣ್ಣೆ ಮಿಶ್ರಣ ಮಾಡಿ ಕೆಲವರು ಬಳಸುತ್ತಿದ್ದಾರೆ. ಇದು ಸ್ಫೋಟದಂತಹ ಅನಾಹುತಕ್ಕೂ ಕಾರಣವಾಗುತ್ತಿದೆ. ತೈಲ ಕಲಬೆರಕೆ ಪತ್ತೆ ಹಚ್ಚಲು ಜಿಲೇಟರ್ ಮಾಲೆಕ್ಯೂಲ್ (ಜೆಲ್ ಮಾದರಿಯ ಸಣ್ಣ ಕಣ) ನೆರವಾಗಲಿದೆ. ಇದರ ದಕ್ಷತೆ ಇನ್ನಷ್ಟು ಹೆಚ್ಚಿಸುವ ಯತ್ನ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಅಮೆರಿಕದಲ್ಲಿ ಭಾರತೀಯ ವಿದ್ಯಾರ್ಥಿನಿ ಸಾವು

ನ್ಯೂಯಾರ್ಕ್ (ಪಿಟಿಐ): ಅಮೆರಿಕದ 'ಟೆಕ್ಸಾಸ್ ಎ ಆ್ಯಂಡ್ ಎಂ ಯೂನಿವರ್ಸಿಟಿ ಕಾರ್ಪಸ್ ಕ್ರಿಸ್ಟಿ'ಯಿಂದ ಇತ್ತೀಚೆಗೆ ಪದವಿ ಪಡೆದು ಉದ್ಯೋಗ ಹುಡುಕುತ್ತಿದ್ದ, ಆಂಧ್ರಪ್ರದೇಶದ ರಾಜ್ಯಲಕ್ಷ್ಮಿ ಯರ್ಲಗಡ್ಡ ಅಲಿಯಾಸ್ ರಾಜಿ (23) ಅವರು ತೀವ್ರ ಕೆಮ್ಮು ಮತ್ತು ಎದೆನೋವಿನಿಂದ ನ.7ರಂದು ಮೃತಪಟ್ಟಿದ್ದಾರೆ.

'ಆಂಧ್ರಪ್ರದೇಶದ ಬಾಪಟ್ಲಾ ಜಿಲ್ಲೆಯ ಕರ್ಮೆಚೇಡು ಗ್ರಾಮದ ರಾಜ್ಯಲಕ್ಷ್ಮಿ ತಂದೆ ಬಡ ರೈತ. ಆಕೆ ತನ್ನ ಕುಟುಂಬಕ್ಕೆ ಉಜ್ವಲ ಭವಿಷ್ಯ ಕಲ್ಪಿಸುವ ಭರವಸೆಯೊಂದಿಗೆ ಅಮೆರಿಕಕ್ಕೆ ಬಂದಿದ್ದಳು. ವೃತ್ತಿಜೀವನ ಪ್ರಾರಂಭಿಸಲು ಉದ್ಯೋಗ ಹುಡುಕುತ್ತಿದ್ದಳು' ಎಂದು ಆಕೆಯ ಸೋದರ ಸಂಬಂಧಿ ಚೈತನ್ಯ ವೈವಿಕೆ ತಿಳಿಸಿದ್ದಾರೆ.

ಚೈತನ್ಯ ಅವರು ಟೆಕ್ಸಾಸ್‌ನ ಡೆಂಟನ್ ನಗರದಲ್ಲಿ 'ಗೋ ಫಂಡ್ ಮಿ' ಅಭಿಯಾನ ಆರಂಭಿಸಿದ್ದಾರೆ. ರಾಜ್ಯಲಕ್ಷ್ಮಿ ಅವರ ಅಂತ್ಯಕ್ರಿಯೆ ವೆಚ್ಚ, ಶೈಕ್ಷಣಿಕ ಸಾಲಗಳು ಮತ್ತು ಅವರ ಶವವನ್ನು ಭಾರತಕ್ಕೆ ತರಲು ಮತ್ತು ಅವರ ಕುಟುಂಬಕ್ಕೆ ಆರ್ಥಿಕ ಸಹಾಯಕ್ಕಾಗಿ 1.25 ಲಕ್ಷ ಡಾಲರ್ (₹1.10 ಕೋಟಿ) ಸಂಗ್ರಹಿಸುವುದು ಈ ಅಭಿಯಾನದ ಗುರಿಯಾಗಿದೆ.

ದತ್ತಾಂಶ ಕೇಂದ್ರ: ಮುಂಬೈ ಅಗ್ಗ

ನವದೆಹಲಿ (ಪಿಟಿಐ): ದತ್ತಾಂಶ ಕೇಂದ್ರಗಳ ಮೇಲಿನ ಹೂಡಿಕೆಗೆ ಭಾರತವು ಅತ್ಯಂತ ಆಕರ್ಷಕವಾಗಿ ಕಾಣುತ್ತಿದೆ ಎಂದು ವರದಿಯೊಂದು ಹೇಳಿದೆ.

ದತ್ತಾಂಶ ಕೇಂದ್ರಗಳ ನಿರ್ಮಾಣಕ್ಕೆ ಈಗ ಮುಂಬೈ ಜಾಗತಿಕ ಮಟ್ಟದಲ್ಲಿ ಎರಡನೆಯ ಅತ್ಯಂತ ಕಡಿಮೆ ಖರ್ಚಿನ ನಗರವಾಗಿ ಪರಿಗಣಿತವಾಗಿದೆ ಎಂದು 'ಟರ್ನರ್ ಆ್ಯಂಡ್ ಟೌನ್‌ಸೆಂಡ್ ದತ್ತಾಂಶ ಕೇಂದ್ರ ನಿರ್ಮಾಣ ವೆಚ್ಚ ಸೂಚ್ಯಂಕ' ಹೇಳಿದೆ.

ಮುಂಬೈನಲ್ಲಿ ದತ್ತಾಂಶ ಕೇಂದ್ರ ನಿರ್ಮಾಣ ಮಾಡುವುದರ ವೆಚ್ಚವು ಪ್ರತಿ ವಾಟ್‌ಗೆ ಅಂದಾಜು ₹589 ಮಾತ್ರ.

ಕಡಿಮೆ ವೆಚ್ಚದಲ್ಲಿ ದತ್ತಾಂಶ ಕೇಂದ್ರವನ್ನು ಮುಂಬೈನಲ್ಲಿ ನಿರ್ಮಿಸಲು ಸಾಧ್ಯವಿರುವುದು, ಭಾರತಕ್ಕೆ ಈ ವಲಯದಲ್ಲಿ ಹೂಡಿಕೆ ಆಕರ್ಷಿಸಲು ಹೆಚ್ಚಿನ ತಾಕತ್ತನ್ನು ನೀಡಲಿದೆ. ಟೋಕಿಯೊ, ಸಿಂಗಪುರ, ಜುರಿಕ್‌ನಂತಹ ನಗರಗಳಲ್ಲಿ ದತ್ತಾಂಶ ಕೇಂದ್ರ ನಿರ್ಮಿಸಲು ಬೇಕಿರುವ ಮೊತ್ತವು ಮುಂಬೈಗೆ ಹೋಲಿಸಿದರೆ ದುಪ್ಪಟ್ಟಾಗುತ್ತದೆ ಎಂದು ವರದಿ ಹೇಳಿದೆ.

ಜಗತ್ತಿನಲ್ಲಿ ಸೃಷ್ಟಿಯಾಗುವ ದತ್ತಾಂಶದಲ್ಲಿ ಶೇಕಡ 20ರಷ್ಟು ಪಾಲು ಭಾರತದ್ದು. ಆದರೆ ಜಾಗತಿಕ ದತ್ತಾಂಶ ಕೇಂದ್ರ ಸಾಮರ್ಥ್ಯದಲ್ಲಿ ಭಾರತದ ಪಾಲು ಶೇ 3ರಷ್ಟು ಮಾತ್ರ. ಭಾರತದಲ್ಲಿ ದತ್ತಾಂಶ ಕೇಂದ್ರಗಳಿಗೆ ವಿಸ್ತರಣೆ ಕಾಣಲು ಭಾರಿ ಅವಕಾಶ ಇದೆ ಎಂಬುದನ್ನು ಇದು ಹೇಳುತ್ತಿದೆ.

ಮತ ಪಟ್ಟಿ ಪರಿಷ್ಕರಣೆ

ಎಎಫ್‌ಪಿ ಚಿತ್ರ

ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಭಾಗವಾಗಿ ಬೂತ್ ಮಟ್ಟದ ಅಧಿಕಾರಿಗಳು ಮೀನುಗಾರರಿಗೆ ಅಗತ್ಯ ನಮೂನೆಗಳನ್ನು ನೀಡಿದರು

ಸಂಕ್ಷಿಪ್ತ ಸುದ್ದಿ

ಸಲ್ಮಾನ್ ರಶ್ದಿಗೆ 'ಡೇಟನ್ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ

ಡೇಟನ್ (ಎಪಿ): ಓಹಿಯೋದಲ್ಲಿ ನಡೆದ 'ಡೇಟನ್ ಸಾಹಿತ್ಯ ಶಾಂತಿ ಪ್ರಶಸ್ತಿ ಸಮಾರಂಭ'ದಲ್ಲಿ ಭಾರತೀಯ ಸಂಜಾತ, ಲೇಖಕ ಸಲ್ಮಾನ್ ರಶ್ದಿ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೂರು ವರ್ಷಗಳ ಹಿಂದೆ ನ್ಯೂಯಾರ್ಕ್ ನಗರದಲ್ಲಿ ನಡೆದಿದ್ದ ಉಪನ್ಯಾಸ ಕಾರ್ಯಕ್ರಮದ ವೇದಿಕೆಯಲ್ಲಿ ರಶ್ದಿ ಅವರ ಮೇಲೆ ವ್ಯಕ್ತಿಯೊಬ್ಬ ಚಾಕುವಿನಿಂದ ದಾಳಿ ನಡೆಸಿದ್ದ. ಈ ವೇಳೆ ರಶ್ದಿ ಬಲಗಣ್ಣನ್ನು ಕಳೆದುಕೊಂಡಿದ್ದರು. ಈ ಘಟನೆ ಬಳಿಕ ಅವರು ಕಾದಂಬರಿಯನ್ನು ಪ್ರಕಟಿಸಿದ ನಂತರ 'ಜೀವಮಾನ ಸಾಧನೆ ಪ್ರಶಸ್ತಿ'ಯನ್ನು ಸ್ವೀಕರಿಸಿದ್ದಾರೆ.

ಅಮೆರಿಕ ಚುನಾವಣೆ ಅಕ್ರಮಕ್ಕೆ ಯತ್ನ: ಆರೋಪಿಗಳಿಗೆ ಕ್ಷಮಾಪಣೆ

ವಾಷಿಂಗ್ಟನ್ (ಎಪಿ): 2020ರ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವನ್ನು ತಿರುಚಲು ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಆಪ್ತ ವಕೀಲ, ಸಿಬ್ಬಂದಿ ವಿಭಾಗದ ಮಾಜಿ ಮುಖ್ಯಸ್ಥ ಮತ್ತು ಇತರ ಆರೋಪಿಗಳಿಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕ್ಷಮಾದಾನ ನೀಡಿದ್ದಾರೆ. ವಕೀಲ ರೂಡಿ ಗಿಲಿಯಾನಿ, ಅಧಿಕಾರಿ ಮಾರ್ಕ್ ಮೀಡೋಸ್ ಮತ್ತು ಇತರ ಆರೋಪಿಗಳಿಗೆ ಸಂಪೂರ್ಣ ಮತ್ತು ಷರತ್ತುಬದ್ಧ ಕ್ಷಮಾದಾನ ನೀಡಿರುವ ಆದೇಶದ ಪ್ರತಿಯನ್ನು ಅಮೆರಿಕದ ಕ್ಷಮಾದಾನ ಅಟಾರ್ನಿ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ

ಐವರು ಭಾರತೀಯರ ಅಪಹರಣ

ಬಮಕೊ (ಪಿಟಿಐ): ಪಶ್ಚಿಮ ಆಫ್ರಿಕಾದ ಮಾಲಿ ದೇಶದಲ್ಲಿ ಐದು ಮಂದಿ ಭಾರತೀಯರನ್ನು ಅಪಹರಿಸಿರುವ ಘಟನೆ ನಡೆದಿದೆ ಎಂದು ಭಾರತೀಯ ರಾಯಭಾರ ಕಚೇರಿ ಮಾಹಿತಿ ನೀಡಿದೆ.

ನವೆಂಬರ್ 6ರಂದೇ ಈ ಕೃತ್ಯ ನಡೆದಿದ್ದು, ಅಪಹರಣಕ್ಕೀಡಾದವರನ್ನು ಸುರಕ್ಷಿತವಾಗಿ ಮರಳಿ ಕರೆತರುವ ಬಗ್ಗೆ ಸಂಬಂಧ ಪಟ್ಟ ಆಡಳಿತಾಧಿಕಾರಿಗಳ ಜತೆಗೆ ಮಾತುಕತೆ ನಡೆಸಲಾಗುತ್ತಿದೆ ಎಂದೂ ರಾಯಭಾರ ಕಚೇರಿ ಭಾನುವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಮಾಲಿ ಸರ್ಕಾರದ ಮೇಲಿನ ಜಿದ್ದಿಗೆ ಅಲ್ಲಿನ ಬಂಡುಕೋರರು ಹಾಗೂ ಭಯೋತ್ಪಾದಕರು ಇಂಧನ ಪೂರೈಕೆಗೆ ತಡೆ ಒಡ್ಡಿದ್ದಾರೆ. ಇದು ಮಾಲಿಯಲ್ಲಿ ಆರ್ಥಿಕ, ಸಾಮಾಜಿಕ ಬಿಕ್ಕಟ್ಟಿಗೆ ಕಾರಣವಾಗಿರುವ ನಡುವೆಯೇ ಅಪಹರಣದ ಈ ಘಟನೆ ನಡೆದಿದೆ.

ಹನಿಮಾಧೂ ವಿಮಾನ ನಿಲ್ದಾಣ ಉದ್ಘಾಟಿಸಿದ ಮುಯಿಜು

ಮಾಲೆ (ಪಿಟಿಐ): ಭಾರತ ಸರ್ಕಾರದ ನೆರವಿನಿಂದ ನಿರ್ಮಿಸಲಾದ ಹನಿಮಾಧೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಾಲ್ದೀವ್ಸ್ ಅಧ್ಯಕ್ಷ ಮೊಹಮದ್ ಮುಯಿಜು ಅವರು ಭಾನುವಾರ ಉದ್ಘಾಟಿಸಿದ್ದಾರೆ. ಈ ಯೋಜನೆಯು ದೇಶದ ಉತ್ತರ ಭಾಗದ ಪ್ರಗತಿಯ ದ್ವಾರ ಎಂದು ಅವರು ಕರೆದಿದ್ದಾರೆ.

'ಇದು ಕೇವಲ ವಿಮಾನ ನಿಲ್ದಾಣವಲ್ಲ, ಆರ್ಥಿಕ ಪರಿವರ್ತನೆಯ ಸಂಕೇತವಾಗಿದೆ. ಇದರಿಂದಾಗಿ ಪ್ರವಾಸೋದ್ಯಮ, ಕೃಷಿ, ಮೀನುಗಾರಿಕೆ ಮತ್ತು ಆರ್ಥಿಕತೆಯಲ್ಲಿ ಮತ್ತಷ್ಟು ಪ್ರಗತಿಯಾಗಲಿದೆ. ಉತ್ತರ ಮಾಲ್ದೀವ್ಸ್‌ನ ಸಾಮಾಜಿಕ ಅಭಿವೃದ್ಧಿ ಇದರಿಂದ ಸಾಧ್ಯವಾಗಲಿದೆ' ಎಂದು ಮುಯಿಜು ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಟೀಕೆ

ದೆಹಲಿ ವಾಯುಮಾಲಿನ್ಯ: ಮೀಮ್‌ಗಳದ್ದೇ ಸದ್ದು

ನವದೆಹಲಿ (ಪಿಟಿಐ): ದೆಹಲಿಯ ವಾಯುಮಾಲಿನ್ಯದ ವಿಚಾರವು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿರುವುದು ಮಾತ್ರವಲ್ಲದೆ, ಸಾಮಾಜಿಕ ಮಾಧ್ಯಮದಲ್ಲಿ 'ಮೀಮ್'ಗಳ ಮೂಲಕವೂ ಸದ್ದು ಮಾಡುತ್ತಿದೆ.

'ವೆಡ್ಡಿಂಗ್ ವಿದ್ ಆಕ್ಸಿಜನ್ ಮಾಸ್ಕ್' ಎಂಬ ವಿಡಿಯೊ ವೈರಲ್ ಆಗಿದೆ. ವಾಯುಮಾಲಿನ್ಯಯುಕ್ತ ನಗರದಲ್ಲಿ ಸಂಗಾತಿಗಳಿಬ್ಬರು ಮಾಸ್ಕ್ ಧರಿಸಿಕೊಂಡು ಪ್ರೇಮಿಸುವ ಪರಿಸ್ಥಿತಿ ಇದೆ ಎಂದು ವ್ಯಂಗ್ಯವಾಗಿ ವಿಡಿಯೊ ಮಾಡಲಾಗಿದೆ.

ಮದುಮಗನು ಮದುಮಗಳ ಮೇಲೆ ಹೂವು ಸುರಿಯುವ ಬದಲಾಗಿ, ಔಷಧದ ಲಕೋಟೆಗಳನ್ನು ಸುರಿಯುವ ದೃಶ್ಯವನ್ನು ಸೃಷ್ಟಿಸಲಾಗಿದೆ. ಭವ್ಯ ಅರಮನೆ ಅಥವಾ ಉದ್ಯಾನದ ಬದಲಿಗೆ ಆಸ್ಪತ್ರೆಯ ಒಳಗೆ ಆಕ್ಸಿಜನ್ ಸಿಲಿಂಡರ್ ಮತ್ತು ಇತರ ಉಪಕರಣಗಳ ಮಧ್ಯೆ ಫೋಟೊ ತೆಗೆಸಿಕೊಳ್ಳುವ ಮತ್ತು ಕೊನೆಯಲ್ಲಿ ಕೈಯಲ್ಲಿ ಮಾಸ್ಕ್ ಅನ್ನು ತೋರಿಸುವ ಮೂಲಕ ತಾವು ದೆಹಲಿ ನಾಗರಿಕರು ಎಂದು ತಿಳಿಸುವ ರೀತಿಯಲ್ಲಿ ವ್ಯಂಗ್ಯ ಮಾಡಲಾಗಿದೆ.

ದೆಹಲಿಯ ಗಾಳಿಯಲ್ಲಿ 10 ನಿಮಿಷ ಹಾರಾಡಿದ ಬಳಿಕ 'ಸೂಪರ್‌ಮ್ಯಾನ್' ಕೂಡ ಆಸ್ಪತ್ರೆಗೆ ದಾಖಲಾಗಿ ಮಾಸ್ಕ್ ಧರಿಸಬೇಕಾಗುತ್ತದೆ ಎಂಬ ಮೀಮ್ ಒಂದು 'ಎಕ್ಸ್'ನಲ್ಲಿದೆ.

'ದೆಹಲಿಗೆ ಇಂದ್ರಪ್ರಸ್ಥ ಎಂದು ಮರುನಾಮಕರಣ ಮಾಡುವ ಪ್ರಯತ್ನವಾಗುತ್ತಿದೆ. ಮಾಲಿನ್ಯ ಮತ್ತು ಅಪರಾಧ ವ್ಯವಸ್ಥೆಯು 14ನೇ ಶತಮಾನದತ್ತ ಮರಳುತ್ತಿದೆ' ಎಂದು ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಟೀಕಿಸಿದ್ದಾರೆ.

ರಾಜಕೀಯ ಮತ್ತು ಮಾಲಿನ್ಯವನ್ನು ಸಮೀಕರಿಸಿಕೊಂಡು ಟೀಕಿಸಿರುವ ನೆಟ್ಟಿಗರು, 'ಅಬ್ ಕಿ ಬಾರ್, 1000 ಎಕ್ಯುಐ ಪಾರ್' ಎಂದು ಪೋಸ್ಟ್ ಮಾಡಿದ್ದಾರೆ.

'ಗಾಳಿಯ ಗುಣಮಟ್ಟ ತೀರಾ ಕಳಪೆ'

ದೇಶದ ರಾಜಧಾನಿ ದೆಹಲಿಯಲ್ಲಿ ಸೋಮವಾರ ಬೆಳಿಗ್ಗೆ ವಿಷಯುಕ್ತ ಗಾಳಿಯು ಪರದೆಯಂತೆ ಆವರಿಸಿತ್ತು. ಗಾಳಿಯ ಗುಣಮಟ್ಟ ತೀರಾ ಕಳಪೆಯಾಗಿತ್ತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ತಿಳಿಸಿದೆ.

ಸಿಪಿಸಿಬಿ ದತ್ತಾಂಶಗಳ ಪ್ರಕಾರ, ದೆಹಲಿಯ ಒಟ್ಟಾರೆ ಗಾಳಿಯ ಗುಣಮಟ್ಟ ಸೂಚ್ಯಂಕವು (ಎಕ್ಯುಐ) 345 ಇತ್ತು.

ಗಾಳಿಯ ಗುಣಮಟ್ಟ ಸೂಚ್ಯಂಕವು ಭಾನುವಾರ ಮುಂಜಾನೆ ತೀವ್ರವಾಗಿ (391 ಎಕ್ಯುಐ) ಕುಸಿದಿತ್ತು. ಬಳಿಕ ಸ್ವಲ್ಪ ಸುಧಾರಿಸಿದೆ.

ಉಡಾಳ ಉಪ್ಪಿನಕಾಯಿ ಅಲ್ಲ! ಯುಕೆ ಫುಲ್‌ಮೀಲ್ಸ್

'ಪದವಿಪೂರ್ವ' ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದ ಪೃಥ್ವಿ ಶಾಮನೂರು ಹೊಸ ಸಿನಿಮಾ 'ಉಡಾಳ' ಇದೇ 14ಕ್ಕೆ ರಿಲೀಸ್ ಆಗುತ್ತಿದ್ದು, ನಟ ನವೀನ್ ಶಂಕರ್ ಹಾಗು ನಟಿ ನಿಶ್ವಿಕಾ ನಾಯ್ಡು ಇತ್ತೀಚೆಗೆ ಚಿತ್ರದ ಟ್ರೇಲರ್ ರಿಲೀಸ್ ಮಾಡಿದರು.

ಯೋಗರಾಜ್ ಸಿನಿಮಾಸ್ ಹಾಗೂ ರವಿ ಶಾಮನೂರು ಫಿಲಂಸ್ ಲಾಂಛನದಲ್ಲಿ ದಾವಣಗೆರೆಯ ರವಿ ಶಾಮನೂರು ಹಾಗೂ ಯೋಗರಾಜ್ ಭಟ್ ಈ ಸಿನಿಮಾ ನಿರ್ಮಿಸಿದ್ದಾರೆ. ಯೋಗರಾಜ್ ಭಟ್ ಅವರ ಜೊತೆ ಸಹ ನಿರ್ದೇಶಕರಾಗಿದ್ದ ಅಮೋಲ್ ಪಾಟೀಲ್ ನಿರ್ದೇಶಿಸಿರುವ ಈ ಸಿನಿಮಾ ಸಂಪೂರ್ಣವಾಗಿ ಉತ್ತರ ಕರ್ನಾಟಕ ಭಾಷಾ ಸೊಗಡಿನಲ್ಲಿದೆ.

'ಉತ್ತರ ಕರ್ನಾಟಕದ ಸೊಗಡನ್ನು ಊಟದಲ್ಲಿ ಉಪ್ಪಿನಕಾಯಿ ಇದ್ದ ಹಾಗೆ ಮಾತ್ರ ಕೆಲವು ಚಿತ್ರಗಳಲ್ಲಿ ಬಳಸಿಕೊಳ್ಳಲಾಗಿತ್ತು. ಆದರೆ ನಮ್ಮ ಚಿತ್ರ ಫುಲ್ ಮೀಲ್ಸ್ ತರಹ ಉತ್ತರ ಕರ್ನಾಟಕದ್ದೇ ಸಿನಿಮಾ. ಇಡೀ ಕಥೆ ವಿಜಯಪುರದಲ್ಲೇ ನಡೆಯುತ್ತದೆ. ಉತ್ತರ ಕರ್ನಾಟಕದ ಸುಂದರತೆ ಈ ಚಿತ್ರದಲ್ಲಿದೆ' ಎನ್ನುತ್ತಾರೆ ಅಮೋಲ್ ಪಾಟೀಲ್. ಇದು ಇವರು ನಿರ್ದೇಶಿಸಿರುವ ಚೊಚ್ಚಲ ಸಿನಿಮಾ.

'ನಗಿಸುವುದು ಸುಲಭವಲ್ಲ. ಅದೇ ರೀತಿ ನಗು ಬರುವುದು ಅಷ್ಟು ಸುಲಭವಿಲ್ಲ. ಆದರೆ ಅಮೋಲ್, ನಾಯಕ ಪೃಥ್ವಿ ಶಾಮನೂರು ಸೇರಿದಂತೆ 20 ಕಲಾವಿದರ ತಂಡ ಈ ಚಿತ್ರದ ಮೂಲಕ ನಗುವಿನ ರಸದೌತಣವನ್ನೇ ಬಡಿಸಿದೆ. ಇದೇ ರೀತಿ ಕಲಿತು ನಟನೆ ಮಾಡಿದರೆ ಪೃಥ್ವಿ ಸ್ವಲ್ಪ ದಿನಗಳಲ್ಲಿ ಸ್ಟಾರ್ ನಟ ಆಗುತ್ತಾನೆ' ಎಂದರು ಯೋಗರಾಜ್ ಭಟ್.

ಈ ಚಿತ್ರದಲ್ಲಿ ಪೃಥ್ವಿ ಗೈಡ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೃತಿಕ ಶ್ರೀನಿವಾಸ್ ಚಿತ್ರದ ನಾಯಕಿ. ಬಲ ರಾಜವಾಡಿ, ಮಾಳು ನಿಪ್ನಾಳ್, ಹರೀಶ್ ಹಿರಿಯೂರು, ಬಿರಾದಾರ್, ಸುಮಿತ್ ಸಂಕೋಜಿ, ವಾದಿರಾಜ ಬಬ್ಲಾದಿ, ಪ್ರವೀಣ್ ಗಸ್ತಿ, ದಯಾನಂದ ಬೀಳಗಿ, ರೇಣುಕ, ಶ್ರೀಧರ್, ದಾನಪ್ಪ, ಶಿಲ್ಪ ಶಾಂತಕುಮಾರ್, ಸೋನಿಯಾ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಟ್ರೆಂಡಿಂಗ್‌ನಲ್ಲಿದೆ 'ಆ್ಯಫ್ರೊ ಟಪಾಂಗ್'

ಉಪೇಂದ್ರ, ರಾಜ್ ಬಿ.ಶೆಟ್ಟಿ, ಶಿವರಾಜ್‌ಕುಮಾರ್

ಯುಗಾಂಡದ ಘೆಟೋ ಕಿಡ್ಸ್ ಜೊತೆ ನಟರಾದ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಹೆಜ್ಜೆ ಹಾಕಿರುವುದು ಸದ್ಯ ಟ್ರೆಂಡಿಂಗ್‌ನಲ್ಲಿದೆ.

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ '45' ಚಿತ್ರದ 'ಆ್ಯಫ್ರೊ ಟಪಾಂಗ್' ಹಾಡು ಯುಟ್ಯೂಬ್‌ನಲ್ಲಿ ಎಂಟು ದಿನಗಳಲ್ಲಿ ಹದಿನಾಲ್ಕು ಮಿಲಿಯನ್ (1.4 ಕೋಟಿ) ಗಿಂತ ಅಧಿಕ ವೀಕ್ಷಣೆ ಪಡೆದಿದೆ. ಈ ಪ್ರಮೋಷನಲ್ ಹಾಡು ಸಿನಿಮಾದಲ್ಲಿಲ್ಲದಿದ್ದರೂ ಚಿತ್ರದತ್ತ ಪ್ರೇಕ್ಷಕರ ಗಮನಸೆಳೆಯುವಲ್ಲಿ ಯಶಸ್ವಿಯಾಗಿದೆ.

ಹಾಡಿನಲ್ಲಿ ಮೂವರೂ ನಾಯಕರ ಹೊಸ ಲುಕ್ಸ್, ಹೆಜ್ಜೆಗೆ ಅಭಿಮಾನಿಗಳು ಫಿದಾ ಆಗಿದ್ದು, ಜಾನಿ ಮಾಸ್ಟರ್ ಈ ಹಾಡಿಗೆ ನೃತ್ಯ ನಿರ್ದೇಶನ ಮಾಡಿದ್ದಾರೆ. ಎಂ.ಸಿ.ಬಿಜ್ಜು ಹಾಗೂ ನಿಶಾನ್ ರೈ ಈ ಹಾಡನ್ನು ಬರೆದು, ಹಾಡಿದ್ದಾರೆ. ಎಂ. ರಮೇಶ್ ರೆಡ್ಡಿ ಅವರು ತಮ್ಮ ಸೂರಜ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಈ ಸಿನಿಮಾ ನಿರ್ಮಿಸಿದ್ದಾರೆ. ❖

ಗತವೈಭವಕ್ಕೆ ಕಿಚ್ಚ ಸಾಥ್

'ಗತವೈಭವ' ಚಿತ್ರತಂಡದೊಂದಿಗೆ ಸುದೀಪ್

ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ನ.14ರಂದು ತೆರೆಕಾಣುತ್ತಿದ್ದು, ನಟ ಸುದೀಪ್ ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿದರು.

'ಕನ್ನಡ ಚಿತ್ರರಂಗದ ಅತ್ಯುತ್ತಮ ನಿರ್ದೇಶಕರದಲ್ಲಿ ಸುನಿ ಕೂಡಾ ಒಬ್ಬರು. ಅವರ ಜೊತೆಗೆ ಕೆಲಸ ಮಾಡುವ ಅವಕಾಶ ನನಗಿನ್ನೂ ಸಿಕ್ಕಿಲ್ಲ. ಒಂದಲ್ಲಾ ಒಂದು ದಿನ ಅವರ ಜೊತೆ ಕೆಲಸ ಮಾಡಬಹುದು. ಪ್ರತಿಯೊಂದು ದೃಶ್ಯವನ್ನು ಅವರು ಸೆರೆಹಿಡಿಯುವ ರೀತಿ ಭಿನ್ನವಾಗಿರುತ್ತದೆ. ಈ ಚಿತ್ರದ ನಾಯಕ ದುಷ್ಯಂತ್ ಅವರಿಗೆ ನಾನು ಸಲಹೆ ಕೊಡುವುದು ಏನಿಲ್ಲ. ಅವರು ಹೇಗೆ ಹತ್ತು ನಿಮಿಷ ಅಷ್ಟೊಂದು ಅಚ್ಚುಕಟ್ಟಾಗಿ ಎಲ್ಲರನ್ನು ತಮ್ಮ ಮಾತಿನಿಂದ ಹಿಡಿದಿಟ್ಟುಕೊಂಡರು ಎಂದು ಯೋಚಿಸುತ್ತಿದ್ದೆ. ನಂತರ ತಿಳಿಯಿತು ಅವರು ರಾಜಕಾರಣಿ ಮಗ ಅಂತ' ಎಂದು ನಗೆಚಟಾಕಿ ಹಾರಿಸಿ ಚಿತ್ರತಂಡಕ್ಕೆ ಶುಭಕೋರಿದರು ಸುದೀಪ್.

ನಿರ್ದೇಶಕ ಸುನಿ ಮಾತನಾಡಿ, 'ಇದೊಂದು ಭಿನ್ನ ಜಾನರ್‌ನ ಸಿನಿಮಾ. ಈ ಸಿನಿಮಾ ರಿಲೀಸ್ ಆದ ಬಳಿಕ ಬಾಯಿ ಮಾತಿನಿಂದಲೇ ಪ್ರಚಾರ ಪಡೆದುಕೊಳ್ಳಲಿದೆ ಎನ್ನುವ ನಂಬಿಕೆ ನನಗಿದೆ. ಚಿತ್ರದಲ್ಲಿ ಸ್ಟಾರ್ ವ್ಯಾಲ್ಯೂ ಕಮ್ಮಿ ಇತ್ತು. ಆದರೆ ನಮ್ಮ ಚಿತ್ರರಂಗದ ಶಿವಣ್ಣ, ಸುದೀಪ್ ಅವರ ಬೆಂಬಲ ನಮಗೆ ದೊರಕಿದ್ದು, ಇದರಿಂದ ಚಿತ್ರಕ್ಕೆ ಒಳ್ಳೆಯ ಆರಂಭ ಸಿಗಲಿದೆ' ಎಂದರು.

> **ಈ ಚಿತ್ರ ನನಗೆ ವಿಶೇಷವಾಗಿದೆ. ಅತಿ ಹೆಚ್ಚು ದಿನ ಶೂಟಿಂಗ್ ಮಾಡಿದ ಸಿನಿಮಾ ಇದಾಗಿದೆ. ನಾಲ್ಕು ಕಥೆ, ನಾಲ್ಕು ರೀತಿಯ ಪಾತ್ರ. ಹೀಗಾಗಿ ನಾಲ್ಕು ಸಿನಿಮಾ ನೋಡಿದ ಅನುಭವ ಆಗುತ್ತದೆ.**
> **ಆಶಿಕಾ ರಂಗನಾಥ್,** ನಟಿ.

'ಗತವೈಭವ' ಚಿತ್ರದಲ್ಲಿ ದುಷ್ಯಂತ್ ನಾಯಕನಾಗಿ ನಟಿಸಿದ್ದು, ಆಶಿಕಾ ರಂಗನಾಥ್ ಜೋಡಿಯಾಗಿದ್ದಾರೆ. ಚಿತ್ರಕ್ಕೆ ಜೂಡಾ ಸ್ಯಾಂಡಿ ಸಂಗೀತ, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣವಿದೆ. ದೀಪಕ್ ಹಾಗೂ ಸಿಂಪಲ್ ಸುನಿ ಚಿತ್ರ ನಿರ್ಮಾಣ ಮಾಡಿದ್ದಾರೆ. ❖

ಬಿಬಿಸಿಯಿಂದ ಕ್ಷಮೆಯಾಚನೆ

ಒಂದನೇ ಪುಟದಿಂದ...

'ಈ ವಿವಾದವು ನಾವು ಪ್ರೀತಿಸುವ ಸುದ್ದಿಸಂಸ್ಥೆಯ ಗೌರವಕ್ಕೆ ಧಕ್ಕೆ ತರುತ್ತಿದೆ. ಸಂಸ್ಥೆಯ ಸಿಇಒ ಆಗಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಸಂಸ್ಥೆಯ ವಿರುದ್ಧದ ಟೀಕೆಗಳು ನನ್ನ ರಾಜೀನಾಮೆಯೊಂದಿಗೆ ಕೊನೆಗೊಳ್ಳಲಿ' ಎಂದು ಟರ್ನಿಸ್ ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ. 'ತಪ್ಪುಗಳು ಘಟಿಸಿವೆ. ಆದರೆ ಬಿಬಿಸಿ ಸುದ್ದಿಸಂಸ್ಥೆಯು ಪಕ್ಷಪಾತಿಯಾಗಿದೆ ಎಂಬ ಆರೋಪವು ಖಂಡಿತ ತಪ್ಪು' ಎಂದು ಹೇಳಿದ್ದಾರೆ.

ವಿವಾದ ಏನು, ಬಹಿರಂಗವಾಗಿದ್ದು ಹೇಗೆ?

ಅಮೆರಿಕ ಕ್ಯಾಪಿಟಲ್ (ಸಂಸತ್) ಮೇಲೆ 2021ರ ಜನವರಿ 6ರಂದು ಪ್ರತಿಭಟನಕಾರರು ದಾಳಿ ನಡೆಸುವುದಕ್ಕೂ ಮುನ್ನ ಬೆಂಬಲಿಗರನ್ನು ಉದ್ದೇಶಿಸಿ ಟ್ರಂಪ್ ಮಾಡಿದ್ದ ಭಾಷಣದ ತುಣುಕುಗಳನ್ನು 'ಪನೋರಮಾ' ಸಾಕ್ಷ್ಯಚಿತ್ರದಲ್ಲಿ ಬಿಬಿಸಿ ಬಳಸಿತ್ತು.

'ಟ್ರಂಪ್: ಎ ಸೆಕೆಂಡ್ ಚಾನ್ಸ್?' ಶೀರ್ಷಿಕೆಯ ಸಾಕ್ಷ್ಯಚಿತ್ರವು ಅಮೆರಿಕ ಅಧ್ಯಕ್ಷೀಯ ಚುನಾವಣೆಗೂ ಒಂದು ದಿನ ಮೊದಲು ಅಂದರೆ 2024ರ ಅಕ್ಟೋಬರ್ 28ರಂದು ಪ್ರಸಾರವಾಗಿತ್ತು.

ಬಿಬಿಸಿಯ ನಿಯಮಗಳು ಮತ್ತು ಮಾರ್ಗಸೂಚಿ ಕುರಿತ ಮಾಜಿ ಸಲಹೆಗಾರ ಮೈಕೆಲ್ ಪ್ರಿಸ್ಕಾಟ್ ಅವರು 'ಪನೋರಮಾ' ಸಾಕ್ಷ್ಯಚಿತ್ರದ ಸಂಕಲನದಲ್ಲಿ ಆದ ದೋಷದ ಬಗ್ಗೆ ಸಂಸ್ಥೆಗೆ ಪತ್ರ ಬರೆದಿದ್ದರು.

ಈ ಪತ್ರ ಸೋರಿಕೆಯಾಗಿತ್ತು. ಅದನ್ನು 'ದಿ ಡೈಲಿ ಟೆಲಿಗ್ರಾಫ್' ದಿನ ಪತ್ರಿಕೆಯು ಕಳೆದ ವಾರ ಪ್ರಕಟಿಸಿತ್ತು. ಈ ಬೆನ್ನಲ್ಲೇ ವಿವಾದವು ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಂಡಿದೆ.

ಮುಖ್ಯಸ್ಥ ಸಮೀರ್ ಶಾ ಕ್ಷಮೆಯಾಚನೆ

'ಸಾಕ್ಷ್ಯಚಿತ್ರದಲ್ಲಿ ಟ್ರಂಪ್ ಅವರ ಜನವರಿ 6ರ ಎರಡು ಪ್ರತ್ಯೇಕ ಭಾಷಣದ ತುಣುಕುಗಳನ್ನು ಜೋಡಿಸಿ ಎಡಿಟ್ ಮಾಡಲಾಗಿದೆ. ಆದರೆ ಅದು ಏಕಕಾಲದಲ್ಲಿ ಅವರು ಮಾತನಾಡಿದಂತೆ ಭಾಸವಾಗುತ್ತಿದೆ. ಜೊತೆಗೆ ಟ್ರಂಪ್ ಅವರು ಹಿಂಸಾಚಾರಕ್ಕೆ ನೇರವಾಗಿ ಕರೆ ನೀಡಿದಂತೆ ಭಾಸವಾಗುತ್ತಿದೆ. ಎಡಿಟ್ ಮಾಡುವಾಗ ಉಂಟಾದ ಈ ದೋಷಕ್ಕೆ ಕ್ಷಮೆಯಾಚಿಸುತ್ತೇವೆ' ಎಂದು ಬಿಬಿಸಿ ಮುಖ್ಯಸ್ಥ ಸಮೀರ್ ಶಾ ಅವರು ಹೇಳಿದ್ದಾರೆ. ಇದರ ಹಿಂದೆ ಜನರನ್ನು ದಾರಿ ತಪ್ಪಿಸುವ ಉದ್ದೇಶ ಇಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಫಲೋಡಿ ಅಪಘಾತ: ಕೇಂದ್ರಕ್ಕೆ ಸುಪ್ರೀಂ ನೋಟಿಸ್

ನವದೆಹಲಿ (ಪಿಟಿಐ): ರಾಜಸ್ಥಾನದ ಫಲೋಡಿಯಲ್ಲಿ ನಡೆದ ಅಪಘಾತಕ್ಕೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹಾಗೂ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ನೀಡಿದೆ.

ಅಪಘಾತಕ್ಕೆ ಕಾರಣವಾದ ಅಂಶಗಳಿಗೆ ಸಂಬಂಧಿಸಿದಂತೆ ಎರಡು ವಾರದ ಒಳಗೆ ಪ್ರಾಧಿಕಾರ ಹಾಗೂ ಸಚಿವಾಲಯ ಪ್ರತಿಕ್ರಿಯೆ ಸಲ್ಲಿಸಬೇಕು ಎಂದೂ ನ್ಯಾಯಮೂರ್ತಿ ಜೆ.ಕೆ.ಮಹೇಶ್ವರಿ ಹಾಗೂ ನ್ಯಾಯಮೂರ್ತಿ ವಿಜಯ್ ಬಿಷ್ಣೋಯ್ ಅವರನ್ನೊಳಗೊಂಡ ಪೀಠವು ಸೂಚಿಸಿದೆ.

ಅಲ್ಲದೇ, ಫಲೋಡಿ ಮಾರ್ಗದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಪ್ರದೇಶದಲ್ಲಿ ಸರ್ವೆ ನಡೆಸಿ, ಅಲ್ಲಿ ಎಷ್ಟು ಢಾಬಾಗಳು ಇವೆ, ಹೆದ್ದಾರಿ ಸ್ಥಿತಿಗತಿ ಹೇಗಿದೆ ಎಂಬುದರ ಮಾಹಿತಿ ಸಲ್ಲಿಸುವಂತೆಯೂ ಸೂಚಿಸಲಾಗಿದೆ.

ಜತೆಗೆ ರಸ್ತೆ ನಿರ್ವಹಣೆಗೆ ಸಂಬಂಧಿಸಿದಂತೆ ಕಾಂಟ್ರ್ಯಾಕ್ಟರ್ ಎಲ್ಲಾ ನಿಯಮಗಳನ್ನು ಅನುಸರಿಸಿದ್ದಾರೆಯೇ ಎಂಬ ಬಗ್ಗೆಯೂ ವರದಿ ಸಲ್ಲಿಸುವಂತೆ ಕೇಳಿದೆ.

ಫಲೋಡಿ ಜಿಲ್ಲೆಯ ಮತೋಡಾ ಗ್ರಾಮದ ಬಳಿ ನಿಂತಿದ್ದ ಟ್ರಕ್‌ವೊಂದಕ್ಕೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದ ಪರಿಣಾಮ 15 ಮಂದಿ ಮೃತಪಟ್ಟ ಘಟನೆ ನವೆಂಬರ್ 2ರಂದು ನಡೆದಿತ್ತು. ಇದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಸಂಕ್ಷಿಪ್ತ ಸುದ್ದಿ

₹2.4 ಲಕ್ಷ ಲಂಚ: ಎಎಸ್‌ಐ ಸೆರೆ

ನವದೆಹಲಿ (ಪಿಟಿಐ): ಆಸ್ತಿಯ ಬಗ್ಗೆ ಅನುಕೂಲಕರ ಪರಿಶೀಲನಾ ವರದಿ ಸಲ್ಲಿಸಲು ₹2.4 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದಡಿ ಜ್ಯೋತಿ ನಗರ ಪೊಲೀಸ್ ಠಾಣೆಯ ಎಎಸ್‌ಐ ಪಾಟೀಲ್ ಕುಮಾರ್ ಅವರನ್ನು ಸಿಬಿಐ ಅಧಿಕಾರಿಗಳು ಭಾನುವಾರ ಬಂಧಿಸಿದ್ದಾರೆ.

ದೆಹಲಿಯ ಕಢಕಢೂಮಾ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣ ವೊಂದರಲ್ಲಿ ಆಸ್ತಿಯ ಬಗ್ಗೆ ಅನುಕೂಲ ಮಾಡಿಕೊಡುವ ರೀತಿಯ ಪರಿಶೀಲನಾ ವರದಿ ಸಲ್ಲಿಸಲು ಎಎಸ್‌ಐ ₹15 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಲಂಚ ನೀಡದಿದ್ದರೆ ದೂರುದಾರರ ವಿರುದ್ಧ ಪ್ರತಿಕೂಲ ವರದಿ ನೀಡುವುದಾಗಿ ಬೆದರಿಕೆಯನ್ನೂ ಹಾಕಿದ್ದರು ಎಂದು ಸಿಬಿಐ ವಕ್ತಾರ ತಿಳಿಸಿದ್ದಾರೆ.

ಟ್ಯಾಂಕ್ ಕುಸಿತ: ತೇಲಿಹೋದ ವಾಹನ

ಕೊಚ್ಚಿ (ಪಿಟಿಐ): ಕೇರಳದ ಜಲ ಪ್ರಾಧಿಕಾರದ (ಕೆಡಬ್ಲ್ಯುಎ) ನೀರಿನ ಟ್ಯಾಂಕ್ ಒಂದು ಭಾನುವಾರ ಕುಸಿದಿದ್ದು, ಅನೇಕ ಮನೆಗಳಿಗೆ ನೀರು ನುಗ್ಗಿದೆ ಮತ್ತು ವಾಹನಗಳು ತೇಲಿಹೋಗಿವೆ.

ಮಧ್ಯರಾತ್ರಿ 2ರಿಂದ 2:30ರ ನಡುವೆ ತಮ್ಮನಂ ಕೆಡಬ್ಲ್ಯುಎಯ ಫೀಡರ್ ಪಂಪ್ ಹೌಸ್‌ನಲ್ಲಿ ನೀರಿನ ಟ್ಯಾಂಕ್‌ನ ಒಂದು ಭಾಗ ಕುಸಿದಿದೆ. ಈ ಟ್ಯಾಂಕ್‌ನಲ್ಲಿ ಎರಡು ಚೇಂಬರ್‌ಗಳಿದ್ದು, ಸುಮಾರು 1.38 ಕೋಟಿ ಲೀಟರ್ ಸಾಮರ್ಥ್ಯ ಹೊಂದಿತ್ತು ಎಂದು ಕೆಡಬ್ಲ್ಯುಎ ಅಧಿಕಾರಿಗಳು ತಿಳಿಸಿದ್ದಾರೆ.

ಬೂಕರ್ ಸ್ಪರ್ಧೆಯಲ್ಲಿ ಕಿರಣ್

ಕಿರಣ್ ದೇಸಾಯಿ

ಲಂಡನ್ (ಪಿಟಿಐ): ಭಾರತೀಯ ಲೇಖಕಿ ಕಿರಣ್ ದೇಸಾಯಿ ಅವರ 'ದಿ ಲೋನ್ಲಿನೆಸ್ ಆಫ್ ಸೋನಿಯಾ ಆ್ಯಂಡ್ ಸನ್ನಿ' ಪುಸ್ತಕವು ಬೂಕರ್ ಪ್ರಶಸ್ತಿಯ ಸ್ಪರ್ಧೆಯಲ್ಲಿದ್ದು, ತಾವು ಅನುಭವಿಸಿದ 'ಕಲಾತ್ಮಕ ಒಂಟಿತನ'ವನ್ನೇ (ಬೇಗುದಿ) ಆಧರಿಸಿ ಈ ಪುಸ್ತಕ ಬರೆದಿರುವುದಾಗಿ ಕಿರಣ್ ಹೇಳಿಕೊಂಡಿದ್ದಾರೆ.

ಲಂಡನ್‌ನಲ್ಲಿ ಭಾನುವಾರ ನಡೆದ ಪ್ರಶಸ್ತಿ ಪೂರ್ವ ಸಮಾರಂಭದಲ್ಲಿ ತಮ್ಮ ಪುಸ್ತಕದ ವಸ್ತುವಿಷಯದ ಕುರಿತು ಕಿರಣ್ ಮಾತನಾಡಿದರು. 'ದೀರ್ಘಕಾಲದಿಂದ ಬಗೆಹರಿಯದ ಪ್ರೇಮ ಕಥೆಯೊಂದರ ಮೂಲಕ ಜಗತ್ತಿನ ಒಂಟಿತನದ ವಿಚಾರದ ಬಗ್ಗೆ ಬರೆಯಬೇಕು ಎಂದುಕೊಂಡಿದ್ದೆ' ಎಂದು ಅವರು ಹೇಳಿದ್ದಾರೆ. ಅಲ್ಲದೇ, 'ವಿದ್ಯಾಭ್ಯಾಸಕ್ಕಾಗಿ ಮೊದಲ ಬಾರಿ ಭಾರತವನ್ನು ತೊರೆದಾಗ ಅನುಭವಿಸಿದ ಒಂಟಿತನ ಹಾಗೂ ಬರೆಯಲು ಆರಂಭಿಸಿದ ನಂತರ ಪ್ರೇಕ್ಷರಿಗೆ ತಲುಪಲು ಸಾಧ್ಯವಾಗದೆ, ಯಾರೂ ನಮ್ಮನ್ನು ಗುರುತಿಸದೇ ಎದುರಾದ ಬೇಗುದಿಯ ಅನುಭವ ಪುಸ್ತಕವಾಗಿಸಿದ್ದೇನೆ. ಇದನ್ನು ಕಲಾತ್ಮಕ ಒಂಟಿತನದ ಬರಹ ವೆಂದೇ ಭಾವಿಸುವೆ' ಎಂದಿದ್ದಾರೆ. 2006ರಲ್ಲಿ ಕಿರಣ್ ಅವರ 'ದಿ ಇನ್‌ಹೆರಿಟೆನ್ಸ್ ಆಫ್ ಲಾಸ್' ಕೃತಿಗೆ ಬೂಕರ್ ಪ್ರಶಸ್ತಿ ಲಭಿಸಿತ್ತು.

ವಿಶ್ವಾಸದಲ್ಲಿ ಅರ್ಜುನ್, ಹರಿಕೃಷ್ಣ

ಫಿಡೆ ಚೆಸ್ ವಿಶ್ವಕಪ್: ವಿಶ್ರಾಂತಿ ದಿನದ ನಂತರ ನಾಲ್ಕನೇ ಸುತ್ತು ಇಂದಿನಿಂದ

ಭಾರತದ ಗ್ರ್ಯಾಂಡ್‌ಮಾಸ್ಟರ್ ಪೆಂಟಾಲ ಹರಿಕೃಷ್ಣ 'ಎಕ್ಸ್' ಚಿತ್ರ

ಪಣಜಿ (ಪಿಟಿಐ): ಭಾರತದ ಅಗ್ರ ಆಟಗಾರರಾದ ಅರ್ಜುನ್ ಇರಿಗೇಶಿ, ಆರ್.ಪ್ರಜ್ಞಾನಂದ ಮತ್ತು ಪಿ.ಹರಿಕೃಷ್ಣ ಅವರು ವಿಶ್ವಕಪ್‌ನಲ್ಲಿ ಸ್ಫೂರ್ತಿಯುತ ಓಟ ಮುಂದುವರಿಸಲು ಕಾತರರಾಗಿದ್ದಾರೆ. ಸೋಮವಾರ ಮೊದಲ ವಿಶ್ರಾಂತಿ ದಿನವಾಗಿದ್ದು, ಮಂಗಳವಾರ ನಾಲ್ಕನೇ ಸುತ್ತಿನೊಡನೆ ಟೂರ್ನಿ ಮುಂದುವರಿಯಲಿದೆ.

ಭಾರತದ ಐವರಷ್ಟೇ 32ರ ಸುತ್ತಿಗೆ ತಲುಪಿದ್ದಾರೆ. ಎರಡನೇ ಶ್ರೇಯಾಂಕದ ಆಟಗಾರರಾದ ಅರ್ಜುನ್, 32ರ ಸುತ್ತಿನಲ್ಲಿ ಹಂಗೆರಿಯ ಅನುಭವಿ ಆಟಗಾರ ಪೀಟರ್ ಲೆಕೊ ಎದುರು ಆಡಲಿದ್ದು, ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದ್ದಾರೆ.

ಪ್ರಜ್ಞಾನಂದ ಅವರು ಫಿಡೆಯನ್ನು ಪ್ರತಿನಿಧಿಸುತ್ತಿರುವ ರಷ್ಯಾದ ಆಟಗಾರ ಡೇನಿಯಲ್ ದುಬೋವ್ ಅವರನ್ನು ಎದುರಿಸಲಿದ್ದಾರೆ. ಇವರೆಲ್ಲರಿಗಿಂತ ಅನುಭವಿ ಪೆಂಟಾಲ ಹರಿಕೃಷ್ಣ ಅವರು ಸ್ವೀಡನ್‌ನ ನಿಲ್ಸ್ ಗ್ರಂಡೆಲಿಯಸ್ ಅವರಿಗೆ ಮುಖಾಮುಖಿಯಾಗಿದ್ದಾರೆ. ಭಾರತದ ಈ ಮೂವರು ದಿಗ್ಗಜರು ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದರು.

ಮೇಲಿನ ಮೂವರ ಜೊತೆ ವಿಶ್ವ ಜೂನಿಯರ್ ಚಾಂಪಿಯನ್ ವಿ.ಪ್ರಣವ್ ಮತ್ತು 109ನೇ ಶ್ರೇಯಾಂಕದ ಕಾರ್ತಿಕ್ ವೆಂಕಟರಾಮನ್ ಸಹ ನಾಲ್ಕನೇ ಸುತ್ತು ಆಡಲಿದ್ದಾರೆ.

ಸುಮಾರು 20 ವರ್ಷ ಹಿಂದೆ ಪ್ರಬಲ ಆಟಗಾರನಾಗಿ ಗುರುತಿಸಿಕೊಂಡಿದ್ದ ಲೆಕೊ ಈ ಟೂರ್ನಿಯಲ್ಲಿ ತಮ್ಮ ಉತ್ತುಂಗದ ದಿನಗಳನ್ನು ನೆನಪಿಸುವಂತೆ ಆಡಿದ್ದಾರೆ. ಆದರೆ ಆಟವನ್ನು ಸಂಕೀರ್ಣ ಸ್ಥಿತಿಗೆ ಒಯ್ಯಬಲ್ಲ ಅರ್ಜುನ್ ಎದುರು 46 ವರ್ಷದ ಆಟಗಾರನಿಗೆ ಗೆಲುವು ಸುಲಭವಲ್ಲ.

ಅರೆನಿವೃತ್ತಿಯಲ್ಲಿರುವ ಲೆಕೊ ಅವರ ಶಿಷ್ಯ ವಿನ್ಸೆಂಟ್ ಕೀಮರ್ (ಜರ್ಮನಿ) ಅವರೂ ಇಲ್ಲಿ ನಾಲ್ಕನೇ ಸುತ್ತಿಗೆ ತಲುಪಿರುವುದು ವಿಶೇಷ.

ಅರ್ಜುನ್ ಇರಿಗೇಶಿ ತಮ್ಮೆರಡೂ ಪಂದ್ಯಗಳನ್ನು ಟೈಬ್ರೇಕರ್ ನೆರವಿಲ್ಲದೇ ಜಯಿಸಿದ್ದಾರೆ. ಇದುವರೆಗೆ ಆಡಿರುವ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಜಯಿಸಿರುವುದು ಲಯವನ್ನು ಸೂಚಿಸಿದೆ.

ಪ್ರೇಕ್ಷಕರ ನೆಚ್ಚಿನ ಆಟಗಾರ ಪ್ರಜ್ಞಾನಂದ ಅವರ ಎದುರಾಳಿ ದುಬೋವ್ ಅವರು ಸಿದ್ಧಾಂತಕ್ಕೆ ತಕ್ಕಂತೆ ಆಡುವುದಕ್ಕೆ ಹೆಸರುವಾಸಿ. ವೇಗ ಮತ್ತು ಕರಾರುವಾಕ್ ಆಟದಿಂದಾಗಿ ಅವರು ಈ ಹಿಂದಿನ ಸುತ್ತಿನ ದೀರ್ಘ ಟೈಬ್ರೇಕರ್ ಪಂದ್ಯಗಳಲ್ಲಿ ಬೈ ಜಿನ್ಶಿ (ಚೀನಾ) ಮತ್ತು ಉರುಗ್ವೆಯ ಜಾರ್ಜ್ ಮಿಯರ್ ಅವರನ್ನು ಸೋಲಿಸಿದ್ದಾರೆ.

ಪ್ರಜ್ಞಾನಂದ ಎರಡನೇ ಸುತ್ತಿನಲ್ಲಿ ಗೆಲ್ಲುವ ಮೊದಲ ಉಜ್ಬೇಕ್ ಮೂಲದ ಆಸ್ಟ್ರೇಲಿಯನ್ ಆಟಗಾರ ತೆಮೂರ್ ಕುಯ್ಬಕೋವ್ ಎದುರು ಆತಂಕದ ಕ್ಷಣಗಳನ್ನು ಎದುರಿಸಿದ್ದರು.

ಇದುವರೆಗೆ ಹರಿಕೃಷ್ಣ ಮಾತ್ರ 32ರ ಸುತ್ತಿಗೆ ಸಲೀಸಾಗಿ ಮುನ್ನಡೆದಿದ್ದಾರೆ. ಅವರು ರಷ್ಯಾದ ಅರ್ಸೆನಿ ನೆಸ್ಟೆರೋವ್ ಮತ್ತು ಬೆಲ್ಜಿಯಂನ ಡೇನಿಯ್ ದರ್ಧಾ ಅವರನ್ನು ಅಧಿಕಾರಯುತವಾಗಿ ಸೋಲಿಸಿದ್ದಾರೆ.

ಆಯ್ದ ಮುಖಾಮುಖಿಗಳು: ಮಥಾಯಸ್ ಬ್ಲೂಬಾಮ್ (ಜರ್ಮನಿ)– ಅಲೆಕ್ಸಾಂಡರ್ ಡೊಮ್ಚೆಂಕೊ (ಜರ್ಮನಿ); ಫ್ರೆಡೆರಿಕ್ ಸ್ವೇನ್ (ಜರ್ಮನಿ)– ಶಾಂತ್ ಸೆರ್ಗಸಿಯನ್ (ಅರ್ಮೇನಿಯ); ಆ್ಯಂಡ್ರಿ ಇಸಿಪೆಂಕೊ (ಫಿಡೆ)– ವಿನ್ಸೆಂಟ್ ಕೀಮರ್ (ಜರ್ಮನಿ); ವಿ. ಪ್ರಣವ್– ನದಿರ್ಬೆಕ್ ಯಾಕುಬೊಯೆವ್ (ಉಜ್ಬೇಕಿಸ್ತಾನ), ವೀ ಯಿ (ಚೀನಾ– ಪರ್ಹಾಮ್ ಮಘಸೂಡ್ಲೂ (ಇರಾನ್); ಲಿ ಕ್ವಾಂಗ್ ಲೀಮ್ (ವಿಯೆಟ್ನಾಂ)– ಕಾರ್ತಿಕ್ ವೆಂಕಟರಾಮನ್; ಸ್ಯಾಮ್ ಶಂಕ್ಲಾಂಡ್ (ಅಮೆರಿಕ)– ರಿಚರ್ಡ್ ರ್‍ಯಾಪೋರ್ಟ್ (ಹಂಗೆರಿ); ಲೆವೋನ್ ಅರೋನಿಯನ್ (ಅಮೆರಿಕ)– ರಾಡೊಸ್ಲಾವ್ ವೊಜ್ತಸ್‌ಝುಕ್ (ಪೋಲೆಂಡ್).

ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್

ಸ್ವರ್ಣಕ್ಕೆ ಗುರಿಯಿಟ್ಟ ರಾಣಾ

ಸಾಮ್ರಾಟ್ ರಾಣಾ ಐಎಸ್‌ಎಸ್‌ಎಫ್ ಚಿತ್ರ

ಕೈರೊ (ಪಿಟಿಐ): ಭಾರತದ ಯುವ ಶೂಟರ್ ಸಾಮ್ರಾಟ್ ರಾಣಾ ಅವರು ಸೋಮವಾರ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನಕ್ಕೆ ಗುರಿಯಿಟ್ಟರು.

ಕರ್ನಲ್ ಮೂಲದ ಸಾಮ್ರಾಟ್ ಫೈನಲ್‌ನಲ್ಲಿ 243.7 ಅಂಕಗಳನ್ನು ಗಳಿಸಿ ಚೀನಾದ ಹು ಕೈ ಅವರನ್ನು ಸೋಲಿಸಿದರು. 243.3 ಅಂಕಗಳೊಂದಿಗೆ ಹು ಕೈ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಉತ್ತರ ಪ್ರದೇಶದ ಬಾಗ್‌ಪತ್‌ನ ವರುಣ್ ತೋಮರ್ ಅವರು 221.7 ಅಂಕಗಳೊಂದಿಗೆ ಕಂಚಿನ ಪದಕ ಗೆದ್ದರು.

ಮನು, ಇಶಾಗೆ ತಪ್ಪಿದ ಪದಕ: ಒಲಿಂಪಿಕ್ ಅವಳಿ ಪದಕ ವಿಜೇತ ಶೂಟರ್ ಮನು ಭಾಕರ್ ಮತ್ತು ಏಷ್ಯನ್ ಕ್ರೀಡಾಕೂಟದ ಪದಕ ವಿಜೇತೆ ಇಶಾ ಸಿಂಗ್ ಅವರು ಮಹಿಳೆಯರ ವೈಯಕ್ತಿಕ 10 ಮೀಟರ್ ಏರ್ ಪಿಸ್ತೂಲ್ ಫೈನಲ್ ಪದಕ ಗೆಲ್ಲಲು ವಿಫಲರಾದರು. ಆದರೆ, ತಂಡ ವಿಭಾಗದಲ್ಲಿ ಸುರುಚಿ ಸಿಂಗ್ ಅವರೊಂದಿಗೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಇಶಾ (583), ಮನು (580) ಮತ್ತು ಸುರುಚಿ (577) ಹೀಗೆ ಒಟ್ಟು 1740 ಅಂಕಗಳೊಂದಿಗೆ ತಂಡ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದರು. ವೈಯಕ್ತಿಕ ಸ್ಪರ್ಧೆಯಲ್ಲಿ ಇಶಾ ಆರನೇ ಸ್ಥಾನ ಮತ್ತು ಮನು ಏಳನೇ ಸ್ಥಾನಗಳೊಂದಿಗೆ ಅಭಿಯಾನ ಮುಗಿಸಿದರು.

ಮೂರು ಚಿನ್ನ, ಮೂರು ಬೆಳ್ಳಿ ಮತ್ತು ಮೂರು ಕಂಚಿನೊಂದಿಗೆ ಭಾರತ ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಆರು ಚಿನ್ನ, ನಾಲ್ಕು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ ಚೀನಾ ಅಗ್ರಸ್ಥಾನದಲ್ಲಿದೆ.

ಏಷ್ಯನ್ ಆರ್ಚರಿ: ಭಾರತಕ್ಕೆ 2 ಪದಕ ಖಚಿತ

ಢಾಕಾ (ಪಿಟಿಐ): ಭಾರತದ ಪುರುಷರ ರಿಕರ್ವ್ ತಂಡ, ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿದೆ. ಇದರಿಂದ ಈ ಕೂಟದಲ್ಲಿ ದೀರ್ಘಕಾಲದ ಪದಕ ಬರ ಅಂತ್ಯಗೊಳ್ಳುವ ಕ್ಷಣ ಸನ್ನಿಹಿತವಾಗಿದೆ. ಭಾರತ ತಂಡವು ಚಿನ್ನದ ಪದಕಕ್ಕಾಗಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ಮಹಿಳೆಯರ ವಿಭಾಗದಲ್ಲಿ ಕಾಂಪೌಂಡ್ ವಿಭಾಗದ ಹಾಲಿ ಚಾಂಪಿಯನ್ ಭಾರತ ಸತತ ಎರಡನೇ ಬಾರಿ ಫೈನಲ್ ತಲುಪಿದೆ. ಇದರಿಂದಾಗಿ ಭಾರತಕ್ಕೆ ಈ ಕೂಟದಲ್ಲಿ ಎರಡು ಪದಕಗಳು ಖಾತರಿಯಾಗಿವೆ.

ಯಶದೀಪ್ ಭೋಗೆ, ಅತನು ದಾಸ್ ಮತ್ತು ರಾಹುಲ್ ಅವರಿದ್ದ ತಂಡ, ತೀವ್ರ ಸೆಣಸಾಟದಲ್ಲಿ ಕಜಾಕಸ್ತಾನ ತಂಡವನ್ನು 5–3 ರಿಂದ ಸೋಲಿಸಿತು.

ದಕ್ಷಿಣ ಕೊರಿಯಾವು ಪ್ರಮುಖ ಸ್ಪರ್ಧಿಗಳಿಗೆ ವಿಶ್ರಾಂತಿ ನೀಡಿ ಎರಡನೇ ಹಂತದ ತಂಡವನ್ನು ಈ ಕೂಟಕ್ಕೆ ಕಳುಹಿಸಿದೆ.

ಮಹಿಳೆಯರ ವಿಭಾಗದಲ್ಲಿ ದೀಪ್ಶಿಕಾ, ಜ್ಯೋತಿ ಸುರೇಖಾ ವೆನ್ನಂ ಮತ್ತು ಪ್ರತೀಕಾ ಪ್ರದೀಪ್ ಅವರಿದ್ದ ಕಾಂಪೌಂಡ್ ತಂಡ ಸೆಮಿಫೈನಲ್‌ನಲ್ಲಿ 234– 227 ರಿಂದ ಆತಿಥೇಯ ಬಾಂಗ್ಲಾದೇಶ ತಂಡವನ್ನು ಸೋಲಿಸಿತು. ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ. ಕೊರಿಯನ್ನರ ತಂಡ ಸೆಮಿಫೈನಲ್‌ನಲ್ಲಿ 237–227 ರಿಂದ ಇರಾನ್ ಮೇಲೆ ಜಯಗಳಿಸಿತು.

ಕರ್ನಾಟಕ ತಂಡಕ್ಕೆ ಇನಿಂಗ್ಸ್ ಮುನ್ನಡೆ

ಸತತ ಎರಡನೇ ಅರ್ಧಶತಕ ದಾಖಲಿಸಿದ ಮಯಂಕ್ • ಕುತೂಹಲದತ್ತ ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಮಯಂಕ್ ಅಗರವಾಲ್ (ಔಟಾಗದೇ 64) ಅವರು ಮಹಾರಾಷ್ಟ್ರ ವಿರುದ್ಧ ಸತತ ಎರಡನೇ ಅರ್ಧಶತಕ ದಾಖಲಿಸಿದರು. ಮೊದಲ ಇನಿಂಗ್ಸ್‌ನಲ್ಲಿ 13 ರನ್‌ಗಳ ಅಲ್ಪ ಮುನ್ನಡೆ ಪಡೆದ ಕರ್ನಾಟಕ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಮುಕೇಶ್ ಚೌಧರಿ (70ಕ್ಕೆ 3) ಅವರ ಬಿಗು ದಾಳಿಯ ಮಧ್ಯೆಯೂ ಮಯಂಕ್ ಅವರ ಬ್ಯಾಟಿಂಗ್ ಬಲದಿಂದ ಸವಾಲಿನ ಮೊತ್ತ ಗಳಿಸುವತ್ತ ಸಾಗಿದೆ.

ಪುಣೆಯ ಎಂಸಿಎ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿಯ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಪ್ರವಾಸಿ ತಂಡವು ಮೂರನೇ ದಿನವಾದ ಸೋಮವಾರ 49.4 ಓವರ್‌ಗಳಲ್ಲಿ 5 ವಿಕೆಟ್‌ಗೆ 144 ರನ್ ಗಳಿಸಿದೆ. ಒಟ್ಟಾರೆ 157 ರನ್‌ಗಳ ಮುನ್ನಡೆ ಸಾಧಿಸಿದ್ದು, ಕೊನೆಯ ದಿನದಾಟ ಕುತೂಹಲ ಮೂಡಿಸಿದೆ.

ಅನೀಶ್ ಕೆ.ವಿ. (17) ಮತ್ತು ಮಯಂಕ್ ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. 15ನೇ ಓವರ್‌ನಲ್ಲಿ ವಿಕಿ ಓಸ್ವಾಲ್ ಅವರ ಆಫ್ ಸ್ಪಿನ್ ದಾಳಿಗೆ ಅನೀಶ್ ಔಟಾಗುವ ಮೂಲಕ ಜೊತೆಯಾಟ ಮುರಿಯಿತು. ನಂತರ ಮಯಂಕ್ ಅವರನ್ನು ಸೇರಿಕೊಂಡ ಕೆ.ಎಲ್. ಶ್ರೀಜಿತ್ (29) ಎರಡನೇ ವಿಕೆಟ್‌ಗೆ 48 ರನ್ ಜೊತೆಯಾಟ ಆಡಿದರು.

ಈ ಹಂತದಲ್ಲಿ ಮುಕೇಶ್ ಪರಿಣಾಮಕಾರಿ ಬೌಲಿಂಗ್ ದಾಳಿ ನಡೆಸಿ ಪ್ರಮುಖ ಮೂರು ವಿಕೆಟ್‌ಗಳನ್ನು ಪಡೆದರು. ಎದುರಾಳಿ ತಂಡದ ವೇಗಕ್ಕೆ ಕಡಿವಾಣ ಹಾಕಿದರು. ಅದರಲ್ಲಿ, ಕಳೆದ ಪಂದ್ಯದಲ್ಲಿ ದ್ವಿಶತಕ ದಾಖಲಿಸಿದ್ದ ಕರುಣ್ ನಾಯರ್ (15) ಮತ್ತು ಸ್ಮರಣ್ ಆರ್. (4) ಅವರ ವಿಕೆಟ್‌ಗಳು ಸೇರಿದ್ದವು. ಅದಕ್ಕೂ ಮುನ್ನ ಶ್ರೀಜಿತ್ ಕೂಡ ಮುಕೇಶ್ ಅವರಿಗೆ ವಿಕೆಟ್ ಒಪ್ಪಿಸಿದ್ದರು.

ಒಂದು ಹಂತದಲ್ಲಿ 2 ವಿಕೆಟ್‌ಗೆ 131 ರನ್ ಗಳಿಸಿ ಸುಸ್ಥಿತಿಯಲ್ಲಿದ್ದ ಮಯಂಕ್ ಪಡೆ ನಂತರ 14 ರನ್‌ಗಳ ಅಂತರದಲ್ಲಿ 3 ವಿಕೆಟ್‌ಗಳನ್ನು ಕಳೆದುಕೊಂಡಿತು. ಮೊದಲ ಇನಿಂಗ್ಸ್‌ನಲ್ಲಿ 80 ರನ್ ಗಳಿಸಿದ್ದ ಮಯಂಕ್ ಎಚ್ಚರಿಕೆಯ ಆಟ ಪ್ರದರ್ಶಿಸಿ, ಕೊನೆಯ ದಿನಕ್ಕೆ ಬ್ಯಾಟಿಂಗ್ ಕಾಯ್ದಿರಿಸಿದ್ದಾರೆ. 145 ಎಸೆತಗಳನ್ನು ಎದುರಿಸಿರುವ ಅವರು 6 ಬೌಂಡರಿಗಳನ್ನು ಬಾರಿಸಿದ್ದಾರೆ.

ಇದಕ್ಕೂ ಮುನ್ನ, ಮಹಾರಾಷ್ಟ್ರ ತಂಡವು 6 ವಿಕೆಟ್‌ಗೆ 200 ರನ್‌ಗಳೊಂದಿಗೆ ದಿನದಾಟ ಆರಂಭಿಸಿತು. ಜಲಜ್ ಸಕ್ಸೆನಾ (72, 147ಎ) ಹಾಗೂ ಓಸ್ವಾಲ್ (20, 92ಎ) ಅವರು ತಂಡದ ಮೊತ್ತವನ್ನು 256 ರನ್‌ವರೆಗೆ ಹಿಗ್ಗಿಸಿದರು. ಈ ಜೋಡಿಯು ಸುಮಾರು 30 ಓವರ್‌ಗಳನ್ನು ಆಡಿ 73 ರನ್ ಸೇರಿಸಿತು. ನಂತರದಲ್ಲಿ ಅವರಿಬ್ಬರ ವಿಕೆಟ್ ಪಡೆಯುವ ಮೂಲಕ ವಿದ್ವತ್ ಕಾವೇರಪ್ಪ ಅವರು ಕರ್ನಾಟಕ ತಂಡವು ನಿಟ್ಟುಸಿರು ಬಿಡಲು ಕಾರಣರಾದರು.

282 ರನ್‌ಗಳಿಗೆ ಎಂಟು ವಿಕೆಟ್ ಕಳೆದುಕೊಂಡ ಆತಿಥೇಯ ತಂಡಕ್ಕೆ ಇನಿಂಗ್ಸ್ ಮುನ್ನಡೆ ಗಳಿಸಲು 31 ರನ್ ಅಗತ್ಯವಿತ್ತು. ಈ ಹಂತದಲ್ಲಿ ರಾಮಕೃಷ್ಣ ಘೋಷ್ (36;46ಎ) ಅವರು ಕೊಂಚ ಹೋರಾಟ ತೋರಿದರು. ಅವರಿಗೆ ಸಾಥ್ ನೀಡುವ ಪ್ರಯತ್ನದಲ್ಲಿದ್ದ ರಜನೀಶ್ ಗುರ್ಬಾನಿ (1;16ಎ) ಅವರನ್ನು ಮೊಹ್ಸಿನ್ ಖಾನ್ ಸ್ಪಿನ್ ಬಲೆಗೆ ಕೆಡವಿದರು. ಕೊನೆಯಲ್ಲಿ ಘೋಷ್ ಅವರನ್ನು ರನೌಟ್ ಮಾಡುವ ಮೂಲಕ ಕರ್ನಾಟಕದ ಆಟಗಾರರು ನಿರ್ಣಾಯಕವಾಗಬಹುದಾದ ಮುನ್ನಡೆ ಗಳಿಸಿದರು. ಆತಿಥೇಯ ತಂಡವು 99.2 ಓವರ್‌ಗಳಲ್ಲಿ 300 ರನ್‌ಗಳಿಗೆ ಆಲೌಟ್ ಆಯಿತು. ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 313 ರನ್ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 111 ಓವರ್‌ಗಳಲ್ಲಿ 313. ಮಹಾರಾಷ್ಟ್ರ: 99.2 ಓವರ್‌ಗಳಲ್ಲಿ 300 (ಭಾನುವಾರ 6 ವಿಕೆಟ್‌ಗೆ 200) (ಜಲಜ್ ಸಕ್ಸೆನಾ 72, ರಾಮಕೃಷ್ಣ ಘೋಷ್ 36; ವಿದ್ವತ್ ಕಾವೇರಪ್ಪ 74ಕ್ಕೆ 2, ಶ್ರೇಯಸ್ ಗೋಪಾಲ್ 70ಕ್ಕೆ 4, ಮೊಹ್ಸಿನ್ ಖಾನ್ 64ಕ್ಕೆ 3). ಎರಡನೇ ಇನಿಂಗ್ಸ್: ಕರ್ನಾಟಕ: 49.4 ಓವರ್‌ಗಳಲ್ಲಿ 5 ವಿಕೆಟ್‌ಗೆ 144 (ಮಯಂಕ್ ಅಗರವಾಲ್ ಔಟಾಗದೇ 64, ಕೆ.ಎಲ್.ಶ್ರೀಜಿತ್ 29; ಮುಕೇಶ್ ಚೌಧರಿ 70ಕ್ಕೆ 3).

ಅಜೇಯ ಅರ್ಧಶತಕ ದಾಖಲಿಸಿದ ಮಯಂಕ್ ಅಗರವಾಲ್

ಐತಿಹಾಸಿಕ ಜಯದತ್ತ ಜಮ್ಮು ಮತ್ತು ಕಾಶ್ಮೀರ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ತಂಡವು ರಣಜಿ ಟ್ರೋಫಿಯಲ್ಲಿ ದೆಹಲಿ ತಂಡದ ವಿರುದ್ಧ ಐತಿಹಾಸಿಕ ಗೆಲುವಿನತ್ತ ಹೆಜ್ಜೆಹಾಕಿದೆ.

ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ನಡೆಯುತ್ತಿರುವ ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ ಗೆಲುವಿಗೆ 179 ರನ್‌ಗಳ ಗುರಿ ಪಡೆದಿರುವ ಜಮ್ಮು ಕಾಶ್ಮೀರ ತಂಡವು ಮೂರನೇ ದಿನದಾಟದ (ಸೋಮವಾರ) ಅಂತ್ಯಕ್ಕೆ ಎರಡು ವಿಕೆಟ್‌ಗೆ 55 ರನ್ ಗಳಿಸಿದೆ. ಚಾರಿತ್ರಿಕ ಗೆಲುವಿಗೆ 124 ರನ್ ಅಗತ್ಯವಿದೆ.

ದೆಹಲಿ ತಂಡವು ಎರಡು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 211 ಮತ್ತು 277 ರನ್ ಗಳಿಸಿತ್ತು. ಜಮ್ಮು ಕಾಶ್ಮೀರ ತಂಡವು ಮೊದಲ ಇನಿಂಗ್ಸ್‌ನಲ್ಲಿ 310 ರನ್ ಗಳಿಸಿ, 99 ರನ್‌ಗಳ ಮುನ್ನಡೆ ಸಾಧಿಸಿತ್ತು.

ಸರಣಿ ಸೋತಾಗ ವೈಯಕ್ತಿಕ ಆಟ ಸಂಭ್ರಮಿಸದಿರಿ: ಗಂಭೀರ್

ನವದೆಹಲಿ (ಪಿಟಿಐ): ಸೋತ ಪಂದ್ಯಗಳಲ್ಲಿ 'ಶ್ಲಾಘನಾರ್ಹ' ಪ್ರದರ್ಶನ ನೀಡಿದ್ದರೂ ಅದನ್ನು ಸಂಭ್ರಮಿಸಲೇಬಾರದು ಎಂದು ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅಭಿಪ್ರಾಯಪಟ್ಟಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧ ಇತ್ತೀಚಿನ ಏಕದಿನ ಸರಣಿ ಸೋಲನ್ನು ಅವರು ವಿಮರ್ಶಾತ್ಮಕವಾಗಿ ಅವಲೋಕಿಸಿದ್ದು ಹೀಗೆ. ವೈಯಕ್ತಿಕವಾಗಿ ಯಶಸ್ಸು ಗಳಿಸಿದವರ ಬಗ್ಗೆ ತಮಗೆ ಸಂತಸವಿದೆ. ಆದರೆ ಸಮಗ್ರ ದೃಷ್ಟಿಯಿಂದ ನೋಡಿದಾಗ (ಈ ಸಂದರ್ಭದಲ್ಲಿ ಸರಣಿ ಸೋಲು) ಹಳಿ ತಪ್ಪಬಾರದು' ಎಂದು ಅವರು 'ಬಿಸಿಸಿಐ ಟಿವಿ'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಭಾರತದ ಅನುಭವಿ ಬ್ಯಾಟರ್‌ಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಐಪಿಎಲ್ ನಂತರ ಮೊದಲ ಬಾರಿ ಆ ಏಕದಿನ ಸರಣಿಯಲ್ಲಿ ಆಡಿದ್ದರು. ಮೂರನೇ ಏಕದಿನ ಪಂದ್ಯದಲ್ಲಿ ಶತಕ ಹೊಡೆದ ಶರ್ಮಾ ಅವರು 'ಸರಣಿಯ ಆಟಗಾರ'ರಾಗಿದ್ದರು. ಆ ಪಂದ್ಯದಲ್ಲಿ ಗೆದ್ದ ಭಾರತ 'ವೈಟ್‌ವಾಷ್' ತಪ್ಪಿಸಿಕೊಂಡಿತ್ತು. ಭಾರತ ಸೋತ ಎರಡನೇ ಪಂದ್ಯದಲ್ಲಿ ಅವರು 73 ರನ್ ಬಾರಿಸಿದ್ದರು.

ಮೊದಲ ಎರಡು ಪಂದ್ಯಗಳಲ್ಲಿ 'ಶೂನ್ಯ ಸಂಪಾದನೆ' ಮಾಡಿದ್ದ ಕೊಹ್ಲಿ ಅವರು ಅಂತಿಮ ಪಂದ್ಯದಲ್ಲಿ ಅಜೇಯ 74 ರನ್ ಹೊಡೆದಿದ್ದರು. ಶ್ರೇಯಸ್ ಅಯ್ಯರ್ ಮತ್ತು ಅಕ್ಷರ್ ಪಟೇಲ್ ಕೂಡ ವೈಯಕ್ತಿಕವಾಗಿ ಕೆಲ ಬಾರಿ ಮಿಂಚಿದ್ದರು.

ಆದರೆ ಗಂಭೀರ್ ಅವರು ಸಂದರ್ಶನದಲ್ಲಿ ಯಾವ ಆಟಗಾರನ ಹೆಸರನ್ನೂ ಉಲ್ಲೇಖಿಸಲಿಲ್ಲ. ಕೇಳಿದ ಪ್ರಶ್ನೆಗಳಿಗೂ ನಿರ್ದಿಷ್ಟವಾಗಿ ಯಾರನ್ನೂ ಹೆಸರಿಸಲಿಲ್ಲ.

'ಎಂದಿಗೂ ವೈಯಕ್ತಿಕ ಪ್ರದರ್ಶನ ಮುಖ್ಯವಾಗಲೇಬಾರದು ಎಂಬುದರಲ್ಲಿ ನಾನು ನಂಬಿಕೆಯಿಟ್ಟವ. ವೈಯಕ್ತಿಕ ಪ್ರದರ್ಶನಗಳಿಂದ ನನಗೆ ಸಂಸತವಾಗುತ್ತದೆ. ಆದರೆ ಅಂತಿಮವಾಗಿ ಸರಣಿ ಸೋತೆವು. ಅಂತಿಮವಾಗಿ ಗಣನೆಗೆ ಬರುವುದು ಆ ಸರಣಿ ಸೋಲು. ಕೋಚ್ ಆಗಿ ಸರಣಿ ಸೋಲು ನನಗೆ ಇಷ್ಟವಾಗುವುದಿಲ್ಲ' ಎಂದು ಅವರು ತಮ್ಮ ಹೇಳಿಕೆ ಸಮರ್ಥಿಸಿಕೊಂಡರು.

ರೋಹಿತ್ ಮತ್ತು ಕೊಹ್ಲಿ ಅವರು ಟೆಸ್ಟ್ ಮತ್ತು ಟಿ20 ಮಾದರಿಯಿಂದ ನಿವೃತ್ತರಾಗಿದ್ದರು. ಹೀಗಾಗಿ ಏಕದಿನ ಮಾದರಿಗೆ ಸೀಮಿತಗೊಂಡಿದ್ದು, ಅಭಿಮಾನಿಗಳು ಅವರ ಆಟದ ಬಗ್ಗೆ ಕುತೂಹಲಭರಿತರಾಗಿದ್ದರು.

ಏಕದಿನ ಸರಣಿಯ ನಂತರ ನಡೆದ ಟಿ20 ಸರಣಿಯನ್ನು ಭಾರತ 2–1 ರಿಂದ ಜಯಿಸಿತ್ತು. 'ಅಂತಿಮವಾಗಿ ನಾವು ಪ್ರತಿನಿಧಿಸುವುದು ದೇಶವನ್ನು. ಟಿ20 ಸರಣಿ ಭಿನ್ನವಾದುದು. ನಾವು ಸರಣಿ ಗೆದ್ದೆವು. ಗೆಲುವಿನಲ್ಲಿ ಸಾಕಷ್ಟು ಸಕಾರಾತ್ಮಕ ಅಂಶಗಳಿದ್ದವು. ಆದರೆ ಕಲಿಯುವುದೂ ಇತ್ತು' ಎಂದರು.

ಗೌತಮ್ ಗಂಭೀರ್, ರೋಹಿತ್ ಶರ್ಮಾ

ಶಮಿ ಪುನರಾಗಮನ ಸಾಧ್ಯತೆ ಕ್ಷೀಣ

ನವದೆಹಲಿ (ಪಿಟಿಐ): ಭಾರತ ತಂಡದ ಅನುಭವಿ ಬೌಲರ್ ಆಗಿದ್ದ ಮೊಹಮ್ಮದ್ ಶಮಿ ಈ ಬಾರಿಯ ರಣಜಿ ಋತುವಿನಲ್ಲಿ ಈಗಾಗಲೇ 93 ಓವರುಗಳನ್ನು ಬೌಲ್ ಮಾಡಿದ್ದಾರೆ. ಆದರೆ, ದೇಶ ಕಂಡ ಶ್ರೇಷ್ಠ ವೇಗಿಗಳ ಪೈಕಿ ಒಬ್ಬರಾದ ಶಮಿ ಸದ್ಯ ಟೆಸ್ಟ್ ತಂಡದಲ್ಲಿ ಆಡುವ ಅಥವಾ ಮುಂದೆ ಏಕದಿನ ತಂಡದಲ್ಲಿ ಅವಕಾಶ ಪಡೆಯುವ ಸಾಧ್ಯತೆ ಕ್ಷೀಣವಾಗಿದೆ.

35 ವರ್ಷ ವಯಸ್ಸಿನ ಶಮಿ ಮಾರ್ಚ್‌ನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲಿ ಕೊನೆಯ ಬಾರಿ ಭಾರತಕ್ಕೆ ಆಡಿದ್ದರು. ನಂತರ ಯಾವುದೇ ಮಾದರಿಯ ಸರಣಿಗೆ ಅವರನ್ನು ಪರಿಗಣಿಸಿಲ್ಲ. 2023ರಲ್ಲಿ ಏಕದಿನ ವಿಶ್ವಕಪ್ ವೇಳೆ ಆದ ಪಾದದ ಗಾಯಕ್ಕೆ ಶಸ್ತ್ರಚಿಕಿತ್ಸೆಗೆ ಒಳಗಾದ ಬಳಿಕ ಅವರು ದೀರ್ಘ ಕಾಲ ಆಟದಿಂದ ವಿರಾಮ ಪಡೆದಿದ್ದರು.

ಈಗಿನ ಪರಿಸ್ಥಿತಿಯಲ್ಲಿ, ಭಾರತದ ಕ್ರಿಕೆಟ್ ಸಾಗುತ್ತಿರುವ ದಿಕ್ಕು ಗಮನಿಸಿದರೆ ಶಮಿ ಅವರು ಮೂರು ಮಾದರಿಗಳಲ್ಲಿ ಆಡಿರುವ ಒಟ್ಟು 197 ಅಂತರರಾಷ್ಟ್ರೀಯ ಪಂದ್ಯಗಳಿಗೆ ಇನ್ನಷ್ಟು ಸೇರುವ ಸಾಧ್ಯತೆ ದೂರವಾಗಿದೆ.

ಟೆಸ್ಟ್ ಮತ್ತು ಟಿ20 ಕ್ರಿಕೆಟ್‌ನಲ್ಲಿ ಪ್ರಸಿದ್ಧ ಕೃಷ್ಣ ಮತ್ತು ಆಕಾಶ್ ದೀಪ್ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಹೀಗಾಗಿ ಅನುಭವಿ ಬೌಲರ್‌ಗೆ ಉಳಿದಿರುವುದು ಏಕದಿನ ಮಾದರಿ. ಆದರೆ ಭಾರತ ಮುಂದಿನ (2027ರ) ಏಕದಿನ ವಿಶ್ವಕಪ್ ಆಡುವಾಗ ಅವರಿಗೆ 37 ವರ್ಷಗಳು ತುಂಬಲಿವೆ. ಮೊಣಕಾಲು ನೋವು ಸೇರಿ ಮರುಕಳಿಸುತ್ತಿರುವ ಗಾಯದ ಇತಿಹಾಸ ನೋಡಿದರೆ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಕಡಿಮೆ.

ಆಯ್ಕೆಗಾರರ ಬಗ್ಗೆ ಶಮಿ ಅಸಮಾಧಾನವನ್ನೂ ಹೊರಹಾಕಿದ್ದರು. ತಾವು ರಣಜಿ ಆಡುತ್ತಿದ್ದು ಫಿಟ್ ಆಗಿರುವ ಬಗ್ಗೆ ತಿಳಿದುಕೊಳ್ಳುವುದು ಆಯ್ಕೆಗಾರರ ಕೆಲಸ ಎಂದಿದ್ದರು. ಆದರೆ ಅವರನ್ನು ಪರಿಗಣಿಸದಿರಲು ಫಿಟ್ನೆಸ್ ಒಂದೇ ಕಾರಣವಲ್ಲ ಎಂದು ಬಿಸಿಸಿಐನ ಮೂಲಗಳು ತಿಳಿಸಿವೆ.

'ರಾಷ್ಟ್ರೀಯ ಆಯ್ಕೆಗಾರರು ಮತ್ತು ಬಿಸಿಸಿಐ ಶ್ರೇಷ್ಠತಾ ಕೇಂದ್ರದ ನೆರವು ಸಿಬ್ಬಂದಿ ಸಾಕಷ್ಟು ಸಲ ಶಮಿ ಅವರಿಗೆ ಕರೆ ಮಾಡಿದ್ದು ಫಿಟ್ನೆಸ್ ಬಗ್ಗೆ ವಿಚಾರಿಸಿದ್ದಾರೆ. ಇಂಗ್ಲೆಂಡ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅವರು ಮೂರು ಟೆಸ್ಟ್‌ಗಿಂತ ಹೆಚ್ಚು ಆಡುವುದಿಲ್ಲ ಎಂದು ಹೇಳಿದ್ದಾಗ ಆಯ್ಕೆ ಸಮಿತಿಯು ಶಮಿ ಅವರ ಸೇವೆ ಪಡೆಯಲು ಆಸಕ್ತಿ ತಾಳಿತ್ತು' ಎಂದು ಮಂಡಳಿಯ ಹಿರಿಯ ಅಧಿಕಾರಿ ಪಿಟಿಐಗೆ ತಿಳಿಸಿದ್ದಾರೆ.

'ಶಮಿ ಅವರಂತಹ ವರ್ಚಸ್ಸಿನ ಬೌಲರ್‌ನನ್ನು ಪಡೆಯಲು ಯಾರು ತಾನೇ ಬಯಸುವುದಿಲ್ಲ. ಸೀನಿಯರ್ ಆಯ್ಕೆ ಸಮಿತಿಯು ಅವರಿಗೆ ಫಿಟ್ನೆಸ್ ಸ್ಥಿತಿಗತಿ ಕೇಳಿ ಸಂದೇಶಗಳನ್ನು ಕಳುಹಿಸಿತ್ತು. ಇಂಗ್ಲೆಂಡ್ ಲಯನ್ಸ್ ವಿರುದ್ಧ ಕ್ಯಾಂಟರ್ಬರಿ ಅಥವಾ ನಾರ್ತಾಂಪ್ಟನ್‌ನಲ್ಲಿ ಭಾರತ 'ಎ' ತಂಡದ ಪರ ಕಡೇಪಕ್ಷ ಒಂದು ಪಂದ್ಯವನ್ನಾದರೂ ಆಡುವಂತೆ ಮನವಿ ಮಾಡಿತ್ತು' ಎಂದು ಅವರು ತಿಳಿಸಿದ್ದಾರೆ. ಆದರೆ ಕಾರ್ಯದೊತ್ತಡ ನಿಭಾಯಿಸಬೇಕಿದ್ದು, ತಮ್ಮನ್ನು ಪ್ರವಾಸಕ್ಕೆ ಪರಿಗಣಿಸದಿರುವಂತೆ ಅವರು ತಿಳಿಸಿದ್ದರು ಎನ್ನಲಾಗಿದೆ.

ಶಮಿ ಈ ಋತುವಿನಲ್ಲಿ ಬಂಗಾಳಕ್ಕೆ ಮೂರು ರಣಜಿ ಪಂದ್ಯಗಳನ್ನಾಡಿದ್ದಾರೆ. ಸೂರತ್‌ನಲ್ಲಿ ರೈಲ್ವೇಸ್ ವಿರುದ್ಧ ನಡೆಯುತ್ತಿರುವ ಅವರು ಆಡಿಲ್ಲ.

ಶಮಿಗೆ ಗಂಗೂಲಿ ಬೆಂಬಲ (ಕೋಲ್ಕತ್ತ ವರದಿ): 'ಶಮಿ ಅವರು ಕೌಶಲದ ಬೌಲರ್. ಅವರು ಭಾರತದ ಮೂರೂ ಮಾದರಿಯ ತಂಡದಲ್ಲಿ ಆಡಲು ಯೋಗ್ಯರು. ಅವರು ಫಿಟ್ ಆಗಿದ್ದು, ಅಮೋಘವಾಗಿ ಬೌಲಿಂಗ್ ಮಾಡುತ್ತಿದ್ದಾರೆ' ಎಂದು ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಹೇಳಿದ್ದಾರೆ.

ಚಟಕೆ ಸುದ್ದಿ

'ರಿಚಾ ಹೆಸರಲ್ಲಿ ಕ್ರಿಕೆಟ್ ಕ್ರೀಡಾಂಗಣ'

ಕೋಲ್ಕತ್ತ (ಪಿಟಿಐ): ಸಿಲಿಗುರಿಯಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಿ, ರಿಚಾ ಘೋಷ್ ಅವರ ಹೆಸರನ್ನು ಇಡಲಾಗುವುದು ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ತಿಳಿಸಿದ್ದಾರೆ.

22 ವರ್ಷ ವಯಸ್ಸಿನ ವಿಕೆಟ್ ಕೀಪರ್–ಬ್ಯಾಟರ್ ರಿಚಾ, ಭಾರತ ತಂಡ ಇತ್ತೀಚೆಗೆ ಏಕದಿನ ವಿಶ್ವಕಪ್ ಗೆಲ್ಲುವಲ್ಲಿ ಮಹತ್ವದ ಕಾಣಿಕೆ ನೀಡಿದವರಲ್ಲಿ ಒಬ್ಬರಾಗಿದ್ದಾರೆ. ಅವರು ಉತ್ತರ ಬಂಗಾಳದ ಸಿಲಿಗುರಿಯವರು.

ಪಶ್ಚಿನ ಬಂಗಾಳ ಸರ್ಕಾರವು ರಿಚಾ ಅವರಿಗೆ ಶನಿವಾರ 'ಬಂಗ ಭೂಷಣ' ಪ್ರಶಸ್ತಿ ನೀಡಿ ಗೌರವಿಸಿತ್ತು. ಜೊತೆಗೆ ಡಿಎಸ್‌ಪಿ ಆಗಿಯೂ ನೇಮಕ ಮಾಡಿತ್ತು. ಅಲ್ಲದೆ, ಚಿನ್ನದ ಸರವನ್ನೂ ಉಡುಗೊರೆಯಾಗಿ ನೀಡಲಾಗಿತ್ತು.

ಟಿ20 ಟ್ರೋಫಿ: ಕರ್ನಾಟಕ ಫೈನಲ್‌ಗೆ

ಬೆಂಗಳೂರು: ಆಲ್‌ರೌಂಡ್ ಪ್ರದರ್ಶನ ತೋರಿದ ಕರ್ನಾಟಕ ತಂಡವು ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಫೈನಲ್ ಪ್ರವೇಶಿಸಿತು.

ಕೋಲ್ಕತ್ತದ ಆದಿತ್ಯ ಅಕಾಡೆಮಿ ಮೈದಾನದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು 48 ರನ್‌ಗಳಿಂದ ಬರೋಡಾ ತಂಡವನ್ನು ಮಣಿಸಿತು. ರಾಜ್ಯ ತಂಡವು ಇದೇ 12ರಂದು ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಆಂಧ್ರ ಪ್ರದೇಶ ತಂಡವನ್ನು ಎದುರಿಸಲಿದೆ.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಶ್ರೇಯಾ ಎಸ್. ಚವ್ಹಾಣ್ ಅವರ ಅರ್ಧಶತಕದ ನೆರವಿನಿಂದ 6 ವಿಕೆಟ್‌ಗೆ 117 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಬರೋಡಾ ತಂಡವು 19.2 ಓವರ್‌ಗಳಲ್ಲಿ 69 ರನ್‌ಗಳಿಗೆ ಕುಸಿಯಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 117 (ಶ್ರೇಯಾ ಎಸ್. ಚವ್ಹಾಣ್ 58, ಕಾರ್ಣಿಕಾ ಕಾರ್ತಿಕ್ ಔಟಾಗದೇ 27; ರಿದ್ಧಿ ಸಿಂಗ್ 29ಕ್ಕೆ 2). ಬರೋಡಾ: 19.2 ಓವರ್‌ಗಳಲ್ಲಿ 69 (ದೀಕ್ಷಾ ಜೆ. 29ಕ್ಕೆ 2, ವಂದಿತಾ ಕೆ. ರಾವ್ 21ಕ್ಕೆ 2).

13ರಿಂದ ಪಿಕಲ್‌ಬಾಲ್ ರಾಷ್ಟ್ರೀಯ ಟೂರ್ನಿ

ಬೆಂಗಳೂರು: ಭಾರತ ಪಿಕಲ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ಮೊದಲ ಆವೃತ್ತಿಯ ಪಿಕಲ್‌ಬಾಲ್ ರಾಷ್ಟ್ರೀಯ ಟೂರ್ನಿಯನ್ನು ಇದೇ 13ರಿಂದ 16ರವರೆಗೆ ಕನಕಪುರ ಮುಖ್ಯರಸ್ತೆಯ ಸ್ಪೋರ್ಟ್ಸ್ ಸ್ಕೂಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಪಿಕಲ್‌ಬಾಲ್ ಸಂಸ್ಥೆಯ ಅಧ್ಯಕ್ಷ ಶ್ರೀಹರ್ಷ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ಪಿಕಲ್‌ಬಾಲ್ ಸಂಸ್ಥೆಯ ಆತಿಥ್ಯದಲ್ಲಿ ನಡೆಯುವ ಈ ಟೂರ್ನಿಯಲ್ಲಿ 20ಕ್ಕೂ ಅಧಿಕ ರಾಜ್ಯಗಳಿಂದ 1200ಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. 12ರಿಂದ 70ವರ್ಷದವರೆಗಿನ ಸ್ಪರ್ಧಿಗಳು ತಮ್ಮ ಕೌಶಲ ಪ್ರದರ್ಶಿಸಲಿದ್ದಾರೆ. ಪುರುಷರು, ಮಹಿಳೆಯರು ಮತ್ತು ಮಿಶ್ರ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿದೆ ಎಂದು ತಿಳಿಸಿದರು.

'ಭಾರತ ಪಿಕಲ್‌ಬಾಲ್ ಸಂಸ್ಥೆಯು ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ರಾಷ್ಟ್ರೀಯ ಕ್ರೀಡಾ ಒಕ್ಕೂಟ (ಎನ್‌ಎಸ್‌ಎಫ್) ಮಾನ್ಯತೆ ಪಡೆದ ನಂತರ ಹಮ್ಮಿಕೊಂಡ ಮೊದಲ ರಾಷ್ಟ್ರೀಯ ಟೂರ್ನಿ ಇದಾಗಿದೆ' ಎಂದು ಶ್ರೀಹರ್ಷ ಹೇಳಿದರು.

ಭಾರತ ಫುಟ್‌ಬಾಲ್ ತಂಡದ ಆಟಗಾರ ಆಶಿಕ್ ಕುರುಣಿಯನ್, ರಾಜ್ಯ ಕುಸ್ತಿ ಸಂಘದ ಅಧ್ಯಕ್ಷ ಗುಣರಂಜನ್ ಶೆಟ್ಟಿ, ಸ್ಪೋರ್ಟ್ಸ್ ಸ್ಕೂಲ್‌ನ ಸಹ ಸಂಸ್ಥಾಪಕ ಶ್ರೀನಿವಾಸ್ ಟಿ.ಆರ್. ಅವರು ಸುದ್ದಿಗೋಷ್ಠಿ ವೇಳೆ ಹಾಜರಿದ್ದು, ಟೂರ್ನಿಗೆ ಬೆಂಬಲ ಘೋಷಿಸಿದರು.

ದಕ್ಷಿಣ ಆಫ್ರಿಕಾ ತಂಡ ಸೇರಿಕೊಂಡ ಬವುಮಾ

ಕೋಲ್ಕತ್ತ (ಪಿಟಿಐ): ಬೆಂಗಳೂರಿನಲ್ಲಿ ನಡೆದ ಭಾರತ 'ಎ' ತಂಡದ ವಿರುದ್ಧ 'ಟೆಸ್ಟ್' ಪಂದ್ಯದಲ್ಲಿ ಆಡಿದ್ದ ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಅವರು ಸೋಮವಾರ ರಾಷ್ಟ್ರೀಯ ಸೀನಿಯರ್ ತಂಡವನ್ನು ಸೇರಿಕೊಂಡರು. ದಕ್ಷಿಣ ಆಫ್ರಿಕಾ ತಂಡವು ಇಲ್ಲಿನ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಶುಕ್ರವಾರದಿಂದ ಭಾರತ ತಂಡದ ವಿರುದ್ಧ ಮೊದಲ ಟೆಸ್ಟ್ ಆಡಲಿದೆ.

ತೆಂಬಾ ಅವರ ಸೇರ್ಪಡೆಯಿಂದ ತಂಡ ಪೂರ್ಣಪ್ರಮಾಣದ ಸಾಮರ್ಥ್ಯ ಪಡೆದಂತಾಗಿದೆ. ಕೋಚ್ ಶುಕ್ರಿ ಕೊನ್ರಾಡ್, ವೇಗದ ಬೌಲರ್‌ಗಳಾದ ಕಗಿಸೊ ರಬಾಡ, ಮಾರ್ಕೊ ಯಾನ್ಸೆನ್ ಮತ್ತು ಇತರ ಕೆಲವು ಆಟಗಾರರಿದ್ದ ತಂಡದ ಮೊದಲ ಬ್ಯಾಚ್ ಭಾನುವಾರ ಬೆಳಿಗ್ಗೆ ಇಲ್ಲಿಗೆ ಬಂದಿಳಿದಿತ್ತು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪ್ರಶಸ್ತಿ ಉಳಿಸಿಕೊಳ್ಳುವ ಅಭಿಯಾನದ ಭಾಗವಾಗಿ ಹೋದ ತಿಂಗಳು ಪಾಕಿಸ್ತಾನ ವಿರುದ್ಧ ಎರಡು ಟೆಸ್ಟ್‌ಗಳ ಸರಣಿಯಲ್ಲಿ ತೆಂಬಾ ಅವರು ಆಡಬೇಕಿತ್ತು. ಆದರೆ ಮೀನಖಂಡದ ನೋವಿನಿಂದಾಗಿ ವಿಶ್ರಾಂತಿ ಪಡೆದಿದ್ದರು.

ಮಧ್ಯಮ ಕ್ರಮಾಂಕದ ಬ್ಯಾಟರ್ ಜುಬೇರ್ ಹಮ್ಜಾ ಅವರೂ ಸೋಮವಾರ ತಂಡಕ್ಕೆ ಸೇರ್ಪಡೆಯಾದರು.

ಎರಡೂ ತಂಡಗಳು ಟೆಸ್ಟ್ ಪಂದ್ಯಕ್ಕೆ ಪೂರ್ವಭಾವಿಯಾಗಿ ಮಂಗಳವಾರ ಅಭ್ಯಾಸದಲ್ಲಿ ತೊಡಗಲಿವೆ.

ಫಿಬಾ ಏಷ್ಯಾ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಕ್ವೀನ್ಸ್ ಪ್ರೀಮಿಯರ್ ಲೀಗ್‌ನಲ್ಲಿ ಪಾಲ್ಗೊಳ್ಳುತ್ತಿರುವವರಿಗೆ ಬ್ಯಾಸ್ಕೆಟ್‌ಬಾಲ್ ಆಟದ ಬಗ್ಗೆ ಮಾರ್ಗದರ್ಶನ ನೀಡಿದರು

ಕ್ಯೂಪಿಎಲ್ 2ನೇ ಆವೃತ್ತಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುನಿರೀಕ್ಷಿತ ಕ್ವೀನ್ಸ್ ಪ್ರೀಮಿಯರ್ ಲೀಗ್‌ನ (ಕ್ಯೂಪಿಎಲ್) ಎರಡನೇ ಆವೃತ್ತಿಯು ಬೆಂಗಳೂರು ನಗರ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬೇಸ್ ಕ್ಯಾಂಪ್‌ನಲ್ಲಿ ಸೋಮವಾರ ಆರಂಭಗೊಂಡಿತು. ಮೊದಲ ದಿನದಂದು ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್ ಹಾಗೂ ಪಿಕಲ್‌ಬಾಲ್ ಪಂದ್ಯಗಳು ನಡೆದವು.

ಕೆಎನ್‌ಎಸ್ ಇನ್‌ಫ್ರಾ ಪ್ರಸ್ತುತಪಡಿಸುತ್ತಿರುವ ಈ ಲೀಗ್‌ಗೆ, ಫಿಬಾ ಏಷ್ಯಾ ಅಧ್ಯಕ್ಷ ಹಾಗೂ ರಾಜ್ಯ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಅಧಿಕೃತ ಚಾಲನೆ ನೀಡಿದರು. ಕ್ಯೂಪಿಎಲ್ ಸಂಸ್ಥಾಪಕ ಮಹೇಶ್ ಕುಮಾರ್ ಜೆ. ಹಾಗೂ ನಟ ಪ್ರಮೋದ್ ಶೆಟ್ಟಿ ಅವರು ಈ ವೇಳೆ ಉಪಸ್ಥಿತರಿದ್ದರು.

ಬ್ಯಾಡ್ಮಿಂಟನ್ ಸ್ಪರ್ಧೆಯ ಫೈನಲ್‌ನಲ್ಲಿ ಹುಬ್ಬಳ್ಳಿ ಕ್ವೀನ್ಸ್ ತಂಡದ ಆಟಗಾರ್ತಿಯರು ಶಿವಮೊಗ್ಗ ಕ್ವೀನ್ಸ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಲೀಗ್‌ನ ಬೌಲಿಂಗ್, ಗೋ ಕಾರ್ಟಿಂಗ್ ಹಾಗೂ ಲೇಸರ್ ಟ್ಯಾಗ್ ಸ್ಪರ್ಧೆಗಳು ಮಾರತ್ತಹಳ್ಳಿಯ ಇ–ಝೋನ್‌ನಲ್ಲಿ ಮಂಗಳವಾರ ನಡೆಯಲಿವೆ.

ಸಿನಿಮಾ ತಾರೆಯರ ನಾಯಕತ್ವದ 10 ತಂಡಗಳು ಈ ಲೀಗ್‌ನಲ್ಲಿ ಭಾಗವಹಿಸುತ್ತಿವೆ. ಒಟ್ಟು 12 ವಿಧದ ಆಟಗಳನ್ನು ಆಡಿಸಲಾಗುತ್ತದೆ.

ಜೂನಿಯರ್ ಹಾಕಿ ತಂಡಕ್ಕೆ ಜ್ಯೋತಿ ಸಾರಥ್ಯ

ನವದೆಹಲಿ (ಪಿಟಿಐ): ಜ್ಯೋತಿ ಸಿಂಗ್ ಅವರು ಚಿಲಿಯ ಸ್ಯಾಂಟಿಯಾಗೊದಲ್ಲಿ ಇದೇ 25ರಿಂದ ಡಿಸೆಂಬರ್ 13ರವರೆಗೆ ನಡೆಯಲಿರುವ ಎಫ್‌ಐಎಚ್ ಮಹಿಳಾ ಜೂನಿಯರ್ ಹಾಕಿ ವಿಶ್ವಕಪ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ವಿಶ್ವಕಪ್‌ಗೆ 20 ಆಟಗಾರ್ತಿಯರ ತಂಡವನ್ನು ಹಾಕಿ ಇಂಡಿಯಾ ಸೋಮವಾರ ಪ್ರಕಟಿಸಿದೆ. ಅದರಲ್ಲಿ ಇಬ್ಬರು ಬದಲಿ ಆಟಗಾರ್ತಿಯರು ಸೇರಿದ್ದಾರೆ. ತುಷಾರ್ ಖಾಂಡ್ಕರ್ ಅವರು ತಂಡಕ್ಕೆ ಮಾರ್ಗದರ್ಶನ ನೀಡಲಿದ್ದಾರೆ.

ತಂಡ ಹೀಗಿದೆ: ಗೋಲ್‌ಕೀಪರ್‌ಗಳು: ನಿಧಿ, ಎಂಜಿಲ್ ಹರ್ಷರಾಣಿ ಮಿಂಜ್; ಡಿಫೆಂಡರ್‌ಗಳು: ಮನೀಶಾ, ಲಾಲ್ ತನ್ಲುಅಲಂಗಿ, ಸಾಕ್ಷಿ ಶುಕ್ಲಾ, ಪೂಜಾ ಸಾಹೂ, ನಂದಿನಿ; ಮಿಡ್‌ಫೀಲ್ಡರ್‌ಗಳು: ಸಾಕ್ಷಿ ರಾಣಾ, ಇಶಿಕಾ, ಸುನೆಲಿಟಾ ಟೊಪ್ಪೊ, ಜ್ಯೋತಿ ಸಿಂಗ್, ಖೈದಂ ಶಿಲೇಮಾ ಚಾನು, ಬಿನಿಮಾ ಧಾನ್; ಫಾರ್ವರ್ಡ್‌ಗಳು: ಸೋನಮ್, ಪೂರ್ಣಿಮಾ ಯಾದವ್, ಕನಿಕಾ ಸಿವಾಚ್, ಹಿನಾ ಬಾನೊ, ಸುಖವೀರ್ ಕೌರ್.

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಶ್ರೀ ರೋಹನ್ ಬೋಪಣ್ಣ, ಅಂತರರಾಷ್ಟ್ರೀಯ ಟೆನ್ನಿಸ್ ಕ್ರೀಡಾಪಟು

ಗುರಿ: ಒಲಿಂಪಿಕ್ಸ್ 2028
ಪ್ರತಿಭೆಗೆ ಪ್ರೋತ್ಸಾಹ:
ರಾಜ್ಯದ ಕ್ರೀಡಾಪಟುಗಳಿಂದ ಪ್ರೋತ್ಸಾಹಧನ ಹಾಗೂ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ
ಸೇವಾಸಿಂಧು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
https://sevasindhu.karnataka.gov.in

ಗುರಿ : ಒಲಿಂಪಿಕ್ಸ್ 2028
ಒಲಿಂಪಿಕ್ಸ್ ನಲ್ಲಿರುವ ಅಧಿಕೃತ ಕ್ರೀಡೆಗಳಲ್ಲಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಉನ್ನತ ಸಾಧನೆ ದಾಖಲಿಸಿರುವ ರಾಜ್ಯದ **60 ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ, ಪ್ರತಿವರ್ಷ ತಲಾ ₹10.00 ಲಕ್ಷ ಪ್ರೋತ್ಸಾಹಧನ ನೀಡಲಾಗುವುದು.**

ಪ್ರೋತ್ಸಾಹಧನ ಯೋಜನೆ

ನಗದು ಪುರಸ್ಕಾರ	2023 ಮತ್ತು 2024ನೇ ಸಾಲಿನಲ್ಲಿ ರಾಷ್ಟ್ರೀಯ / ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ/ ಪದಕ ವಿಜೇತರಾದ ರಾಜ್ಯದ ಕ್ರೀಡಾಪಟುಗಳಿಗೆ.
ಶೈಕ್ಷಣಿಕ ಶುಲ್ಕ ಮರುಪಾವತಿ	ರಾಷ್ಟ್ರೀಯ/ಅಂತರರಾಷ್ಟ್ರೀಯದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ (ವೃತಿಪರ ಕೋರ್ಸ್ ಒಳಗೊಂಡಂತೆ) ವಿದ್ಯಾಭ್ಯಾಸದಲ್ಲಿ ನಿರತರಾದ ಕ್ರೀಡಾಪಟುಗಳಿಗೆ.
ಕ್ರೀಡಾ ವಿದ್ಯಾರ್ಥಿವೇತನ	2024-25ನೇ ಸಾಲಿನಲ್ಲಿ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದ ಹಾಗೂ ರಾಷ್ಟಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ / ಪದಕ ವಿಜೇತರಾದ 6ನೇ ತರಗತಿಯಿಂದ 10ನೇ ತರಗತಿವರೆಗಿನ ಕ್ರೀಡಾಪಟುಗಳಿಗೆ.

ಕ್ರೀಡಾ ಪ್ರಶಸ್ತಿಗಳು - 2024

ಏಕಲವ್ಯ ಪ್ರಶಸ್ತಿ	ಕ್ರೀಡಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ
ಜೀವಮಾನ ಸಾಧನೆ ಪ್ರಶಸ್ತಿ	ಸಾಧಕ ಕ್ರೀಡಾಪಟುಗಳನ್ನು ರೂಪಿಸಿದ ರಾಜ್ಯದ ತರಬೇತುದಾರರಿಗೆ.
ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ	ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳ ಸಾಧಕ ಕ್ರೀಡಾಪಟುಗಳಿಗೆ.
ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ	ರಾಜ್ಯದ ಕ್ರೀಡಾ ಅಭಿವೃದ್ಧಿಗೆ ಕೊಡುಗೆ ನೀಡಿದ ಕ್ರೀಡಾ ಪೋಷಕ ಸಂಸ್ಥೆಗಳಿಗೆ.

ಸಾಧಕ ಕ್ರೀಡಾಪಟುಗಳಿಗೆ ಗುಂಪು-ಎ ಮತ್ತು ಬಿ ವೃಂದದ ಹುದ್ದೆಗಳಿಗೆ ನೇರ ನೇಮಕಾತಿಗೆ ಅವಕಾಶ ಪತ್ರ ವಿತರಣಾ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು. ಡಾ. ಕೆ. ಗೋವಿಂದರಾಜ್, ಮಾನ್ಯ ಶಾಸಕರು, ವಿಧಾನ ಪರಿಷತ್ ಹಾಗೂ ಅಧ್ಯಕ್ಷರು, ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03-12-2025

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಹೆಚ್ಚಿನ ಮಾಹಿತಿಗಾಗಿ ಯುವ ಸಹಾಯವಾಣಿ: 155265